
ಆಧ್ಯಾತ್ಮ ಗ್ರಂಥಾವಳಿ

ಶ್ರೀಮಾರ್ಕಂಡೇಯ ಪುರಾಣಾಂತರ್ಗತ

# ದೇವಿಮಹಾತ್ಮ್ಯ

(ಮೂಲ ಭಾವಾರ್ಥಗಳೊಡನೆ)

ಬರೆದವರು : ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ



ಅಧ್ಯಾತ್ಮ ಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ–573 211

# ಭಕ್ತರ ಪ್ರೇಮವನ್ನು ಉಕ್ಕೇರಿಸುವ ಕೆಲವು ಸ್ತೋತ್ರ, ಪದ, ಪದ್ಯ - ಗ್ರಂಥಗಳು

1. **ಮುಕುಂದಮಾಲಾ :** ಕುಲಶೇಖರಾಚಾರ್ಯರಿಂದ ವಿರಚಿತವಾದ ಈ ಭಕ್ತಿಪ್ರಧಾನ ಸ್ತೋತ್ರವು ವಿಷ್ಣುಭಕ್ತರಿಗೆಲ್ಲ ಪ್ರಿಯವಾಗಿರುತ್ತದೆ. ಭಗವದ್ಭಕ್ತಿಯ ಮರ್ಮವನ್ನು ವಿವರಿಸುವ ಈ ಪದ್ಯಗಳು ಹಾಡಿ ನಲಿಯಲು ಯೋಗ್ಯವಾಗಿವೆ. ಮೂಲ, ಅರ್ಥ, ಪಾಠಾಂತರಗಳನ್ನೂ ಕೊಟ್ಟಿದೆ. **(ಆರನೆಯ ಮು. ಪುಟ ಕ್ರೌನ್ 4+24)**

2. **ಶಿವಕವಚ :** ಭದ್ರಾಯುವೆಂಬ ರಾಜಕುಮಾರನಿಗೆ ಋಷಭಯೋಗೀಶ್ವರರೆಂಬ ಮಹಾತ್ಮರು ಉಪದೇಶಿಸಿದ ಸ್ತೋತ್ರವಿದು. ಸ್ಕಾಂದಪುರಾಣದ ಬ್ರಹ್ಮೋತ್ತರ ಖಂಡದಿಂದ ಆರಿಸಿದ ಈ ಸುಪ್ರಸಿದ್ಧ ಸ್ತೋತ್ರವನ್ನು ಮೂಲ, ಅರ್ಥ, ವಿವರಣೆಗಳ ಸಮೇತವಾಗಿ ಪ್ರಕಟಿಸಿದೆ. **(ಐದನೆಯ ಮುದ್ರಣ, ಕ್ರೌನ್ ಪುಟ 4+56)**

3. **ಶಿವಾನಂದಲಹರೀ :** ಹೆಸರಿಗೆ ತಕ್ಕಂತೆ ಶಿವಭಕ್ತರ ಹೃದಯದಲ್ಲಿ ಆನಂದದ ಹೆದ್ದೆರೆಗಳನ್ನು ಎಬ್ಬಿಸುವ ಭಕ್ತಿಪರವಾದ ಸ್ತೋತ್ರವಿದು. ಮೂಲ, ಭಾವಾರ್ಥ ವಿವರಣೆಯೊಂದಿಗೆ ಪ್ರಕಟವಾಗಿದೆ. ಪರಮೇಶ್ವರನ ಮೂರ್ತಿದರ್ಶನ, ಪೂಜೆ, ಮಂತ್ರಜಪ, ಸ್ತುತಿ, ಕೀರ್ತನೆ, ಸೇವೆ, ಧ್ಯಾನ - ಮುಂತಾದ ಬಗೆಬಗೆಯ ವಿಧಾನಗಳಿಂದ ಭಕ್ತನು ಹೇಗೆ ಆ ಪರವಸ್ತುವನ್ನು ತನ್ನ ಹೃದಯದಲ್ಲಿಟ್ಟುಕೊಂಡು ಸತತವಾಗಿ ಆನಂದಪಡಬಹದು ಎಂಬುದನ್ನು ಈ ಸ್ತೋತ್ರವು ತೋರಿಸಿ ಕೊಡುತ್ತದೆ. **(ಮೂರನೆಯ ಮುದ್ರಣ, ಪುಟ ಡೆಮ್ಮಿ 4+78)**

4. **ಶ್ರೀರಾಮ ಹೃದಯ :** ಸೀತಾದೇವಿಯೂ ಶ್ರೀರಾಮನೂ ಹನುಮಂತನಿಗೆ ಮಾಡಿದ ತತ್ತ್ವೋಪದೇಶವಿದು. ಪಾಠಾಂತರಸಹಿತ ಮೂಲ, ಅರ್ಥ, ಟಿಪ್ಪಣಿ, ಸಾರಾಂಶ - ಇಷ್ಟೂ ಇವೆ. **(ಮೂರನೆಯ ಮುದ್ರಣ, ಪು. ಕ್ರೌನ್ 22)**

5. **ಶ್ರೀರಾಮಗೀತೆ :** ಅಧ್ಯಾತ್ಮರಾಮಾಯಣದಿಂದ ಆರಿಸಿದ ಭಾಗವಿದು. ಶ್ರೀರಾಮನು ಲಕ್ಷ್ಮಣನಿಗೆ ಮಾಡಿದ ಅಮೋಘವಾದ ಉಪದೇಶವು ಇದರಲ್ಲಿದೆ. ಇದರಲ್ಲಿ **ಮಹಾವಾಕ್ಯ**ವಿಚಾರವೂ ಪರಮಾತ್ಮನಲ್ಲಿ ಪ್ರಪಂಚವನ್ನೆಲ್ಲ ಲಯಗೊಳಿಸಿಕೊಳ್ಳುವ ಸಾಧನಕ್ರಮವೂ ಉಕ್ತವಾಗಿದೆ. ಜ್ಞಾನಕ್ಕೆ ಭಕ್ತಿಯೇ ಸಾಧನವೆಂದು ಪ್ರತಿಪಾದಿಸಿದೆ. ಮೂಲ, ಭಾವಾರ್ಥ, ಟಿಪ್ಪಣಿ, ಶ್ಲೋಕಾನುಕ್ರಮಣಿಕೆ - ಇಷ್ಟೂ ಈ ಪುಸ್ತಕದಲ್ಲಿವೆ. **(ಎರಡನೆಯ ಸಂಸ್ಕರಣ, ಪು. ಕ್ರೌನ್ 6+34)**

ಅಧ್ಯಾತ್ಮಗ್ರಂಥಾವಳಿ

ಶ್ರೀ ಮಾರ್ಕಂಡೇಯಪುರಾಣಾಂತರ್ಗತ

# ದೇವೀಮಹಾತ್ಮ್ಯ

(ಮೂಲ-ಭಾವಾರ್ಥಗಳೊಡನೆ)

*ಬರೆದವರು :*

ಅಧ್ಯಾತ್ಮವಿದ್ಯಾಪ್ರವೀಣ, ವೇದವಿದ್ಯಾಭೂಷಣ

**ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ**

ಕ್ರಮಾಂಕ 190

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ - 573 211

ದೂರವಾಣಿ : 08175-273820

2007

ಮೊದಲನೆಯ ಮುದ್ರಣ : 1985
ಎರಡನೆಯ ಮುದ್ರಣ : 1994
ಮೂರನೆಯ ಮುದ್ರಣ : 2007

ಪುಟಗಳು : vi + 122

ಬೆಲೆ : ರೂ. 30/-

ಇದರ ಹಕ್ಕುಗಳೆಲ್ಲವೂ ಆಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಅಕ್ಷರ ಜೋಡಣೆ :

**ಶ್ರೀಮತಿ ಸುಧಾ**
ನಂ. 1, 11ನೇ ಅಡ್ಡರಸ್ತೆ
6ನೇ ಮುಖ್ಯರಸ್ತೆ, ನ.ರಾ. ಕಾಲೋನಿ
ಬೆಂಗಳೂರು - 560 019
☎ : 65990721

ಮುದ್ರಣಕಾರರು :

**ಸ್ಟಾಂಡರ್ಡ್ ಪ್ರಿಂಟರ್ಸ್**
ಶಂಕರಮಠದ ರಸ್ತೆ
ಬೆಂಗಳೂರು – 560 004
☎ : 22421527

# ಮುನ್ನುಡಿ

ಮಾರ್ಕಂಡೇಯಪುರಾಣಾಂತರ್ಗತವಾದ 'ದೇವೀಮಹಾತ್ಮ್ಯ' ಅಥವಾ 'ದುರ್ಗಾಸಪ್ತಶತೀ' ಗ್ರಂಥವನ್ನು ಕನ್ನಡ ಅನುವಾದಸಮೇತ 1985ರಲ್ಲಿ ಪ್ರಥಮ ಬಾರಿಗೆ ಪ್ರಕಟಿಸಲಾಗಿತ್ತು. ಅದರ ಪ್ರತಿಗಳೆಲ್ಲ ಮಾರಾಟವಾಗಿಬಿಟ್ಟದ್ದರಿಂದ ಎರಡನೆಯಬಾರಿಗೆ ಯಾವ ಬದಲಾವಣೆಯೂ ಇಲ್ಲದೆ ಹಿಂದಿನಂತೆಯೇ ಗ್ರಂಥವನ್ನು ಹೊರತರಲಾಗಿದೆ.

ದೇವೀಮಹಾತ್ಮ್ಯವನ್ನು ಶ್ರದ್ಧಾಭಕ್ತಿಗಳಿಂದ ಪಾರಾಯಣಮಾಡುವ ಆಸ್ತಿಕ ಮಹನೀಯರು ಹಾಗೂ ಮಹಿಳೆಯರ ಸಂಖ್ಯೆ ಈಚೆಗೆ ಬೆಳೆಯುತ್ತಿದೆ. ಪೌರಾಣಿಕ ಸಾಹಿತ್ಯವಾದ್ದರಿಂದ ಯಾವ ನಿರ್ಬಂಧವೂ ಇಲ್ಲದೆ ಯಾರುಬೇಕಾದರೂ ಇದನ್ನು ಓದಬಹುದಾಗಿದೆ. ಆದರೆ ಚಂಡೀಪಾರಾಯಣ-ಹೋಮಗಳನ್ನು ನಡೆಸುವಾಗ ಮಾತ್ರ ಮೂಲಮಂತ್ರೋಪದೇಶವುಳ್ಳವರೇ ವಿಶಿಷ್ಟಕ್ರಮದಿಂದ ನಿಯಮಬದ್ಧರಾಗಿ ಪಾರಾಯಣ-ಪುರಶ್ಚರಣ-ಜಪಾದಿಗಳನ್ನು ನೆರವೇರಿಸಬೇಕೆಂದು ವಿಧಿಯಿದೆ. ಇಂಥ ಸಂದರ್ಭದಲ್ಲಿ ಹೆಚ್ಚಿನ ವಿಚಾರಗಳನ್ನೂ ತಾಂತ್ರಿಕ ಸಂಪ್ರದಾಯವಿಧಿಗಳನ್ನೂ ಗುರುಮುಖದಿಂದಲೇ ಅರಿತು ಅನುಷ್ಠಾನಮಾಡಬೇಕು. ಕಲಿಯುಗದಲ್ಲಿ ಕಾಮ್ಯವಾಗಿ ಗೊತ್ತಾದ ಪ್ರಯೋಜನವನ್ನು ಬಯಸಿ ಈ ದೇವೀಮಹಾತ್ಮ್ಯವನ್ನು ಪಾರಾಯಣ-ಹೋಮಾದಿಗಳಲ್ಲಿ ಬಳಸುವದು ಹೆಚ್ಚಾಗಿ ರೂಢಿಗೆ ಬಂದಿದೆ. ಆದರೆ ನಿಷ್ಕಾಮರಾದವರು ಕೂಡ ಈ ಅನುಷ್ಠಾನವನ್ನು ಕೈಗೊಂಡು ಚಿತ್ತಶುದ್ಧಿದ್ವಾರಾ ಜ್ಞಾನವನ್ನೂ ಮುಕ್ತಿಯನ್ನೂ ಪಡೆಯಬಹುದಾಗಿದೆ. ಈ ವಿಚಾರವನ್ನು ಇದೇ ಗ್ರಂಥದ ಕೊನೆಯಲ್ಲಿ ತಿಳಿಸಿದೆ. ಒಟ್ಟಿನಲ್ಲಿ ದೇವಿಯು ಭುಕ್ತಿ-ಮುಕ್ತಿಗಳೆಂಬ ಎರಡು ವಿಧವಾದ ಫಲಗಳನ್ನೂ ಆರಾಧಕರಿಗೆ ನೀಡುವ ಕಾಮಧೇನುವಾಗಿದ್ದಾಳೆ. ಆಕೆಯನ್ನು ಭಜಿಸಿ ಕೃತಾರ್ಥರಾಗಲು ಸರ್ವರಿಗೂ ಅವಕಾಶವಿದೆ.

ಈ ಗ್ರಂಥಪ್ರಕಟನೆಗೆ ಮೈಸೂರಿನ ಶ್ರೀ ಆರ್. ಎನ್. ರತನ್ ಎಂಬುವರು ರೂ. 300/- ಸಹಾಯದ್ರವ್ಯವನ್ನು ನೀಡಿದ್ದಾರೆ. ಇವರಿಗೆ ಭಗವತಿಯ ಅನುಗ್ರಹವಾಗಲೆಂದು ಹಾರೈಸುವೆವು. ಈ ಗ್ರಂಥದ ವಾಚಕರಿಗೆಲ್ಲರಿಗೂ ನಮ್ಮ ಅಭಿನಂದನೆಗಳು.

ಇತಿ

ಹೊಳೆನರಸೀಪುರ — ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ

ತಾ|| 2-4-94 — ಅಧ್ಯಾತ್ಮಗ್ರಂಥಾವಳಿಯ ಸೇವಕ

# ಪ್ರಕಾಶಕರ ಅರಿಕೆ

ತಾಯಿಯ ಮಮತೆಗಿಂತ ಹೆಚ್ಚಿನದೇನಿದ್ದೀತು ? ಮುದ್ದಿನ ಅಮ್ಮ ಎರಡು ಪೆಟ್ಟುಕೊಟ್ಟರೂ, ಅರಚಿ, ಪರಚಿಯಾದರೂ ಅಳುತ್ತಾ ಅವಳ ಮೊಣಕಾಲನ್ನು ಬಳಸಿ ಬಾಚಿ ಬಿಕ್ಕುತ್ತಾ ಅಲ್ಲೇ ಹುದುಗುವ ಮಗುವಿನಂತೆ, ಮನುಷ್ಯ ಸ್ವಭಾವದ ಎಲ್ಲರಿಗೂ ಮೈ-ಮನಸ್ಸಿಗೆ ಹಿಂಸೆಯಾದಾಗ ಮೊದಲ ಮೊರೆ ಅಮ್ಮನಿಗೆ. ಅವಳೇ ಸಾಂತ್ವನದ ಆಸರೆ. ರಕ್ಷಣೆಯ ತಾಣ. ಅಂತಹ ವಾತ್ಸಲ್ಯಮಯಿ ದೇವಿಯು ಶರಣು ಬಂದ ದೀನ, ಆರ್ತರಿಗೆ ಸಮಾಧಾನದ ಪರಿಹಾರವನ್ನು ನೀಡುವಳು.

ದೇವಿಯ ಚರಿತ್ರೆ ಬರೀ ದುಷ್ಟನಿಗ್ರಹ, ಶೌರ್ಯ ಸಾಹಸದ ಕತೆಯಲ್ಲ, ಇದನ್ನು ಓದುವಾಗ ದೇವಿಯನ್ನು ಮೆಚ್ಚುವ ಪ್ರೀತಿ-ಭಕ್ತಿಯ ಅಂಕುರ, ಮಧ್ಯೆ ಮಧ್ಯೆ ಬರುವ ಸ್ತೋತ್ರಗಳು (1 ಅಧ್ಯಾಯ - ಬ್ರಹ್ಮಸ್ತುತಿ - ಶ್ಲೋಕ 52-65 ; ದೇವತೆಗಳಿಂದ ಸ್ತುತಿ 4,2-26 ; 5, 6-35 ; 11, 2-34, 36) ಭಕ್ತಿಯು ಬೆಳೆದು ಆ ಭಾವ ಬಲಿತಂತೆಲ್ಲಾ ಫಲವನ್ನು ನೀಡುವದಾಗಿದೆ.

ಎಲ್ಲರೂ ಓದಿ ಆಪತ್ತು ದುಃಖಗಳಿಂದ ಬಿಡುಗಡೆ (ಮನಃಶಾಂತಿ, ಸಮಾಧಾನ) ಗಳನ್ನು ಪಡೆಯಲು ಬಹು ಉಪಕಾರಿಯಾಗಿರುವ ದೇವಿ ಮಹಾತ್ಮ್ಯೆಯನ್ನು ಭಕ್ತಿಯಿಂದ ಪಠಿಸುವವರಿಗೆ ದೇವಿಯ ಅನುಗ್ರಹವಾಗಲೆಂಬ ದೃಷ್ಟಿಯಿಂದ ಲೇಖಕರು ಬರೆದ ಈ ಪುಸ್ತಕವು ಈಗ ಮೂರನೆಯ ಮುದ್ರಣವಾಗಿ ಬಂದಿದೆ. ಭಕ್ತಾಭಿಮಾನಿಗಳು ಆದರದಿಂದ ಸ್ವೀಕರಿಸಬೇಕೆಂದು ಪ್ರಾರ್ಥನೆ.

ಈ ಮುದ್ರಣವು ಪ್ರಧಾನವಾಗಿ ಕೋಡಿಹಳ್ಳಿ ಶ್ರೀ ಲಕ್ಷ್ಮೀನಾರಾಯಣ ರಾವ್ ಟ್ರಸ್ಟ್‌ನ ಪರವಾಗಿ ಶ್ರೀ ಕೆ. ಎಲ್. ನಾಗರಾಜರಾಯರ ಕೊಡುಗೆ. ಅವರಿಗೆ ಕಾರ್ಯಾಲಯದ ಕೃತಜ್ಞತೆಗಳು.

ನಮೋದೇವ್ಯೈ ಮಹಾದೇವ್ಯೈ ಶಿವಾಯೈ ಸತತಂ ನಮಃ

ತಾ|| 8-12-2007
ಸರ್ವಜಿತು ಸಂವತ್ಸರ,
ಕಾರ್ತಿಕ ಬಹುಳ ಚತುರ್ದಶಿ, ಶನಿವಾರ

ಪ್ರಕಾಶಕರು

# ಕೋಡಿಹಳ್ಳಿ ಲಕ್ಷ್ಮೀನಾರಾಯಣರಾಯರು

ಎಂಬತ್ತೆಂಟು ವರ್ಷಗಳ (15.6.1902 - 24.11.1990) ಅನ್ವಾದೃಶ ತುಂಬು ಜೀವನ ನಡೆಸಿದ ಕೋಡಿಹಳ್ಳಿ ಲಕ್ಷ್ಮೀನಾರಾಯಣರಾಯರು ಹುಟ್ಟಿದ್ದು ಅರಸೀಕೆರೆ ತಾಲ್ಲೂಕಿನ ಕೋಡಿಹಳ್ಳಿ ಗ್ರಾಮದಲ್ಲಿ. ಓದಿದ್ದು ಇಂಟರ್‌ವರೆಗೆ ಆದರೂ ಲೋಕ ಪರಿಜ್ಞಾನ ಹಾಗೂ ಕನ್ನಡ, ಇಂಗ್ಲೀಷ್ ಭಾಷೆಗಳಲ್ಲಿ ಅವರ ಪರಿಣತಿ ಅಪಾರ.

ಅರವತ್ತು ಸಂವತ್ಸರಗಳಿಗೂ ಹೆಚ್ಚಿನ ಕೌಟುಂಬಿಕ ಜೀವನ. ಸಹಧರ್ಮಿಣಿ ಶ್ರೀಮತಿ ಲಕ್ಷ್ಮೀದೇವಮ್ಮನವರು. ಎಂಟು ಜನ ಮಕ್ಕಳು - ನಾಲ್ಕು ಗಂಡು, ನಾಲ್ಕು ಹೆಣ್ಣು.

ಸರ್ಕಾರಿ ವೃತ್ತಿ ನೀರಸವಾಗಿದ್ದರೂ, ವೃತ್ತ್ಯೇತರ ಚಟುವಟಿಕೆಗಳಿಂದ ಅವರು ತಮ್ಮ ಬಾಳನ್ನು ರಸಮಯಗೊಳಿಸಿಕೊಂಡಿದ್ದರು. ಸಾಹಿತ್ಯ ಸಂಗೀತದಲ್ಲಿ ಅರವಿಗೆ ಇನ್ನಿಲ್ಲದ ಆಸಕ್ತಿ. ವೀಣೆ ರಾಜಾರಾಯರ ಹಾಗೂ ಗಮಕಿ ಸಂಪತ್ಕುಮಾರಾಚಾರ್ಯರ ಶಿಷ್ಯರಾಗಿದ್ದರು. ಹಾರ್ಮೋನಿಯಂ ಮತ್ತು ವೀಣಾವಾದನಗಳಲ್ಲಿ ಪರಿಶ್ರಮ ಹೊಂದಿದ್ದರು. ಮನೆಯಲ್ಲಿ ಅಹರ್ನಿಶಿ ವಾಲ್ಮೀಕಿ ರಾಮಾಯಣ ಪಾರಾಯಣ, ಕುಮಾರವ್ಯಾಸ ಭಾರತ ವಾಚನ.

ಸಾಮಾಜಿಕ ಚಟುವಟಿಕೆಗಳಲ್ಲಿ ಅವರದು ಎತ್ತಿದ ಕೈ. ಬೆಂಗಳೂರಿನ ಚಾಮರಾಜಪೇಟೆಯ ಶ್ರೀ ಯಾಜ್ಞವಲ್ಕ್ಯಾಶ್ರಮದ ಸಂಸ್ಥಾಪಕ ಕಾರ್ಯದರ್ಶಿಯಾಗಿ ಅನೇಕ ವರ್ಷ ಸೇವೆ ಸಲ್ಲಿಸಿದರು. ಶಾಖಾ ಬಾಂಧವರ ಅನುಕೂಲಕ್ಕಾಗಿ 'ಸಂಧ್ಯಾವಂದನೆ' ಹಾಗೂ 'ರುದ್ರಾಧ್ಯಾಯ' ಗ್ರಂಥಗಳನ್ನು ಪ್ರಕಟಿಸಿದರು. ಸ್ವಾತಂತ್ರ್ಯ ಪೂರ್ವದಲ್ಲೇ ವಾಣಿಜ್ಯ ವಿದ್ಯಾಶಾಲೆಯನ್ನು (ಶ್ರೀಕೃಷ್ಣ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್) ಸ್ಥಾಪಿಸಿ ಅನೇಕರಿಗೆ ಸ್ವಂತ ಉದ್ಯೋಗದ ಅವಕಾಶ ಕಲ್ಪಿಸಿಕೊಟ್ಟರು.

50 ವರ್ಷಗಳಿಗೂ ಹೆಚ್ಚುಕಾಲ ನಿರಂತರವಾಗಿ ಆಗಡಿ ಆನಂದವನದ ಶ್ರೀ ಶೇಷಾಚಲ ಸದ್ಗುರುಗಳ ಜಯಂತಿ ಉತ್ಸವದಲ್ಲಿ ಭಾಗವಹಿಸಿ ಸೇವೆ ಸಲ್ಲಿಸುತ್ತಿದ್ದರು. ಶ್ರೀ ನಾರಾಯಣ ಭಗವಾನರ ಪರಮ ಶಿಷ್ಯರು. ದೈವ ಕೈಂಕರ್ಯಗಳಲ್ಲಿ ಅವರ ಸಹಧರ್ಮಿಣಿಯ ಪಾತ್ರವು ಹಿರಿದಾಗಿದ್ದಿತು. ಸಂಪದ್ಭರಿತ, ಸುಸಂಸ್ಕೃತ ಬದುಕಿನ ಜೊತೆಗೆ ಕಿರೀಟಪ್ರಾಯವಾಗಿದ್ದಿತು ಅವರ ಆಧ್ಯಾತ್ಮಿಕ ಜೀವನ.

ಅವರ ನಿಷ್ಠಾವಂತ ಕಾರ್ಯ, ದಣಿವರಿಯದ ದುಡಿಮೆ, ಅಕಳಂಕಿತ ಸಾತ್ವಿಕ ಜೀವನ ವಿಧಾನ ಎಲ್ಲರ ಮನ್ನಣೆ ಪ್ರಶಂಸೆಗಳಿಗೆ ಪಾತ್ರವಾಗಿದ್ದವು.

# ವಿಷಯಾನುಕ್ರಮಣಿಕೆ


| | | | ಪುಟ |
|---|---|---|---|
| 1. | ಪೂರ್ವಪೀಠಿಕೆ | | 1 |
| 2. | ಒಂದನೆಯ ಅಧ್ಯಾಯ | - ಮಧು-ಕೈಟಭ ವಧೆ | 9 |
| 3. | ಎರಡನೆಯ ಅಧ್ಯಾಯ | - ಮಹಿಷಾಸುರ ಸೈನ್ಯ ವಧೆ | 24 |
| 4. | ಮೂರನೆಯ ಅಧ್ಯಾಯ | - ಮಹಿಷಾಸುರ ವಧೆ | 36 |
| 5. | ನಾಲ್ಕನೆಯ ಅಧ್ಯಾಯ | - ಇಂದ್ರಾದಿಗಳ ಸ್ತುತಿ | 43 |
| 6. | ಐದನೆಯ ಅಧ್ಯಾಯ | - ಅಪರಾಜಿತಾ ಸ್ತೋತ್ರ ದೇವಿಯೊಡನೆ ದೂತ ಸಂವಾದ | 54 |
| 7. | ಆರನೆಯ ಅಧ್ಯಾಯ | - ಧೂಮ್ರಲೋಚನ ವಧೆ | 67 |
| 8. | ಏಳನೆಯ ಅಧ್ಯಾಯ | - ಚಂಡ-ಮುಂಡರ ವಧೆ | 71 |
| 9. | ಎಂಟನೆಯ ಅಧ್ಯಾಯ | - ರಕ್ತಬೀಜ ವಧೆ | 76 |
| 10. | ಒಂಬತ್ತನೆಯ ಅಧ್ಯಾಯ | - ನಿಶುಂಭ ವಧೆ | 87 |
| 11. | ಹತ್ತನೆಯ ಅಧ್ಯಾಯ | - ಶುಂಭ ವಧೆ | 94 |
| 12. | ಹನ್ನೊಂದನೆಯ ಅಧ್ಯಾಯ | - ನಾರಾಯಣಿ ಸ್ತುತಿ | 100 |
| 13. | ಹನ್ನೆರಡನೆಯ ಅಧ್ಯಾಯ | - ಫಲಸ್ತುತಿ | 111 |
| 14. | ಹದಿಮೂರನೆಯ ಅಧ್ಯಾಯ | - ಸುರಥ-ವೈಶ್ಯರಿಗೆ ದೇವಿಯ ವರಪ್ರದಾನ | 118 |

॥ ಓಮ್ ॥

# ದೇವೀಮಹಾತ್ಮ್ಯ

## ಪೂರ್ವಪೀಠಿಕೆ

**ಶರಣಾಗತದೀನಾರ್ತಪರಿತ್ರಾಣಪರಾಯಣೇ ।**
**ಸರ್ವಸ್ಯಾರ್ತಿಹರೇ ದೇವಿ ನಾರಾಯಣಿ ನಮೋಽಸ್ತು ತೇ ॥**

ಭಗವಾನ್ ವೇದವ್ಯಾಸಮಹರ್ಷಿಗಳು ವೇದಗಳ ಉಪಬೃಂಹಣಕ್ಕಾಗಿ ಹದಿನೆಂಟು ಮಹಾಪುರಾಣಗಳನ್ನೂ ಮಹಾಭಾರತವೆಂಬ ಇತಿಹಾಸವನ್ನೂ ಬರೆದು ಉಪಕಾರಮಾಡಿರುತ್ತಾರೆ. ವೇದಗಳಲ್ಲಿಯೂ ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥವಿಚಾರಗಳು ಉಪದೇಶಿಸಲ್ಪಟ್ಟಿವೆಯಾದರೂ ವಿಶೇಷವಾಗಿ ಕರ್ಮ ರಹಸ್ಯಗಳನ್ನೂ ದೇವತೆಗಳನ್ನೂ ಆಯಾ ದೇವತೆಗಳನ್ನು ಕುರಿತು ಐಹಿಕಾಮುಷ್ಮಿಕ ಫಲಪ್ರಾಪ್ತಿಗಾಗಿ ಮಾಡಬೇಕಾದ ಯಜ್ಞಯಾಗಾದಿಗಳನ್ನೂ ಅವುಗಳ ಅಂಗೋ ಪಾಂಗಗಳನ್ನೂ ದೇವತಾಸ್ತುತಿಗಳನ್ನೂ ಹೆಚ್ಚಾಗಿ ವಿವರಿಸಿರುತ್ತದೆ. ವೇದಗಳಲ್ಲಿರುವ ವೈದಿಕಭಾಷೆಯೂ ಸ್ವರವರ್ಣಪದೋಚ್ಚಾರಣಾದಿಗಳೂ ಅಸಾಧಾರಣವಾಗಿದ್ದು ಜನಸಾಮಾನ್ಯರು ಅವುಗಳನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗುವಂತಿಲ್ಲ. ಆದ್ದರಿಂದ ಸುಲಭವಾದ ಲೌಕಿಕಸಂಸ್ಕೃತಭಾಷೆಯಲ್ಲಿ ಕಥೆ, ಉಪಾಖ್ಯಾನಗಳಿಂದ ಕೂಡಿದ ಧರ್ಮಾದಿ ಪುರುಷಾರ್ಥವಿಚಾರಗಳನ್ನು ಪುರಾಣಗಳಲ್ಲಿ ಸರ್ವರ ಅನುಕೂಲಕ್ಕಾಗಿ ವಿವರಿಸಿ ಬರೆದಿರುತ್ತದೆ. ಇಂಥ ಪುರಾಣಗಳಲ್ಲಿ ಹದಿನೆಂಟು ಮಹಾ ಪುರಾಣಗಳು ಒಟ್ಟು ನಾಲ್ಕುಲಕ್ಷ ಸಂಖ್ಯೆಯ ಗ್ರಂಥಗಳಿಂದ ಕೂಡಿದ್ದು ಈಗಲೂ ಭಾರತದೇಶದ ಜ್ಞಾನಸಂಸ್ಕೃತಿಯಲ್ಲಿ ಮುಖ್ಯಪಾತ್ರವನ್ನು ವಹಿಸಿವೆ. ಹದಿನೆಂಟು ಮಹಾಪುರಾಣಗಳಲ್ಲಿ 'ಮ'ಕಾರದಿಂದ ಪ್ರಾರಂಭವಾಗುವ ಹೆಸರುಳ್ಳ ಎರಡು ಪುರಾಣಗಳಲ್ಲಿ, ಒಂಭತ್ತುಸಹಸ್ರ ಗ್ರಂಥಸಂಖ್ಯೆಯ ಮಾರ್ಕಂಡೇಯಪುರಾಣವು ಮೊದಲನೆಯದಾಗಿದೆ. ಇದರಲ್ಲಿಯೇ 'ದುರ್ಗಾಸಪ್ತಶತೀ' ಎಂಬ ದೇವೀ ಮಹಾತ್ಮ್ಯಭಾಗವು ಅಂತರ್ಗತವಾಗಿದೆ. ಆದ್ದರಿಂದ ಮಾರ್ಕಂಡೇಯಪುರಾಣವನ್ನು ಸ್ವಲ್ಪಮಟ್ಟಿಗೆ ಈಗ ಪರಿಚಯಮಾಡಿಕೊಳ್ಳುವದು ಅಗತ್ಯವಾಗಿದೆ.

ಮಾರ್ಕಂಡೇಯಪುರಾಣದಲ್ಲಿ ಒಳವಿಭಾಗಗಳು ಕಂಡುಬರುವದಿಲ್ಲ. ಇದರಲ್ಲಿ ಒಟ್ಟು 134 ಅಧ್ಯಾಯಗಳಿವೆ. 78ನೆಯ ಅಧ್ಯಾಯದಿಂದ 91ನೆಯ

ಅಧ್ಯಾಯದವರೆಗಿನ ಹದಿಮೂರು ಅಧ್ಯಾಯಗಳು 'ದುರ್ಗಾಸಪ್ತಶತೀ' ಎಂದು ಪ್ರಸಿದ್ಧವಾಗಿದೆ. ಈ ಭಾಗದಲ್ಲಿ ಹೆಸರಿಗೆ ತಕ್ಕಂತೆ ಏಳುನೂರು ಶ್ಲೋಕಗಳಿವೆ. ಭಗವದ್ಗೀತೆಯಲ್ಲಿಯೂ ಏಳುನೂರು ಪದ್ಯಗಳಿವೆಯಾದ್ದರಿಂದ ವೈಷ್ಣವರು ಭಗವದ್ಗೀತೆಗೆ ಕೊಟ್ಟಿರುವ ಸ್ಥಾನವನ್ನೇ ಶಾಕ್ತರು ದುರ್ಗಾಸಪ್ತಶತಿಗೆ ಕೊಟ್ಟಿರುತ್ತಾರೆ. ಹಾಗೆಯೇ ಇಲ್ಲಿಯೂ ಹನ್ನೊಂದನೆಯ ಅಧ್ಯಾಯವು ದೇವಿಯ ಸ್ತೋತ್ರ ರೂಪವಾಗಿದ್ದು ಗೀತೆಯ 11ನೆಯ ಅಧ್ಯಾಯವನ್ನೇ ಹೋಲುತ್ತಿದೆ. ಗೀತೆಯು ಭಗವಂತನಿಂದ ಅರ್ಜುನನಿಗೆ ಉಪದೇಶಿಸಲ್ಪಟ್ಟಂತೆಯೇ ಇದು ಮಾರ್ಕಂಡೇಯ ಮಹರ್ಷಿಗಳಿಂದ ಕ್ರೌಷ್ಟುಕಿ - ಎಂಬ ಋಷಿಗೆ ಉಪದೇಶಿಸಲ್ಪಟ್ಟಿದೆ. ಆದ್ದರಿಂದಲೇ ಈ ಮಹಾತ್ಮ್ಯಗ್ರಂಥದಲ್ಲಿ ಮಾರ್ಕಂಡೇಯ ಉವಾಚ ಅಥವಾ ಋಷಿರುವಾಚ-ಎಂಬ ವಾಕ್ಯವು ನಡುನಡುವೆ ಬರುತ್ತದೆ. ಹೀಗೆ ಮಾರ್ಕಂಡೇಯಮಹರ್ಷಿಗಳು ಉಪದೇಶಿಸಿದ್ದನ್ನೇ ನಾಲ್ಕು ಪಕ್ಷಿಗಳು ವ್ಯಾಸ ಶಿಷ್ಯನಾದ ಜೈಮಿನಿಗೆ ಉಪದೇಶಿಸಿದವೆಂದು ಪುರಾಣವು ಪ್ರಾರಂಭದ ಅಧ್ಯಾಯಗಳಲ್ಲಿ ತಿಳಿಸಿದೆ. ಆ ಕಥೆಯನ್ನು ಈಗ ಕೇಳೋಣ.

ಒಮ್ಮೆ ವ್ಯಾಸಶಿಷ್ಯನಾದ ಜೈಮಿನಿಯು ತನಗೆ ಮಹಾಭಾರತ ಇತಿಹಾಸದಲ್ಲಿ ಕಂಡುಬಂದ ಕೆಲವು ಸಂಶಯಗಳನ್ನು ಪರಿಹರಿಸಿಕೊಳ್ಳಲು ಮಾರ್ಕಂಡೇಯ ಋಷಿಗಳಲ್ಲಿಗೆ ಬಂದನು. ಮುನಿಗಳನ್ನು ಕಂಡು ನಮಸ್ಕರಿಸಿ ತನ್ನ ಪ್ರಶ್ನೆಗಳನ್ನು ಮುಂದಿಡಲಾಗಿ ಅವರು ''ಈಗ ಕರ್ಮಾನುಷ್ಠಾನಕಾಲವಾಗಿದೆ. ನನಗೆ ಉತ್ತರವನ್ನು ಹೇಳಲು ಬಿಡುವು ಇಲ್ಲ; ಆದರೆ ಯಾರು ಉತ್ತರವನ್ನು ಹೇಳಬಲ್ಲರೋ ಅಂಥವರನ್ನು ತಿಳಿಸುತ್ತೇನೆ ; ನೀನು ವಿಂಧ್ಯಾರಣ್ಯಮಧ್ಯದಲ್ಲಿರುವ ದ್ರೋಣಪುತ್ರರಾದ[1] (ಶಾಪದಿಂದ ಈಗ ಪಕ್ಷಿಗಳಾಗಿ ಹುಟ್ಟಿರುವ) ಪಿಂಗಾಕ್ಷ, ವಿಬೋಧ, ಸುಪುತ್ರ, ಸುಮುಖ-ಎಂಬ ಹೆಸರಿನ ನಾಲ್ಕು ಹಕ್ಕಿಗಳನ್ನು ಕೇಳು. ಅವರು ನಿನ್ನ ಸಂಶಯಗಳನ್ನೆಲ್ಲ ಪರಿಹರಿಸುವರು'' ಎಂದರು. ಆಗ ಜೈಮಿನಿಯು ಕುತೂಹಲಾವಿಷ್ಟನಾಗಿ 'ಪೂಜ್ಯರೆ, ಆಗಬಹುದು ; ಅವರುಗಳು ಯಾರು ? ಅವರಿಗೆ ಶಾಪವೇಕೆ ಬಂತು ? ಎಲ್ಲ ವಿವರಗಳನ್ನೂ ತಿಳಿಸಬೇಕೆಂದು ಬೇಡಿಕೊಂಡನು. ಆಗ ಮಾರ್ಕಂಡೆಯರು ಹೀಗೆಂದರು :

ಒಮ್ಮೆ ದೇವೇಂದ್ರನು ಕೆಲವು ಅಪ್ಸರೆಯರೊಡಗೂಡಿ ನಂದನವನದಲ್ಲಿ ವಿಹರಿಸುತ್ತಿದ್ದಾಗ ನಾರದರು ಅಲ್ಲಿಗೆ ಬಂದರು. ಆಗ ದೇವೇಂದ್ರನು ಅವರಿಗೆ

---

1. ದ್ರೋಣ - ಎಂಬುದು ಒಂದು ಹಕ್ಕಿಯ ಹೆಸರು.

ಆಸನವನ್ನು ಕೊಟ್ಟು ಗೌರವಿಸಿ ಅಪ್ಸರೆಯರು ನೃತ್ಯಮಾಡುವಂತೆ ಅಪ್ಪಣೆ ಮಾಡಬೇಕೆಂದು ನಾರದರಲ್ಲಿ ಕೇಳಿಕೊಂಡನು. ಅವರಾದರೊ, 'ನೃತ್ಯವನ್ನು ಎಲ್ಲರೂ ಮಾಡಿಯಾರು ; ಆದರೆ ಯಾರು ಶ್ರೇಷ್ಠರೋ ಅವರು ಮಾತ್ರ ಮಾಡಲಿ' ಎಂದರು. ಆಗ ಪ್ರತಿಯೊಬ್ಬ ಅಪ್ಸರೆಯರೂ ಇಂದ್ರನ ಬಳಿಸಾರಿ ನಾನು, ತಾನು-ಶ್ರೇಷ್ಠಳೆಂದು ಹೇಳಿಕೊಳ್ಳಲಾರಂಭಿಸಿದರು. ಈ ಸಮಸ್ಯೆಯನ್ನು ಪರಿಹರಿಸಲು ನಾರದರು 'ಯಾವ ಅಪ್ಸರೆಯು ದುರ್ವಾಸರ ತಪೋಭಂಗವನ್ನು ಮಾಡಬಲ್ಲಳೋ ಅವಳೇ ಶ್ರೇಷ್ಠಳು' ಎಂದು ಘೋಷಿಸಿದರು. ಆಗ ಯಾರೂ ಈ ಕೆಲಸಕ್ಕೆ ಮುಂದಾಗಲಿಲ್ಲ. 'ವಪು' ಎಂಬವಳು ಮಾತ್ರ ಈ ಕೆಲಸವನ್ನು ಸಾಧಿಸುವದಾಗಿ ಹಟತೊಟ್ಟು ದೂರ್ವಾಸರಿದ್ದಲ್ಲಿಗೆ ಬಂದು ತನ್ನ ಶೃಂಗಾರಚೇಷ್ಟೆಗಳನ್ನಾರಂಭಿಸಿದಳು. ದೂರ್ವಾಸರು ಕುಪಿತರಾಗಿ ಆಕೆಗೆ ಹಕ್ಕಿಯ ಜನ್ಮವುಂಟಾಗುವಂತೆಯೂ ಆ ಜನ್ಮದಲ್ಲಿ ನಾಲ್ಕು ಮಕ್ಕಳಾದ ನಂತರ ಬಿಡುಗಡೆಯಾಗಿ ಮತ್ತೆ ಸ್ವರ್ಗವನ್ನು ಸೇರುವಂತೆಯೂ ಶಪಿಸಿಬಿಟ್ಟರು.

ಅದೇ ಸಮಯದಲ್ಲಿ ಅರಿಷ್ಟನೇಮಿ - ಎಂಬ ಪಕ್ಷಿಶ್ರೇಷ್ಠನ ವಂಶದಲ್ಲಿ ಜನಿಸಿದ ಪ್ರಲೋಲುಪ-ಎಂಬವನಿಗೆ ಕಂಕ, ಕಂಧರ-ಎಂಬ ಇಬ್ಬರು ಮಕ್ಕಳಿದ್ದರು. ಒಮ್ಮೆ ಕಂಕನು ಕೈಲಾಸದ ತಪ್ಪಲಿನಲ್ಲಿ ಮೇನಕೆಯ ಮಗಳಾದ ಒಬ್ಬ ಹೆಂಗಸಿನೊಡನೆ ವಿಹರಿಸುತ್ತಿದ್ದ ವಿದ್ಯುದ್ರೂಪನೆಂಬ ಕುಬೇರನ ಸೇವಕನೊಬ್ಬನನ್ನು ಕಂಡನು. ಅವನು 'ತಾನು ಸ್ತ್ರೀಯೊಡನೆ ವಿಹಾರಮಾಡುವ ಜಾಗಕ್ಕೆ ನೀನೇಕೆ ಬಂದೆ' ? ಎಂದು ಕಂಕನನ್ನು ಆಕ್ಷೇಪಿಸಿದನು. 'ಬೆಟ್ಟದ ಪ್ರದೇಶವು ಎಲ್ಲರಿಗೂ ಸೇರಿದ್ದು ; ಏಕೆ ಬರಬಾರದು'? ಎಂದು ಕಂಕನು ಪ್ರತ್ಯುತ್ತರವನ್ನು ಕೊಡಲಾಗಿ ಕೋಪಗೊಂಡ ವಿದ್ಯುದ್ರೂಪನು ಕಂಕನನ್ನು ಸಂಹರಿಸಿಬಿಟ್ಟನು. ಆಗ ಕಂಧರನು ಈ ವಿಷಯವನ್ನು ತಿಳಿದು ತನ್ನ ಅಣ್ಣನನ್ನು ಕೊಂದ ಯಕ್ಷನ ಮೇಲೆ ಸೇಡುತೀರಿಸಿಕೊಳ್ಳಲು ಹವಣಿಸುತ್ತಿದ್ದು ಸಮಯವನ್ನು ಕಾಯ್ದು ವಿದ್ಯುದ್ರೂಪನೊಡನೆ ಯುದ್ಧಮಾಡಿ ಅವನನ್ನು ಕೊಂದುಬಿಟ್ಟನು. ಆಗ ವಿದ್ಯುದ್ರೂಪನೊಡನೆ ಇದ್ದ ಅಪ್ಸರಸ್ತ್ರೀಯು ಕಂಧರನಿಗೆ ಶರಣಾಗತಳಾಗಿ ತಾನೇ ಹೆಂಡತಿಯಾಗುವದಾಗಿ ಕೇಳಿಕೊಂಡಳು. ಕಂಧರನು ಒಪ್ಪಿ ಆಕೆಯನ್ನು ಕರೆದೊಯ್ದನು. ಅವಳಾದರೊ, ಹಕ್ಕಿಯ ರೂಪವನ್ನೇ ಧರಿಸಿ ಕಂಧರನೊಡನೆ ವಿಹರಿಸುತ್ತಿದ್ದಳು. ಆಕೆಯಲ್ಲಿಯೇ 'ತಾರ್ಕ್ಷಿ' ಎಂಬ ಹೆಣ್ಣುಮಗುವನ್ನು ಕಂಧರನು ಪಡೆದನು. ಅವಳೇ ಹಿಂದೆ ದೂರ್ವಾಸಶಾಪಗ್ರಸ್ತಳಾಗಿದ್ದ ವಪುವೆಂಬ ಅಪ್ಸರೆಯಾಗಿದ್ದಳು.

ಕಾಲಕ್ರಮದಲ್ಲಿ ತಾರ್ಕ್ಷಿಯು ಮಂದಪಾಲನೆಂಬ ಪಕ್ಷಿಯ ನಾಲ್ಕು ಜನ ಮಕ್ಕಳಲ್ಲಿ ಕಡೆಯವನಾದ 'ದ್ರೋಣ'ನೆಂಬುವನನ್ನು ಮದುವೆಯಾದಳು. ಅವನಿಂದ ಗರ್ಭವನ್ನು ಧರಿಸಿದ್ದ ಆಕೆಯು ಆಗ್ಗೆ ಕುರುಕ್ಷೇತ್ರದಲ್ಲಿ ನಡೆಯುತ್ತಿದ್ದ ಕೌರವಪಾಂಡವರ

ಯುದ್ಧವನ್ನು ನೋಡಲು ಹೋಗಿ ಭಗದತ್ತನ ರಥದ ಮೇಲ್ಭಾಗದಲ್ಲಿ ಸೇರಿಕೊಂಡಳು. ಭಗದತ್ತನಿಗೂ ಅರ್ಜುನನಿಗೂ ನಡೆದ ಮಹಾಯುದ್ಧದಲ್ಲಿ ಅರ್ಜುನನ ಬಾಣಗಳಿಂದ ಸೀಳಲ್ಪಟ್ಟ ರಥದಲ್ಲಿ ಅಡಗಿದ್ದ ತಾರ್ಕ್ಷಿಯ ಗರ್ಭವೂ ಸೀಳಿಹೋಗಿ ಆಕೆಯು ಮೃತಪಟ್ಟಳು. ಆ ಸಮಯಕ್ಕೆ ಅವಳ ಹೊಟ್ಟೆಯಿಂದ ನಾಲ್ಕು ಮೊಟ್ಟೆಗಳು ಕೆಳಗೆ ಉದುರಿದವು. ನೆಲವು ಕೆಸರಾಗಿದ್ದುದರಿಂದಲೂ ಮುಂದಿನ ಘಟನೆಗಳ ದೃಷ್ಟಿಯಿಂದಲೂ ಅವು ಒಡೆಯಲಿಲ್ಲ. ಅದೇ ಸಮಯಕ್ಕೆ ಭಗದತ್ತನ ಆನೆಯ ಕೊರಳಿಗೆ ಕಟ್ಟಿದ್ದ ದೊಡ್ಡ ಗಂಟೆಯು ಆ ಮೊಟ್ಟೆಗಳ ಮೇಲೆ ಸರಿಯಾಗಿ ಕುಸಿದುಬಿದ್ದು ಕೆಸರಿನಲ್ಲಿ ಹೂತುಕೊಂಡಿತು. ಗಂಟೆಯ ಒಳಗಡೆ ಸೇರಿಹೋದ ಮೊಟ್ಟೆಗಳಿಗೆ ಯುದ್ಧರಂಗದಲ್ಲಿ ಮತ್ತೇನೂ ಅಪಾಯವು ಒದಗಲಿಲ್ಲ. ಯುದ್ಧವೆಲ್ಲವೂ ಪೂರೈಸಿದ ಅನಂತರ ಅಲ್ಲಿಯೇ ರಣರಂಗದಲ್ಲಿ ಶರಪಂಜರದಲ್ಲಿ ಮಲಗಿದ್ದ ಭೀಷ್ಮರು ಧರ್ಮರಾಜನಿಗೆ ಉಪದೇಶಮಾಡುತ್ತಿದ್ದ ಧರ್ಮವ್ಯಾಖ್ಯಾನವನ್ನು ಕೇಳುವದಕ್ಕಾಗಿ ಶಮೀಕನೆಂಬ ಋಷಿಯು ತನ್ನ ಶಿಷ್ಯನೊಡನೆ ಅಲ್ಲಿಗೆ ಬರುತ್ತಿದ್ದನು. ಹಾದಿಯಲ್ಲಿ ಬಿದ್ದಿದ್ದ ಘಂಟೆಯೊಳಗಿನಿಂದ ಹಕ್ಕಿಗಳ ಚಿಲಿಪಿಲಿಶಬ್ದಗಳು ಬಂದುದನ್ನು ನೋಡಿ ಆತನು ಘಂಟೆಯನ್ನು ಮೇಲೆತ್ತಿದನು. ಅಲ್ಲಿದ್ದ ನಾಲ್ಕು ಪುಟ್ಟ ಹಕ್ಕಿಗಳನ್ನು ನೋಡಿ ಋಷಿಗೆ ಆಶ್ಚರ್ಯವಾಗಿಬಿಟ್ಟಿತು. ಹಣೆಯಬರಹವು ಗಟ್ಟಿಯಾಗಿದ್ದಲ್ಲಿ ಎಂಥ ಸಂದರ್ಭದಲ್ಲಿಯೂ ಪ್ರಾಣಿಯು ಸಾಯುವದಿಲ್ಲವೆಂಬ ನಿಜವನ್ನು ಕಂಡುಕೊಂಡ ಆ ಋಷಿಯು ಮೆಲ್ಲನೆ ಅವುಗಳನ್ನು ತನ್ನ ಆಶ್ರಮಕ್ಕೆ ಸಾಗಿಸಿ ಅಲ್ಲಿ ಬೆಕ್ಕು, ಗಿಡಗ-ಮುಂತಾದವುಗಳಿಂದ ತೊಂದರೆಯಾಗದಂತೆ ನೋಡಿಕೊಂಡು ಆಹಾರಾದಿಗಳನ್ನು ಕೊಟ್ಟು ಬೆಳೆಯಿಸಿದನು. ಆ ಹಕ್ಕಿಗಳು ದೊಡ್ಡದಾಗಿ ರೆಕ್ಕೆಗಳು ಹುಟ್ಟಿದ ಅನಂತರ ಆಕಾಶದಲ್ಲೆಲ್ಲ ಸುತ್ತಾಡಿ ಜಗತ್ತನ್ನು ಪರಿಚಯಮಾಡಿಕೊಂಡು ಮತ್ತೆ ಋಷಿಯ ಬಳಿಗೆ ಬಂದವು. ಆ ವೇಳೆಗೆ ಅಲ್ಲಿಯ ಸನ್ನಿವೇಶದ ನಿಮಿತ್ತ ಅವುಗಳಿಗೆ ಜ್ಞಾನೋದಯವಾಯಿತು. ಅವು ಒಟ್ಟಾಗಿ ಕೂಡಿ ಶಮೀಕ ಋಷಿಯನ್ನು ನಮಸ್ಕರಿಸಿ ಘಂಟೆಯ ಒಳಗಿನಿಂದ ಮೇಲೆತ್ತಿ ಬದುಕಿಸಿ ಸಾಕಿ ಬೆಳೆಸಿದ್ದಕ್ಕಾಗಿ ಋಷಿಗೆ ತಮ್ಮ ಕೃತಜ್ಞತೆಯನ್ನರ್ಪಿಸಿದವು. ಆಗ ಋಷಿಯು ಹಕ್ಕಿಗಳನ್ನು ಕುರಿತು 'ನೀವು ಯಾರು ? ಹಿಂದಿನ ಜನ್ಮದಲ್ಲಿ ಯಾರಾಗಿದ್ದಿರಿ ? ಈ ಹಕ್ಕಿಯ ಜನ್ಮವು ನಿಮಗೇಕೆ ಬಂತು ?' ಎಂದು ಕೇಳಲಾಗಿ ಅವು ತಮ್ಮ ಕಥೆಯನ್ನು ಹೀಗೆ ಹೇಳಿಕೊಂಡವು.

''ಪೂಜ್ಯನೆ, ವಿಪುಲಸ್ವಾನ್ - ಎಂಬ ಹೆಸರಿನ ಋಷಿಯೊಬ್ಬನಿದ್ದನು. ಅವನಿಗೆ ಸುಕೃಷ, ತುಂಬುರು- ಎಂಬ ಇಬ್ಬರು ಮಕ್ಕಳಿದ್ದರು. ಸುಕೃಷನ ಮಕ್ಕಳೇ ನಾವು ನಾಲ್ವರು. ನಮ್ಮ ಪಿತಾಮಹನು ಮಹಾತಪಸ್ವಿಯು. ಅವನ ಶುಶ್ರೂಷೆ ಹಾಗೂ

ಸೇವೆಗಳಲ್ಲಿಯೇ ನಿರತರಾದ ನಾವು ಹಿರಿಯರಲ್ಲಿ ಬಹಳ ಭಕ್ತಿಯುಳ್ಳವರಾಗಿದ್ದೇವೆ. ಒಮ್ಮೆ ದೇವೇಂದ್ರನು ನಮ್ಮ ಅಜ್ಜನ ತಪಸ್ಸು, ಔದಾರ್ಯಾದಿಗಳನ್ನು ಪರೀಕ್ಷಿಸಲು ಪಕ್ಷಿರೂಪವನ್ನು ಧರಿಸಿಬಂದು, 'ಋಷಿಶ್ರೇಷ್ಠನೆ, ನಾನು ತುಂಬ ಹಸಿದಿದ್ದೇನೆ, ಏನಾದರೂ ಆಹಾರವನ್ನು ಕರುಣಿಸು' ಎಂದು ಬೇಡಿದನು. ಆಗಲಿ- ಎಂದು ಮಾತುಕೊಟ್ಟ ನಮ್ಮಜ್ಜನು 'ನಿನಗೆ ಏನು ಆಹಾರವು ಬೇಕು ?' ಎನ್ನಲಾಗಿ 'ಮನುಷ್ಯರ ಮಾಂಸವು ಬೇಕು' ಎಂದು ಪಕ್ಷಿರೂಪದ ಇಂದ್ರನು ಕೇಳಿದನು. ಆಗ ಋಷಿಯು 'ಹೀಗೆ ಋಷ್ಯಾಶ್ರಮದಲ್ಲಿ ಕೇಳುವದು ಸರಿಯಲ್ಲ ; ಆದರೂ ನಾನು ಮಾತುಕೊಟ್ಟುಬಿಟ್ಟಿರುವೆನಾದ್ದರಿಂದ ನಿನಗೆ ಆಹಾರವನ್ನು ಒದಗಿಸುವೆನು' ಎಂದು ಹೇಳಿ ನಮ್ಮಲ್ಲಿ ಒಬ್ಬೊಬ್ಬರನ್ನು ಕರೆದು ಪಕ್ಷಿಗೆ ಆಹಾರವಾಗುವಂತೆ ಕೇಳಿದನು. ನಾವು ಯಾರೂ ಶರೀರತ್ಯಾಗಮಾಡಲು ಒಪ್ಪಲಿಲ್ಲ. ಕಡೆಗೆ ಋಷಿಗೆ ಕೋಪವುಂಟಾಗಿ ನೀವುಗಳೆಲ್ಲರೂ ತಿರ್ಯಗ್ಜನ್ಮವನ್ನು ಪಡೆಯಿರಿ- ಎಂದು ಶಪಿಸಿಬಿಟ್ಟನು. ಅನಂತರ ಪಕ್ಷಿಯನ್ನು ಕುರಿತು 'ನನ್ನನ್ನೇ ಆಹಾರವಾಗಿ ಸ್ವೀಕರಿಸಿಬಿಡು'-ಎಂದನು. ಆಗ ಪಕ್ಷಿಯು ಬದುಕಿರುವವರನ್ನು ನಾವು ಮುಟ್ಟುವದಿಲ್ಲ. ಯೋಗಾಭ್ಯಾಸದಿಂದ ನೀನು ದೇಹತ್ಯಾಗಮಾಡಿಬಿಡು ; ಅನಂತರ ಸ್ವೀಕಸಿಸುವೆನು' ಎಂದಿತು. ಆದರಂತೆಯೇ ಋಷಿಯು ದೇಹತ್ಯಾಗಕ್ಕೆ ಸಿದ್ಧನಾದನು. ಆಗ ದೇವೇಂದ್ರನು ಪ್ರತ್ಯಕ್ಷನಾಗಿ ಋಷಿಗೆ ವರಪ್ರದಾನಮಾಡಿ ಹೊರಟುಹೋದನು. ಅನಂತರ ನಾವುಗಳು ಋಷಿಯನ್ನು ಕುರಿತು ದೇಹವು ಪ್ರತಿಯೊಬ್ಬನಿಗೂ ಪ್ರಿಯವಾದ್ದರಿಂದ ಅದನ್ನು ಬಿಡಲು ಇಷ್ಟವಾಗಲಿಲ್ಲವೆಂದೂ ತಮ್ಮ ತಪ್ಪನ್ನು ಮನ್ನಿಸಿ ಶಾಪವನ್ನು ಹಿಂತೆಗೆದುಕೊಳ್ಳ ಬೇಕೆಂದೂ ಕೇಳಿಕೊಂಡೆವು. ಆದರೆ ಆತನು ತನ್ನ ಮಾತು ಎಂದೂ ಸುಳ್ಳಾಗುವದಿಲ್ಲ ವೆಂದೂ ಮೊಮ್ಮಕ್ಕಳ ವಿಷಯದಲ್ಲಿಯೂ ಕೋಪವುಂಟಾಗಿ ಶಾಪವು ಹೊರಬರ ಬೇಕಾದರೆ ಇದು ದೈವಪ್ರೇರಣೆಯೇ ಸರಿ- ಎಂದೂ ತಿಳಿಸಿ 'ನೀವುಗಳು ತಿರ್ಯಗ್‌ಜನ್ಮಗಳನ್ನು ಪಡೆದರೂ ಜಾತಿಸ್ಮರರಾಗಿ ಹುಟ್ಟಿ ಜ್ಞಾನದಿಂದ ಪರಮ ಸಿದ್ಧಿಯನ್ನು ಹೊಂದುವಿರಿ ; ಚಿಂತಿಸಬೇಡಿರಿ'- ಎಂದು ಅನುಗ್ರಹಿಸಿದನು. ಹೀಗೆ ನಾವು ಬ್ರಾಹ್ಮಣಶ್ರೇಷ್ಠರಾಗಿದ್ದು ಈಗ ಹಕ್ಕಿಗಳಾಗಿದ್ದೇವೆ- ಎಂದು ತಿಳಿಸಿದವು. ಆಗ ಶಮೀಕಋಷಿಯು ಆಶ್ಚರ್ಯಗೊಂಡು ಅವುಗಳನ್ನು ಹರಸಿದನು. ಅನಂತರ ಋಷಿಯ ಅಪ್ಪಣೆಯನ್ನು ಪಡೆದು ಆ ನಾಲ್ಕು ಪಕ್ಷಿಗಳೂ ವಿಂಧ್ಯಾರಣ್ಯದಲ್ಲಿ ನೆಲಸಿದವು. ಹೀಗೆ ದ್ರೋಣನೆಂಬ ಹಕ್ಕಿಯ ಪುತ್ರರಾದ ನಾಲ್ವರು ಜ್ಞಾನಸಂಪನ್ನರು ಈಗಲೂ ವಿಂಧ್ಯಾಟವಿಯಲ್ಲಿದ್ದಾರೆ. ಅವರನ್ನು ಬಳಿಸಾರಿ ನಿನ್ನ ಸಂದೇಹಗಳನ್ನು ಪರಿಹರಿಸಿಕೊ' - ಎಂದು ಮಾರ್ಕಂಡೇಯರು ಜೈಮಿನಿಗೆ ತಿಳಿಸಿದರು.

ಅನಂತರ ಜೈಮಿನಿಗಳು ಈ ಪಕ್ಷಿಗಳನ್ನು ಹುಡುಕಿಕೊಂಡು ವಿಂಧ್ಯಾರಣ್ಯಕ್ಕೆ ಹೋಗಲಾಗಿ ಅವು ಒಟ್ಟಾಗಿ ಸೇರಿ ವೇದಾಧ್ಯಯನಮಾಡುತ್ತಿದ್ದವು. ಸ್ವಚ್ಛವಾದ ಉಚ್ಚಾರಗಳಿಂದ ಮನುಷ್ಯವಾಕ್ಕಿನಲ್ಲಿ ವೇದಪಠನಮಾಡುತ್ತಿದ್ದ ಅವುಗಳ ಬಳಿಗೆ ಹೋಗಿ 'ಪೂಜ್ಯರೆ, ನಿಮಗೆ ಸ್ವಾಗತ' ಎಂದು ವಂದಿಸಿದನು. ವ್ಯಾಸ ಶಿಷ್ಯನಾದ ಜೈಮಿನಿಯನ್ನು ಕಂಡು ಅವು ಬಹಳ ಸಂತೋಷಪಟ್ಟು ಸತ್ಕರಿಸಿ 'ನಮ್ಮ ಜನ್ಮವು ಸಾರ್ಥಕವಾಯಿತು. ತಾವು ಬಂದ ಉದ್ದೇಶವೇನು ?' ಎನ್ನಲು ಜೈಮಿನಿಯು ತಾನು ಬಂದ ಸಮಾಚಾರವನ್ನೆಲ್ಲ ತಿಳಿಸಿದನು. ಆಗ ಪಕ್ಷಿಗಳು 'ಬಹಳ ಸಂತೋಷ. ನಮಗೆ ವಿಷಯಗಳು ತಿಳಿದಿದ್ದು ಕೇಳುವವರೂ ಇರುವಲ್ಲಿ ಸಂದೇಹವಿಲ್ಲದೆ ಹೇಳುವೆವು' ಎಂದು ಆಶ್ವಾಸನೆಯನ್ನು ನೀಡಿ ಪುರಾಣಕಥೆಯನ್ನಾರಂಭಿಸಿ ಜೈಮಿನಿಗಳಿಗೆ ಹೇಳಿದವು. ಇದು ಮಾರ್ಕಂಡೇಯಪುರಾಣದ ಪೀಠಿಕೆಯಾಗಿದೆ.

ಪುರಾಣಗಳಲ್ಲಿ ಅನುಸರಿಸಿರುವ ವಿಷಯ ಪ್ರತಿಪಾದನೆಯಂತೆಯೇ ಇಲ್ಲಿಯೂ ಸೃಷ್ಟ್ಯಾದಿವಿಚಾರ, ಮನ್ವಂತರಗಳ ವಿಚಾರ, ವಂಶಾನುಚರಿತಗಳು - ವಿವರಿಸಲ್ಪಟ್ಟಿವೆ. ನಲವತ್ತೊಂದು ಅಧ್ಯಾಯಗಳ ಪೂರ ಕಥೆಯನ್ನು ಕೇಳಿದ ಜೈಮಿನಿಯು ಹದಿನಾಲ್ಕು ಮನ್ವಂತರಗಳ ಕಥೆಯನ್ನು ಹೇಳಬೇಕೆಂದಾಗ ಪಕ್ಷಿಗಳು 'ಆಹಾ ! ಈ ಪ್ರಶ್ನೆಯು ಬಹಳ ಗಹನವಾಗಿದೆ. ಆದರೂ ನಾವು ಕ್ರೌಷ್ಟುಕಿ-ಮಾರ್ಕಂಡೇಯರ ಸಂವಾದವನ್ನು ಕೇಳಿರುವದರಿಂದ ವಿಷಯಗಳನ್ನು ತಿಳಿದಿದ್ದೇವೆ. ಅವುಗಳನ್ನೇ ನಿನಗೆ ವಿವರಿಸುತ್ತೇವೆ' – ಎಂದು ಆರಂಭಿಸಿ ಕ್ರೌಷ್ಟುಕಿ ಮಾರ್ಕಂಡೇಯ ಸಂವಾದವನ್ನೇ ಅನುವಾದಮಾಡಿ ಜೈಮಿನಿಗಳಿಗೆ ಉಪದೇಶಿಸಿರುತ್ತವೆ. ಹೀಗೆ ಮಾರ್ಕಂಡೇಯಪುರಾಣಾಂತರ್ಗತ ದೇವೀಮಹಾತ್ಮ್ಯವು ಗುರುಶಿಷ್ಯಪರಂಪರೆಯಿಂದ ಉಪದಿಷ್ಟವಾಗಿ ಬಂದಿದೆ.

ತಂತ್ರಶಾಸ್ತ್ರಜ್ಞರು ಈ ಪುರಾಣಭಾಗವನ್ನು ದೇವೀಪ್ರಸಾದಸಿದ್ಧಿಗೆ ದ್ವಾರವಾಗಿ ಮಾಡಿಕೊಂಡು ಒಂದಾನೊಂದು ವಿಶಿಷ್ಟರೀತಿಯಿಂದ ಇದರ ಪಾರಾಯಣ, ಪುರಶ್ಚರಣ-ಹೋಮಗಳನ್ನು ಏರ್ಪಾಡುಮಾಡಿರುತ್ತಾರೆ. ಇದನ್ನೇ ಚಂಡೀ ಪಾರಾಯಣ, ಚಂಡೀಹೋಮಗಳೆಂದು ಕರೆಯುತ್ತಾರೆ. ಈ ಕ್ರಮವು ಈಗಲೂ ವಿಶೇಷವಾಗಿ ಪ್ರಚಾರದಲ್ಲಿರುತ್ತದೆ. ಅದ್ವೈತಸಂಪ್ರದಾಯದ ಮಠಗಳಲ್ಲಿಯೂ ಕೆಲವು ಶಕ್ತಿದೇವಾಲಯಗಳಲ್ಲಿಯೂ ಹಾಗೂ ವೈಯಕ್ತಿಕವಾಗಿಯೂ ಸಾಮೂಹಿಕ ವಾಗಿಯೂ ಮಹಾಜನರುಗಳು ಈ ಚಂಡೀಯಾಗಗಳನ್ನು ನಡೆಸುತ್ತಾರೆ. ಹತ್ತು ಪಾರಾಯಣಗಳಿಗೆ ಒಂದುಬಾರಿ ಹೋಮವನ್ನು ಮಾಡುವ ಕ್ರಮದಂತೆ ಇದನ್ನು ಬೆಳೆಯಿಸಿ ಶತಚಂಡೀ, ಸಹಸ್ರಚಂಡೀ ಯಾಗಗಳನ್ನೂ ಅಲ್ಲಲ್ಲಿ ನಡೆಯಿಸುತ್ತಾರೆ. ಈ ದುರ್ಗಾಸಪ್ತಶತೀ ಪಾರಾಯಣಕ್ಕಾಗಿಯೇ ಮೂಲಮಂತ್ರವನ್ನು ಸಾಂಗೋಪಾಂಗ

ವಾಗಿ ಪರಂಪರೆಯಿಂದ ಉಪದೇಶವನ್ನು ಹೊಂದಿದ ದೀಕ್ಷಾಬದ್ಧರಾದ ಋತ್ವಿಜರಿರುತ್ತಾರೆ. ಅಂಥವರಿಂದಲೇ ಪಾರಾಯಣಾದಿಗಳನ್ನು ನಡೆಯಿಸಬೇಕೆಂಬ ನಿಯಮವಿದೆ. ದೇವಿಯ ಆರಾಧನೆಗಾಗಿಯೇ ಮೀಸಲಾದ ಕೆಲವು ತಾಂತ್ರಿಕ ಪೂಜಾವಿಧಾನಗಳಿವೆ. ಇವುಗಳಲ್ಲಿ ಮುಖ್ಯವಾದದ್ದು ಶ್ರೀಚಕ್ರಾರ್ಚನೆಯು. ಶ್ರೀಚಕ್ರದಲ್ಲಿಯೂ ಮೇರುಪ್ರಸ್ಥ, ಭೂಪ್ರಸ್ಥಗಳೆಂಬ ವಿಭಾಗವುಂಟು. ಶ್ರೀ ಶಂಕರಾಚಾರ್ಯರ ಕೃತಿಯೆಂದು ಪ್ರಸಿದ್ಧವಾಗಿರುವ 'ಸೌಂದರ್ಯಲಹರೀ' ಎಂಬ ಸ್ತೋತ್ರದಲ್ಲಿ ಕೆಲವು ದೇವೀ ಆರಾಧನಾಕ್ರಮಗಳ ವಿವರವಿದೆ. ಹೆಚ್ಚಿನ ವಿಚಾರಗಳನ್ನು ತಂತ್ರಗ್ರಂಥಗಳಿಂದಲೂ ತಂತ್ರಶಾಸ್ತ್ರಜ್ಞರಿಂದಲೂ ಅರಿತುಕೊಳ್ಳಬೇಕು.

ಆದರೆ ಇದೇ ದುರ್ಗಾಸಪ್ತಶತಿಯನ್ನು ವೈದಿಕಪೌರಾಣಿಕಮಾರ್ಗಗಳೆರಡಕ್ಕೂ ಹೊಂದಿಸಿಕೊಂಡು ಪಾರಾಯಣಹೋಮಾದಿಗಳನ್ನು ನಡೆಸುವದೂ ಈಗ ರೂಢಿಯಲ್ಲಿದೆ. ಆದರಂತೆ ವೈದಿಕವಾದ (1) ದುರ್ಗಾಸೂಕ್ತ (2) ಶ್ರೀಸೂಕ್ತ (3) ಸರಸ್ವತೀಸೂಕ್ತ (4) ರಾತ್ರಿಸೂಕ್ತ (5) ಅಂಭ್ರಣೀಸೂಕ್ತಗಳನ್ನು ಪಠಿಸುವದು, ಶ್ರೀಸೂಕ್ತ ವಿಧಾನದಿಂದ ದುರ್ಗಾದೇವಿಯನ್ನೂ ಪಾರಾಯಣಗ್ರಂಥವನ್ನೂ ಪೂಜಿಸುವದು, ಮೂಲಮಂತ್ರವನ್ನು ಜಪಮಾಡಿಕೊಳ್ಳುವದು, ಪೂರ್ವೋತ್ತರಾಂಗ ನ್ಯಾಸಗಳೊಡನೆ ಸಪ್ತಶತಿಯನ್ನು ಪಾರಾಯಣಮಾಡುವದು, ದುರ್ಗಾಸ್ತೋತ್ರ ಗಳನ್ನು ಹೇಳಿಕೊಳ್ಳುವದು, ಶ್ರೀಲಲಿತಾಸಹಸ್ರನಾಮ, ತ್ರಿಶತಿಗಳಿಂದ ದೇವಿಗೆ ಕುಂಕುಮಾರ್ಚನೆಮಾಡುವದು, ವೈದಿಕಸ್ಮಾರ್ತಪ್ರಯೋಗಕ್ರಮದಿಂದ ಅಗ್ನಿಯಲ್ಲಿ ಸಪ್ತಶತೀ ಮಂತ್ರಗಳನ್ನು ವಿಭಾಗಾನುಗುಣವಾಗಿ ಪಠಿಸಿ ಪಾಯಸ-ಚರುಗಳಿಂದ ಹೋಮಮಾಡುವದು, ಕುಮಾರೀಪೂಜೆ, ಸುವಾಸಿನೀಪೂಜೆಗಳನ್ನು ನೆರವೇರಿಸಿ ಯಾಗವನ್ನು ಪೂರೈಸುವದು -ಹೀಗೂ ದೇವೀಭಕ್ತರುಗಳಲ್ಲಿ ಅನುಷ್ಠಾನಕ್ರಮವು ನಡೆದುಬಂದಿದೆ. ಮುಖ್ಯವಾಗಿ ಸಪ್ತಶತಿಯು ಪೌರಾಣಿಕವಾದ್ದರಿಂದ ವೈದಿಕ-ತಾಂತ್ರಿಕವಿಧಾನಗಳಲ್ಲಿ ಯಾವದಾದರೊಂದರ ಚೌಕಟ್ಟಿನಲ್ಲಿಯಾದರೂ ದೇವಿಯನ್ನು ತೃಪ್ತಿಗೊಳಿಸಬಹುದಾಗಿದೆ. ವೈದಿಕದೀಕ್ಷಾವಿಧಾನವು ಸಾತ್ತ್ವಿಕವಾಗಿದ್ದು ದಕ್ಷಿಣಾಚಾರ ವೆಂದು ಕರೆಯಲ್ಪಡುತ್ತದೆ. ಈ ವಿಧಾನವು ಯಾವಾಗಲೂ ಅಪಾಯರಹಿತವಾಗಿರು ತ್ತದೆ. ಸಿದ್ಧಿಯು ಸ್ವಲ್ಪ ತಡವಾಗಬಹುದಾದರೂ ವ್ಯವಹಾರಕ್ಕೆ ಹೊಂದಿಕೊಂಡಿರು ವುದರಿಂದ ಸರ್ವರಿಗೂ ಅನುಕರಣೀಯವಾಗಿರುತ್ತದೆ. ದೇವಿಯ ಉಪಾಸನೆಯನ್ನು ಕಾಮ್ಯವಾಗಿ ಅನುಷ್ಠಿಸುವಾಗಲೂ ಶ್ರೀಶಂಕರಭಗವತ್ಪಾದರ ವೇದಾಂತೋಪದೇಶ ಗಳಿಗೆ ವಿರೋಧವಾಗದಂತೆ ಇರಬೇಕಾದರೆ ದಕ್ಷಿಣಾಚಾರಮಾರ್ಗವೇ ತಕ್ಕದ್ದಾಗಿರು ತ್ತದೆ. ಒಂದು ವೇಳೆ ಫಲಾಪೇಕ್ಷೆಯಿಲ್ಲದೆ ಅನುಷ್ಠಾನಮಾಡುವದಾದರೂ ಈ ದಕ್ಷಿಣಾಚಾರಮಾರ್ಗವು ಚಿತ್ತಶುದ್ಧಿಯನ್ನೂ ಜ್ಞಾನಕ್ಕೆ ತಕ್ಕ ಯೋಗ್ಯತೆಯನ್ನೂ

ಅನುಗ್ರಹಿಸುತ್ತದೆ. ಆಗ ದೇವಿಯೇ ಉಮೆಯಾಗಿ ಇಂದ್ರನಿಗೆ ಉಪದೇಶಿಸಿದಂತೆ ನಮಗೂ ಬ್ರಹ್ಮವಿದ್ಯೆಯನ್ನು ಕರುಣಿಸಿ ಮುಕ್ತಿಯನ್ನು ನೀಡುತ್ತಾಳೆ. ಅಂತೂ ದೇವಿಯ ಆರಾಧನೆಯು ಭೋಗಮೋಕ್ಷಗಳೆಂಬ ಎರಡು ಪುರುಷಾರ್ಥಗಳನ್ನೂ ನೀಡುವ ದಾಗಿರುತ್ತದೆ.

ಹೀಗೆ ದೇವಿಯ ಮಹಾತ್ಮ್ಯವು ಅನಂತವಾಗಿದೆ. ಸದ್ಯಕ್ಕೆ ನಾವು ಹೆಚ್ಚಿನ ಮಂತ್ರ-ತಂತ್ರ-ಯಂತ್ರಗಳ ವಿಶೇಷ ವಿಜ್ಞಾನವನ್ನು ಹುಡುಕಿಕೊಂಡು ಹೋಗುವದ ಕ್ಕಿಂತಲೂ ಕೇವಲ ಭಕ್ತಿಮಾರ್ಗದಿಂದ ದೇವಿಯ ಆರಾಧನೆಯನ್ನು ನಮಗೆ ಸಾಧ್ಯವಾಗಬಹುದಾದ ಕ್ರಮದಿಂದ ಕೈಗೊಂಡು ಆಕೆಯ ಪ್ರಸಾದಕ್ಕೆ ಪಾತ್ರರಾಗಲು ಯತ್ನಿಸಬೇಕು. ಅದಕ್ಕೆ ಮುಂಚೆ ಆ ದೇವಿಯು ಯಾರು ? ಆಕೆಯ ಅವತಾರಗಳು ಯಾವವು ? ಅವಳ ಶಕ್ತಿಗಳೇನು ? ಮಹಿಮೆಯೇನು ? ಎಂಬುದನ್ನು ತಿಳಿಯಲು ಈ ದೇವೀಮಹಾತ್ಮ್ಯವನ್ನು ಓದಬೇಕು. ಮತ್ತೆ ಮತ್ತೆ ಓದಿದರಂತೂ ದೇವಿಯಲ್ಲಿ ಭಕ್ತಿಯೂ ಶ್ರದ್ಧೆಯೂ ಬೆಳೆಯುತ್ತಾ ಹೋಗುವದು. ಆದ್ದರಿಂದ ದೇವೀಭಕ್ತರ ಉಪಯೋಗಕ್ಕಾಗಿ ಇನ್ನು ಮುಂದೆ ದೇವೀಮಹಾತ್ಮ್ಯವನ್ನು ಸಂಸ್ಕೃತಮೂಲ, ಕನ್ನಡ ಅನುವಾದಗಳೊಡನೆ ಕೊಡಲಾಗುವದು. ವಾಚಕಮಹಾಶಯರು ನನ್ನ ಈ ಪ್ರಯತ್ನವನ್ನು ಮೆಚ್ಚಿ ಸಾರ್ಥಕಪಡಿಸಿಕೊಳ್ಳುವರೆಂದು ನಂಬಿದ್ದೇನೆ.

– ಅನುವಾದಕ.

॥ ಶ್ರೀಃ ॥

॥ ಓಂ ನಮಶ್ಚಂಡಿಕಾಯ್ಯೆ ॥

# ದೇವೀಮಹಾತ್ಮ್ಯಮ್

(ಮಾರ್ಕಂಡೇಯಪುರಾಣಾಂತರ್ಗತಮ್)

## (ದುರ್ಗಾಸಪ್ತಶತೀ)

### ಮಂಗಳಶ್ಲೋಕಗಳು

ಓಂ ॥ ನಮೋ ನಮೋ ದೇವ್ಯೈ ಮಹಾದೇವ್ಯೈ ಶಿವಾಯ್ಯೆ ಸತತಂ ನಮಃ ।
ನಮಃ ಪ್ರಕೃತ್ಯೈ ಭದ್ರಾಯ್ಯೆ ನಿಯತಾಃ ಪ್ರಣತಾಃ ಸ್ಮ ತಾಮ್ ॥
ಸರ್ವಮಂಗಳಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ ।
ಶರಣ್ಯೇ ತ್ರ್ಯಂಬಕೇ ದೇವಿ ನಾರಾಯಣಿ ನಮೋಽಸ್ತು ತೇ ॥

## ಒಂದನೆಯ ಅಧ್ಯಾಯ

ಧ್ಯಾನಮ್ ॥ ಖಡ್ಗಂ ಚಕ್ರಗದೇಷುಚಾಪಪರಿಘಾನ್ ಶೂಲಂ ಭುಶುಂಡೀಂ ಶಿರಃ
ಶಂಖಂ ಸಂದಧತೀಂ ಕರೈಸ್ತ್ರಿನಯನಾಂ ಸರ್ವಾಂಗಭೂಷಾವೃತಾಮ್ ।
ನೀಲಾಶ್ಮದ್ಯುತಿಮಾಸ್ಯಪಾದದಶಕಾಂ ಸೇವೇ ಮಹಾಕಾಲಿಕಾಂ
ಯಾಮಸ್ತೌತ್ ಸ್ವಪಿತೇ ಹರೌ ಕಮಲಜೋ ಹಂತುಂ
ಮಧುಂ ಕೈಟಭಮ್ ॥

1. ಯಾವ ದೇವಿಯು ತನ್ನ ಕೈಗಳಿಂದ ಖಡ್ಗ, ಚಕ್ರ, ಗದೆ, ಬಿಲ್ಲು, ಬಾಣ, ಪರಿಘ, ಶೂಲ, ಭುಶುಂಡಿ, ಕಪಾಲ, ಶಂಖ-ಗಳನ್ನು ಧರಿಸಿರುವಳೋ ಸರ್ವಾಂಗಗಳಲ್ಲಿಯೂ ಒಡವೆಗಳನ್ನು ತೊಟ್ಟವಳಾಗಿಯೂ ಮೂರುಕಣ್ಣುಗಳು ಉಳ್ಳವಳಾಗಿಯೂ ನೀಲಮಣಿಯಂತೆ ದೇಹಕಾಂತಿಯುಳ್ಳವಳಾಗಿ ಹತ್ತು ತಲೆ, ಹತ್ತು ಕಾಲುಗಳಿಂದ ವಿರಾಜಮಾನಳಾಗಿರುವಳೋ, ಯಾವ ದೇವಿಯನ್ನು ಚತುರ್ಮುಖಬ್ರಹ್ಮನು-ವಿಷ್ಣುವು ಮಲಗಿರಲಾಗಿ ಮಧುಕೈಟಭರೆಂಬ ರಾಕ್ಷಸರನ್ನು ಕೊಲ್ಲುವಂತೆ (ಪ್ರೇರಿಸಲು) - ಸ್ತೋತ್ರಮಾಡಿದನೋ ಆ ಮಹಾಕಾಳಿಯನ್ನು ನಾನು ಭಜಿಸುತ್ತೇನೆ.

ಓಂ ಐಂ ಮಾರ್ಕಂಡೇಯ ಉವಾಚ –

ಸಾವರ್ಣಿಃ ಸೂರ್ಯತನಯೋ ಯೋ ಮನುಃ ಕಥ್ಯತೇಽಷ್ಟಮಃ ।
ನಿಶಾಮಯ ತದುತ್ಪತ್ತಿಂ ವಿಸ್ತರಾದ್ ಗದತೋ ಮಮ ॥1॥

1. ಮಾರ್ಕಂಡೇಯನಿಂತೆಂದನು : ಸೂರ್ಯಪುತ್ರನಾದ ಸಾವರ್ಣಿಯೆಂಬ ಎಂಟನೆಯ ಮನುವು ಯಾವನಿರುವನೋ ಅವನು ಹುಟ್ಟಿದ್ದನ್ನು ಈಗ ವಿಸ್ತಾರವಾಗಿ ಹೇಳುವೆನು. ನಾನು (ಹೇಳಿದ್ದನ್ನು) ಕೇಳುವವನಾಗು.

ಮಹಾಮಾಯಾನುಭಾವೇನ ಯಥಾ ಮನ್ವಂತರಾಧಿಪಃ ।
ಸ ಬಭೂವ ಮಹಾಭಾಗಃ ಸಾವರ್ಣಿಸ್ತನಯೋ ರವೇಃ ॥2॥

2. ಮಹಾಮಾಯೆಯಾದ (ದೇವಿಯ) ಅನುಗ್ರಹದಿಂದ ಆ ಮಹಾಭಾಗನು ಸೂರ್ಯಪುತ್ರನಾದ ಸಾವರ್ಣಿಯೆನಿಸಿ ಮನ್ವಂತರಾಧಿಪತಿಯಾಗಿ ಹೇಗೆ ಆದನೋ (ಆ ವೃತ್ತಾಂತವನ್ನು ಕೇಳು).

ಸ್ವಾರೋಚಿಷೇಽನ್ತರೇ ಪೂರ್ವಂ ಚೈತ್ರವಂಶಸಮುದ್ಭವಃ ।
ಸುರಥೋ ನಾಮ ರಾಜಾಽಭೂತ್ ಸಮಸ್ತೇ ಕ್ಷಿತಿಮಂಡಲೇ ॥3॥

ತಸ್ಯ ಪಾಲಯತಃ ಸಮ್ಯಕ್ ಪ್ರಜಾಃ ಪುತ್ರಾನಿವೌರಸಾನ್ ।
ಬಭೂವುಃ ಶತ್ರವೋ ಭೂಪಾಃ ಕೋಲಾವಿಧ್ವಂಸಿನಸ್ತದಾ ॥4॥

3-4. ಹಿಂದೆ ಸ್ವಾರೋಚಿಷಮನ್ವಂತರದಲ್ಲಿ ಚೈತ್ರವೆಂಬ ವಂಶದಲ್ಲಿ ಹುಟ್ಟಿದವನಾದ ಸುರಥನೆಂಬ ರಾಜನು ಇಡಿಯ ಭೂಮಂಡಲಕ್ಕೆ ಒಡೆಯನಾಗಿದ್ದನು. ಅವನು ಪ್ರಜೆಗಳನ್ನು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಂತೆ ಚೆನ್ನಾಗಿ ಕಾಪಾಡುತ್ತಿರಲಾಗಿ ಕೋಲಾವಿಧ್ವಂಸಕರೆಂಬ[1] ಕೆಲವು ರಾಜರುಗಳು ಶತ್ರುಗಳಾದರು.

ತಸ್ಯ ತೈರಭವದ್ ಯುದ್ಧಮತಿಪ್ರಬಲದಂಡಿನಃ ।
ನ್ಯೂನೈರಪಿ ಸ ತೈರ್ಯುದ್ಧೇ ಕೋಲಾವಿಧ್ವಂಸಿಭಿರ್ಜಿತಃ ॥5॥

ತತಃ ಸ್ವಪುರಮಾಯಾತೋ ನಿಜದೇಶಾಧಿಪೋಽಭವತ್ ।
ಆಕ್ರಾಂತಃ ಸ ಮಹಾಭಾಗಸ್ತೈಸ್ತದಾ ಪ್ರಬಲಾರಿಭಿಃ ॥6॥

---

1. ಕೋಲಾ ಎಂದರೆ ಹಂದಿಗಳು. ಅವುಗಳ ಧ್ವಂಸಕರಾದ ಯವನರು-ಎಂದು ವ್ಯಾಖ್ಯಾನದಲ್ಲಿದೆ.

**ಅಮಾತ್ಯೈರ್ಬಲಿಭಿಃ ದುಷ್ಟೈರ್ದುರ್ಬಲಸ್ಯ ದುರಾತ್ಮಭಿಃ ।**
**ಕೋಶೋ ಬಲಂ ಚಾಪಹೃತಂ ತತ್ರಾಪಿ ಸ್ವಪುರೇ ತತಃ ॥7॥**

5-7. ಅತಿಹೆಚ್ಚಿನ ಸೈನ್ಯವುಳ್ಳ ಅವನು ಆ ಶತ್ರುಗಳೊಡನೆ ಯುದ್ಧ ಮಾಡಿದನು. (ಶತ್ರುಗಳು) ಅಲ್ಪಸಂಖ್ಯೆಯವರಿದ್ದರೂ ಆ ಕೋಲಾವಿಧ್ವಂಸಿಗಳಿಗೆ ಈತನು ಸೋತುಹೋದನು. ಅನಂತರ ತನ್ನ ಊರಿಗೆ ಹಿಂದಿರುಗಿ (ಸಾರ್ವಭೌಮಪದವಿಯು ನಷ್ಟವಾದರೂ) ಕೇವಲ ತನ್ನ ದೇಶಕ್ಕೆ ರಾಜನಾದನು. ಆದರೂ ಅಲ್ಲಿಯೂ ಆ ಮಹಾಭಾಗನು ಬಲಿಷ್ಠರೂ ದುಷ್ಟರೂ ದುರಾತ್ಮರೂ ಆದ ಮಂತ್ರಿಗಳಿಂದ ಆವರಿಸಲ್ಪಟ್ಟನು. ಆ ಶತ್ರುಗಳಿಂದ ಅವನ ಭಂಡಾರ, ಬಲ (ಅಧಿಕಾರಗಳೆಲ್ಲವೂ) ಅಪಹರಿಸಲ್ಪಟ್ಟವು. ಹೀಗೆ ತನ್ನ ಊರಿನಲ್ಲಿಯೂ ಆತನಿಗೆ ಉಳಿಗಾಲವಿಲ್ಲವಾಯಿತು.

**ತತೋ ಮೃಗಯಾವ್ಯಾಜೇನ ಹೃತಸ್ವಾಮ್ಯಃ ಸ ಭೂಪತಿಃ ।**
**ಏಕಾಕೀ ಹಯಮಾರುಹ್ಯ ಜಗಾಮ ಗಹನಂ ವನಮ್ ॥8॥**

8. ಅನಂತರ ಎಲ್ಲಾ ಐಶ್ವರ್ಯವೂ ನಾಶವಾಗಲಾಗಿ ಆ ರಾಜನು ಬೇಟೆಯಾಡುವ ನೆಪದಿಂದ ಒಬ್ಬನೇ ಕುದುರೆಯನ್ನೇರಿ ದಟ್ಟವಾದ ಕಾಡನ್ನು ಹೊಕ್ಕನು.

**ಸ ತತ್ರಾಶ್ರಮಮದ್ರಾಕ್ಷೀತ್ ದ್ವಿಜವರ್ಯಸ್ಯ ಮೇಧಸಃ ।**
**ಪ್ರಶಾಂತಶ್ವಾಪದಾಕೀರ್ಣಂ ಮುನಿಶಿಷ್ಯೋಪಶೋಭಿತಮ್ ॥9॥**

**ತಸ್ಥೌ ಕಂಚಿತ್ ಸ ಕಾಲಂ ಚ ಮುನಿನಾ ತೇನ ಸತ್ಕೃತಃ ।**
**ಇತಶ್ಚೇತಶ್ಚ ವಿಚರನ್ ತಸ್ಮಿನ್ ಮುನಿವರಾಶ್ರಮೇ ॥10॥**

9-10. ಅವನು ಅಲ್ಲಿ ಒಬ್ಬ ಬ್ರಾಹ್ಮಣಶ್ರೇಷ್ಠನೂ ಮೇಧಾವಿಯೂ ಆದ ಋಷಿಯ ಆಶ್ರಮವನ್ನು ಕಂಡನು. ಅದು ಆ ಮುನಿಯ ಶಿಷ್ಯರುಗಳಿಂದ ಶೋಭಿಸುತ್ತಿತ್ತು. ಯಾವದೇ ಮೃಗಗಳ ಕಾಟವಿರಲಿಲ್ಲ. ಅಲ್ಲಿ ಆ ಮುನಿಯಿಂದ ಸತ್ಕಾರವನ್ನು ಹೊಂದಿದ (ರಾಜನು) ಆ ಆಶ್ರಮದಲ್ಲಿಯೇ ಅತ್ತಿತ್ತ ಸಂಚರಿಸುತ್ತಾ ಕೆಲವು ಕಾಲವನ್ನು ಕಳೆದನು.

**ಸೋಽಚಿಂತಯತ್ತದಾ ತತ್ರ ಮಮತ್ವಾಕೃಷ್ಟಚೇತನಃ ।**
**ಮತ್ಪೂರ್ವೈಃ ಪಾಲಿತಂ ಪೂರ್ವಂ ಮಯಾ ಹೀನಂ ಪುರಂ ಹಿ ತತ್ ॥**

**ಮದ್ಭೃತ್ಯೈಃ ತೈರಸದ್‌ವೃತ್ತೈಃ ಧರ್ಮತಃ ಪಾಲ್ಯತೇ ನ ವಾ ।**
**ನ ಜಾನೇ ಸ ಪ್ರಧಾನೋ ಮೇ ಶೂರಹಸ್ತೀ ಸದಾಮದಃ ॥12॥**
**ಮಮ ವೈರಿವಶಂ ಯಾತಃ ಕಾನ್ ಭೋಗಾನುಪಲಪ್ಸ್ಯತೇ ।**

11-12. ಆಗ ಆತನು (ನಾನು) ನನ್ನದೆಂಬ (ಮಾಯೆಗೆ) ವಶವಾದ ಮನಸ್ಸುಳ್ಳವನಾಗಿ ಹೀಗೆ ಚಿಂತಿಸುತ್ತಿದ್ದನು : 'ನನ್ನ ಪೂರ್ವಜರಿಂದ ಆಳಲ್ಪಟ್ಟಿದ್ದ ಆ ಪಟ್ಟಣವು ಈಗ ನಾನಿಲ್ಲದ್ದಾಗಿದೆ. ದುರಾಚಾರಿಗಳಾದ ನನ್ನ ಸೇವಕರು ಅದನ್ನು ಧರ್ಮದಿಂದ ಆಳುತ್ತಾರೊ, ಹೇಗೊ ? ಯಾವಾಗಲೂ ಮದಸಂಪನ್ನವಾಗಿದ್ದ ಮುಖ್ಯವಾದ ಬಲವಾದ ಆ ನನ್ನ ಆನೆಯು ನನ್ನ ಶತ್ರುವಿಗೆ ವಶವಾದ ಮೇಲೆ ಏನು ಸುಖವನ್ನು ಹೊಂದೀತೋ ಕಾಣೆನು.

ಯೇ ಮಮಾನುಗತಾ ನಿತ್ಯಂ ಪ್ರಸಾದಧನಭೋಜನೈಃ ।
ಅನುವೃತ್ತಿಂ ಧ್ರುವಂ ತೇಽದ್ಯ ಕುರ್ವಂತ್ಯನ್ಯಮಹೀಭೃತಾಮ್ ॥13॥

ಅಸಮ್ಯಗ್ವ್ಯಯಶೀಲೈಸ್ತೈಃ ಕುರ್ವದ್ಭಿಃ ಸತತಂ ವ್ಯಯಮ್ ।
ಸಂಚಿತಃ ಸೋಽತಿದುಃಖೇನ ಕ್ಷಯಂ ಕೋಶೋ ಗಮಿಷ್ಯತಿ ॥14॥
ಏತಚ್ಚಾನ್ಯಚ್ಚ ಸತತಂ ಚಿಂತಯಾಮಾಸ ಪಾರ್ಥಿವಃ ।

13-14. ಯಾರು ಪ್ರತಿದಿನವೂ ನನ್ನೊಡನೆ ಊಟಮಾಡುತ್ತಾ ಸೇವೆ ಮಾಡಿಕೊಂಡಿದ್ದರೋ ಅವರುಗಳು ಬೇರೆಯ ರಾಜರನ್ನು ನಿಶ್ಚಯವಾಗಿಯೂ ಅನುಸರಿಸುವರೊ ? ಹೇಗೊ ? ಸರಿಯಾಗಿ ವೆಚ್ಚಮಾಡಲು ಬಾರದ ಆ ಜನರಿಂದ ಬಹಳ ಕಷ್ಟಪಟ್ಟು ನಾನು ಕೂಡಿಸಿಟ್ಟಿದ್ದ ಭಂಡಾರವು ಅವರುಗಳ ಸದಾಕಾಲದ ಖರ್ಚಿನಿಂದ ಖಾಲಿಯಾಗಿಬಿಡಬಹುದೇನೊ ? ಹೀಗೆಲ್ಲ ಇನ್ನೂ ಬೇರೆಬೇರೆಯ ಏನೇನೋ ವಿಚಾರಗಳನ್ನು ಕುರಿತು ಆ ರಾಜನು ಆಲೋಚಿಸುತ್ತಿದ್ದನು.

ತತ್ರ ವಿಪ್ರಾಶ್ರಮಾಭ್ಯಾಶೇ ವೈಶ್ಯಮೇಕಂ ದದರ್ಶ ಸಃ ।
ಸ ಪೃಷ್ಟಸ್ತೇನ ಕಸ್ತ್ವಂ ಭೋ ಹೇತುಶ್ಚಾಗಮನೇಽತ್ರ ಕಃ ॥15॥

ಸಂಶೋಕ ಇವ ಕಸ್ಮಾತ್ ತ್ವಂ ದುರ್ಮನಾ ಇವ ಲಕ್ಷ್ಯಸೇ ।
ಇತ್ಯಾಕರ್ಣ್ಯ ವಚಸ್ತಸ್ಯ ಭೂಪತೇಃ ಪ್ರಣಯೋದಿತಮ್ ॥16॥
ಪ್ರತ್ಯುವಾಚ ಸ ತಂ ವೈಶ್ಯಃ ಪ್ರಶ್ರಯಾವನತೋ ನೃಪಮ್ ।

15-16. ಅಲ್ಲಿ ಆ (ರಾಜನು) ಋಷಿಯ ಆಶ್ರಮದ ಸಮೀಪದಲ್ಲಿಯೇ ಒಬ್ಬ ವೈಶ್ಯನನ್ನು ಕಂಡನು. ಅವನನ್ನು ಕುರಿತು 'ನೀನು ಯಾರು ? ಇಲ್ಲಿಗೇಕೆ ಬಂದಿದ್ದೀಯೆ ? ಏತಕ್ಕಾಗಿ ನೀನು ಶೋಕವುಳ್ಳವನಂತೆಯೂ ಬೇಜಾರುಪಟ್ಟು ಕೊಂಡಿರುವಂತೆಯೂ ಕಂಡುಬರುತ್ತಿರುವೆ ?' ಎಂದನು. ರಾಜನು ಹೀಗೆ ಪ್ರೀತಿ ಪೂರ್ವಕವಾಗಿ ಕೇಳಲಾಗಿ ಆ ವೈಶ್ಯನು ವಿನಯಪೂರ್ವಕವಾಗಿ ಅವನನ್ನು ಕುರಿತು ಹೀಗೆಂದನು.

ವೈಶ್ಯ ಉವಾಚ –

ಸಮಾಧಿರ್ನಾಮ ವೈಶ್ಯೋऽಹಮುತ್ಪನ್ನೋ ಧನಿನಾಂ ಕುಲೇ ।
ಪುತ್ರದಾರೈರ್ನಿರಸ್ತಶ್ಚ ಧನಲೋಭಾದಸಾಧುಭಿಃ ॥17॥
ವಿಹೀನಶ್ಚ ಧನೈರ್ದಾರೈಃ ಪುತ್ರೈರಾದಾಯ ಮೇ ಧನಮ್ ।

17. ವೈಶ್ಯನಿಂತೆಂದನು : ಧನಿಕರ ವಂಶದಲ್ಲಿ ಹುಟ್ಟಿರುವ 'ಸಮಾಧಿ' ಎಂಬ ಹೆಸರಿನ ವೈಶ್ಯನು ನಾನು. ದುಷ್ಟರೂ ಹಣದ ಆಸೆಯುಳ್ಳವರೂ ಆದ ಮಕ್ಕಳ ಹೆಂಡತಿಯರಿಂದ ನಾನು ಹೊರಹಾಕಲ್ಪಟ್ಟೆನು. ಮಕ್ಕಳುಗಳು ನನ್ನ ಹಣವನ್ನೆಲ್ಲ ತೆಗೆದುಕೊಂಡು ಧನದಾರಾದಿಗಳಿಂದ ನಾನು ಹೀನನಾಗುವಂತೆ ಮಾಡಿಬಿಟ್ಟರು.

ವನಮಭ್ಯಾಗತೋ ದುಃಖೀ ನಿರಸ್ತಶ್ಚಾಪ್ತಬಂಧುಭಿಃ ।
ಸೋऽಹಂ ನ ವೇದ್ಮಿ ಪುತ್ರಾಣಾಂ ಕುಶಲಾಕುಶಲಾತ್ಮಿಕಾಮ್ ॥18॥

ಪ್ರವೃತ್ತಿಂ ಸ್ವಜನಾನಾಂ ಚ ದಾರಾಣಾಂ ಚಾತ್ರ ಸಂಸ್ಥಿತಃ ।
ಕಿಂ ನು ತೇಷಾಂ ಗೃಹೇ ಕ್ಷೇಮಮಕ್ಷೇಮಂ ಕಿಂ ನು ಸಾಂಪ್ರತಮ್ ॥
ಕಥಂ ತೇ ಕಿಂ ನು ಸದ್ವೃತ್ತಾ ದುರ್ವೃತ್ತಾಃ ಕಿಂ ನು ಮೇ ಸುತಾಃ ।

18-19. ಕಾಡಿಗೆ ಬಂದವನಾಗಿ ದುಃಖಿಯಾಗಿ ಆಪ್ತಬಂಧುಗಳಿಂದ ದೂರನಾಗಿ ಈಗ ಮಕ್ಕಳುಗಳ ಕ್ಷೇಮಾಕ್ಷೇಮಗಳ ಹಾಗೂ ಸ್ವಜನರ ಮತ್ತು ಪತ್ನಿಯ ಬದುಕು-ಜೀವನಗಳ ಬಗ್ಗೆ ತಿಳಿಯದೆ ಇದ್ದೇನೆ. ಈಗ ಅವರುಗಳೆಲ್ಲ ಚೆನ್ನಾಗಿರುವರೊ, ಕಷ್ಟಕ್ಕೆ ಸಿಕ್ಕಿರುವರೊ, ಹೇಗಿದ್ದಾರು ? ನನ್ನ ಮಕ್ಕಳು ಈಚೆಗೆ ಒಳ್ಳೆಯವರಾಗಿದ್ದಾರೊ, ಕೆಟ್ಟವರಾಗಿಯೇ ಇರುವರೊ, (ಎಂದು ಚಿಂತೆಯಾಗಿದೆ).

ರಾಜೋವಾಚ –

ಯೈರ್ನಿರಸ್ತೋ ಭವಾನ್ ಲುಬ್ಧೈಃ ಪುತ್ರದಾರಾದಿಭಿರ್ಧನೈಃ ।
ತೇಷು ಕಿಂ ಭವತಃ ಸ್ನೇಹಮನುಬಧ್ನಾತಿ ಮಾನಸಮ್ ॥20॥

20. ರಾಜನಿಂತೆಂದನು : ಜಿಪುಣರಾದ ಹೆಂಡಿರುಮಕ್ಕಳುಗಳಿಂದ ನೀನು ತಿರಸ್ಕರಿಸಲ್ಪಟ್ಟವನಾಗಿರುವೆಯಾದರೂ ಅವರಲ್ಲಿ ನಿನ್ನ ಮನಸ್ಸು ಏತಕ್ಕಾಗಿ ಆಸಕ್ತಿಯನ್ನು ಹೊಂದಿರುವದೆಂಬುದನ್ನು (ತಿಳಿಸುವೆಯಾ ?)

ವೈಶ್ಯ ಉವಾಚ –

ಏವಮೇತದ್ಯಥಾ ಪ್ರಾಹ ಭವಾನಸ್ಮದ್ಗತಂ ವಚಃ ।
ಕಿಂ ಕರೋಮಿ ನ ಬಧ್ನಾತಿ ಮಮ ನಿಷ್ಠುರತಾಂ ಮನಃ ॥21॥

ಯೈಃ ಸಂತ್ಯಜ್ಯ ಪಿತೃಸ್ನೇಹಂ ಧನುಲುಬ್ಧೈರ್ನಿರಾಕೃತಃ ।
ಪತಿಸ್ವಜನಹಾರ್ದಂ ಚ ಹಾರ್ದಿ ತೇಷ್ವೇವ ಮೇ ಮನಃ ॥22॥

21-22. ವೈಶ್ಯನಿಂತೆಂದನು : ಆಹಾ, ನೀನಾದರೂ, ನನ್ನ ಮನಸ್ಸಿನಲ್ಲಿದ್ದುದನ್ನೇ ಹೇಳುತ್ತಿರುವೆ. ಇದು ಹೀಗೆಯೇ ಸರಿ. ನನ್ನ ಮನಸ್ಸು (ಪುತ್ರಾದಿಗಳ ವಿಷಯದಲ್ಲಿ) ನಿಷ್ಠುರತ್ವವನ್ನು ಹೊಂದುತ್ತಿಲ್ಲ. ಏನು ಮಾಡಲಿ ? ಹಣದ ಆಶೆಯಿಂದ ತಂದೆಯಮೇಲಿನ ಪ್ರೀತಿಯನ್ನು ಬಿಟ್ಟು, ಹಾಗೂ ಗಂಡನೆಂಬ ಮತ್ತು ತನ್ನವನೆಂಬ ಪ್ರೀತಿಯನ್ನೂ ಬಿಟ್ಟ ಯಾವ (ಬಂಧುಗಳಿಂದ) ನಿರಾಕರಿಸಲ್ಪಟ್ಟಿರುವೆನೋ ಅಂಥವರಲ್ಲಿಯೇ ನನ್ನ ಮನಸ್ಸು (ಅಂಟಿಕೊಂಡು) ಕೂತಿದೆ.

ಕಿಮೇತನ್ನಾಭಿಜಾನಾಮಿ ಜಾನನ್ನಪಿ ಮಹಾಮತೇ ।
ಯತ್ಪ್ರೇಮಪ್ರವಣಂ ಚಿತ್ತಂ ವಿಗುಣೇಷ್ವಪಿ ಬಂಧುಷು ॥23॥

ತೇಷಾಂ ಕೃತೇ ಮೇ ನಿಃಶ್ವಾಸೋ ದೌರ್ಮನಸ್ಯಂ ಚ ಜಾಯತೇ ।
ಕರೋಮಿ ಕಿಂ ಯನ್ನ ಮನಸ್ತೇಷ್ವಪ್ರೀತಿಷು ನಿಷ್ಠುರಮ್ ॥24॥

23-24. ಎಲೈ ಮಹಾಬುದ್ಧಿಶಾಲಿಯೆ, ನನಗೆ ಗೊತ್ತಾಗುತ್ತಿದ್ದರೂ ಪ್ರೀತಿಯಿಂದ ಜೋಲುಬಿದ್ದ ಮನಸ್ಸು ದುರ್ಗುಣಿಗಳಾದ ಬಂಧುಗಳ ವಿಷಯದಲ್ಲಿಯೂ ಆಸಕ್ತವಾಗಿರುವುದೇಕೆಂಬುದನ್ನರಿಯೆನು. ಅವರುಗಳಿಗೋಸ್ಕರವಾಗಿ ನನಗೆ ಮನಸ್ಸಿನಲ್ಲಿ ದುಗುಡವೂ ನಿಟ್ಟುಸಿರುಬಿಡುವಂಥ ಸ್ಥಿತಿಯೂ ಉಂಟಾಗುತ್ತಿದೆ. ಪ್ರೀತಿಯಿಲ್ಲದವರ ವಿಷಯಕ್ಕೆ ನನ್ನ ಮನಸ್ಸನ್ನು ಹಿಂದಿರುಗಿಸಿ ಗಟ್ಟಿಮಾಡಿಕೊಳ್ಳಲು ಏನುಮಾಡಲಿ ?

ಮಾರ್ಕಂಡೇಯ ಉವಾಚ -

ತತಸ್ತೌ ಸಹಿತೌ ವಿಪ್ರ ತಂ ಮುನಿಂ ಸಮುಪಸ್ಥಿತೌ ।
ಸಮಾಧಿರ್ನಾಮ ವೈಶ್ಯೋಽಸೌ ಸ ಚ ಪಾರ್ಥಿವಸತ್ತಮಃ ॥25॥

ಕೃತ್ವಾ ತು ತೌ ಯಥಾನ್ಯಾಯ್ಯಂ ಯಥಾರ್ಹಂ ತೇನ ಸಂವಿದಮ್ ।
ಉಪವಿಷ್ಟೌ ಕಥಾಃ ಕಾಶ್ಚಿತ್ ಚಕ್ರತುರ್ವೈಶ್ಯಪಾರ್ಥಿವೌ ॥26॥

25-26. ಮಾರ್ಕಂಡೇಯನಿಂತೆಂದನು : ಅನಂತರ ಎಲೈ ವಿಪ್ರನೆ, (ಕ್ರೌಷ್ಟುಕಿಯೆ), ಕೇಳು ; ಅವರಿಬ್ಬರೂ - ಎಂದರೆ ಆ ರಾಜಶ್ರೇಷ್ಠನೂ ಸಮಾಧಿಯೆಂಬ ವೈಶ್ಯನೂ ಆ ಮುನಿಯನ್ನು ಬಳಿಸಾರಿ ಭೇಟಿಮಾಡಿದರು. ಗೌರವಕ್ಕೆ ಅನುಗುಣವಾಗಿ ಯೋಗ್ಯರೀತಿಯಿಂದ ಆತನೊಡನೆ ಮಾತನಾಡಿದರು. ಹಾಗೆಯೇ ಸ್ವಲ್ಪಕಾಲ ಕುಳಿತು ಕೆಲವು ವೃತ್ತಾಂತಗಳನ್ನು ಆ ರಾಜನೂ ವೈಶ್ಯನೂ ಮಾತನಾಡಿಕೊಂಡರು.

ರಾಜೋವಾಚ –

ಭಗವನ್ ತ್ವಾಮಹಂ ಪ್ರಷ್ಟುಮಿಚ್ಛಾಮ್ಯೇಕಂ ವದಸ್ವ ತತ್ ।
ದುಃಖಾಯ ಯನ್ಮೇ ಮನಸಃ ಸ್ವಚಿತ್ತಾಯತ್ತತಾಂ ವಿನಾ ॥27॥

ಮಮತ್ವಂ ಗತರಾಜ್ಯಸ್ಯ ರಾಜ್ಯಾಂಗೇಷ್ವಖಿಲೇಷ್ವಪಿ ।
ಜಾನತೋಽಪಿ ಯಥಾಜ್ಞಸ್ಯ ಕಿಮೇತನ್ಮುನಿಸತ್ತಮ ॥28॥

27-28. ಆನಂತರ ರಾಜನು (ಮುನಿಯನ್ನು ಕುರಿತು) ಇಂತೆಂದನು : 'ಪೂಜ್ಯರೆ, ಒಂದು ವಿಚಾರವಾಗಿ ನಿಮ್ಮನ್ನು ಕೇಳಲಿಚ್ಛಿಸುತ್ತೇನೆ. ಅದನ್ನು ಹೇಳಬೇಕು. ಏನೆಂದರೆ : ನನ್ನ ಮನಸ್ಸಿನ ದುಃಖಕ್ಕೆ ಕಾರಣವಾದ - ಆದರೆ ನನ್ನ ಮನಸ್ಸಿಗೆ ಅಧೀನವಿಲ್ಲದ್ದಾಗಿರುವಂಥ (ವಿಚಾರವು ಅದಾಗಿದೆ). ರಾಜ್ಯವನ್ನು ಹಾಗೂ ರಾಜ್ಯದ ಎಲ್ಲಾ ಅಧಿಕಾರವನ್ನೂ ಕಳೆದುಕೊಂಡಮೇಲೂ-ಅದು ಗೊತ್ತಿದ್ದರೂ ದಡ್ಡನಿಗೆ ಹೇಗೋ ಹಾಗೆ - ಹಿಂದಿನಂತೆಯೇ ನನ್ನದು- ಎಂಬ (ಮೋಹ) ವುಂಟಾಗುತ್ತಿದೆ. ಮುನಿಶ್ರೇಷ್ಠನೆ, ಇದೇನಿದ್ದೀತು ?

ಅಯಂ ಚ ನಿಕೃತಃ ಪುತ್ರೈರ್ದಾರೈರ್ಭೃತ್ಯೈಸ್ತಥೋಜ್ಝಿತಃ ।
ಸ್ವಜನೇನ ಚ ಸಂತ್ಯಕ್ತಃ ತೇಷು ಹಾರ್ದೀ ತಥಾಪ್ಯತಿ ॥29॥

ಏವಮೇಷ ತಥಾಹಂ ಚ ದ್ವಾವಪ್ಯತ್ಯಂತದುಃಖಿತೌ ।
ದೃಷ್ಟದೋಷೇಽಪಿ ವಿಷಯೇ ಮಮತ್ವಾಕೃಷ್ಟಮಾನಸೌ ॥30॥

ತತ್ಕಿಮೇತನ್ಮಹಾಭಾಗ ಯನ್ಮೋಹೋ ಜ್ಞಾನಿನೋರಪಿ
ಮಮಾಸ್ಯ ಚ ಭವತ್ಯೇಷಾ ವಿವೇಕಾಂಧಸ್ಯ ಮೂಢತಾ ॥31॥

29-31. ಇವನೂ ಕೂಡ ಮಕ್ಕಳು, ಹೆಂಡತಿ, ಸೇವಕರುಗಳಿಂದ ಬಿಡಲ್ಪಟ್ಟು ಹಾಗೂ ಸ್ವಜನರಿಂದಲೂ ದೂರನಾಗಿದ್ದರೂ ಹೃದಯದಲ್ಲಿ ಅವರುಗಳ ವಿಷಯಕ್ಕೆ ಅತಿಯಾದ ಆಸಕ್ತಿಯುಳ್ಳವನಾಗಿರುವನು. ನಾನೂ ಹಾಗೆಯೇ ಆಗಿರುವೆನು. ಹೀಗೆ ನಾವಿಬ್ಬರೂ ಹೆಚ್ಚಿನ ದುಃಖಿಗಳಾಗಿರುವೆವು. ದೋಷಗಳು ಕಂಡುಬಂದಿರುವ ವಿಷಯಗಳಲ್ಲಿಯೂ, ವಿವೇಕಿಗಳಾಗಿದ್ದರೂ ನಮಗೆ ನನ್ನದೆಂಬ ಭಾವನೆಯು (ಬಿಡದಾಗಿದ್ದು) ಎಳೆಯುತ್ತಿದೆ. ಪೂಜ್ಯರೆ, ಇದೇಕೆ ? ಈ ಮೋಹವು ವಿವೇಕವಿಲ್ಲದ ನನಗೂ ಇವನಿಗೂ ಏತಕ್ಕೆ ಉಂಟಾಗಿದೆ ?

ಋಷಿರುವಾಚ –

ಜ್ಞಾನಮಸ್ತಿ ಸಮಸ್ತಸ್ಯ ಜಂತೋರ್ವಿಷಯಗೋಚರೇ ।
ವಿಷಯಶ್ಚ ಮಹಾಭಾಗ ಯಾತಿ ಚೈವಂ ಪೃಥಕ್ ಪೃಥಕ್ ॥32॥

ದಿವಾಂಧಾಃ ಪ್ರಾಣಿನಃ ಕೇಚಿತ್ ರಾತ್ರಾವಂಧಾಸ್ತಥಾಪರೇ ।
ಕೇಚಿದ್ದಿವಾ ತಥಾ ರಾತ್ರೌ ಪ್ರಾಣಿನಸ್ತುಲ್ಯದೃಷ್ಟಯಃ ॥33॥

32-33. ಋಷಿಯಿಂತೆಂದನು: ಎಲ್ಲಾಪ್ರಾಣಿಗಳಿಗೂ ಇಂದ್ರಿಯ ಗೋಚರವಾದ (ಅನಾತ್ಮ) ವಸ್ತುವಿನಲ್ಲಿ ಜ್ಞಾನವಿರುವದು ನಿಜ. ಎಲೈ ಮಹಾರಾಜನೆ, ಆಯಾ ಪ್ರಾಣಿಗಳಿಗೆ ತಕ್ಕಂತೆ (ಅಭಿಲಷಿತ) ವಿಷಯಗಳೂ ಬಿಡಿಬಿಡಿಯಾಗಿರುವವು. ಹೇಗೆಂದರೆ : ಕೆಲವು ಪ್ರಾಣಿ (ಗೂಗೆ-ಮುಂತಾದವು)ಗಳಿಗೆ ಹಗಲುವೇಳೆಯಲ್ಲಿ ಕಣ್ಣು ಕಾಣಿಸುವುದಿಲ್ಲ. ಇನ್ನು ಕೆಲವು (ಮನುಷ್ಯ-ಮುಂತಾದವು) ರಾತ್ರೆಯಲ್ಲಿ ಕುರುಡಾಗಿರುವವು. ಮತ್ತೆ ಕೆಲವು ಹಗಲು-ರಾತ್ರೆಗಳೆರಡರಲ್ಲಿಯೂ (ಬೆಕ್ಕು ಮುಂತಾದವು) ಸಮಾನವಾದ ದೃಷ್ಟಿಯುಳ್ಳವಾಗಿರುವವು.

ಜ್ಞಾನಿನೋ ಮನುಜಾಃ ಸತ್ಯಂ ಕಿಂ ತು ತೇ ನ ಹಿ ಕೇವಲಮ್ ।
ಯತೋ ಹಿ ಜ್ಞಾನಿನಃ ಸರ್ವೇ ಪಶುಪಕ್ಷಿಮೃಗಾದಯಃ ॥34॥

ಜ್ಞಾನಂ ಚ ತನ್ಮನುಷ್ಯಾಣಾಂ ಯತ್ತೇಷಾಂ ಮೃಗಪಕ್ಷಿಣಾಮ್ ।
ಮನುಷ್ಯಾಣಾಂ ಚ ಯತ್ತೇಷಾಂ ತುಲ್ಯಮನ್ಯತ್ತಥೋಭಯೋಃ ॥35॥

34-35. ಮನುಷ್ಯರು ಜ್ಞಾನವುಳ್ಳವರೆಂಬುದು ಸರಿಯೆ. ಆದರೆ ಅವರು ಮಾತ್ರವೇ ಅಲ್ಲ; ಪಶುಪಕ್ಷಿಮೃಗಗಳೇ ಮುಂತಾದವೆಲ್ಲವೂ ಜ್ಞಾನಿಗಳೇ, ಜ್ಞಾನವೆಂಬುದೇನಿದೆಯೋ ಅದು ಮನುಷ್ಯರಂತೆ ಪಶುಪಕ್ಷಿಗಳಲ್ಲಿಯೂ, ಹಾಗೆಯೇ (ಪಶುಪಕ್ಷಿಗಳಂತೆಯೇ) ಮನುಷ್ಯರಲ್ಲಿಯೂ ಸಮಾನವಾಗಿರುವದು.[1]

ಜ್ಞಾನೇಽಪಿ ಸತಿ ಪಶ್ಯೈತಾನ್ ಪತಂಗಾನ್ ಶಾವಚಂಚುಷು ।
ಕಣಮೋಕ್ಷಾದೃತಾನ್ ಮೋಹಾತ್ ಪೀಡ್ಯಮಾನಾನಪಿ ಕ್ಷುಧಾ ॥36॥

ಮಾನುಷಾ ಮನುಜವ್ಯಾಘ್ರ ಸಾಭಿಲಾಷಾಃ ಸುತಾನ್ ಪ್ರತಿ ।
ಲೋಭಾತ್ ಪ್ರತ್ಯುಪಕಾರಾಯ ನನ್ವೇತಾನ್ ಕಿಂ ನ ಪಶ್ಯಸಿ ॥37॥

---

1. ಆಹಾರನಿದ್ರಾಭಯಮೈಥುನಜ್ಞಾನಗಳು ಪಶುಪಕ್ಷಿಗಳಿಗೂ ಮನುಷ್ಯರಿಗೂ ಸಮಾನವಾಗಿರುವವು.

36-37. ತಿಳಿವಳಿಕೆಯಿದ್ದರೂ ಮೋಹದಿಂದ, (ತಾನು) ಹಸಿವಿನಿಂದ ಪೀಡಿಸಲ್ಪಡುತ್ತಿದ್ದರೂ ಹಕ್ಕಿಗಳು ತಮ್ಮ ಮರಿಗಳ ಕೊಕ್ಕುಗಳಿಗೆ ಕಾಳುಗಳನ್ನು ಉಣಿಸುವದರಲ್ಲಿ ಆಸಕ್ತವಾಗಿರುವದನ್ನು ನೋಡು. ಎಲೈ ಪುರುಷಶ್ರೇಷ್ಠನೆ, ಹಾಗೆಯೇ ಪ್ರತ್ಯುಪಕಾರದ ಅಭಿಲಾಷೆಯಿಂದ ಕೂಡಿ ಮಕ್ಕಳ ವಿಷಯದಲ್ಲಿ ಮೋಹದಿಂದ ನಡೆದುಕೊಳ್ಳುವಂಥ ಮನುಷ್ಯರನ್ನೂ ನೀನೇಕೆ ತಿಳಿಯುವದಿಲ್ಲ?

ತಥಾಪಿ ಮಮತಾವರ್ತೇ ಮೋಹಗರ್ತೇ ನಿಪಾತಿತಾಃ ।
ಮಹಾಮಾಯಾಪ್ರಭಾವೇಣ ಸಂಸಾರಸ್ಥಿತಿಕಾರಿಣಾ ॥38॥

ತನ್ನಾತ್ರ ವಿಸ್ಮಯಃ ಕಾರ್ಯೋ ಯೋಗನಿದ್ರಾ ಜಗತ್ಪತೇಃ ।
ಮಹಾಮಾಯಾ ಹರೇಶ್ಚೈಷಾ ತಯಾ ಸಂಮೋಹ್ಯತೇ ಜಗತ್ ॥39॥

38-39. ಹೀಗಿದ್ದರೂ ಸಂಸಾರದ ಇರುವಿಕೆಗೆ ಕಾರಣವಾದ ಮಹಾಮಾಯೆಯ ಪ್ರಭಾವದಿಂದ ನನ್ನದೆಂಬ ಸುಳಿಯಲ್ಲಿ (ಸಿಕ್ಕಿ) ಮೋಹವೆಂಬ ಗುಂಡಿಯಲ್ಲಿ (ಜನರು) ಕೆಡವಲ್ಪಟ್ಟಿರುವರು. ಆದ್ದರಿಂದ ಈ ವಿಷಯದಲ್ಲಿ ಆಶ್ಚರ್ಯಪಡಬೇಕಾದದ್ದಿಲ್ಲ. ಜಗದೊಡೆಯನಾದ ಹರಿಯ (ಶಕ್ತಿಯಾದ) ಯೋಗನಿದ್ರೆಯೇ ಈ ಮಹಾ-ಮಾಯೆಯು. ಈಕೆಯಿಂದಲೇ ಜಗತ್ತೆಲ್ಲವೂ ಮೋಹಕ್ಕೆ ಒಳಗಾಗಿರುವದು.

ಜ್ಞಾನಿನಾಮಪಿ ಚೇತಾಂಸಿ ದೇವೀ ಭಗವತೀ ಹಿ ಸಾ ।
ಬಲಾದಾಕೃಷ್ಯ ಮೋಹಾಯ ಮಹಾಮಾಯಾ ಪ್ರಯಚ್ಛತಿ ॥40॥

ತಯಾ ವಿಸೃಜ್ಯತೇ ವಿಶ್ವಂ ಜಗದೇತಚ್ಚರಾಚರಮ್ ।
ಸೈಷಾ ಪ್ರಸನ್ನಾ ವರದಾ ನೃಣಾಂ ಭವತಿ ಮುಕ್ತಯೇ ॥41॥

ಸಾ ವಿದ್ಯಾ ಪರಮಾ ಮುಕ್ತೇಃ ಹೇತುಭೂತಾ ಸನಾತನೀ ।
ಸಂಸಾರಬಂಧಹೇತುಶ್ಚ ಸೈವ ಸರ್ವೇಶ್ವರೇಶ್ವರೀ ॥42॥

40-42. ಪೂಜ್ಯಳಾದ ಮಹಾಮಾಯೆಯೆನಿಸಿದ ಆ ದೇವಿಯು ಜ್ಞಾನಿಗಳ ಮನಸ್ಸನ್ನು ಕೂಡ ಬಲಾತ್ಕಾರವಾಗಿ ಸೆಳೆದು ಮೋಹಕ್ಕೆ ವಶವಾಗಿಸಿ ಬಿಡುವಳು. ಈ ಸ್ಥಾವರಜಂಗಮರೂಪವಾದ ಇಡಿಯ ಜಗತ್ತೆಲ್ಲವೂ ಆಕೆಯಿಂದಲೇ ಹೊರಬರುವದು. ಈ ದೇವಿಯು ಮನುಷ್ಯರಿಗೆ ಒಲಿದವಳಾದರೆ ಮುಕ್ತಿಗೆ (ದ್ವಾರ)ಳಾಗುವಳು. ಹೇಗೆಂದರೆ ಸನಾತನವಾದ ವಿದ್ಯಾರೂಪಳಾದ ಆಕೆಯು ಪರಮ (ವಿದ್ಯೆಯೆನಿಸಿದ್ದು)

(ಅಜ್ಞಾನಕೃತವಾದ ಬಂಧದಿಂದ) ಬಿಡುಗಡೆಯನ್ನು ಮಾಡಿಸುವವಳಾಗಿ ಮೋಕ್ಷಹೇತುವೆನಿಸಿರುವಳು. ಹಾಗೆಯೇ ಆ ಸರ್ವೇಶ್ವರೇಶ್ವರಿಯೇ ಬಂಧಕಾರಣಳೂ ಆಗಿರುವಳು.

ರಾಜೋವಾಚ –

ಭಗವನ್ ಕಾ ಹಿ ಸಾ ದೇವೀ ಮಹಾಮಾಯೇತಿ ಯಾಂ ಭವಾನ್ ।
ಬ್ರವೀತಿ ಕಥಮುತ್ಪನ್ನಾ ಸಾ ಕರ್ಮಾಸ್ಯಾಶ್ಚ ಕಿಂ ದ್ವಿಜ ॥43॥

ಯತ್ಪ್ರಭಾವಾ ಚ ಸಾ ದೇವೀ ಯತ್ಸ್ವರೂಪಾ ಯದುದ್ಭವಾ ।
ತತ್ಸರ್ವಂ ಶ್ರೋತುಮಿಚ್ಛಾಮಿ ತ್ವತ್ತೋ ಬ್ರಹ್ಮವಿದಾಂ ವರ ॥44॥

43-44. ರಾಜನಿಂತೆಂದನು : ಪೂಜ್ಯನಾದ ದ್ವಿಜನೆ, ಯಾವಾಕೆಯನ್ನು ಮಹಾಮಾಯೆಯೆಂದು ನೀನು ಹೇಳುತ್ತಿರುವೆಯೋ ಆಕೆಯು ಯಾರು ? ಅವಳು ಹುಟ್ಟಿರುವದು ಹೇಗೆ ? ಆಕೆಯ ಕರ್ಮವಾದರೂ ಏನು ? ಆ ದೇವಿಯ ಮಹಿಮೆಯು ಏನು ? ಅವಳ ಸ್ವರೂಪವೇನು ? ಏತರಿಂದ ಹುಟ್ಟಿದಳು ? ಎಲೈ ಬ್ರಹ್ಮವಿದರಲ್ಲಿ ಶ್ರೇಷ್ಠನೆ, ನಿನ್ನಿಂದ ಈ ಎಲ್ಲಾ ವಿಚಾರಗಳನ್ನೂ ಕೇಳಲಿಚ್ಛಿಸುವೆನು.

ಋಷಿರುವಾಚ–

ನಿತ್ಯೈವ ಸಾ ಜಗನ್ಮೂರ್ತಿಃ ತಯಾ ಸರ್ವಮಿದಂ ತತಮ್ ।
ತಥಾಪಿ ತತ್ಸಮುತ್ಪತ್ತಿರ್ಬಹುಧಾ ಶ್ರೂಯತಾಂ ಮಮ ॥45॥

ದೇವಾನಾಂ ಕಾರ್ಯಸಿದ್ಧ್ಯರ್ಥಮಾವಿರ್ಭವತಿ ಸಾ ಯದಾ ।
ಉತ್ಪನ್ನೇತಿ ತದಾ ಲೋಕೇ ಸಾ ನಿತ್ಯಾಪ್ಯಭಿಧೀಯತೇ ॥46॥

45-46. ಋಷಿಯಿಂತೆಂದನು : ಜಗದ್ರೂಪಳಾಗಿಯೂ (ಎಲ್ಲ ಜಗತ್ತನ್ನೂ) ವ್ಯಾಪಿಸಿಕೊಂಡವಳಾಗಿಯೂ ಇರುವ ಆಕೆಯು ನಿತ್ಯಳೇ. ಹೀಗಿದ್ದರೂ ಅವಳ ಹುಟ್ಟು ಬಹಳ ರೀತಿಯಿಂದ ಪ್ರಸಿದ್ಧವಾಗಿದೆ. ನಾನು ಈಗ ಹೇಳುವದನ್ನು ಕೇಳು. ಆಕೆಯು ದೇವತೆಗಳ ಕಾರ್ಯಸಿದ್ಧಿಗಾಗಿ ಯಾವಾಗ ಹೊರತೋರಿಕೊಳ್ಳುವಳೋ ಆಗ - (ಜನರು) ಅವಳು ನಿತ್ಯಳೇ ಆಗಿದ್ದರೂ– ಹುಟ್ಟಿದವಳೆಂದು ವ್ಯವಹರಿಸುವರು.

ಯೋಗನಿದ್ರಾಂ ಯದಾ ವಿಷ್ಣುರ್ಜಗತ್ಯೇಕಾರ್ಣವೀಕೃತೇ ।
ಆಸ್ತೀರ್ಯ ಶೇಷಮಭಜತ್ ಕಲ್ಪಾಂತೇ ಭಗವಾನ್ ಪ್ರಭುಃ ॥47॥

ತದಾ ದ್ವಾವಸುರೌ ಘೋರೌ ವಿಖ್ಯಾತೌ ಮಧುಕೈಟಭೌ ।
ವಿಷ್ಣುಕರ್ಣಮಲೋದ್ಭೂತೌ ಹಂತುಂ ಬ್ರಹ್ಮಾಣಮುದ್ಯತೌ ॥48॥

47-48. ಕಲ್ಪದ ಕೊನೆಯಲ್ಲಿ ಪ್ರಪಂಚವೆಲ್ಲವೂ ನೀರಿನಲ್ಲಿ ಒಂದಾಗಿ (ಪ್ರಲಯಹೊಂದಿರಲಾಗಿ) ಯಾವಾಗ ಪ್ರಭುವಾದ ಭಗವಾನ್ ವಿಷ್ಣುವು ಆದಿಶೇಷನ ಹಾಸಿಗೆಯಮೇಲೆ ಮಲಗಿದನೋ ಆಗ ಆ ವಿಷ್ಣುವಿನ ಕಿವಿಗಳ ಕೊಳೆಯಿಂದ ಹುಟ್ಟಿದ ಭಯಂಕರರಾದ, ಮಧುಕೈಟಭರೆಂದು ವಿಖ್ಯಾತರಾದ ಇಬ್ಬರು ರಾಕ್ಷಸರು ಬ್ರಹ್ಮನನ್ನು ಕೊಲ್ಲಲು ಉದ್ಯುಕ್ತರಾದರು.

ನ ನಾಭಿಕಮಲೇ ವಿಷ್ಣೋಃ ಸ್ಥಿತೋ ಬ್ರಹ್ಮಾ ಪ್ರಜಾಪತಿಃ ।
ದೃಷ್ಟ್ವಾ ತಾವಸುರೌ ಚೋಗ್ರೌ ಪ್ರಸುಪ್ತಂ ಚ ಜನಾರ್ದನಮ್ ॥49॥

ತುಷ್ಟಾವ ಯೋಗನಿದ್ರಾಂ ತಾಮೇಕಾಗ್ರಹೃದಯಸ್ಥಿತಃ ।
ವಿಬೋಧನಾರ್ಥಾಯ ಹರೇರ್ಹರಿನೇತ್ರ ಕೃತಾಲಯಾಮ್ ॥50॥

ವಿಶ್ವೇಶ್ವರೀಂ ಜಗದ್ಧಾತ್ರೀಂ ಸ್ಥಿತಿಸಂಹಾರಕಾರಿಣೀಮ್ ।
ನಿದ್ರಾಂ ಭಗವತೀಂ ವಿಷ್ಣೋರತುಲಾಂ ತೇಜಸಃ ಪ್ರಭುಃ ॥51॥

49-51. ವಿಷ್ಣುವಿನ ನಾಭಿಕಮಲದಲ್ಲಿದ್ದ ಪ್ರಜಾಪತಿಯಾದ ಆ ಬ್ರಹ್ಮನು ಭಯಂಕರರಾದ ಆ ಇಬ್ಬರು ರಾಕ್ಷಸರನ್ನು ಕಂಡು (ಹೆದರಿ) ಮಲಗಿದ್ದ ಮಹಾವಿಷ್ಣುವನ್ನು ನೋಡಿ (ಏನೂ ತೋಚದೆ) ಹರಿಯನ್ನು ಎಬ್ಬಿಸುವ ಸಲುವಾಗಿ ಆತನ ಕಣ್ಣುಗಳನ್ನೇ ವಾಸಸ್ಥಾನವಾಗಿ ಹೊಂದಿದ್ದ ಹಾಗೂ ವಿಶ್ವಕ್ಕೆಲ್ಲ ಒಡೆಯಳೂ ಜಗತ್ತಿಗೆ ತಾಯಿಯೂ ಸ್ಥಿತಿಸಂಹಾರಗಳನ್ನು ಕೈಗೊಳ್ಳುವವಳೂ ಆದ, ವಿಷ್ಣುವಿನ ನಿರತಿಶಯ ತೇಜೋ ರೂಪಳಾದ ಭಗವತಿಯಾದ ಯೋಗನಿದ್ರಾದೇವಿಯನ್ನು ಏಕಾಗ್ರವಾದ ಮನಸ್ಸಿನಿಂದ ಕೂಡಿದವನಾಗಿ ಸ್ತೋತ್ರಮಾಡಿದನು.

ಬ್ರಹ್ಮೋವಾಚ –

ತ್ವಂ ಸ್ವಾಹಾ ತ್ವಂ ಸ್ವಧಾ ತ್ವಂ ಹಿ ವಷಟ್ಕಾರಃ ಸ್ವರಾತ್ಮಿಕಾ ।
ಸುಧಾ ತ್ವಮಕ್ಷರೇ ನಿತ್ಯೇ ತ್ರಿಧಾ ಮಾತ್ರಾತ್ಮಿಕಾ ಸ್ಥಿತಾ ॥52॥

ಅರ್ಧಮಾತ್ರಾಸ್ಥಿತಾ ನಿತ್ಯಾ ಯಾನುಚ್ಚಾರ್ಯಾ ವಿಶೇಷತಃ ।
ತ್ವಮೇವ ಸಂಧ್ಯಾ ಸಾವಿತ್ರೀ ತ್ವಂ ದೇವೀ ಜನನೀ ಪರಾ ॥53॥

52-53. ಬ್ರಹ್ಮನಿಂತೆಂದನು - 'ನೀನೇ ಸ್ವಾಹಾ (ದೇವಿಯು). ಸ್ವಧೆಯೂ ನೀನೇ. ಸ್ವರತತ್ತ್ವಳಾದ ವಷಟ್ಕಾರಳೂ ಅಮೃತಳೂ ನೀನೇ. ಎಲೈ, ಅಕ್ಷರಳೂ ನಿತ್ಯಳೂ ಆದ ದೇವಿಯೆ, (ಓಂಕಾರದ) ಮೂರುಮಾತ್ರಾ ರೂಪಳೂ ಅರ್ಧಮಾತ್ರೆಯೂ ನೀನೇ ಆಗಿರುವೆ. ವಿಶೇಷವಾಗಿ (ಯಾವ ಸ್ವರವು) ಉಚ್ಚಾರ ಮಾಡಲಾರದಷ್ಟು

ಸೂಕ್ಷ್ಮವಾಗಿರುವದೋ ಅದು ನೀನೇ. ಸಂಧ್ಯೆಯೆಂದೂ ಸಾವಿತ್ರಿಯೆಂದೂ ಪರಮ ಮಾತೆಯೆಂದೂ ನೀನು (ಸ್ತುತಿಸಲ್ಪಡುವೆ).

ತ್ವಯೈತದ್ಧಾರ್ಯತೇ ವಿಶ್ವಂ ತ್ವಯೈತತ್ ಸೃಜ್ಯತೇ ಜಗತ್ ।
ತ್ವಯೈತತ್ ಪಾಲ್ಯತೇ ದೇವಿ ತ್ವಮತ್ಸ್ಯಂತೇ ಚ ಸರ್ವದಾ ॥54॥

ವಿಸೃಷ್ಟೌ ಸೃಷ್ಟಿರೂಪಾ ತ್ವಂ ಸ್ಥಿತಿರೂಪಾ ಚ ಪಾಲನೇ ।
ತಥಾ ಸಂಹೃತಿರೂಪಾಂತೇ ಜಗತೋಽಸ್ಯ ಜಗನ್ಮಯೇ ॥55॥

54-55. ಈ ಪ್ರಪಂಚವು ನಿನ್ನಿಂದಲೇ ಸೃಷ್ಟಿಸಲ್ಪಟ್ಟು ನಿನ್ನಿಂದ ಧರಿಸಲ್ಪಟ್ಟಿದೆ. ಹಾಗೆಯೇ ನಿನ್ನಿಂದ ಕಾಪಾಡಲ್ಪಟ್ಟಿದೆ. ಕಡೆಗೆ ನೀನೇ ಇದನ್ನು ಉಪಸಂಹಾರ ಮಾಡಿಕೊಳ್ಳುವೆಯಾಗಿ ಯಾವಾಗಲೂ ಇದು (ನೀನೇ ಆಗಿದೆ). ಸೃಷ್ಟಿಕಾಲದಲ್ಲಿ ನೀನು ವಿವಿಧವಾಗಿ ಹುಟ್ಟುವವಳಾಗಿಯೂ ಸ್ಥಿತಿಕಾಲದಲ್ಲಿ ನಾನಾರೂಪದಿಂದ ನೀನೇ ಕಾಪಾಡುವವಳಾಗಿಯೂ ಮತ್ತು ಎಲೌ ಜಗನ್ಮಯಳಾದ ಮಾತೆಯೆ, ಈ ಜಗತ್ತಿನ ಸಂಹಾರಕಾಲದಲ್ಲಿ ನೀನೇ ವಿನಾಶಕಾರಣಳಾಗಿಯೂ ತೋರಿಕೊಳ್ಳುತ್ತಿರುವೆ.

ಮಹಾವಿದ್ಯಾ ಮಹಾಮಾಯಾ ಮಹಾಮೇಧಾ ಮಹಾಸ್ಮೃತಿಃ ।
ಮಹಾಮೋಹಾ ಚ ಭವತೀ ಮಹಾದೇವೀ ಮಹಾಸುರೀ ॥56॥

ಪ್ರಕೃತಿಸ್ತ್ವಂ ಚ ಸರ್ವಸ್ಯ ಗುಣತ್ರಯವಿಭಾವಿನೀ ।
ಕಾಲರಾತ್ರಿರ್ಮಹಾರಾತ್ರಿರ್ಮೋಹರಾತ್ರಿಶ್ಚ ದಾರುಣಾ ॥57॥

ತ್ವಂ ಶ್ರೀಸ್ತ್ವಮೀಶ್ವರೀ ತ್ವಂ ಹ್ರೀಸ್ತ್ವಂ ಬುದ್ಧಿರ್ಬೋಧಲಕ್ಷಣಾ ।
ಲಜ್ಜಾಪುಷ್ಟಿಸ್ತಥಾ ತುಷ್ಟಿಸ್ತ್ವಂ ಶಾಂತಿಃ ಕ್ಷಾಂತಿರೇವ ಚ ॥58॥

56-58. ನೀನು ಮಹಾವಿದ್ಯಾಸ್ವರೂಪಿಣಿಯು. ಹಾಗೆಯೇ ಮೇಧಾ, ಸ್ಮೃತಿಗಳ ಪರಮಸ್ವರೂಪಳೂ ಹೌದು. (ಅಜ್ಞರಿಗೆ) ಮಾಯೆ, ಮೋಹ, ಆಸುರಭಾವಗಳ ಪರಮಾವಧಿಯಾಗಿರುವೆ. ಮೂರುಗುಣಗಳಿಂದ ಹರಡಿಕೊಂಡಿರುವ ನೀನು ಎಲ್ಲರಿಗೂ ಪ್ರಕೃತಿಯು. ಭಯಂಕರವಾದ ಕಾಳರಾತ್ರಿ, ಮಹಾರಾತ್ರಿ, ಮೋಹರಾತ್ರಿಗಳ ಸ್ವರೂಪಳೂ ನೀನೇ. ಲಕ್ಷ್ಮಿ, ಈಶ್ವರೀ, ಲಜ್ಜಾ, ತಿಳಿವಳಿಕೆಯರೂಪದ ಬುದ್ಧಿ, ಸಂಕೋಚ, ಪುಷ್ಟಿ, ತುಷ್ಟಿ, ಶಾಂತಿ, ಕ್ಷಾಂತಿ - ಇವುಗಳೆಲ್ಲವೂ ನಿನ್ನ ರೂಪಗಳೇ.

ಖಡ್ಗಿನೀ ಶೂಲಿನೀ ಘೋರಾ ಗದಿನೀ ಚಕ್ರಿಣೀ ತಥಾ ।
ಶಂಖಿನೀ ಚಾಪಿನೀ ಬಾಣಭುಶುಂಡೀ ಪರಿಘಾಯುಧಾ ॥59॥

ಸೌಮ್ಯಾ ಸೌಮ್ಯತರಾಶೇಷಸೌಮ್ಯೇಭ್ಯಸ್ತ್ವತಿಸುಂದರೀ ।
ಪರಾಪರಾಣಾಂ ಪರಮಾ ತ್ವಮೇವ ಪರಮೇಶ್ವರೀ ॥60॥

ಯಚ್ಚ ಕಿಂಚಿದ್ ಕ್ವಚಿದ್ವಸ್ತು ಸದಸದ್ವಾಖಿಲಾತ್ಮಿಕೇ ।
ತಸ್ಯ ಸರ್ವಸ್ಯ ಯಾ ಶಕ್ತಿಃ ಸಾ ತ್ವಂ ಕಿಂ ಸ್ತೂಯಸೇ ಮಯಾ ॥61॥

59-61. ಕತ್ತಿ, ಶೂಲ, ಗದೆ, ಚಕ್ರ, ಶಂಖ, ಬಾಣ, ಬಿಲ್ಲು, ಭುಶುಂಡಿ, ಪರಿಘ-ಈ ಎಲ್ಲ ಆಯುಧಗಳನ್ನೂ ನೀನು ಧರಿಸಿರುವವಳಾಗಿರುವೆ. ಆದ್ದರಿಂದ ಭಯಂಕರಳಾಗಿ ಕಾಣುವೆ. (ಆದರೆ) ಆ ನೀನೇ ಸೌಮ್ಯಳೂ ಅತಿಸೌಮ್ಯಳೂ ಒಳ್ಳೆಯ ವಸ್ತುಗಳಲ್ಲೆಲ್ಲ ಹೆಚ್ಚಿನವಳೂ ಅತಿ ಸುಂದರಿಯೂ ಆಗಿರುವೆ. ಪರಮೇಶ್ವರಿಯಾದ ನೀನೇ ಮೇಲುಕೀಳುಗಳೆಂದು ಕಂಡುಬರುವ ವಸ್ತುಗಳಲ್ಲಿ ಅತಿ ಹೆಚ್ಚಿನ ಮೇಲ್ಮೆಯುಳ್ಳವಳಾಗಿರುವೆ. ಹೀಗೆ ಏನೇನಿದೆಯೋ ಯಾವಯಾವ ಪದಾರ್ಥಗಳು ಇವೆಯೋ ಸತ್ ಅಥವಾ ಅಸತ್ ಎಂಬ (ಬುದ್ಧಿಯಿಂದ) ವ್ಯವಹರಿಸಲ್ಪಡುವವೋ ಆ ಎಲ್ಲಾ ಪದಾರ್ಥಗಳಲ್ಲಿಯೂ ಅಡಗಿರುವ ಯಾವ ಶಕ್ತಿಯಿದೆಯೋ ಆ ಶಕ್ತಿದೇವಿಯಾದ ನಿನ್ನನ್ನು ನಾನು ಸ್ತೋತ್ರ ಮಾಡುವದೇನು ಹೆಚ್ಚುಗಾರಿಕೆಯಾಗಿದ್ದೀತು ?

ಯಯಾ ತ್ವಯಾ ಜಗತ್ಸ್ರಷ್ಟಾ ಜಗತ್ ಪಾತ್ಯತ್ತಿ ಯೋ ಜಗತ್ ।
ಸೋಽಪಿ ನಿದ್ರಾವಶಂ ನೀತಃ ಕಸ್ತ್ವಾಂ ಸ್ತೋತುಮಿಹೇಶ್ವರಃ ॥62॥

ವಿಷ್ಣುಃ ಶರೀರಗ್ರಹಣಮಹಮೀಶಾನ ಏವ ಚ ।
ಕಾರಿತಾಸ್ತೇ ಯತೋಽತಸ್ತ್ವಾಂ ಕಃ ಸ್ತೋತುಂ ಶಕ್ತಿಮಾನ್ ಭವೇತ್ ॥63॥

62-63. ಯಾವ ನಿನ್ನಿಂದ ಜಗತ್ಸೃಷ್ಟಿಕರ್ತನೂ ಪಾಲಕನೂ ಸಂಹಾರಕನೂ ಎನಿಸಿರುವ (ವಿಷ್ಣುವು) ಕೂಡ ನಿದ್ರೆಗೆ ವಶವಾಗಿ ಮಲಗಿಬಿಟ್ಟಿರುವಾಗ ಉಳಿದ ಯಾವನು ತಾನೆ ನಿನ್ನನ್ನು ಸ್ತೋತ್ರಮಾಡಲು ಸಮರ್ಥನಾದಾನು ? (ಬ್ರಹ್ಮನಾದ) ನಾನು, ವಿಷ್ಣು, ಈಶ್ವರ-ಈ ಮೂವರೂ ಶರೀರವನ್ನು ಧರಿಸುವಂತೆ ಯಾವ ನಿನ್ನಿಂದ ಮಾಡಲ್ಪಟ್ಟಿರುವೆವೋ ಅಂಥ ನಿನ್ನನ್ನು ಹೊಗಳಲು ಯಾವನು ತಾನೆ ಶಕ್ತಿವಂತನೆನಿಸಿಯಾನು ?

ಸಾ ತ್ವಮಿತ್ಥಂ ಪ್ರಭಾವೈಃ ಸ್ವೈರುದಾರೈರ್ದೇವಿ ಸಂಸ್ತುತಾ ।
ಮೋಹಯೈತೌ ದುರಾಧರ್ಷೌ ಅಸುರೌ ಮಧುಕೈಟಭೌ ॥64॥

ಪ್ರಬೋಧಂ ಚ ಜಗತ್ ಸ್ವಾಮೀ ನೀಯತಾಮಚ್ಯುತೋ ಲಘು ।
ಬೋಧಶ್ಚ ಕ್ರಿಯತಾಮಸ್ಯ ಹಂತುಮೇತೌ ಮಹಾಸುರೌ ॥65॥

64-65. ಹೇ ದೇವಿ, ಆ ನೀನು ನಿನ್ನ ಸ್ವರೂಪವಾದ ಪ್ರಭಾವ (ಗುಣ)ಗಳಿಂದ ನನ್ನಿಂದ ಸ್ತುತಿಸಲ್ಪಟ್ಟವಳಾಗಿರುವೆ. ನೀನು ಈ ಎದುರಿಸಲು ಅಸಾಧ್ಯವಾದ ಮಧುಕೈಟಭರನ್ನು ಮೋಹಗೊಳಿಸು. ಜಗದೊಡೆಯನಾದ ವಿಷ್ಣುವು ಹಗುರವಾಗಿ ಎಚ್ಚರಗೊಳ್ಳಲಿ. ಹಾಗೂ ಈ ಇಬ್ಬರ ಮಹಾರಾಕ್ಷಸರನ್ನು ಕೊಲ್ಲುವಂತೆ ಅವನನ್ನು ಪ್ರೇರಿಸುವವಳಾಗು.

ಋಷಿರುವಾಚ–

ಏವಂ ಸ್ತುತಾ ತದಾ ದೇವೀ ತಾಮಸೀ ತತ್ರ ವೇಧಸಾ ।
ವಿಷ್ಣೋಃ ಪ್ರಬೋಧನಾರ್ಥಾಯ ನಿಹನ್ತುಂ ಮಧುಕೈಟಭೌ ॥66॥

ನೇತ್ರಾಸ್ಯನಾಸಿಕಾಬಾಹುಹೃದಯೇಭ್ಯಸ್ತಥೋರಸಃ ।
ನಿರ್ಗಮ್ಯ ದರ್ಶನೇ ತಸ್ಥೌ ಬ್ರಹ್ಮಣೋಽವ್ಯಕ್ತಜನ್ಮನಃ ॥67॥

66-67. ಋಷಿಯಿಂತೆಂದನು : ಈ ರೀತಿಯಾಗಿ ಆಗ ಬ್ರಹ್ಮನಿಂದ ಸ್ತೋತ್ರಮಾಡಲ್ಪಟ್ಟ ಆ ತಾಮಸೀದೇವಿಯು ವಿಷ್ಣುವು ಮಧುಕೈಟಭರನ್ನು ಕೊಲ್ಲಲೆಂದು ಅವನನ್ನು ಎಬ್ಬಿಸುವದಕ್ಕಾಗಿ (ಆತನ) ಕಣ್ಣು, ಮುಖ, ಮೂಗು, ತೋಳು, ಎದೆ, ಹೃದಯ-ಪ್ರದೇಶಗಳಿಂದ ಹೊರಬಂದು ಅವ್ಯಕ್ತಜನ್ಮನಾದ ಬ್ರಹ್ಮನ ಎದುರಿಗೆ ನಿಂತು ದರ್ಶನಕೊಟ್ಟಳು.

ಉತ್ತಸ್ಥೌ ಚ ಜಗನ್ನಾಥಃ ತಯಾ ಮುಕ್ತೋ ಜನಾರ್ದನಃ ।
ಏಕಾರ್ಣವೇಽಹಿಶಯನಾತ್ ತತಃ ಸ ದದೃಶೇ ಚ ತೌ ॥68॥

ಮಧುಕೈಟಭೌ ದುರಾತ್ಮಾನಾವತಿವೀರ್ಯಪರಾಕ್ರಮೌ ।
ಕ್ರೋಧರಕ್ತೇಕ್ಷಣಾವತ್ತುಂ ಬ್ರಹ್ಮಾಣಂ ಜನಿತೋದ್ಯಮೌ ॥69॥

68-69. ಆಕೆಯಿಂದ ಬಿಡುಗಡೆಹೊಂದಿದ ವಿಷ್ಣುವು ನೀರೇ ತುಂಬಿ ಹೋಗಿದ್ದ (ಪ್ರಲಯಾವಸ್ಥೆಯಲ್ಲಿ) ಆದಿಶೇಷನ ಹಾಸಿಗೆಯಲ್ಲಿ (ಮಲಗಿದ್ದವನು) ಮೇಲಕ್ಕೆ ಎದ್ದನು. ಅನಂತರ ಅವನು ದುರಾತ್ಮರೂ ಬಹಳವಾದ ವೀರ್ಯಪರಾಕ್ರಮಗಳುಳ್ಳವರೂ ಕ್ರೋಧದಿಂದ ಕೆಂಪಾದ ಕಣ್ಣುಳ್ಳವರೂ ಬ್ರಹ್ಮನನ್ನು ತಿನ್ನಲು ಹವಣಿಸುತ್ತಿರುವವರೂ ಆದ ಮಧುಕೈಟಭರನ್ನು ನೋಡಿದನು.

ಸಮುತ್ಥಾಯ ತತಸ್ತಾಭ್ಯಾಂ ಯುಯುಧೇ ಭಗವಾನ್ ಹರಿಃ ।
ಪಂಚವರ್ಷಸಹಸ್ರಾಣಿ ಬಾಹುಪ್ರಹರಣೋ ವಿಭುಃ ॥70॥

ತಾವಪ್ಯತಿಬಲೋನ್ಮತ್ತೌ ಮಹಾಮಾಯಾವಿಮೋಹಿತೌ ।
ಉಕ್ತವಂತೌ ವರೋऽಸ್ಮತ್ತೋ ವ್ರಿಯತಾಮಿತಿ ಕೇಶವಮ್ ॥71॥

70-71. ಅನಂತರ ಭಗವಾನ್ ವಿಷ್ಣುವು ಮೇಲೆದ್ದು ಅವರಿಬ್ಬರೊಡನೆ ಐದು ಸಹಸ್ರ ವರ್ಷಗಳ ಕಾಲ ಬರಿಯ ತೋಳು ಬಲದಿಂದಲೇ ಏಟುಗಳನ್ನು ಹೊಡೆಯುತ್ತಾ ಯುದ್ಧಮಾಡಿದನು. ಹೆಚ್ಚಿನ ಬಲದಿಂದ ಕೊಬ್ಬಿಹೋಗಿದ್ದ ಅವರಿಬ್ಬರೂ (ವಿಷ್ಣುವಿನ ಪರಾಕ್ರಮವನ್ನು ಮೆಚ್ಚಿಕೊಂಡವರಾಗಿ) ಮಹಾಮಾಯೆಯಿಂದ ಮೋಹಿತರಾದವರಾಗಿ ವಿಷ್ಣುವನ್ನು ಕುರಿತು 'ನಮ್ಮಿಂದ ಏನಾದರೂ ವರವನ್ನು ಕೇಳಿಕೊಳ್ಳುವವನಾಗು' ಎಂದರು.

ಶ್ರೀಭಗವಾನುವಾಚ –

ಭವೇತಾಮದ್ಯ ಮೇ ತುಷ್ಟೌ ಮಮ ವಧ್ಯಾವುಭಾವಪಿ ।
ಕಿಮನ್ಯೇನ ವರೇಣಾತ್ರ ಏತಾವದ್ಧಿ ವೃತಂ ಮಮ ॥72॥

72. ಶ್ರೀಭಗವಂತನಿಂತೆಂದನು : 'ನೀವಿಬ್ಬರೂ ಈಗ ನನ್ನ (ವಿಷಯಕ್ಕೆ) ಸಂತುಷ್ಟರಾಗಿರುವಿರಾದರೆ ಇದೋ, ನೀವು ನನ್ನಿಂದ ಸಾಯುವವರಾಗಿರಿ! ಇದೇ ನಾನು ಬೇಡುವ ವರವು. ಬೇರೆ ವರದಿಂದೇನು ? ನಾನು ಕೇಳಿರುವ ವರವು ಇಷ್ಟೇ.'

ಋಷಿರುವಾಚ–

ವಂಚಿತಾಭ್ಯಾಮಿತಿ ತದಾ ಸರ್ವಮಾಪೋಮಯಂ ಜಗತ್ ।
ವಿಲೋಕ್ಯ ತಾಭ್ಯಾಂ ಗದಿತೋ ಭಗವಾನ್ ಕಮಲೇಕ್ಷಣಃ ॥73॥
ಆವಾಂ ಜಹಿ ನ ಯತ್ರೋರ್ವೀ ಸಲಿಲೇನ ಪರಿಪ್ಲುತಾ ।

73. ಋಷಿಯಿಂತೆಂದನು : ಆಗ ಅವರಿಬ್ಬರೂ ತಾವು ಮೋಸಹೋದೆವೆಂದು (ತಿಳಿದು) ಆಗಲೂ ಜಗತ್ತೆಲ್ಲವೂ ನೀರಿನಿಂದ ತುಂಬಿರಲಾಗಿ ಅದನ್ನು ಕಂಡು ಕಮಲಾಕ್ಷನಾದ ವಿಷ್ಣುವಿಗೆ ಹೀಗೆಂದರು : 'ಆಗಲಿ, ನೀನು ನಮ್ಮಿಬ್ಬರನ್ನೂ ನೀರಿಲ್ಲದ ಭೂಮಿಯ ಮೇಲೆ ಒಟ್ಟಿಗೆ ಕೊಲ್ಲುವವನಾಗು' ಎಂದರು.

ಋಷಿರುವಾಚ–

ತಥೇತ್ಯುಕ್ತ್ವಾ ಭಗವತಾ ಶಂಖಚಕ್ರಗದಾಭೃತಾ ।
ಕೃತ್ವಾ ಚಕ್ರೇಣ ವೈ ಛಿನ್ನೇ ಜಘನೇ ಶಿರಸೀ ತಯೋಃ ॥74॥

ಏವಮೇಷಾ ಸಮುತ್ಪನ್ನಾ ಬ್ರಹ್ಮಣಾ ಸಂಸ್ತುತಾ ಸ್ವಯಮ್ ।
ಪ್ರಭಾವಮಸ್ಯಾ ದೇವ್ಯಾಸ್ತು ಭೂಯಃ ಶೃಣು ವದಾಮಿ ತೇ ॥75॥

74-75. ಋಷಿಯಿಂತೆಂದನು : ಶಂಖಚಕ್ರಗದಾಧಾರಿಯಾದ ಆ ಭಗವಂತನು ಹಾಗೆ ಆಗಲಿ– ಎಂದೊಪ್ಪಿ (ತಾನು ನೀರಿನ ಮೇಲೆ ಕುಳಿತು) ಅವರಿಬ್ಬರ ತಲೆಗಳನ್ನೂ (ತಲೆಕೆಳಗಾಗಿ) ತನ್ನ ತೊಡೆಯಮೇಲಿರಿಸಿಕೊಂಡು ಚಕ್ರದಿಂದ ಕತ್ತರಿಸಿಬಿಟ್ಟನು. ಹೀಗೆ ಈ (ತಾಮಸೀದೇವಿಯು) ಬ್ರಹ್ಮನಿಂದ ಸ್ತೋತ್ರ ಮಾಡಲ್ಪಟ್ಟು ತಾನೇ ಆವಿರ್ಭವಿಸಿರುವಳು. ಈ ದೇವಿಯ ಪ್ರಭಾವವನ್ನು ಮತ್ತೆ ನಿನಗೆ (ಮುಂದುವರೆದು) ಹೇಳುವೆನು. ಕೇಳು.

ಇತಿ ಶ್ರೀ ಮಾರ್ಕಂಡೇಯಪುರಾಣೇ ದೇವೀಮಹಾತ್ಮ್ಯೇ
ಪ್ರಥಮೋಽಧ್ಯಾಯಃ

---

## ಎರಡನೆಯ ಅಧ್ಯಾಯ

ಧ್ಯಾನಮ್ ॥

ಅಕ್ಷಸ್ರಕ್ಪರಶುಂ ಗದೇಷುಕುಲಿಶಂ ಪದ್ಮಂ ಧನುಷ್ಕುಂಡಿಕಾಂ
ದಂಡಂ ಶಕ್ತಿಮಸಿಂ ಚ ಚರ್ಮಜಲಜಂ ಘಂಟಾಂ ಸುರಾಭಾಜನಮ್ ।
ಶೂಲಂ ಪಾಶಸುದರ್ಶನೇ ಚ ದಧತೀಂ ಹಸ್ತೈಃ ಪ್ರಸನ್ನಾನನಾಂ
ಸೇವೇ ಸೈರಿಭಮರ್ದಿನೀಮಿಹ ಮಹಾಲಕ್ಷ್ಮೀಂ ಸರೋಜಸ್ಥಿತಾಮ್ ॥1॥

1. ಅಕ್ಷರಮಾಲೆ (ಜಪಸರ), ಕೊಡಲಿ, ಗದೆ, ಬಾಣ, ವಜ್ರಾಯುಧ, ಪದ್ಮ, ಬಿಲ್ಲು, ಕಮಂಡಲು, ಕೋಲು, ಶಕ್ತ್ಯಾಯುಧ, ಕತ್ತಿ, ಗುರಾಣಿ, ಶಂಖ, ಘಂಟೆ, ಸುರಾಪಾತ್ರೆ, ತ್ರಿಶೂಲ, ಹಗ್ಗ, ಸುದರ್ಶನಚಕ್ರ – ಇವುಗಳನ್ನು ಕೈಗಳಿಂದ ಹಿಡಿದಿರುವ, ಪ್ರಸನ್ನಮುಖಿಯಾದ, ಕಮಲನಿವಾಸಿನಿಯೂ ಸೈರಿಭ(ನೆಂಬ ರಾಕ್ಷಸನನ್ನು) ಸಂಹಾರಮಾಡುತ್ತಿರುವವಳೂ ಆದ ಶ್ರೀ ಮಹಾಲಕ್ಷ್ಮಿಯನ್ನು ಭಜಿಸುವೆನು.

ಓಂ ಹ್ರೀಂ ಋಷಿರುವಾಚ –

ದೇವಾಸುರಮಭೂದ್ಯುದ್ಧಂ ಪೂರ್ಣಮಬ್ದಶತಂ ಪುರಾ ।
ಮಹಿಷೇಽಸುರಾಣಾಮಧಿಪೇ ದೇವಾನಾಂ ಚ ಪುರಂದರೇ ॥2॥

ತತ್ರಾಸುರೈರ್ಮಹಾವೀರ್ಯೈರ್ದೇವಸೈನ್ಯಂ ಪರಾಜಿತಮ್ ।
ಜಿತ್ವಾ ಚ ಸಕಲಾನ್ ದೇವಾನಿಂದ್ರೋಽಭೂನ್ಮಹಿಷಾಸುರಃ ॥3॥

2-3. ಋಷಿಯಿಂತೆಂದನು : ಹಿಂದೆ ಒಂದು ನೂರು ವರ್ಷಗಳ ಕಾಲ ದೇವತೆಗಳಿಗೂ ರಾಕ್ಷಸರಿಗೂ ಯುದ್ಧವಾಯಿತು. ಆಗ ಮಹಿಷನು ರಾಕ್ಷಸರಿಗೊಡೆಯನೂ ಇಂದ್ರನು ದೇವತೆಗಳಿಗೊಡೆಯನೂ ಆಗಿದ್ದರು. ಆಗ್ಗೆ ಮಹಾಬಲಶಾಲಿಗಳಾದ ರಾಕ್ಷಸರಿಂದ ದೇವತೆಗಳ ಸೈನ್ಯವು ಸೋಲಿಸಲ್ಪಟ್ಟಿತು. ಮಹಿಷಾಸುರನು ಸಕಲದೇವತೆಗಳನ್ನೂ ಗೆದ್ದು (ತಾನೇ) ಇಂದ್ರನಾದನು.

ತತಃ ಪರಾಜಿತಾ ದೇವಾಃ ಪದ್ಮಯೋನಿಂ ಪ್ರಜಾಪತಿಮ್ ।
ಪುರಸ್ಕೃತ್ಯ ಗತಾಸ್ತತ್ರ ಯತ್ರೇಶಗರುಡಧ್ವಜೌ ॥4॥

ಯಥಾವೃತ್ತಂ ತಯೋಸ್ತದ್ವನ್ಮಹಿಷಾಸುರಚೇಷ್ಟಿತಮ್ ।
ತ್ರಿದಶಾಃ ಕಥಯಾಮಾಸುರ್ದೇವಾಭಿಭವವಿಸ್ತರಮ್ ॥5॥

4-5. ಅನಂತರ ಸೋತುಹೋದ ದೇವತೆಗಳು ಪದ್ಮದಿಂದ ಉತ್ಪನ್ನನಾದ ಬ್ರಹ್ಮನನ್ನು ಮುಂದಿರಿಸಿಕೊಂಡು ಶ್ರೀಮಹಾದೇವನೂ ಮಹಾವಿಷ್ಣುವೂ ಇದ್ದಂಥ ಸ್ಥಳಕ್ಕೆ ಹೋದರು. ಅವರಿಬ್ಬರೆದುರಿಗೆ ದೇವತೆಗಳು ನಡೆದಂತೆ ಮಹಿಷಾಸುರನ ದುಷ್ಕೃತ್ಯಗಳನ್ನೂ ದೇವತೆಗಳಿಗಾದ ಸೋಲನ್ನೂ ವಿವರವಾಗಿ ಹೇಳಿದರು.

ಸೂರ್ಯೇಂದ್ರಾಗ್ನ್ಯನಿಲೇಂದೂನಾಂ ಯಮಸ್ಯ ವರುಣಸ್ಯ ಚ ।
ಅನ್ಯೇಷಾಂ ಚಾಧಿಕಾರಾನ್ ಸ ಸ್ವಯಮೇವಾಧಿತಿಷ್ಠತಿ ॥6॥

ಸ್ವರ್ಗಾನ್ನಿರಾಕೃತಾಃ ಸರ್ವೇ ತೇನ ದೇವಗಣಾ ಭುವಿ ।
ವಿಚರಂತಿ ಯಥಾ ಮರ್ತ್ಯಾ ಮಹಿಷೇಣ ದುರಾತ್ಮನಾ ॥7॥

ಏತದ್ವಃ ಕಥಿತಂ ಸರ್ವಮಮರಾರಿವಿಚೇಷ್ಟಿತಮ್ ।
ಶರಣಂ ಚಃ ಪ್ರಪನ್ನಾಃ ಸ್ಮೋ ವಧಸ್ತಸ್ಯ ವಿಚಿಂತ್ಯತಾಮ್ ॥8॥

6-8. 'ಸೂರ್ಯ, ಇಂದ್ರ, ಅಗ್ನಿ, ವಾಯು, ಚಂದ್ರ, ಯಮ, ವರುಣ - ಇನ್ನೂ ಉಳಿದ ದೇವತೆಗಳೆಲ್ಲರ ಅಧಿಕಾರವನ್ನೂ ಅವನು ತಾನೇ (ಕಸಿದು) ನಡೆಯಿಸುತ್ತಿದ್ದಾನೆ. ದುರಾತ್ಮನಾದ ಆ ಮಹಿಷನು ದೇವತೆಗಳನ್ನೆಲ್ಲ ಸ್ವರ್ಗದಿಂದ ಓಡಿಸಿಬಿಟ್ಟಿದ್ದಾನೆ. (ಸ್ಥಾನಭ್ರಷ್ಟರಾದ) ಅವರು ಸಾಮಾನ್ಯ ಮನುಷ್ಯರಂತೆ ಸಂಚರಿಸುತ್ತಿದ್ದಾರೆ. ದೇವ ಶತ್ರುವಾದ ಆತನ ಕಾರ್ಯಗಳೆಲ್ಲವನ್ನೂ ಪೂರ್ತಿಯಾಗಿ ನಿಮ್ಮಗಳ ಮುಂದೆ ಹೇಳಿದ್ದೇವೆ. ನಾವೆಲ್ಲರೂ ನಿಮಗೆ ಶರಣಾಗತರಾಗಿರುತ್ತೇವೆ. ಅವನ ವಧೋಪಾಯವನ್ನು ದಯವಿಟ್ಟು ಆಲೋಚಿಸಬೇಕು' – (ಎಂದರು).

ಇತ್ಥಂ ನಿಶಮ್ಯ ದೇವಾನಾಂ ವಚಾಂಸಿ ಮಧುಸೂದನಃ ।
ಚಕಾರ ಕೋಪಃ ಶಂಭುಶ್ಚ ಭ್ರುಕುಟೀಕುಟಿಲಾನನೌ ॥9॥

ತತೋಽತಿಕೋಪಪೂರ್ಣಸ್ಯ ಚಕ್ರಿಣೋ ವದನಾತ್ ತತಃ ।
ನಿಶ್ಚಕ್ರಾಮ ಮಹತ್ತೇಜೋ ಬ್ರಹ್ಮಣಃ ಶಂಕರಸ್ಯ ಚ ॥10॥

ಅನ್ಯೇಷಾಂ ಚೈವ ದೇವಾನಾಂ ಶಕ್ರಾದೀನಾಂ ಶರೀರತಃ ।
ನಿರ್ಗತಂ ಸುಮಹತ್ತೇಜಃ ತಚ್ಚೈಕ್ಯಂ ಸಮಗಚ್ಛತ ॥11॥

9-11. ಮಹಾವಿಷ್ಣುವು ದೇವತೆಗಳ ಮಾತನ್ನು ಹೀಗೆ ಕೇಳಿದವನಾಗಿ ಕೋಪಗೊಂಡನು. ಈಶ್ವರನೂ ಸಿಟ್ಟಾದನು. ಹುಬ್ಬುಗಳನ್ನು ಗಂಟಿಕ್ಕಿದವರಾದರು. ಅನಂತರ ಬಹಳವಾಗಿ ಕೋಪಗೊಂಡ ವಿಷ್ಣುವಿನ ಮುಖದಿಂದಲೂ ಬ್ರಹ್ಮ, ಈಶ್ವರ ಮುಖಗಳಿಂದಲೂ ಮತ್ತು ಉಳಿದ ಇಂದ್ರನೇ ಮುಂತಾದ ದೇವತೆಗಳ ಶರೀರಗಳಿಂದಲೂ ಮಹತ್ತಾದ ತೇಜಸ್ಸು ಹೊರಬಿದ್ದಿತು. ಹಾಗೂ ಅದೆಲ್ಲವೂ ಒಂದಾಯಿತು.

ಅತೀವ ತೇಜಸಃ ಕೂಟಂ ಜ್ವಲಂತಮಿವ ಪರ್ವತಮ್ ।
ದದೃಶುಸ್ತೇ ಸುರಾಸ್ತತ್ರ ಜ್ವಾಲಾವ್ಯಾಪ್ತದಿಗಂತರಮ್ ॥12॥

ಅತುಲಂ ತತ್ರ ತತ್ತೇಜಃ ಸರ್ವದೇವಶರೀರಜಮ್ ।
ಏಕಸ್ಥಂ ತದಭೂನ್ನಾರೀ ವ್ಯಾಪ್ತಲೋಕತ್ರಯಂ ತ್ವಿಷಾ ॥13॥
ಯದಭೂತ್ ಶಾಂಭವಂ ತೇಜಃ ತೇನಾಜಾಯತ ತನ್ಮುಖಮ್ ।

12-13. ಉರಿಯುತ್ತಿರುವ ಪರ್ವತದಂತಿರುವ ಹೆಚ್ಚಿನ ಆ ತೇಜೋ ರಾಶಿಯು ತನ್ನ ಜ್ವಾಲೆಗಳಿಂದ ದಿಕ್ಕಿನ ಕೊನೆಗಳನ್ನು ವ್ಯಾಪಿಸಿಕೊಂಡದ್ದನ್ನು ಅಲ್ಲಿ ದೇವತೆಗಳು ಕಂಡರು. ಎಲ್ಲಾ ದೇವತೆಗಳ ಶರೀರದಿಂದ ಹೊರಬಿದ್ದ ಅಪರಿಮಿತವಾದ ಆ ಬೆಳಕು ಒಂದಾಗಿ ಆಗ ಒಬ್ಬ ಸ್ತ್ರೀಯಾಯಿತು. ಆಕೆಯು ತನ್ನ ಕಾಂತಿಯಿಂದ ಮೂರು ಲೋಕಗಳನ್ನೂ ವ್ಯಾಪಿಸಿಕೊಂಡಳು. ಈಶ್ವರನ ತೇಜಸ್ಸೇನಿತ್ತೋ, ಅದರಿಂದ ಆಕೆ ಮುಖವು ಸೃಷ್ಟಿಯಾಯಿತು.

ಯಾಮ್ಯೇನ ಚಾಭವನ್ ಕೇಶಾ ಬಾಹವೋ ವಿಷ್ಣುತೇಜಸಾ ।
ಸೌಮ್ಯೇನ ಸ್ತನಯೋರ್ಯುಗ್ಮಂ ಮಧ್ಯಂ ಚೈಂದ್ರೇಣ ಚಾಭವತ್ ॥14॥

ವಾರುಣೇನ ಚ ಜಂಘೋರೂ ನಿತಂಬಸ್ತೇಜಸಾ ಭುವಃ ।
ಬ್ರಹ್ಮಣಸ್ತೇಜಸಾ ಪಾದೌ ತದಂಗುಲ್ಯೋಽರ್ಕತೇಜಸಾ ॥15॥

ವಸೂನಾಂ ಚ ಕರಾಂಗುಲ್ಯಃ ಕೌಬೇರೇಣ ಚ ನಾಸಿಕಾ ।
ತಸ್ಯಾಸ್ತು ದಂತಾಃ ಸಂಭೂತಾಃ ಪ್ರಾಜಾಪತ್ಯೇನ ತೇಜಸಾ ॥16॥

ನಯನತ್ರಿತಯಂ ಜಜ್ಞೇ ತಥಾ ಪಾವಕತೇಜಸಾ ।
ಭ್ರುವೌ ಚ ಸಂಧ್ಯಯೋಸ್ತೇಜಃ ಶ್ರವಣಾವನಿಲಸ್ಯ ಚ ॥17॥
ಅನ್ಯೇಷಾಂ ಚೈವ ದೇವಾನಾಂ ಸಂಭವಸ್ತೇಜಸಾಂ ಶಿವಾ ।

14-17. ಹಾಗೆಯೇ ಯಮನ (ಶಕ್ತಿ) ತೇಜಸ್ಸುಗಳಿಂದ ಆಕೆಯ ಕೂದಲುಗಳೂ, ವಿಷ್ಣುವಿನ ತೇಜಸ್ಸಿನಿಂದ ತೋಳುಗಳೂ, ಚಂದ್ರನ ತೇಜಸ್ಸಿನಿಂದ ಎರಡು ಸ್ತನಗಳೂ, ಇಂದ್ರನ ತೇಜಸ್ಸಿನಿಂದ ಮಧ್ಯಭಾಗವೂ, ವರುಣನ ತೇಜಸ್ಸಿನಿಂದ ತೊಡೆ-ಮಂಡಿಗಳೂ, ಭೂದೇವಿಯ ತೇಜಸ್ಸಿನಿಂದ ಆಸನಭಾಗವೂ, ಬ್ರಹ್ಮತೇಜಸ್ಸಿನಿಂದ ಪಾದಗಳೂ, ಸೂರ್ಯತೇಜಸ್ಸಿನಿಂದ ಕಾಲುಬೆರಳುಗಳೂ, ವಸುದೇವತೆಗಳ ತೇಜಸ್ಸಿನಿಂದ ಕೈಬೆರಳುಗಳೂ ,ಕುಬೇರನ ತೇಜಸ್ಸಿನಿಂದ ಮೂಗೂ, ಪ್ರಜಾಪತಿಯ ತೇಜಸ್ಸಿನಿಂದ ಆಕೆಯ ಹಲ್ಲುಗಳೂ, ಅಗ್ನಿಯ ತೇಜಸ್ಸಿನಿಂದ ಮೂರು ಕಣ್ಣುಗಳೂ, ಸಂಧ್ಯಾದೇವತೆಗಳ ತೇಜಸ್ಸಿನಿಂದ ಎರಡು ಹುಬ್ಬುಗಳೂ, ವಾಯುದೇವತೆಯ ತೇಜಸ್ಸಿನಿಂದ ಕಿವಿಗಳೂ-ಉಂಟಾದವು. ಹೀಗೆಯೇ ಬೇರೆಬೇರೆಯ ದೇವತೆಗಳ ತೇಜಸ್ಸುಗಳ (ಸಮಷ್ಟಿಯ) ಸೃಷ್ಟಿಯೇ ದೇವಿಯಾಗಿದ್ದಳು.

ತತಃ ಸಮಸ್ತದೇವಾನಾಂ ತೇಜೋರಾಶಿಸಮುದ್ಭವಾಮ್ ।
ತಾಂ ವಿಲೋಕ್ಯ ಮುದಂ ಪ್ರಾಪುರಮರಾ ಮಹಿಷಾರ್ದಿತಾಃ ॥18॥

ಶೂಲಂ ಶೂಲಾದ್ ವಿನಿಷ್ಕೃಷ್ಯ ದದೌ ತಸ್ಯೈ ಪಿನಾಕಧೃಕ್ ।
ಚಕ್ರಂ ಚ ದತ್ತವಾನ್ ಕೃಷ್ಣಃ ಸಮುತ್ಪಾದ್ಯ ಸ್ವಚಕ್ರತಃ ॥19॥

ಶಂಖಂ ಚ ವರುಣಃ ಶಕ್ತಿಂ ದದೌ ತಸ್ಯೈ ಹುತಾಶನಃ ।
ಮಾರುತೋ ದತ್ತವಾನ್ ಚಾಪಂ ಬಾಣಪೂರ್ಣೇ ತಥೇಷುಧೀ ॥20॥

18-20. ಅನಂತರ ಎಲ್ಲಾ ದೇವತೆಗಳ ತೇಜಸ್ಸಮೂಹದಿಂದ ಹುಟ್ಟಿ ಬಂದ ಆಕೆಯನ್ನು ಕಂಡು ಮಹಿಷಾಸುರನಿಂದ ಪೀಡಿಸಲ್ಪಟ್ಟಿದ್ದ ದೇವತೆಗಳು ಆನಂದಗೊಂಡರು. ಪಿನಾಕಪಾಣಿಯಾದ ಶಿವನು ತನ್ನ ತ್ರಿಶೂಲದಿಂದ ಮತ್ತೊಂದು ತ್ರಿಶೂಲವನ್ನು ನಿರ್ಮಿಸಿ ಆಕೆಗೆ ಕೊಟ್ಟನು. ವಿಷ್ಣುವೂ ಹಾಗೆಯೇ ತನ್ನ ಚಕ್ರದಿಂದ ಬೇರೊಂದು ಚಕ್ರವನ್ನು ಸಿದ್ಧಗೊಳಿಸಿಕೊಟ್ಟನು. ವರುಣನು ಶಂಖವನ್ನೂ ಅಗ್ನಿದೇವನು ಶಕ್ತ್ಯಾಯುಧವನ್ನೂ ಮಾರುತನು (ವಾಯುವು) ಬಿಲ್ಲನ್ನೂ ಮತ್ತು ಬಾಣಗಳಿಂದ ತುಂಬಿದ ಎರಡು ಬತ್ತಳಿಕೆಗಳನ್ನೂ ನೀಡಿದರು.

ವಜ್ರಮಿಂದ್ರಂ ಸಮುತ್ಪಾದ್ಯ ಕುಲಿಶಾದಮರಾಧಿಪಃ ।
ದದೌ ತಸ್ಯೈ ಸಹಸ್ರಾಕ್ಷೋ ಘಂಟಾಮೈರಾವತಾದ್ ಗಜಾತ್ ॥21॥

ಕಾಲದಂಡಾದ್ಯಮೋ ದಂಡಂ ಪಾಶಂ ಚಾಂಬುಪತಿರ್ದದೌ ।
ಪ್ರಜಾಪತಿಶ್ಚಾಕ್ಷಮಾಲಾಂ ದದೌ ಬ್ರಹ್ಮಾ ಕಮಂಡಲುಮ್ ॥22॥

ಸಮಸ್ತರೋಮಕೂಪೇಷು ನಿಜರಶ್ಮೀನ್ ದಿವಾಕರಃ ।
ಕಾಲಶ್ಚ ದತ್ತವಾನ್ ಖಡ್ಗಂ ತಸ್ಯಾಶ್ಚರ್ಮ ಚ ನಿರ್ಮಲಮ್ ॥23॥

ಕ್ಷೀರೋದಶ್ಚಾಮಲಂ ಹಾರಂ ಅಜರೇ ಚ ತಥಾಂಬರೇ ।
ಚೂಡಾಮಣಿಂ ತಥಾ ದಿವ್ಯಂ ಕುಂಡಲೇ ಕಟಕಾನಿ ಚ ॥24॥

21-24. ಇಂದ್ರನು ತನ್ನ ವಜ್ರಾಯುಧದಿಂದ ಮತ್ತೊಂದು ವಜ್ರಾಯುಧವನ್ನು ತಯಾರಿಸಿಕೊಟ್ಟನು. ಮತ್ತು ದೇವೇಂದ್ರನು ತನ್ನ ಐರಾವತವೆಂಬ ಆನೆಯಿಂದ ಘಂಟೆಯನ್ನು ತೆಗೆದುಕೊಟ್ಟನು. ಯಮನು ತನ್ನ ಕಾಲದಂಡದಿಂದ (ಮತ್ತೊಂದು) ದಂಡವನ್ನೂ ವರುಣನು ಪಾಶವನ್ನೂ (ಸೃಷ್ಟಿಸಿ)ಕೊಟ್ಟರು. ಪ್ರಜಾಪತಿಯು ಜಪಸರವನ್ನೂ ಬ್ರಹ್ಮದೇವನು ಕಮಂಡಲುವನ್ನೂ ಕೊಟ್ಟರು. ಸೂರ್ಯನು ಆ ದೇವಿಯ ಎಲ್ಲಾ ಮೈಗೂದಲುಗಳಲ್ಲಿಯೂ ತನ್ನ ಕಾಂತಿಯನ್ನು ಇಟ್ಟನು. ಕಾಲ (ಮೃತ್ಯುವು) ಕತ್ತಿಯನ್ನೂ ನಿರ್ಮಲವಾದ ಚರ್ಮ(ವೆಂಬ ಸಾಮಗ್ರಿಯನ್ನೂ) ನೀಡಿದನು. ಕ್ಷೀರಸಮುದ್ರರಾಜನು ಶುದ್ಧವಾದ (ರತ್ನಗಳ) ಹಾರವನ್ನೂ ನಾಶವಿಲ್ಲದ ಎರಡು ವಸ್ತ್ರಗಳನ್ನೂ, (ಹೆರಳಿನಲ್ಲಿ ಧರಿಸುವ) ಚೂಡಾಮಣಿಯೆಂಬ ಒಡವೆಯನ್ನೂ ಎರಡು ಬೆಂಡೋಲೆಗಳನ್ನೂ ಕೈಬಳೆಗಳನ್ನೂ ನೀಡಿದನು.

ಅರ್ಧಚಂದ್ರಂ ತಥಾ ಶುಭ್ರಂ ಕೇಯೂರಾನ್ ಸರ್ವಬಾಹುಷು ।
ನೂಪುರೌ ವಿಮಲೌ ತದ್ವತ್ ಗ್ರೈವೇಯಕಮನುತ್ತಮಮ್ ॥25॥

ಅಂಗುಲೀಯಕರತ್ನಾನಿ ಸಮಸ್ತಾಷ್ವಂಗುಲೀಷು ಚ ।

25. (ಅದೇ ಸಮುದ್ರರಾಜನು) ಅರ್ಧಚಂದ್ರಾಕಾರದ ಶುಭ್ರವಾದ (ಹಣೆಬೊಟ್ಟನ್ನೂ) ಎಲ್ಲಾ ತೋಳುಗಳಿಗೂ ತೋಳುಬಳೆಗಳನ್ನೂ (ಭುಜಕೀರ್ತಿಗಳನ್ನೂ) ವಿಮಲವಾದ ಎರಡು ಕಾಲುಗೆಜ್ಜೆಗಳನ್ನೂ ಹಾಗೆಯೇ ಅಮೂಲ್ಯವಾದ ಕಂಠಾಭರಣವನ್ನೂ ಎಲ್ಲಾ ಬೆರಳುಗಳಿಗೂ ರತ್ನದ ಉಂಗುರಗಳನ್ನೂ ಕೊಟ್ಟನು.

ವಿಶ್ವಕರ್ಮಾ ದದೌ ತಸ್ಯೈ ಪರಶುಂ ಚಾತಿನಿರ್ಮಲಮ್ ।
ಅಸ್ತ್ರಾಣ್ಯನೇಕರೂಪಾಣಿ ತಥಾಭೇದ್ಯಂ ಚ ದಂಶನಮ್ ॥26॥

ಅಮ್ಲಾನಪಂಕಜಾಂ ಮಾಲಾಂ ಶಿರಸ್ಯುರಸಿ ಚಾಪರಾಮ್ ।
ಅದದತ್ ಜಲಧಿಸ್ತಸ್ಯೈ ಪಂಕಜಂ ಚಾತಿಶೋಭನಮ್ ॥27॥

ಹಿಮವಾನ್ ವಾಹನಂ ಸಿಂಹಂ ರತ್ನಾನಿ ವಿವಿಧಾನಿ ಚ ।
ದದಾವಶೂನ್ಯಂ ಸುರಯಾ ಪಾನಪಾತ್ರಂ ಧನಾಧಿಪಃ ॥28॥

26-28. ವಿಶ್ವಕರ್ಮನೆಂಬ (ದೇವಶಿಲ್ಪಿಯು) ಆಕೆಗೆ ಅತಿನಿರ್ಮಲವಾದ ಕೊಡಲಿಯನ್ನೂ ಹಾಗೂ ಅನೇಕರೀತಿಯಾದ ಅಸ್ತ್ರಾಯುಧಗಳನ್ನೂ ಭೇದಿಸಲು ಬಾರದ ಕವಚವನ್ನೂ ಕೊಟ್ಟನು. ಸಮುದ್ರರಾಜನು ಆಕೆಗೆ ಬಾಡದೆ ಇರುವ ಕಮಲದ ಹೂವುಗಳುಳ್ಳ ಎರಡು ಮಾಲೆಗಳನ್ನು ತುರುಬಿನಲ್ಲಿ ಮುಡಿಯಲು ಹಾಗೂ ವಕ್ಷಸ್ಥಲದಲ್ಲಿ ಧರಿಸಲು ತಕ್ಕಂಥವುಗಳನ್ನು ಕೊಟ್ಟನು. ಮತ್ತು ಅತಿಮುದ್ದಾದ ಒಂದು ತಾವರೆಯನ್ನೂ ನೀಡಿದನು. (ಗಿರಿರಾಜನಾದ) ಹಿಮವಂತನು ವಾಹನವಾಗಿ ಆಕೆಗೆ ಒಂದು ಸಿಂಹವನ್ನೂ (ಅಲಂಕಾರಕ್ಕಾಗಿ) ವಿವಿಧ ರತ್ನಗಳನ್ನೂ ನೀಡಿದನು. ಕುಬೇರನು ಸುರೆ(ಮದ್ಯ)ಯು ಎಂದಿಗೂ ಖಾಲಿಯಾಗದ ಒಂದು ಕುಡಿಯುವ ಪಾತ್ರೆಯನ್ನು ಕೊಟ್ಟನು.

ಶೇಷಶ್ಚ ಸರ್ವನಾಗೇಶೋ ಮಹಾಮಣಿವಿಭೂಷಿತಮ್ ।
ನಾಗಹಾರಂ ದದೌ ತಸ್ಯೈ ಧತ್ತೇ ಯಃ ಪೃಥಿವೀಮಿಮಾಮ್ ॥29॥

ಅನ್ಯೈರಪಿ ಸುರೈರ್ದೇವೀ ಭೂಷಣೈರಾಯುಧೈಸ್ತಥಾ ।
ಸಂಮಾನಿತಾ ನನಾದೋಚ್ಚೈಃ ಸಾಟ್ಟಹಾಸಂ ಮುಹುರ್ಮುಹುಃ ॥30॥

29-30. ಎಲ್ಲಾ ನಾಗಗಳಿಗೂ ಒಡೆಯನಾದ ಹಾಗೂ ಈ ಭೂಮಿಯನ್ನು (ತನ್ನ ಹೆಡೆಗಳಿಂದ) ಧರಿಸಿರುವ ಆದಿಶೇಷನು ಮಹಾಮಣಿಗಳಿಂದ ಅಲಂಕೃತವಾದ ನಾಗರತ್ನಗಳ ಹಾರವೊಂದನ್ನು ಆಕೆಗೆ ಕೊಟ್ಟನು. ಹೀಗೆ ದೇವಿಯು ಬೇರೆಬೇರೆಯ ದೇವತೆಗಳಿಂದಲೂ (ನಾನಾವಿಧವಾದ) ಒಡವೆಗಳು, ಆಯುಧಗಳಿಂದ ಗೌರವಿಸಲ್ಪಟ್ಟವಳಾಗಿ ಮತ್ತೆಮತ್ತೆ ಅಟ್ಟಹಾಸದಿಂದ ಗಟ್ಟಿಯಾಗಿ ನಾದಮಾಡಿದಳು.

ತಸ್ಯಾ ನಾದೇನ ಘೋರೇಣ ಕೃತ್ಸ್ನಮಾಪೂರಿತಂ ನಭಃ ।
ಅಮಾಯತಾತಿಮಹತಾ ಪ್ರತಿಶಬ್ದೋ ಮಹಾನಭೂತ್ ॥31॥

ಚುಕ್ಷುಭುಃ ಸಕಲಾ ಲೋಕಾಃ ಸಮುದ್ರಾಶ್ಚ ಚಕಂಪಿರೇ ।
ಚಚಾಲ ವಸುಧಾ ಚೇಲುಃ ಸಕಲಾಶ್ಚ ಮಹೀಧರಾಃ ॥32॥

ಜಯೇತಿ ದೇವಾಶ್ಚ ಮುದಾ ತಾಮೂಚುಃ ಸಿಂಹವಾಹಿನೀಮ್ ।
ತುಷ್ಟುವುರ್ಮುನಯಶ್ಚೈನಾಂ ಭಕ್ತಿನಮ್ರಾತ್ಮಮೂರ್ತಯಃ ॥33॥

31-33. ಆಕೆಯ ಭಯಂಕರವಾದ ಆ ನಾದದಿಂದ ಇಡಿಯ ಆಕಾಶವೆಲ್ಲವೂ ತುಂಬಿಹೋಯಿತು. ಅತಿ ಹೆಚ್ಚಿನ ರೀತಿಯಿಂದ ಶಬ್ದವಾಯಿತು. ಅದರಿಂದ ಪ್ರತಿಧ್ವನಿಯೂ ದೊಡ್ಡದಾಗಿ ಉಂಟಾಯಿತು. ಇದರಿಂದ ಎಲ್ಲಾ ಲೋಕಗಳೂ ಗಾಬರಿಗೊಂಡವು. ಸಮುದ್ರಗಳು ಅಲ್ಲಾಡಿಹೋದವು. ಭೂಮಿಯು ನಡುಗಿಬಿಟ್ಟಳು. ಪರ್ವತಗಳೆಲ್ಲವೂ ಚಲಿಸಿಬಿಟ್ಟವು. ಆಗ ದೇವತೆಗಳು ಸಿಂಹವಾಹಿನಿಯಾದ ಆಕೆಯನ್ನು ಕುರಿತು ಸಂತೋಷದಿಂದ ಜಯಕಾರಮಾಡಿದರು. ಭಕ್ತಿಯಿಂದ ಬಗ್ಗಿದ ಶರೀರವುಳ್ಳ ಮುನಿಗಳು ಸ್ತೋತ್ರಮಾಡಿದರು.

ದೃಷ್ಟ್ವಾ ಸಮಸ್ತಂ ಸಂಕ್ಷುಬ್ಧಂ ತ್ರೈಲೋಕ್ಯಮಮರಾರಯಃ ।
ಸಂನದ್ಧಾಖಿಲಸೈನ್ಯಾಸ್ತೇ ಸಮುತ್ತಸ್ಥುರುದಾಯುಧಾಃ ॥34॥

ಆಃ ಕಿಮೇತದಿತಿ ಕ್ರೋಧಾದಾಭಾಷ್ಯ ಮಹಿಷಾಸುರಃ ।
ಅಭ್ಯಧಾವತ ತಂ ಶಬ್ದಮಶೇಷೈರಸುರೈರ್ವೃತಃ ॥35॥

34-35. ಮೂರು ಲೋಕಗಳೆಲ್ಲವೂ ಬಹಳವಾಗಿ ಗಲಿಬಿಲಿಯಾದದ್ದನ್ನು ಕಂಡು ದೇವಶತ್ರುಗಳಾದ (ರಾಕ್ಷಸರು) ಎಲ್ಲಾ ಸೈನ್ಯವನ್ನೂ ಸಜ್ಜುಗೊಳಿಸಿಕೊಂಡು ಆಯುಧಗಳನ್ನು ಎತ್ತಿ(ಹಿಡಿದವರಾಗಿ) ಮೇಲೆದ್ದರು. ಮಹಿಷಾಸುರನಾದರೊ, ಆಹಾ ! ಇದೇನು ? ಎಂದು ಕೋಪದಿಂದ ಘರ್ಜಿಸಿದವನಾಗಿ ಎಲ್ಲಾ ರಾಕ್ಷಸರೊಡಗೂಡಿ ಆ ಶಬ್ದವು ಬಂದಲ್ಲಿಗೆ ಎದುರಾಗಿ ಓಡಿಬಂದನು.

ಸ ದದರ್ಶ ತತೋ ದೇವೀಂ ವ್ಯಾಪ್ತಲೋಕತ್ರಯಾಂ ತ್ವಿಷಾ ।
ಪಾದಾಕ್ರಾಂತ್ಯಾ ನತಭುವಂ ಕಿರೀಟೋಲ್ಲಿಖಿತಾಂಬರಾಮ್ ॥36॥

ಕ್ಷೋಭಿತಾಶೇಷಪಾತಾಲಾಂ ಧನುಃಜ್ಯಾನಿಃಸ್ವನೇನ ತಾಮ್ ।
ದಿಶೋ ಭುಜಸಹಸ್ರೇಣ ಸಮಂತಾದ್ ವ್ಯಾಪ್ಯ ಸಂಸ್ಥಿತಾಮ್ ॥37॥

36-37. ಆತನು ಅನಂತರ ಮೂರು ಲೋಕಗಳನ್ನೂ ತನ್ನ ಕಾಂತಿಯಿಂದ ವ್ಯಾಪಿಸಿಕೊಂಡಿದ್ದ ಹಾಗೂ ಹೆಜ್ಜೆಯನ್ನಿಟ್ಟಾಗ ಬಗ್ಗಿ ನಮಸ್ಕರಿಸುವ ಭೂದೇವೀಸಹಿತಳೂ ಆಕಾಶವನ್ನೆಲ್ಲ ಕಿರೀಟದಲ್ಲಿ (ಅಡಗಿಸಿಕೊಂಡು) ಎದ್ದು ಹೊಳೆಯುತ್ತಿರುವವಳೂ ಆದ ದೇವಿಯನ್ನು ಕಂಡನು. ಆಕೆಯು ತನ್ನ ಧನುಸ್ಸಿನ ಟಂಕಾರಧ್ವನಿಯಿಂದ ಇಡಿಯ ಪಾತಾಳಲೋಕವನ್ನೆಲ್ಲ ಕ್ಷೋಭಗೊಳ್ಳುವಂತೆ ಮಾಡಿದವಳಾಗಿಯೂ ಸಾವಿರ ಭುಜಗಳಿಂದ ಎಲ್ಲೆಲ್ಲೂ ವ್ಯಾಪಿಸಿಕೊಂಡು ನೆಲೆಸಿದವಳಾಗಿಯೂ ಕಂಡುಬಂದಳು.

ತತಃ ಪ್ರವವೃತೇ ಯುದ್ಧಂ ತಯಾ ದೇವ್ಯಾ ಸುರದ್ವಿಷಾಮ್ ।
ಶಸ್ತ್ರಾಸ್ತ್ರೈರ್ಬಹುಧಾ ಮುಕ್ತೈರಾದೀಪಿತದಿಗಂತರಮ್ ॥38॥

ಮಹಿಷಾಸುರಸೇನಾನೀಶ್ಚಿಕ್ಷುರಾಖ್ಯೋ ಮಹಾಸುರಃ ।
ಯುಯುಧೇ ಚಾಮರಶ್ಚಾನ್ಯೈಶ್ಚತುರಂಗಬಲಾನ್ವಿತಃ ॥39॥

ರಥಾನಾಮಯುತೈಃ ಷಡ್ಭಿಃ ಉದಗ್ರಾಖ್ಯೋ ಮಹಾಸುರಃ ।
ಅಯುಧ್ಯತಾಯುತಾನಾಂ ಚ ಸಹಸ್ರೇಣ ಮಹಾಹನುಃ ॥40॥

38-40. ಅನಂತರ ಆ ದೇವಿಯೊಡನೆ ರಾಕ್ಷಸರಿಗೆ ಯುದ್ಧವು ಸಂಘಟಿಸಿತು. ಬಹಳವಾದ ಶಸ್ತ್ರಾಸ್ತ್ರಗಳ ಉಪಯೋಗದಿಂದ ದಿಕ್ಕುಗಳೆಲ್ಲವೂ ಹೊಳೆಯುವಂತೆ ಅದು ನಡೆಯಿತು. ಮಹಿಷಾಸುರನ ಸೇನಾಧಿಪತಿಯಾದ ಚಿಕ್ಷುರ ಎಂಬ ಮಹಾರಾಕ್ಷಸನೂ ಮತ್ತೊಬ್ಬ (ಸೇನಾಧಿಪತಿಯಾದ) ಚಾಮರನೆಂಬುವನೂ ಚತುರಂಗಸೈನ್ಯದಿಂದಲೂ ಅರವತ್ತುಸಾವಿರ ಸಂಖ್ಯೆಯ ರಥಗಳಿಂದಲೂ ಕೂಡಿದವರಾಗಿಯೂ ಹಾಗೆಯೇ ಭಯಂಕರವಾದ ಕೋರೆದಾಡೆಗಳುಳ್ಳ ಉದಗ್ರನೆಂಬವನು ಕೋಟಿ (ರಥ)ಗಳಿಂದಲೂ ಕೂಡಿದವನಾಗಿಯೂ ಯುದ್ಧ ಮಾಡಿದರು.

ಪಂಚಾಶದ್ಭಿಶ್ಚ ನಿಯುತೈರಸಿಲೋಮಾ ಮಹಾಸುರಃ ।
ಅಯುತಾನಾಂ ಶತೈಃಷಡ್ಭಿಃ ಬಾಷ್ಕಲೋ ಯುಯುಧೇ ರಣೇ ॥41॥

ಗಜವಾಜಿಸಹಸ್ರೌಘೈರನೇಕೈಃ ಪರಿವಾರಿತಃ ।
ವೃತೋ ರಥಾನಾಂ ಕೋಟ್ಯಾ ಚ ಯುದ್ಧೇ ತಸ್ಮಿನ್ನಯುಧ್ಯತ ॥42॥

41-42. ಐವತ್ತುಲಕ್ಷ ರಥಗಳಿಂದ ಕೂಡಿದ ಮಹಾಸುರನಾದ ಅಸಿಲೋಮನೆಂಬುವನೂ ಅರವತ್ತು ಲಕ್ಷ ಸೈನ್ಯದೊಡನೆ ಬಾಷ್ಕಲನೆಂಬುವನೂ ಆ ಯುದ್ಧದಲ್ಲಿ ಕಾದಾಡಿದರು. ಅದೇ ಬಾಷ್ಕಲನು ಸಾವಿರಾರು ಆನೆ ಕುದುರೆಗಳ ಪರಿವಾರದಿಂದಲೂ ಕೋಟಿ ಸಂಖ್ಯೆಯ ರಥಗಳಿಂದಲೂ ಕೂಡಿಕೊಂಡು ಯುದ್ಧ ಮಾಡಿದನು.

ಬಿಡಾಲಾಖ್ಯೋಽಯುತಾನಾಂ ಚ ಪಂಚಾಶದ್ಭಿರಥಾಯುತೈಃ ।
ಯುಯುಧೇ ಸಂಯುಗೇ ತತ್ರ ರಥಾನಾಂ ಪರಿವಾರಿತಃ ॥43॥

ಅನ್ಯೇ ಚ ತತ್ರಾಯುತಶೋ ರಥನಾಗಹಯೈರ್ವೃತಾಃ ।
ಯುಯುಧುಃ ಸಂಯುಗೇ ದೇವ್ಯಾ ಸಹ ತತ್ರ ಮಹಾಸುರಾಃ ॥44॥

ಕೋಟಿಕೋಟಿ ಸಹಸ್ರೈಸ್ತು ರಥಾನಾಂ ದಂತಿನಾಂ ತಥಾ ।
ಹಯಾನಾಂ ಚ ವೃತೋ ಯುದ್ಧೇ ತತ್ರಾಭೂನ್ಮಹಿಷಾಸುರಃ ॥45॥

ತೋಮರೈರ್ಭಿಂದಿಪಾಲೈಶ್ಚ ಶಕ್ತಿಭಿರ್ಮುಸಲೈಸ್ತಥಾ ।
ಯುಯುಧುಃ ಸಂಯುಗೇ ದೇವ್ಯಾ ಖಡ್ಗೈಃ ಪರಶುಪಟ್ಟಿಶೈಃ ॥46॥

43-46. ಬಿಡಾಲನೆಂಬುವನು ಐದು ಲಕ್ಷ ರಥಗಳಿಂದ ಸುತ್ತುವರೆಯಲ್ಪಟ್ಟವನಾಗಿ ಯುದ್ಧದಲ್ಲಿ ಕಾದಾಡಿದನು. ಇನ್ನೂ ಕೆಲವರು ಮಹಾರಾಕ್ಷಸರು ಹತ್ತುಸಾವಿರಗಟ್ಟಲೆ ರಥಗಳು, ಆನೆಗಳು, ಕುದುರೆಗಳಿಂದ ಪರಿವಾರಿತರಾಗಿ ಯುದ್ಧದಲ್ಲಿ ಪಾಲ್ಗೊಂಡಿದ್ದರು. ತೋಮರ, ಭಿಂದಿಪಾಲ, ಶಕ್ತಿ, ಮುಸಲಗಳೆಂಬ ಹಾಗೂ ಕತ್ತಿ, ಕೊಡಲಿ, ಪಟ್ಟಿಶಗಳೆಂಬ ವಿವಿಧವಾದ (ಆಯುಧಗಳಿಂದ ರಾಕ್ಷಸರುಗಳು) ದೇವಿಯೊಡನೆ ಯುದ್ಧ ಮಾಡಿದರು.

ಕೇಚಿಚ್ಚ ಚಿಕ್ಷಿಪುಃ ಶಕ್ತೀಃ ಕೇಚಿತ್ ಪಾಶಾಂಸ್ತಥಾಪರೇ ।
ದೇವೀಂ ಖಡ್ಗಪ್ರಹಾರೈಸ್ತು ತೇ ತಾಂ ಹಂತುಂ ಪ್ರಚಕ್ರಮುಃ ॥47॥

ಸಾऽಪಿ ದೇವೀ ತತಸ್ತಾನಿ ಶಸ್ತ್ರಾಣ್ಯಸ್ತ್ರಾಣಿ ಚಂಡಿಕಾ ।
ಲೀಲಯೈವ ಪ್ರಚಿಚ್ಛೇದ ನಿಜಶಸ್ತ್ರಾಸ್ತ್ರವರ್ಷಿಣೀ ॥48॥

ಅನಾಯಸ್ತಾನನಾ ದೇವೀ ಸ್ತೂಯಮಾನಾ ಸುರರ್ಷಿಭಿಃ ।
ಮುಮೋಚಾಸುರದೇಹೇಷು ಶಸ್ತ್ರಾಣ್ಯಸ್ತ್ರಾಣಿ ಚೇಶ್ವರೀ ॥49॥

47-49. ಕೆಲವರು ಶಕ್ತ್ಯಾಯುಧಗಳನ್ನೂ ಕೆಲವರು ಪಾಶಗಳನ್ನೂ ಮತ್ತೆ ಕೆಲವರು ಕತ್ತಿಯ ಹೊಡೆತಗಳನ್ನೂ ದೇವಿಯ ಮೇಲೆ ಪ್ರಯೋಗಿಸಿದರು. ಅವರೆಲ್ಲರೂ ದೇವಿಯನ್ನು ಕೊಲ್ಲಲು ಮುನ್ನುಗ್ಗಿದರು. ಅನಂತರ ಆ ಚಂಡಿಕಾ ದೇವಿಯಾದರೊ, ಆ ಶಸ್ತ್ರಾಸ್ತ್ರಗಳೆಲ್ಲವನ್ನೂ ಲೀಲಾಮಾತ್ರದಿಂದ ಕತ್ತರಿಸಿ ಹಾಕಿದಳು. ದೇವರ್ಷಿಗಳಿಂದ ಸ್ತೋತ್ರಮಾಡಲ್ಪಡುತ್ತಿರುವ ಈಶ್ವರಿಯಾದ ದೇವಿಯು ಆಯಾಸವಿಲ್ಲದ ಮುಖದಿಂದ ಕೂಡಿಯೇ ರಾಕ್ಷಸರ ಶರೀರಗಳ ಮೇಲೆ ಶಸ್ತ್ರಾಸ್ತ್ರಗಳನ್ನು ಮಳೆಗರೆದಳು.

ಸೋऽಪಿ ಕ್ರುದ್ಧೋ ಧುತಸಟೋ ದೇವ್ಯಾ ವಾಹನಕೇಸರೀ ।
ಚಚಾರಾಸುರಸೈನ್ಯೇಷು ವನೇಷ್ವಿವ ಹುತಾಶನಃ ॥50॥

ನಿಃಶ್ವಾಸಾನ್ ಮುಮುಚೇ ಯಾಂಶ್ಚ ಯುಧ್ಯಮಾನಾ ರಣೇಂಬಿಕಾ ।
ತ ಏವ ಸದ್ಯಃ ಸಂಭೂತಾಃ ಗಣಾಃ ಶತಸಹಸ್ರಶಃ ॥51॥

ಯುಯುಧುಸ್ತೇ ಪರಶುಭಿರ್ಭಿಂದಿಪಾಲಾಸಿಪಟ್ಟಿಶೈಃ ।
ನಾಶಯನ್ತೋಽಸುರಗಣಾನ್ ದೇವೀಶಕ್ತ್ಯುಪಬೃಂಹಿತಾಃ ॥52॥

ಅವಾದಯಂತ ಪಟಹಾನ್ ಗಣಾಃ ಶಂಖಾಂಸ್ತಥಾಪರೇ ।
ಮೃದಂಗಾಂಶ್ಚ ತಥೈವಾನ್ಯೇ ತಸ್ಮಿನ್ ಯುದ್ಧಮಹೋತ್ಸವೇ ॥53॥

50-53. ದೇವಿಯ ವಾಹನಶ್ರೇಷ್ಠವಾದ ಸಿಂಹವು ಕೂಡ ಕೋಪಗೊಂಡು ತನ್ನ ಕೇಸರವನ್ನು ಕೊಡವಿಕೊಂಡು-ಕಾಡಿನಲ್ಲಿ ಬೆಂಕಿಯಂತೆ - ರಾಕ್ಷಸರ ಸೈನ್ಯದಲ್ಲೆಲ್ಲ ಸಂಚರಿಸುತ್ತಿತ್ತು. ದೇವಿಯು ಯುದ್ಧಮಾಡುತ್ತಾ ರಣಾಂಗಣದಲ್ಲಿ ಬಿಡುತ್ತಿದ್ದ ನಿಟ್ಟುಸಿರುಗಳು ಕೂಡಲೆ ಸಹಸ್ರಾರು ಗಣದೇವತೆಗಳಾಗಿ ಹೊರತೋರಿಕೊಂಡರು. ಆ ದೇವಿಯರು ಪರಶು, ಭಿಂದಿಪಾಲ, ಕತ್ತಿ, ಪಟ್ಟಿಶ - ಮುಂತಾದ ಆಯುಧಗಳಿಂದ ರಾಕ್ಷಸರೊಡನೆ ಯುದ್ಧಮಾಡುತ್ತಿದ್ದರು. ಹಾಗೂ ದೇವಿಯ ಶಕ್ತಿಯಿಂದ ಮೈಗೂಡಿದವರಾಗಿ ಅಸುರರನ್ನು ನಾಶಗೊಳಿಸುತ್ತಾ ಪಟಹ, ಶಂಖ, ಮೃದಂಗ-ಮುಂತಾದ ವಾದ್ಯಗಳನ್ನು ಬಾರಿಸುತ್ತಾ ಆ ಯುದ್ಧ ಸಮಾರಂಭದಲ್ಲಿ ಭಾಗವಹಿಸಿದ್ದರು.

ತತೋ ದೇವೀ ತ್ರಿಶೂಲೇನ ಗದಯಾ ಶಕ್ತಿವೃಷ್ಟಿಭಿಃ ।
ಖಡ್ಗಾದಿಭಿಶ್ಚ ಶತಶೋ ನಿಜಘಾನ ಮಹಾಸುರಾನ್ ॥54॥

ಪಾತಯಾಮಾಸ ಚೈವಾನ್ಯಾನ್ ಘಂಟಾಸ್ವನವಿಮೋಹಿತಾನ್ ।
ಅಸುರಾನ್ ಭುವಿ ಪಾಶೇನ ಬದ್ಧ್ವಾ ಚಾನ್ಯಾನಕರ್ಷಯತ್ ॥55॥

54-55. ಅನಂತರ ದೇವಿಯು ತ್ರಿಶೂಲ, ಗದೆ, ಶಕ್ತಿ-ಮುಂತಾದ ಹಾಗೂ ಕತ್ತಿಯೇ ಮೊದಲಾದ ಆಯುಧಗಳ (ಹೊಡೆತಗಳ) ಮಳೆಯಿಂದ ಮಹಾರಾಕ್ಷಸರುಗಳನ್ನು ಕೊಲ್ಲುತ್ತಿದ್ದಳು. ಘಂಟಾನಾದದಿಂದ ಮೂರ್ಛಿತರಾದ ಕೆಲವರನ್ನು ಕೆಡವಿದಳು. ಮತ್ತೆ ಕೆಲವರನ್ನು ಹಗ್ಗದಿಂದ ಕಟ್ಟಿ ನೆಲದಮೇಲೆ ಎಳೆದಾಡಿದಳು.

ಕೇಚಿದ್ ದ್ವಿಧಾ ಕೃತಾಸ್ತೀಕ್ಷ್ಣೈಃ ಖಡ್ಗಪಾತೈಸ್ತಥಾಪರೇ ।
ವಿಪೋಥಿತಾ ನಿಪಾತೇನ ಗದಯಾ ಭುವಿ ಶೇರತೇ ॥56॥

ವೇಮುಶ್ಚ ಕೇಚಿತ್ ರುಧಿರಂ ಮುಸಲೇನ ಭೃಶಂ ಹತಾಃ ।
ಕೇಚಿನ್ನಿಪತಿತಾ ಭೂಮೌ ಭಿನ್ನಾಃ ಶೂಲೇನ ವಕ್ಷಸಿ ॥57॥

ನಿರಂತರಾಃ ಶರೌಘೇಣ ಕೃತಾಃ ಕೇಚಿದ್ರಣಾಜಿರೇ ।
ಸ್ಯೇನಾನುಕಾರಿಣಃ ಪ್ರಾಣಾನ್ ಮುಮುಚುಸ್ತ್ರಿದಶಾರ್ದನಾಃ ॥58॥

56-58. ಕೆಲವರು ಹರಿತವಾದ ಆಯುಧಗಳಿಂದ ಎರಡಾಗಿ ಸೀಳಲ್ಪಟ್ಟರು. ಮತ್ತೆ ಕೆಲವರು ಕತ್ತಿಯ ಏಟುಗಳಿಂದ ಬಿದ್ದುಹೋದರು. ಗದೆಯಿಂದ ಚಚ್ಚಲ್ಪಟ್ಟ ಕೆಲವರು ನೆಲದಮೇಲೆ ಮಲಗಿದರು. ಮುಸಲ (ಒನಕೆ)ಯಿಂದ ಬಹಳವಾಗಿ ಹೊಡೆಯಲ್ಪಟ್ಟ ಕೆಲವರು ರಕ್ತವನ್ನು ಕಾರಿದರು. ಮತ್ತೆ ಕೆಲವರು ಎದೆಯಲ್ಲಿ ಶೂಲದಿಂದ ತಿವಿಯಲ್ಪಟ್ಟವರಾಗಿ ನೆಲದಮೇಲೆ ಬಿದ್ದರು. ಕೆಲವರು ಯುದ್ಧದಲ್ಲಿ ಬಾಣಗಳ ಸುರಿಮಳೆಯಿಂದ (ಉಸಿರಾಡಲೂ ಜಾಗವಿಲ್ಲದಂತೆ) ಮಾಡಲ್ಪಟ್ಟರು. ಹೀಗೆ ದೇವಶತ್ರುಗಳಾದ ರಾಕ್ಷಸರು ಗಿಡಗಗಳು ಹಾರುವಂತೆ ತಮ್ಮ ಪ್ರಾಣಪಕ್ಷಿಗಳನ್ನು ಶರೀರದಿಂದ ಮೇಲುಗಡೆಗೆ ಹಾರಿಸಿಕೊಂಡು (ಮೃತರಾದರು).

ಕೇಷಾಂಚಿದ್ಬಾಹವಶ್ಛಿನ್ನಾಶ್ಛಿನ್ನಗ್ರೀವಾಸ್ತಥಾಪರೇ ।
ಶಿರಾಂಸಿ ಪೇತುರನ್ಯೇಷಾಮನ್ಯೇ ಮಧ್ಯೇ ವಿದಾರಿತಾಃ ॥59॥

ವಿಚ್ಛಿನ್ನಜಂಘಾಸ್ತ್ವಪರೇ ಪೇತುರುರ್ವ್ಯಾಂ ಮಹಾಸುರಾಃ ।
ಏಕಬಾಹ್ವಕ್ಷಿಚರಣಾಃ ಕೇಚಿದ್ದೇವ್ಯಾ ದ್ವಿಧಾ ಕೃತಾಃ ॥60॥

59-60. ಕೆಲವರ ತೋಳುಗಳು (ಆ ಯುದ್ಧದಲ್ಲಿ) ಕತ್ತರಿಸಲ್ಪಟ್ಟವು. ಕೆಲವರಿಗೆ ಕುತ್ತಿಗೆಯು ತುಂಡಾಯಿತು. ಮತ್ತೆ ಕೆಲವರ ತಲೆಗಳೇ ಬಿದ್ದು ಹೋದವು. ಇನ್ನು ಕೆಲವರು ನಡುಭಾಗದಲ್ಲಿ ಸೀಳಲ್ಪಟ್ಟರು. ಕೆಲವು ಭಾರಿಯ ರಾಕ್ಷಸರು ತೊಡೆಗಳನ್ನು ಮುರಿದುಕೊಂಡು ಭೂಮಿಯಲ್ಲಿ ಬಿದ್ದರು. ಕೆಲವರು ಒಂಟಿತೋಳು, ಕಣ್ಣು, ಕಾಲುಗಳುಳ್ಳವರಾಗಿ ಮಾಡಲ್ಪಟ್ಟರು. ಕೆಲವರು ದೇವಿಯಿಂದ ಎರಡು ಹೋಳಾಗಿ ಮಾಡಲ್ಪಟ್ಟರು.

ಛಿನ್ನೇಽಪಿ ಚಾನ್ಯೇ ಶಿರಸಿ ಪತಿತಾಃ ಪುನರುತ್ಥಿತಾಃ ।
ಕಬಂಧಾ ಯುಯುಧುರ್ದೇವ್ಯಾ ಗೃಹೀತಪರಮಾಯುಧಾಃ ॥61॥

ನನೃತುಶ್ಚಾಪರೇ ತತ್ರ ಯುದ್ಧೇ ತೂರ್ಯಲಯಾಶ್ರಿತಾಃ ।
ಕಬಂಧಾಶ್ಛಿನ್ನಶಿರಸಃ ಖಡ್ಗಶಕ್ತ್ಯೃಷ್ಟಿಪಾಣಯಃ ।
ತಿಷ್ಠ ತಿಷ್ಠೇತಿ ಭಾಷಂತೋ ದೇವೀಮನ್ಯೇ ಮಹಾಸುರಾಃ ॥62॥

61-62. ಬೇರೆಯ ಕೆಲವರು ತಲೆಯು ತುಂಡಾಗಿ ಹೋಗಿದ್ದರೂ ಬಿದ್ದವರು ಮೇಲೆದ್ದರು. (ಅವರ) ಮುಂಡಗಳು ಒಳ್ಳೆಯ ಆಯುಧಗಳನ್ನು ಹಿಡಿದು ದೇವಿಯೊಡನೆ ಯುದ್ಧಮಾಡಿದವು. ಮತ್ತೆ ಕೆಲವು ಆ ಯುದ್ಧದಲ್ಲಿ ವಾದ್ಯಗಳ ಧ್ವನಿಗೆ ಅನುಗುಣವಾಗಿ

ಲಯಕ್ಕೆ ತಕ್ಕಂತೆ ಕುಣಿದಾಡಿದವು. ಮತ್ತೆ ಕೆಲವು ಕಬಂಧಗಳು ರುಂಡವನ್ನು ಕಳೆದುಕೊಂಡವುಗಳಾಗಿದ್ದರೂ ಖಡ್ಗ-ಶಕ್ತಿ-ಮುಂತಾದ ಆಯುಧಗಳನ್ನು ಹಿಡಿದವುಗಳಾಗಿ ದೇವಿಯನ್ನು ನಿಲ್ಲು, ನಿಲ್ಲು- ಎಂದು ಕೂಗುತ್ತಿದ್ದವು.

**ಪಾತಿತೈ ರಥನಾಗಾಶ್ವೈರಸುರೈಶ್ಚ ವಸುಂಧರಾ ।**
**ಅಗಮ್ಯಾ ಸಾಽಭವತ್ ತತ್ರ ಯತ್ರಾಭೂತ್ ಸ ಮಹಾರಣಃ ॥63॥**

**ಶೋಣಿತೌಘಾ ಮಹಾನದ್ಯಃ ಸದ್ಯಸ್ತತ್ರ ಪ್ರಸುಸ್ರುವುಃ ।**
**ಮಧ್ಯೇ ಚಾಸುರಸೈನ್ಯಸ್ಯ ವಾರಣಾಸುರವಾಜಿನಾಮ್ ॥64॥**

63-64. ಎಲ್ಲಿ ಆ ಮಹಾಯುದ್ಧವು ನಡೆಯಿತೋ ಅಲ್ಲಿ ಭೂಮಿಯು ರಥ, ಆನೆ, ಕುದುರೆಗಳ (ಶವಗಳಿಂದ ತುಂಬಿಹೋಗಿ) ಹೋಗುವದಕ್ಕೆ ಅಸಾಧ್ಯವಾಗಿತ್ತು. ರಕ್ತಪ್ರವಾಹ ತುಂಬಿದ ಮಹಾನದಿಗಳು ಆ ಆನೆಕುದುರೆರಾಕ್ಷಸರ ಸೈನ್ಯದ ನಡುವೆ ತತ್ಕಾಲಕ್ಕೆ ಅಲ್ಲಿ ಹರಿದವು.

**ಕ್ಷಣೇನ ತನ್ಮಹಾಸೈನ್ಯಮಸುರಾಣಾಂ ತಥಾಂಬಿಕಾ ।**
**ನಿನ್ಯೇ ಕ್ಷಯಂ ಯಥಾ ವಹ್ನಿಸ್ತೃಣದಾರು ಮಹಾಚಯಮ್ ॥65॥**

**ಸ ಚ ಸಿಂಹೋ ಮಹಾನಾದಮುತ್ಸೃಜನ್ ಧೃತಕೇಸರಃ ।**
**ಶರೀರೇಭ್ಯೋಽಮರಾರೀಣಾಂ ಅಸೂನಿವ ವಿಚಿನ್ವತಿ ॥66॥**

**ದೇವ್ಯಾ ಗಣೈಶ್ಚ ತೈಸ್ತತ್ರ ಕೃತಂ ಯುದ್ಧಂ ಮಹಾಸುರೈಃ ।**
**ಯಥೈಷಾಂ ತುತುಷುರ್ದೇವಾಃ ಪುಷ್ಪವೃಷ್ಟಿಮುಚೋ ದಿವಿ ॥67॥**

65-67. ಅಂಬಿಕೆಯು ಕ್ಷಣಮಾತ್ರದಲ್ಲಿ ಆ ಅಸುರರ ಮಹಾಸೈನ್ಯವನ್ನು-ಬೆಂಕಿಯು ಹುಲ್ಲುಕಟ್ಟಿಗೆಗಳ ದೊಡ್ಡರಾಶಿಯನ್ನು ಹೇಗೋ ಹಾಗೆ, ನಾಶಮಾಡಿಬಿಟ್ಟಳು. ಆ ಸಿಂಹವು ಕೂಡ ತನ್ನ ಮೀಸೆಗಳನ್ನು ಕೊಡವುತ್ತಾ ರಾಕ್ಷಸರ ಶರೀರಗಳಲ್ಲಿ ಪ್ರಾಣಗಳಿವೆಯೆ, ಎಂಬುದನ್ನು ಹುಡುಕುತ್ತಿದೆಯೊ ? ಎಂಬಂತೆ ಸುತ್ತಾಡುತ್ತಾ ಮಹಾಘರ್ಜನೆಯನ್ನು ಮಾಡಿತು. ದೇವಿಯೊಡನೆ ಹೀಗೆ ಆ ಮಹಾರಾಕ್ಷಸರ ಗಣಗಳು ಅಲ್ಲಿ ಕಾದಾಡಿದರು. (ಇದನ್ನು ಕಂಡ) ದೇವತೆಗಳು ಆಕಾಶದಿಂದ ಹೂಮಳೆಗರೆದವರಾದರು; ಮತ್ತು ಸಂತುಷ್ಟರಾದರು.

ಇತಿ ಶ್ರೀ ಮಾರ್ಕಂಡೇಯಪುರಾಣೇ ದೇವೀಮಹಾತ್ಮ್ಯೇ
ದ್ವಿತೀಯೋಽಧ್ಯಾಯಃ

# ಮೂರನೆಯ ಅಧ್ಯಾಯ

ಧ್ಯಾನಮ್ –

ಉದ್ಯದ್ಭಾನುಸಹಸ್ರಕಾಂತಿಮರುಣಕ್ಷೌಮಾಂ ಶಿರೋಮಾಲಿಕಾಂ
ರಕ್ತಾಲಿಪ್ತ ಪಯೋಧರಾಂ ಜಪವಟೀಂ ವಿದ್ಯಾಮಭೀತಿಂ ವರಮ್ ।
ಹಸ್ತಾಬ್ಜೈರ್ದಧತೀಂ ತ್ರಿನೇತ್ರ ವಿಲಸದ್ವಕ್ತ್ರಾರವಿಂದಶ್ರಿಯಂ
ದೇವೀಂ ಬದ್ಧಹಿಮಾಂಶುರತ್ನಮಕುಟಾಂ ವಂದೇಽರವಿಂದಸ್ಥಿತಾಮ್ ॥

1. ಉದಯಿಸುತ್ತಿರುವ ಸಾವಿರ ಸೂರ್ಯರ ಕಾಂತಿಗೆ ಸಮಾನವಾದ ಕೆಂಪುರೇಷ್ಮೆಯ ವಸ್ತ್ರವನ್ನುಟ್ಟಿರುವ, (ರಾಕ್ಷಸರ) ಶಿರಸ್ಸುಗಳನ್ನೇ ಮಾಲೆಯಾಗಿ ಧರಿಸಿದ್ದರಿಂದ ಕೆಂಪಾದ ಸ್ತನಗಳುಳ್ಳವಳಾದ, ಜಪಮಾಲೆ, ವಿದ್ಯಾಮುದ್ರೆ, ಅಭಯಮುದ್ರೆ, ವರದಾನಮುದ್ರೆಗಳನ್ನು ಕಮಲದಂತಿರುವ ಕೈಗಳಿಂದ ಧರಿಸಿರುವ, ಮೂರುಕಣ್ಣುಗಳಿಂದ ಅಲಂಕೃತವಾದ ಮುಖಾರವಿಂದದ ಕಾಂತಿಯುಳ್ಳ, ಚಂದ್ರನೊಡಗೂಡಿದ ರತ್ನಕಿರೀಟಧಾರಿಣಿಯಾದ ಕಮಲದಲ್ಲಿ ಕುಳಿತಿರುವಳಾದ ದೇವಿಯನ್ನು ನಮಸ್ಕರಿಸುತ್ತೇನೆ.

ಓಂ ಋಷಿರುವಾಚ –

ನಿಹನ್ಯಮಾನಂ ತತ್ಸೈನ್ಯಮವಲೋಕ್ಯ ಮಹಾಸುರಃ ।
ಸೇನಾನೀಶ್ಚಿಕ್ಷುರಃ ಕೋಪಾದ್ ಯಯೌ ಯೋದ್ಧುಮಥಾಂಬಿಕಾಮ್ ॥1॥

ಸ ದೇವೀಂ ಶರವರ್ಷೇಣ ವವರ್ಷ ಸಮರೇಽಸುರಃ .
ಯಥಾ ಮೇರುಗಿರೇಃ ಶೃಂಗಂ ತೋಯವರ್ಷೇಣ ತೋಯದಃ ॥2॥

1-2. ಋಷಿಯಿಂತೆಂದನು : ಮಹಾಸುರನೂ ಸೇನಾಪತಿಯೂ ಆದ ಚಿಕ್ಷುರನು ಕೊಲ್ಲಲ್ಪಡುತ್ತಿರುವ ಆ ಸೈನ್ಯವನ್ನು ನೋಡಿ ಕೋಪದಿಂದ ದೇವಿಯೊಡನೆ ಯುದ್ಧಮಾಡಲು ಹೊರಟನು. ಆ ಯುದ್ಧದಲ್ಲಿ ಬಾಣಗಳ ಮಳೆಯಿಂದ ಅವನು - ಹೇಗೆ ದೊಡ್ಡ ಮೇಘವು ಧಾರಾಕಾರವಾದ ಮಳೆಯಿಂದ ಮೇರುಗಿರಿಯನ್ನು ತೋಯಿಸುವುದೋ ಹಾಗೆ-ಮಳೆಗರೆದನು.

ತಸ್ಯ ಛಿತ್ತ್ವಾ ತತೋ ದೇವೀ ಲೀಲಯೈವ ಶರೋತ್ಕರಾನ್ ।
ಜಘಾನ ತುರಗಾನ್ ಬಾಣೈರ್ಯಂತಾರಂ ಚೈವ ವಾಜಿನಾಮ್ ॥3॥

ಚಿಚ್ಛೇದ ಚ ಧನುಃ ಸದ್ಯೋ ಧ್ವಜಂ ಚಾತಿಮುಚ್ಛ್ರಿತಮ್ ।
ವಿವ್ಯಾಧ ಚೈವ ಗಾತ್ರೇಷು ಛಿನ್ನಧನ್ವಾನಮಾಶುಗೈಃ ॥4॥

3-4. ಅನಂತರ ದೇವಿಯು ಲೀಲಾಮಾತ್ರದಿಂದ ಆತನ ಬಾಣಗಳನ್ನು ತುಂಡುಮಾಡಿ ತನ್ನ ಬಾಣಗಳಿಂದ ಅವನ (ರಥದ) ಕುದುರೆಗಳನ್ನೂ ಅವುಗಳನ್ನು ನಡೆಯಿಸುತ್ತಿದ್ದ ಸಾರಥಿಯನ್ನೂ ಹೊಡೆದಳು. ಅತಿ ಎತ್ತರದಲ್ಲಿದ್ದ ಧ್ವಜವನ್ನೂ ಅವನ ಕೈಯಲ್ಲಿದ್ದ ಬಿಲ್ಲನ್ನೂ ಕತ್ತರಿಸಿದಳು. ಹೀಗೆ ಕತ್ತರಿಸಲ್ಪಟ್ಟ ಬಿಲ್ಲುಳ್ಳ ಆತನನ್ನು ವೇಗವಾದ ಬಾಣಗಳಿಂದ (ದೇಹದಲ್ಲೆಲ್ಲ ನಾಟಿಕೊಳ್ಳುವಂತೆ) ಹೊಡೆದಳು.

ಸ ಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ಅಭ್ಯಧಾವತ ತಾಂ ದೇವೀಂ ಖಡ್ಗ ಚರ್ಮಧರೋಽಸುರಃ ॥5॥

ಸಿಂಹಮಾಹತ್ಯ ಖಡ್ಗೇನ ತೀಕ್ಷ್ಣಧಾರೇಣ ಮೂರ್ಧನಿ ।
ಆಜಘಾನ ಭುಜೇ ಸವ್ಯೇ ದೇವೀಮಪ್ಯತಿವೇಗವಾನ್ ॥6॥

5-6. ಕುದುರೆ, ಸಾರಥಿ, ಬಿಲ್ಲು – ಎಲ್ಲವನ್ನೂ ಕಳೆದುಕೊಂಡ ಆತನು ಕತ್ತಿ-ಗುರಾಣಿಗಳನ್ನು ಹಿಡಿದು ದೇವಿಯಮೇಲೆ ಮುನ್ನುಗ್ಗಿ ಬಂದನು. ಮತ್ತು ಹರಿತವಾದ ಅಲುಗಿನ ಕತ್ತಿಯಿಂದ ಸಿಂಹದ ತಲೆಯಮೇಲೆ ಹೊಡೆದು ಅತಿ ವೇಗಶಾಲಿಯಾದ ಆತನು ದೇವಿಯ ಎಡಭುಜಕ್ಕೂ ಹೊಡೆದನು.

ತಸ್ಯಾಃ ಖಡ್ಗೋ ಭುಜಂ ಪ್ರಾಪ್ಯ ಪಫಾಲ ನೃಪನಂದನ ।
ತತೋ ಜಗ್ರಾಹ ಶೂಲಂ ಸ ಕೋಪಾದರುಣಲೋಚನಃ ॥7॥

ಚಿಕ್ಷೇಪ ಚ ತತಸ್ತತ್ತು ಭದ್ರಕಾಲ್ಯಾಂ ಮಹಾಸುರಃ ।
ಜಾಜ್ವಲ್ಯಮಾನಂ ತೇಜೋಭೀ ರವಿಬಿಂಬಮಿವಾಂಬರಾತ್ ॥8॥

ದೃಷ್ಟ್ವಾ ತದಾಪತತ್ ಶೂಲಂ ದೇವೀ ಶೂಲಮಮುಂಚತ ।
ತಚ್ಛೂಲಂ ಶತಧಾ ತೇನ ನೀತಂ ಸ ಚ ಮಹಾಸುರಃ ॥9॥

7-9. ಎಲೈ ರಾಜಪುತ್ರನೆ, ಆ ಕತ್ತಿಯು ದೇವಿಯ ಭುಜವನ್ನು ಮುಟ್ಟಿ ಬಿದ್ದುಹೋಯಿತು. ಅನಂತರ ಕೋಪದಿಂದ ಕೆಂಪಾದ ಕಣ್ಣುಳ್ಳ ಆತನು ಶೂಲವನ್ನು ಹಿಡಿದನು. ಅನಂತರ ಆ ಮಹಾಸುರನು ಆಕಾಶದಲ್ಲಿನ ತೇಜೋಮಯವಾದ ಸೂರ್ಯಬಿಂಬದಂತೆ ಬೆಳಗುತ್ತಿರುವ ಅದನ್ನು ಭದ್ರಕಾಳಿಯ ಮೇಲೆ ಎಸೆದನು. ಮೇಲೆ ಬೀಳುತ್ತಿರುವ ಆ ಶೂಲವನ್ನು ದೇವಿಯು ಕಂಡವಳಾಗಿ ತನ್ನ ಶೂಲವನ್ನು ಪ್ರಯೋಗಿಸಿದಳು. ಅದು ರಾಕ್ಷಸನ ಶೂಲವನ್ನು ನೂರಾಗಿ ತುಂಡುಮಾಡಿದ್ದರ ಜೊತೆಗೆ ಅವನನ್ನೂ ನೂರು ಪಾಲಾಗಿ ಸೀಳಿಬಿಟ್ಟಿತು.

ಹತೇ ತಸ್ಮಿನ್ ಮಹಾವೀರ್ಯೇ ಮಹಿಷಸ್ಯ ಚಮೂಪತೌ ।
ಆಜಗಾಮ ಗಜಾರೂಢಶ್ಚಾಮರಃ ತ್ರಿದಶಾರ್ದನಃ ॥10॥

ಸೋಽಪಿ ಶಕ್ತಿಂ ಮುಮೋಚಾಥ ದೇವ್ಯಾಸ್ತಾಮಂಬಿಕಾ ದ್ರುತಮ್ ।
ಹುಂಕಾರಾಭಿಹತಾಂ ಭೂಮೌ ಪಾತಯಾಮಾಸ ನಿಷ್ಪ್ರಭಾಮ್ ॥11॥

ಭಗ್ನಾಂ ಶಕ್ತಿಂ ನಿಪತಿತಾಂ ದೃಷ್ಟ್ವಾ ಕ್ರೋಧಸಮನ್ವಿತಃ ।
ಚಿಕ್ಷೇಪ ಚಾಮರಃ ಶೂಲಂ ಬಾಣೈಸ್ತದಪಿ ಸಾಽಚ್ಛಿನತ್ ॥12॥

10-12. ಮಹಾಬಲಶಾಲಿಯಾದ– ಮಹಿಷಾಸುರನ ಸೈನ್ಯಾಧಿಪತಿಯಾದ ಆತನು ನಾಶವಾಗಲಾಗಿ, ದೇವತೆಗಳನ್ನು ಹಿಂಸಿಸುವ ಚಾಮರನೆಂಬ (ರಾಕ್ಷಸನು) ಆನೆಯನ್ನೇರಿದವನಾಗಿ ಬಂದನು. ಅವನು ಕೂಡ ದೇವಿಯ ಕಡೆಗೆ ಶಕ್ತ್ಯಾಯುಧವನ್ನು ಬಿಟ್ಟನು. ಅಂಬಿಕೆಯು ಬೇಗನೆ ಹುಂಕಾರದಿಂದ ಅದನ್ನು ಕಾಂತಿಹೀನವಾಗಿ ಮಾಡಿದವಳಾಗಿ ನೆಲದಲ್ಲಿ ಕೆಡವಿಬಿಟ್ಟಳು. ಮುರಿದು ಬಿದ್ದುಹೋದ ಶಕ್ತಿಯನ್ನು ಕಂಡು ಕೋಪಗೊಂಡ ಚಾಮರನು ಶೂಲವನ್ನು ಎಸೆದನು. ಆಕೆಯು ಅದನ್ನು ಬಾಣಗಳಿಂದ ತುಂಡರಿಸಿದಳು.

ತತಃ ಸಿಂಹಃ ಸಮುತ್ಪತ್ಯ ಗಜಕುಂಭಾಂತರೇ ಸ್ಥಿತಃ ।
ಬಾಹುಯುದ್ಧೇನ ಯುಯುಧೇ ತೇನೋಚ್ಚೈಸ್ತ್ರಿದಶಾರಿಣಾ ॥13॥

ಯುಧ್ಯಮಾನೌ ತತಸ್ತೌ ತು ತಸ್ಮಾನ್ನಾಗಾನ್ಮಹೀಂ ಗತೌ ।
ಯುಯುಧಾತೇಽತಿಸಂರಬ್ಧೌ ಪ್ರಹಾರೈರತಿದಾರುಣೈಃ ॥14॥

ತತೋ ವೇಗಾತ್ ಖಮುತ್ಪತ್ಯ ನಿಪತ್ಯ ಚ ಮೃಗಾರಿಣಾ ।
ಕರಪ್ರಹಾರೇಣ ಶಿರಃ ಚಾಮರಸ್ಯ ಪೃಥಕ್ಕೃತಮ್ ॥15॥

13-15. ಅನಂತರ ಸಿಂಹವು ನೆಗೆದು (ಆ ರಾಕ್ಷಸನು ಏರಿದ್ದ) ಆನೆಯ ಕುಂಭಸ್ಥಲವನ್ನು ಏರಿಬಿಟ್ಟಿತು. ದೇವಿಯು ಆ ಅಮರಾರಿಯಾದ ಅವನೊಡನೆ ಬಾಹುಗಳಿಂದ ಯುದ್ಧವನ್ನಾರಂಭಿಸಿದಳು. ಹೀಗೆ ಯುದ್ಧವನ್ನು ಮಾಡುತ್ತಾ ಅವರಿಬ್ಬರೂ ಅನಂತರ ನೆಲದಮೇಲೆಕ್ಕೆ ಬಂದರು. ಅತಿಬಲದರ್ಪಿತರಾಗಿ ಇಬ್ಬರೂ ಹೆಚ್ಚು ಭಯಂಕರವಾದ ಹೊಡೆತಗಳಿಂದ ಕಾದಾಡಿದರು. ಅನಂತರ (ದೇವಿಯು) ಬೇಗನೆ ಸಿಂಹದೊಡನೆ ಆಕಾಶಕ್ಕೆ ನೆಗೆದವಳಾಗಿ ಕೈ (ಗುದ್ದಿನ) ಏಟಿನಿಂದ ಚಾಮರನ ತಲೆಯನ್ನು (ಶರೀರದಿಂದ) ಬೇರೆಯಾಗಿ ಮಾಡಿಬಿಟ್ಟಳು.

ಉದಗ್ರಶ್ಚ ರಣೇ ದೇವ್ಯಾ ಶಿಲಾವೃಕ್ಷಾದಿಭಿರ್ಹತಃ ।
ದಂತಮುಷ್ಟಿತಲೈಶ್ಚೈವ ಕರಾಲಶ್ಚ ನಿಪಾತಿತಃ ॥16॥

ದೇವೀ ಕ್ರುದ್ಧಾ ಗದಾಪಾತೈಶ್ಚೂರ್ಣಯಾಮಾಸ ಚೋದ್ಧತಮ್ ।
ಬಾಷ್ಕಲಂ ಭಿಂದಿಪಾಲೇನ ಬಾಣೈಸ್ತಾಮ್ರಂ ತಥಾಂಧಕಮ್ ॥17॥

ಉಗ್ರಾಸ್ಯಮುಗ್ರವೀರ್ಯಂ ಚ ತಥೈವ ಚ ಮಹಾಹನುಮ್ ।
ತ್ರಿನೇತ್ರಾ ಚ ತ್ರಿಶೂಲೇನ ಜಘಾನ ಪರಮೇಶ್ವರೀ ॥18॥

ಬಿಡಾಲಸ್ಯಾಸಿನಾ ಕಾಯಾತ್ ಪಾತಯಾಮಾಸ ವೈ ಶಿರಃ ।
ದುರ್ಧರಂ ದುರ್ಮುಖಂ ಚೋಭೌ ಶರೈರ್ನಿನ್ಯೇ ಯಮಕ್ಷಯಮ್ ॥19॥

16-19. ಉದಗ್ರನೆಂಬವನು ಯುದ್ಧದಲ್ಲಿ ದೇವಿಯಿಂದ ಕಲ್ಲು-ಮರ-ಮುಂತಾದವುಗಳ ಪ್ರಹಾರದಿಂದ ನಾಶಹೊಂದಿದನು. ಕರಾಲನು ಗುದ್ದುಗಳಿಂದಲೂ ಹಲ್ಲುಗಳಿಂದ ಕಚ್ಚುವದರಿಂದಲೂ ಸತ್ತನು. ಉದ್ಧತನೆಂಬವನನ್ನು ದೇವಿಯು ಸಿಟ್ಟಿನಿಂದ ಗದೆಯ ಹೊಡೆತದಿಂದ ಪುಡಿಮಾಡಿಬಿಟ್ಟಳು. ಹಾಗೆಯೇ ಬಾಷ್ಕಲನೆಂಬವನನ್ನು ಭಿಂದಿಪಾಲನೆಂಬ ಆಯುಧದಿಂದಲೂ ತಾಮ್ರ, ಅಂಧಕನೆಂಬವನನ್ನು ಬಾಣಗಳಿಂದಲೂ ಉಗ್ರಾಸ್ಯ, ಉಗ್ರವೀರ್ಯ, ಮಹಾಹನು– ಎಂಬ ರಾಕ್ಷಸರನ್ನು ಮುಕ್ಕಣ್ಣೆಯಾದ ಪರಮೇಶ್ವರಿಯು ತ್ರಿಶೂಲದಿಂದಲೂ ಕೊಂದುಹಾಕಿದಳು. ಬಿಡಾಲನೆಂಬವನ ತಲೆಯನ್ನು ಕತ್ತಿಯಿಂದ ಕತ್ತರಿಸಿ ಶರೀರದಿಂದ ಕೆಡವಿಬಿಟ್ಟಳು. ದುರ್ಧರ-ದುರ್ಮುಖರಿಬ್ಬರನ್ನೂ ಬಾಣಗಳಿಂದ ಯಮಪುರಿಗೆ ಕಳುಹಿಸಿಬಿಟ್ಟಳು.

ಏವಂ ಸಂಕ್ಷೀಯಮಾಣೇ ತು ಸ್ವಸೈನ್ಯೇ ಮಹಿಷಾಸುರಃ ।
ಮಾಹಿಷೇಣ ಸ್ವರೂಪೇಣ ತ್ರಾಸಯಾಮಾಸ ತಾನ್ ಗಣಾನ್ ॥20॥

ಕಾಂಶ್ಚಿತ್ತುಂಡಪ್ರಹಾರೇಣ ಖುರಕ್ಷೇಪೈಸ್ತಥಾ ಪರಾನ್ ।
ಲಾಂಗೂಲತಾಡಿತಾಂಶ್ಚಾನ್ಯಾನ್ ಶೃಂಗಾಭ್ಯಾಂ ಚ ವಿದಾರಿತಾನ್ ॥21॥

ವೇಗೇನ ಕಾಂಶ್ಚಿದಪರಾನ್ ನಾದೇನ ಭ್ರಮಣೇನ ಚ ।
ನಿಃಶ್ವಾಸಪವನೇನಾನ್ಯಾನ್ ಪಾತಯಾಮಾಸ ಭೂತಲೇ ॥22॥

20-22. ಈ ರೀತಿಯಾಗಿ ತನ್ನ ಸೈನ್ಯವು ಕ್ಷೀಣವಾಗುತ್ತಿರಲಾಗಿ ಮಹಿಷಾಸುರನು ಕೋಣನ ರೂಪದಿಂದ ಬಂದು ಆ (ದೇವತಾ)ಗಣಗಳನ್ನೆಲ್ಲ ಹೆದರಿಸಲಾರಂಭಿಸಿದನು. ಕೆಲವರನ್ನು (ತನ್ನ) ಕೋರೆಹಲ್ಲುಗಳ ಏಟಿನಿಂದಲೂ, ಕೆಲವರನ್ನು ಕಾಲುಗೊರಸುಗಳ ಹೊಡೆತಗಳಿಂದಲೂ ಇನ್ನೂ ಉಳಿದವರನ್ನು ಬಾಲದ ಹೊಡೆತ,

ಕೋಡುಗಳ ತಿವಿಯುವಿಕೆಗಳಿಂದಲೂ ಘಾಸಿಮಾಡಿದನು. ತನ್ನ (ಸಂಚಾರ) ವೇಗದಿಂದ ಕೆಲವರನ್ನೂ ಧ್ವನಿಯಿಂದಲೂ, ಸುತ್ತಾಡುವದರಿಂದಲೂ, ನಿಟ್ಟುಸಿರಿನ ಗಾಳಿಯಿಂದಲೂ ಇನ್ನೂ ಉಳಿದವರನ್ನೂ ನೆಲದಮೇಲೆ ಕೆಡವಿಬಿಟ್ಟನು.

ನಿಪಾತ್ಯ ಪ್ರಮಥಾನೀಕಮಭ್ಯಧಾವತ ಸೋऽಸುರಃ ।
ಸಿಂಹಂ ಹಂತುಂ ಮಹಾದೇವ್ಯಾಃ ಕೋಪಂ ಚಕ್ರೇ ತತೋऽಮ್ಬಿಕಾ ॥23॥

ಸೋऽಪಿ ಕೋಪಾನ್ಮಹಾವೀರ್ಯಃ ಖುರಕ್ಷುಣ್ಣಮಹೀತಲಃ ।
ಶೃಂಗಾಭ್ಯಾಂ ಪರ್ವತಾನುಚ್ಚಾನ್ ಚಿಕ್ಷೇಪ ಚ ನನಾದ ಚ ॥24॥

ವೇಗಭ್ರಮಣವಿಕ್ಷುಣ್ಣಾ ಮಹೀ ತಸ್ಯ ವ್ಯಶೀರ್ಯತ ।
ಲಾಂಗೂಲೇನಾಹತಶ್ಚಾಬ್ಧಿಃ ಪ್ಲಾವಯಾಮಾಸ ಸರ್ವತಃ ॥25॥

23-25. ಹೀಗೆ ಪ್ರಮಥಗಣಗಳನ್ನೆಲ್ಲ ಕೆಡವಿ ಆ ರಾಕ್ಷಸನು ಮಹಾದೇವಿಯ ವಾಹನವಾದ ಸಿಂಹವನ್ನು ಕೊಲ್ಲುವದಕ್ಕಾಗಿ ಮುನ್ನುಗ್ಗಿದನು. ಅನಂತರ ದೇವಿಯೂ ಕೋಪಾವಿಷ್ಟಳಾದಳು. ಸಿಟ್ಟಿಗೆದ್ದು ಮಹಾಬಲಶಾಲಿಯಾದ ಆ ಮಹಿಷನೂ ತನ್ನ ಕಾಲಿನ ಗೊರಸುಗಳಿಂದ ಭೂಮಿಯನ್ನು ಕೆರೆದು ಹಳ್ಳಮಾಡುತ್ತಾ ಎರಡು ಕೋಡುಗಳಿಂದ ಎತ್ತರವಾದ ಪರ್ವತಗಳನ್ನೆತ್ತಿ ಬಿಸಾಡುತ್ತಾ ಕೂಗಿಕೊಂಡನು. ಅವನ ರಭಸದ ನಡುಗೆಯಿಂದ ಅಲ್ಲಾಡಿದ ಭೂಮಿಯು ಸೀಳಿಹೋಯಿತು. ಬಾಲದ ಹೊಡೆತದಿಂದ ಉಕ್ಕಿದ ಸಮುದ್ರವು ಎಲ್ಲೆಲ್ಲೂ ನುಗ್ಗಿ ತೇಲಿಸಿಬಿಟ್ಟಿತು.

ಧುತಶೃಂಗವಿಭಿನ್ನಾಶ್ಚ ಖಂಡಂ ಖಂಡಂ ಯಯುರ್ಘನಾಃ
ಶ್ವಾಸಾನಿಲಾಸ್ತಾಃ ಶತಶೋ ನಿಪೇತುರ್ನಭಸೋऽಚಲಾಃ ॥26॥

ಇತಿ ಕ್ರೋಧಸಮಾಧ್ಮಾತಮಾಪತಂತಂ ಮಹಾಸುರಮ್ ।
ದೃಷ್ಟ್ವಾ ಸಾ ಚಂಡಿಕಾ ಕೋಪಂ ತದ್ವಧಾಯ ತದಾಕರೋತ್ ॥27॥

26-27. ಅಲ್ಲಾಡಿಸಲ್ಪಟ್ಟ ಅವನ ಕೋಡುಗಳಿಂದ ಸೀಳಿಹೋದ ಮೇಘಗಳು ತುಂಡುತುಂಡಾಗಿಬಿಟ್ಟವು. (ಅವನ) ಉಸಿರಿನ ಗಾಳಿಯಿಂದ ಅವು ನೂರಾರು ಚೂರುಗಳಾಗಿ ಆಕಾಶದಿಂದ ಬೆಟ್ಟ(ದಂತೆ) ಉದುರಿದವು. ಹೀಗೆ ಕೋಪದಿಂದ ಉರಿದೆದ್ದು ಮುನ್ನುಗ್ಗಿಬರುತ್ತಿರುವ ಆ ಮಹಾಸುರನನ್ನು ಕಂಡು ಚಂಡಿಕೆಯು ಕೋಪದಿಂದ ಅವನನ್ನು ಕೊಲ್ಲಲು ತೀರ್ಮಾನಿಸಿದಳು.

ಸಾ ಕ್ಷಿಪ್ತ್ವಾ ತಸ್ಯ ವೈ ಪಾಶಂ ತಂ ಬಬಂಧ ಮಹಾಸುರಮ್ ।
ತತ್ಯಾಜ ಮಾಹಿಷಂ ರೂಪಂ ಸೋऽಪಿ ಬದ್ಧೋ ಮಹಾಮೃಧೇ ॥28॥

ತತಃ ಸಿಂಹೋಽಭವತ್ ಸದ್ಯೋ ಯಾವತ್ತಸ್ಯಾಂಬಿಕಾ ಶಿರಃ ।
ಛಿನತ್ತಿ ತಾವತ್ ಪುರುಷಃ ಖಡ್ಗಪಾಣಿರದೃಶ್ಯತ ॥29॥

ತತ ಏವಾಶು ಪುರುಷಂ ದೇವೀ ಚಿಚ್ಛೇದ ಸಾಯಕೈಃ ।
ತಂ ಖಡ್ಗ ಚರ್ಮಣಾ ಸಾರ್ಧಂ ತತಃ ಸೋಽಭೂನ್ಮಹಾಗಜಃ ॥30॥

28-30. ಆಕೆಯು ಅವನ ಮೇಲೆ ಪಾಶವನ್ನೆಸೆದು ಆ ರಾಕ್ಷಸನನ್ನು ಕಟ್ಟಿ ಹಾಕಿದಳು. ಯುದ್ಧದಲ್ಲಿ ಹಾಗೆ ಕಟ್ಟಲ್ಪಟ್ಟ ಅವನು ಕೂಡಲೆ ಕೋಣನ ರೂಪವನ್ನು ಬಿಟ್ಟು ಸಿಂಹವಾಗಿ ಕಾಣಿಸಿಕೊಂಡನು. ಅಂಬಿಕೆಯು ಆ ಸಿಂಹದ ತಲೆಯನ್ನು ಕಡಿಯು ವಷ್ಟರಲ್ಲಿಯೇ ಕತ್ತಿಯನ್ನು ಹಿಡಿದ ಒಬ್ಬ ಮನುಷ್ಯನಾಗಿ ತೋರಿಕೊಂಡನು. ಆ ಕೂಡಲೆ ದೇವಿಯು ಕತ್ತಿಗುರಾಣಿಗಳಿಂದ ಕೂಡಿದ್ದ ಆ ಪುರುಷನನ್ನು ಬಾಣಗಳಿಂದ ಕತ್ತರಿಸಿದಳು. ಅನಂತರ ಅವನು ಒಂದು ದೊಡ್ಡ ಆನೆಯಾಗಿ ಬಂದನು.

ಕರೇಣ ಚ ಮಹಾಸಿಂಹಂ ತಂ ಚಕರ್ಷ ಜಗರ್ಜ ಚ ।
ಕರ್ಷತಸ್ತು ಕರಂ ದೇವೀ ಖಡ್ಗೇನ ನಿರಕೃಂತತ ॥31॥

ತತೋ ಮಹಾಸುರೋ ಭೂಯೋ ಮಾಹಿಷಂ ವಪುರಾಸ್ಥಿತಃ ।
ತಥೈವ ಕ್ಷೋಭಯಾಮಾಸ ತ್ರೈಲೋಕ್ಯಂ ಸಚರಾಚರಮ್ ॥32॥

ತತಃ ಕ್ರುದ್ಧಾ ಜಗನ್ಮಾತಾ ಚಂಡಿಕಾ ಪಾನಮುತ್ತಮಮ್ ।
ಪಪೌ ಪುನಃ ಪುನಶ್ಚೈವ ಜಹಾಸಾರುಣಲೋಚನಾ ॥33॥

31-33. (ಅವನು) ತನ್ನ ಸೊಂಡಿಲಿನಿಂದ (ದೇವಿಯ ವಾಹನವಾದ) ಮಹಾಸಿಂಹವನ್ನು ಎಳೆದನು, ಹಾಗೂ ಘರ್ಜಿಸಿದನು. ಹಾಗೆ ಎಳೆಯುತ್ತಿರುವಾಗಲೇ ದೇವಿಯು ಆ ಸೊಂಡಿಲನ್ನು ಕತ್ತಿಯಿಂದ ತುಂಡರಿಸಿದಳು. ಅನಂತರ ಆ ಮಹಾಸುರನು ಮತ್ತೆ ಕೋಣನ ಶರೀರವನ್ನು ಧರಿಸಿ ಚರಾಚರಗಳಿಂದ ತುಂಬಿದ ಮೂರುಲೋಕಗಳನ್ನೂ ಆತಂಕಗೊಳಿಸಿದನು. ಅನಂತರ ಕುಪಿತಳಾದ ಚಂಡಿಕಾ ದೇವಿಯು ಶ್ರೇಷ್ಠವಾದ ಪಾನವನ್ನು (ಯುದ್ಧದಲ್ಲಿ ಉತ್ಸಾಹವುಂಟಾಗುವದಕ್ಕಾಗಿ) ಮತ್ತೆಮತ್ತೆ ಸ್ವೀಕರಿಸಿದಳು. ಅನಂತರ ಕೆಂಪಾದ ಕಣ್ಣುಗಳುಳ್ಳವಳಾಗಿ ಗಟ್ಟಿಯಾಗಿ ನಕ್ಕಳು.

ನನರ್ದ ಚಾಸುರಃ ಸೋಽಪಿ ಬಲವೀರ್ಯಮದೋದ್ಧತಃ ।
ವಿಷಾಣಾಭ್ಯಾಂಚ ಚಿಕ್ಷೇಪ ಚಂಡಿಕಾಂ ಪ್ರತಿ ಭೂಧರಾನ್ ॥34॥

**ಸಾ ಚ ತಾನ್ ಪ್ರಹಿತಾಂಸ್ತೇನ ಚೂರ್ಣಯಂತೀ ಶರೋತ್ಕರೈಃ ।**
**ಉವಾಚ ತಂ ಮದೋದ್ಧೂತಮುಖರಾಗಾಕುಲಾಕ್ಷರಮ್ ॥35॥**

34-35. ಆ ರಾಕ್ಷಸನೂ ಬಲವೀರ್ಯಮದಗಳಿಂದ ಕೊಬ್ಬಿದವನಾಗಿ ಘರ್ಜನೆಮಾಡುತ್ತಿದ್ದನು. ಹಾಗೂ ಚಂಡಿಕೆಯ ಕಡೆಗೆ ತನ್ನ ಎರಡುಕೋಡುಗಳಿಂದ ಬೆಟ್ಟಗಳನ್ನು ಕಿತ್ತು ಎಸೆಯುತ್ತಿದ್ದನು. ಅವನಿಂದೆಸೆಯಲ್ಪಟ್ಟ ಅವುಗಳನ್ನು ಆಕೆಯೂ ಬಾಣಗಳ ಸಮೂಹದಿಂದ ಪುಡಿಮಾಡುತ್ತಾ, ಮದದಿಂದ ಹೊರಬೀಳುತ್ತಿರುವ ಮುಖದ ಕೆಂಪಿನಿಂದ ತೊದಲುತ್ತಾ (ಕಿರಿಚುತ್ತಿದ್ದ) ಅವನನ್ನು ಕುರಿತು ಹೀಗೆಂದಳು :

**ದೇವ್ಯುವಾಚ –**

**ಗರ್ಜ ಗರ್ಜಂ ಕ್ಷಣಂ ಮೂಢ ಮಧು ಯಾವತ್ಪಿಬಾಮ್ಯಹಮ್ ।**
**ಮಯಾ ತ್ವಯಿ ಹತೇಽತ್ರೈವ ಗರ್ಜಿಷ್ಯನ್ತ್ಯಾಶು ದೇವತಾಃ ॥36॥**

36. ದೇವಿಯಿಂತೆಂದಳು : 'ಮೂಢನೆ, ಕ್ಷಣಕಾಲ ನಾನು ಮಧುಪಾನವನ್ನು ಪೂರೈಸುವವರೆಗೂ ಗರ್ಜಿಸುತ್ತಿರು. ಇಲ್ಲಿಯೇ ನೀನು ನನ್ನಿಂದ ಕೊಲ್ಲಲ್ಪಟ್ಟಮೇಲೆ ಬೇಗನೆ ದೇವತೆಗಳು (ಸಂತೋಷದಿಂದ) ಗಟ್ಟಿಯಾಗಿ ಕೂಗಾಡಲಿದ್ದಾರೆ !

**ಋಷಿರುವಾಚ –**

**ಏವಮುಕ್ತ್ವಾ ಸಮುತ್ಪತ್ಯ ಸಾರೂಢಾ ತಂ ಮಹಾಸುರಮ್ ।**
**ಪಾದೇನಾಕ್ರಮ್ಯ ಕಂಠೇ ಚ ಶೂಲೇನೈನಮತಾಡಯತ್ ॥37॥**

**ತತಃ ಸೋಽಪಿ ಪದಾಕ್ರಾಂತಸ್ತಯಾ ನಿಜಮುಖಾತ್ತತಃ ।**
**ಅರ್ಧನಿಷ್ಕ್ರಾಂತ ಏವಾಸೀದ್ ದೇವ್ಯಾ ವೀರ್ಯೇಣ ಸಂವೃತಃ ॥38॥**

**ಅರ್ಧನಿಷ್ಕ್ರಾಂತ ಏವಾಸೌ ಯುಧ್ಯಮಾನೋ ಮಹಾಸುರಃ ।**
**ತಯಾ ಮಹಾಸಿನಾ ದೇವ್ಯಾ ಶಿರಶ್ಛಿತ್ತ್ವಾ ನಿಪಾತಿತಃ ॥39॥**

37-39. ಋಷಿಯಿಂತೆಂದನು : ಹೀಗೆಂದು ಹೇಳಿ ಆಕೆಯು ಆ ಮಹಾರಾಕ್ಷಸನನ್ನು ಕಾಲಿನಿಂದ ತುಳಿದುಕೊಂಡು ಶೂಲದಿಂದ ಅವನ ಕುತ್ತಿಗೆಯನ್ನು ಚುಚ್ಚಿದಳು. ಆಕೆಯ ಕಾಲಿನ ತುಳಿತಕ್ಕೆ ಸಿಕ್ಕಿಬಿದ್ದ ಅವನು ದೇವಿಯ ಪರಾಕ್ರಮಕ್ಕೆ ತುತ್ತಾಗಿ ತನ್ನ (ಕೋಣನ ರೂಪದ) ಬಾಯಿಯಿಂದ ಅರ್ಧದಷ್ಟು ಹೊರಬಂದವನಾಗಿಯೇ ಆ ಮಹಾರಾಕ್ಷಸನು ಯುದ್ಧಮಾಡುತ್ತಾ ಆ ದೇವಿಯ ಮಹತ್ತಾದ ಖಡ್ಗದ ಏಟಿನಿಂದ ತಲೆಯನ್ನು ಕತ್ತರಿಸಲ್ಪಟ್ಟವನಾಗಿ ಕೆಡವಲ್ಪಟ್ಟನು.

ತತೋ ಹಾಹಾಕೃತಂ ಸರ್ವಂ ದೈತ್ಯಸೈನ್ಯಂ ನನಾಶ ತತ್ ।
ಪ್ರಹರ್ಷಂ ಚ ಪರಂ ಜಗ್ಮುಃ ಸಕಲಾ ದೇವತಾಗಣಾಃ ॥40॥

ತುಷ್ಟುವುಸ್ತಾಂ ಸುರಾ ದೇವೀಂ ಸಹ ದಿವ್ಯೈರ್ಮಹರ್ಷಿಭಿಃ ।
ಜಗುರ್ಗಂಧರ್ವಪತಯೋ ನನೃತುಶ್ಚಾಪ್ಸರೋ ಗಣಾಃ ॥41॥

40-41. ಅನಂತರ ರಾಕ್ಷಸಸೈನ್ಯವೆಲ್ಲವೂ ಹಾಹಾಕಾರಮಾಡಿತು. ಅದು (ದೇವಿಯ ಪರಾಕ್ರಮಕ್ಕೆ ಸಿಕ್ಕಿ) ನಾಶವಾಗಿಹೋಯಿತು. ಎಲ್ಲಾ ದೇವತಾ ವೃಂದದವರೂ ಹೆಚ್ಚಿನ ಹರ್ಷವನ್ನು ಹೊಂದಿದರು. ದಿವ್ಯರಾದ ಮಹರ್ಷಿಗಳೊಡ ಗೂಡಿ ಆ ದೇವಿಯನ್ನು ದೇವತೆಗಳೆಲ್ಲರೂ ಸ್ತೋತ್ರಮಾಡಿದರು. ಗಂಧರ್ವ ಶ್ರೇಷ್ಠರುಗಳು ಗಾನಮಾಡಿದರು. ಅಪ್ಸರಸ್ತ್ರೀಯರುಗಳು ನಾಟ್ಯಮಾಡಿದರು.

ಇತಿ ಶ್ರೀ ಮಾರ್ಕಂಡೇಯಪುರಾಣೇ ದೇವೀಮಹಾತ್ಮ್ಯೇ
ತೃತೀಯೋಽಧ್ಯಾಯಃ

## ನಾಲ್ಕನೆಯ ಅಧ್ಯಾಯ

ಧ್ಯಾನಮ್ –

ಕಾಲಾಭ್ರಾಭಾಂ ಕಟಾಕ್ಷೈರರಿಕುಲಭಯದಾಂ ಮೌಲಿಬದ್ಧೇಂದುರೇಖಾಂ
ಶಂಖಂ ಚಕ್ರಂ ಕೃಪಾಣಾಂ ತ್ರಿಶಿಖಮಪಿ ಕರೈರುದ್ವಹಂತೀಂ ತ್ರಿನೇತ್ರಾಮ್ ।
ಸಿಂಹಸ್ಕಂಧಾಧಿರೂಢಾಂ ತ್ರಿಭುವನಮಖಿಲಂ ತೇಜಸಾ ಪೂರಯಂತೀಂ
ಧ್ಯಾಯೇದ್ ದುರ್ಗಾಂ ಜಯಾಖ್ಯಾಂ ತ್ರಿದಶಪರಿವೃತಾಂ ಸೇವಿತಾಂ ಸಿದ್ಧಿಕಾಮೈಃ ॥

1. ಕಾಲಮೇಘದಂತೆ ಕಾಂತಿಯುಳ್ಳವಳಾದ, ಹಾಗೂ ಕುಡಿಗಣ್ಣಿನ ನೋಟದಿಂದ ಶತ್ರುಕುಲಕ್ಕೆ ಭಯಂಕರಳಾದ, ಚಂದ್ರಲೇಖಾಕಿರೀಟಧಾರಿಣಿಯಾದ, ಕೈಗಳಲ್ಲಿ ಶಂಖ, ಚಕ್ರ, ಕತ್ತಿ, ತ್ರಿಶೂಲಗಳನ್ನು ಧರಿಸಿದವಳಾದ, ಮುಕ್ಕಣ್ಣೆಯಾದ, ಸಿಂಹದ ಬೆನ್ನನ್ನು ಏರಿ ಕುಳಿತಿರುವವಳಾದ, ಹಾಗೂ ತನ್ನ ಕಾಂತಿಯಿಂದ ಮೂರು ಲೋಕಗಳನ್ನೂ ತುಂಬಿರುವಳಾದ, ಸಿದ್ಧಿಕಾಮರಾದ ದೇವತೆಗಳಿಂದ ಸುತ್ತುವರೆಯಲ್ಪಟ್ಟಿರುವ, ಜಯಾ-ಎಂಬ ಹೆಸರಿನ ದುರ್ಗೆಯನ್ನು ಧ್ಯಾನಮಾಡಬೇಕು.

ಓಂ ಋಷಿರುವಾಚ –

ಶಕ್ರಾದಯಃ ಸುರಗಣಾ ನಿಹತೇಽತಿವೀರ್ಯೇ
ತಸ್ಮಿನ್ ದುರಾತ್ಮನಿ ಸುರಾರಿಬಲೇ ಚ ದೇವ್ಯಾ ।
ತಾಂ ತುಷ್ಟುವುಃ ಪ್ರಣತಿನಮ್ರಶಿರೋಧರಾಂಸಾ–
ವಾಗ್ಭಿಃ ಪ್ರಹರ್ಷಪುಲಕೋದ್ಗಮಚಾರುದೇಹಾಃ ॥1॥

1. ಋಷಿಯಿಂತೆಂದನು : ಆ ದುರಾತ್ಮನೂ ಅತಿ ವೀರ್ಯಶಾಲಿಯೂ ಆದ (ಮಹಿಷನು) ದೇವಿಯಿಂದ ಕೊಲ್ಲಲ್ಪಟ್ಟು ರಾಕ್ಷಸಸೈನ್ಯವೂ ನಾಶವಾಗಲಾಗಿ, ದೇವೇಂದ್ರನೇ ಮುಂತಾದ ದೇವತಾಗಣದವರು ವಂದನಾಪೂರ್ವಕವಾಗಿ ಬಾಗಿದ ತಲೆ-ಕತ್ತುಗಳುಳ್ಳವರಾಗಿ ಹಾಗೂ ಆನಂದದಿಂದ ಮೈನವಿರೆದ್ದ ಸುಂದರ ದೇಹವುಳ್ಳವರಾಗಿ ವಾಕ್ಕುಗಳಿಂದ ಆ ದೇವಿಯನ್ನು ಸ್ತೋತ್ರಮಾಡಿದರು.

ದೇವ್ಯಾ ಯಯಾ ತತಮಿದಂ ಜಗದಾತ್ಮಶಕ್ತ್ಯಾ
ನಿಃಶೇಷದೇವಗಣಶಕ್ತಿಸಮೂಹಮೂರ್ತ್ಯಾ ।
ತಾಮಂಬಿಕಾಮಖಿಲದೇವಮಹರ್ಷಿಪೂಜ್ಯಾಂ
ಭಕ್ತ್ಯಾ ನತಾಃ ಸ್ಮ ವಿದಧಾತು ಶುಭಾನಿ ಸಾ ನಃ ॥2॥

2. ಸಮಸ್ತದೇವತೆಗಳ ಗುಂಪಿನ ಶಕ್ತಿಸಮೂಹದ ಮೂರ್ತಿಯಾದ ಯಾವ ದೇವಿಯ ಆತ್ಮಶಕ್ತಿಯಿಂದ ಈ (ಜಗತ್ತೆಲ್ಲವೂ) ವ್ಯಾಪ್ತವಾಗಿರುವದೋ ಆ ಅಂಬಿಕೆಯಾದ, ಸಕಲದೇವಮಹರ್ಷಿಗಳಿಂದಲೂ ಪೂಜ್ಯಳಾದ (ತಾಯಿಯನ್ನು) ನಾವು ಭಕ್ತಿಯಿಂದ ನಮಸ್ಕರಿಸುತ್ತೇವೆ. ಆಕೆಯು ನಮಗೆ ಶುಭವನ್ನುಂಟುಮಾಡಲಿ.

ಯಸ್ಯಾಃ ಪ್ರಭಾವಮತುಲಂ ಭಗವಾನನಂತೋ
ಬ್ರಹ್ಮಾ ಹರಶ್ಚ ನ ಹಿ ವಕ್ತುಮಲಂ ಬಲಂ ಚ ।
ಸಾ ಚಂಡಿಕಾಖಿಲಜಗತ್ ಪರಿಪಾಲನಾಯ
ನಾಶಾಯ ಚಾಶುಭಭಯಸ್ಯ ಮತಿಂ ಕರೋತು ॥3॥

3. ಯಾವಾಕೆಯ ಅಪರಿಮಿತವಾದ ಮಹಿಮೆಯನ್ನೂ ಬಲವನ್ನೂ ಪೂಜ್ಯನಾದ ಆದಿಶೇಷನೂ ಬ್ರಹ್ಮನೂ ಶಿವನೂ ಹೇಳಲು ಅಸಮರ್ಥರೋ ಆ ಚಂಡಿಕೆಯು ಇಡಿಯ ಜಗತ್ತನ್ನು ಕಾಪಾಡುವದಕ್ಕೂ ಅಶುಭ-ಭಯಗಳನ್ನು ನಾಶಮಾಡುವದಕ್ಕೂ ಮನಸ್ಸುಮಾಡುವವಳಾಗಲಿ.

ಯಾ ಶ್ರೀಃ ಸ್ವಯಂ ಸುಕೃತಿನಾಂ ಭವನೇಷ್ವಲಕ್ಷ್ಮೀಃ
ಪಾಪಾತ್ಮನಾಂ ಕೃತಧಿಯಾಂ ಹೃದಯೇಷು ಬುದ್ಧಿಃ ।
ಶ್ರದ್ಧಾ ಸತಾಂ ಕುಲಜನಪ್ರಭವಸ್ಯ ಲಜ್ಜಾ
ತಾಂ ತ್ವಾಂ ನತಾಃ ಸ್ಮ ಪರಿಪಾಲಯ ದೇವಿ ವಿಶ್ವಮ್ ॥4॥

4. ಯಾವಳು ಪುಣ್ಯವಂತರ ಮನೆಯ ಸಿರಿಯಾಗಿ ವಿರಾಜಿಸುತ್ತಿರುವಳೋ, ಮತ್ತು ಪಾಪಿಗಳ ಮನೆಯಲ್ಲಿ ದರಿದ್ರಲಕ್ಷ್ಮಿಯಾಗಿ ಕಂಡುಬರುವಳೋ - ಹಾಗೂ ನಿಶ್ಚಯಜ್ಞಾನವುಳ್ಳವರ ಹೃದಯದಲ್ಲಿ ಬುದ್ಧಿಯಾಗಿ ತೋರುತ್ತಿರುವಳೋ, ಸತ್ಪುರುಷರಲ್ಲಿ ಶ್ರದ್ಧಾರೂಪಳಾಗಿಯೂ ಕುಲಸ್ತ್ರೀಯರಲ್ಲಿ (ಪತಿವ್ರತೆಯರಲ್ಲಿ) ನಾಚಿಕೆಯ ರೂಪಳಾಗಿಯೂ ಇರುವಳೋ ಆ ದೇವಿಯನ್ನು ನಾವು ನಮಸ್ಕರಿಸುವೆವು. ಎಲೌ ದೇವಿಯೆ, ಜಗತ್ತನ್ನು ಕಾಪಾಡು.

ಕಿಂ ವರ್ಣಯಾಮ ತವ ರೂಪಮಚಿಂತ್ಯಮೇತತ್
ಕಿಂ ಚಾತಿವೀರ್ಯಮಸುರಕ್ಷಯಕಾರಿ ಭೂರಿ ।
ಕಿಂ ಚಾಹವೇಷು ಚರಿತಾನಿ ತವಾದ್ಭುತಾನಿ
ಸರ್ವೇಷು ದೇವ್ಯಸುರದೇವಗಣಾದಿಕೇಷು ॥5॥

5. ಅಚಿಂತ್ಯವಾದ ಈ ನಿನ್ನ ರೂಪವನ್ನು ಏನೆಂದು ವರ್ಣಿಸೋಣ ? ಮತ್ತು ಯುದ್ಧದಲ್ಲಿ ರಾಕ್ಷಸರನ್ನು ನಾಶಗೊಳಿಸಿದ (ನಿನ್ನ) ಹೆಚ್ಚಿನ ಬಲವೀರ್ಯಗಳನ್ನು ಏನೆಂದು ಹೊಗಳೋಣ ? ಎಲೌ ದೇವಿಯೆ, ಎಲ್ಲಾ ದೇವಾಸುರಗಣಾದಿಗಳಲ್ಲಿಯೂ (ವಿಶಿಷ್ಟಳಾದ) ನಿನ್ನ ಅದ್ಭುತವಾದ ಚರಿತ್ರೆಯನ್ನು ಏನೆಂದು (ಸ್ತುತಿಸೋಣ ?).

ಹೇತುಃ ಸಮಸ್ತಜಗತಾಂ ತ್ರಿಗುಣಾಪಿ ದೋಷೈಃ
ನ ಜ್ಞಾಯಸೇ ಹರಿಹರಾದಿಭಿರಪ್ಯಪಾರಾ ।
ಸರ್ವಾಶ್ರಯಾಖಿಲಮಿದಂ ಜಗದಂಶಭೂತ -
ಮವ್ಯಾಕೃತಾ ಹಿ ಪರಮಾ ಪ್ರಕೃತಿಸ್ತ್ವಮಾದ್ಯಾ ॥6॥

6. ಸಮಸ್ತಜಗತ್ಕಾರಣಳಾದ ನೀನು ತ್ರಿಗುಣಾತ್ಮಕಳಾಗಿದ್ದರೂ ಹರಿಹರಾದಿ ದೇವತೆಗಳಿಗೂ (ಅಹಂಕಾರ) ದೋಷದ ನಿಮಿತ್ತವಾಗಿ ತಿಳಿದುಬರುತ್ತಿಲ್ಲ. ಅಪಾರಳೂ ಸರ್ವಕ್ಕೂ ಆಶ್ರಯಳೂ ಆದ ನಿನಗೆ ಈ ಪ್ರಪಂಚವು ಒಂದಂಶ ಮಾತ್ರವಾಗಿದೆ. ನೀನು ಆದ್ಯಳೂ ಪರಮಳೂ ಆದ ಅವ್ಯಾಕೃತಪ್ರಕೃತಿ ರೂಪಳೇ ಆಗಿರುವೆ.

ಯಸ್ಯಾಃ ಸಮಸ್ತಸುರತಾ ಸಮುದೀರಣೇನ
ತೃಪ್ತಿಂ ಪ್ರಯಾತಿ ಸಕಲೇಷು ಮಖೇಷು ದೇವಿ ।
ಸ್ವಾಹಾಸಿ ವೈ ಪಿತೃಗಣಸ್ಯ ಚ ತೃಪ್ತಿಹೇತುಃ
ಉಚ್ಚಾರ್ಯಸೇ ತ್ವಮತ ಏವ ಜನೈಃ ಸ್ವಧಾ ಚ ॥7॥

7. ಎಲೌ ದೇವಿ, ಎಲ್ಲಾ ಯಜ್ಞಗಳಲ್ಲಿಯೂ ಯಾವ ನಿನ್ನ ಹೆಸರಾದ 'ಸ್ವಾಹಾ' ಎಂಬುದರ ಉಚ್ಚಾರಣೆಯಿಂದ ದೇವತೆಗಳೆಲ್ಲರೂ ತೃಪ್ತಿಯನ್ನು ಹೊಂದುವರೋ ಅಂಥ ಹೆಸರಿನವಳಾಗಿದ್ದೀಯೆ. ಆದ್ದರಿಂದಲೇ ಪಿತೃಗಣಗಳಿಗೆ ತೃಪ್ತಿಯನ್ನುಂಟು ಮಾಡುವ 'ಸ್ವಧಾ' ಎಂಬ ನಾಮದಿಂದಲೂ ನೀನು ಜನರಿಂದ ಉಚ್ಚರಿಸಲ್ಪಡುತ್ತಿರುವೆ.

ಯಾ ಮುಕ್ತಿ ಹೇತುರವಿಚಿಂತ್ಯಮಹಾವ್ರತಾ ತ್ವಂ
ಅಭ್ಯಸ್ಯಸೇ ಸುನಿಯತೇಂದ್ರಿಯತತ್ತ್ವಸಾರೈಃ ।
ಮೋಕ್ಷಾರ್ಥಿಭಿರ್ಮುನಿಭಿರಸ್ತಸಮಸ್ತದೋಷೈಃ
ವಿದ್ಯಾಸಿ ಸಾ ಭಗವತೀ ಪರಮಾ ಹಿ ದೇವಿ ॥8॥

8. ಚೆನ್ನಾಗಿ ನಿಗ್ರಹಿಸಿದ ಇಂದ್ರಿಯಗಳ ಸಾರವುಳ್ಳ , ಮೋಕ್ಷವನ್ನು ಬಯಸುವ ಹಾಗೂ ಸಮಸ್ತದೋಷಗಳನ್ನೂ ನೀಗಿಕೊಂಡಿರುವ ಮುನಿಗಳಿಂದ, ಮುಕ್ತಿಕಾರಣಳಾಗಿರುವ ನೀನು ಚಿಂತಿಸುವುದಕ್ಕಾಗದ ಮಹಾ (ತತ್ತ್ವ)ವ್ರತ (ಗಮ್ಯ)ರೂಪಳಾಗಿದ್ದರೂ (ಬಹಳ ಪ್ರಯತ್ನದಿಂದ) ಅಭ್ಯಾಸಮಾಡಲ್ಪಡುತ್ತಿರುವೆ. ಎಲೌ ದೇವಿಯೆ, ಪೂಜ್ಯಳೂ ಪರಮಳೂ ಆದ ಆ (ಬ್ರಹ್ಮ) ವಿದ್ಯಾ ಸ್ವರೂಪಳೇ ನೀನಾಗಿರುವೆ.

ಶಬ್ದಾತ್ಮಿಕಾ ಸುವಿಮಲರ್ಗ್ಯಜುಷಾಂ ನಿಧಾನ-
ಮುದ್ಗೀಥ ರಮ್ಯಪದಪಾಠವತಾಂ ಚ ಸಾಮ್ನಾಮ್ ।
ದೇವೀ ತ್ರಯೀ ಭಗವತೀ ಭವಭಾವನಾಯ
ವಾರ್ತಾಸಿ ಸರ್ವಜಗತಾಂ ಪರಮಾರ್ತಿಹಂತ್ರೀ ॥9॥

9. ಶಬ್ದಸ್ವರೂಪಳಾದ ನೀನು ನಿರ್ಮಲ (ಸಾಹಿತ್ಯಗಳಾದ) ಋಕ್, ಯಜುಸ್ಸುಗಳಿಗೆ ಕಾರಣಳಾಗಿರುವೆ. ಮತ್ತು ರಮ್ಯವಾದ ಪದಪಾಠ-ಉದ್ಗೀಥ ಗಾನಗಳುಳ್ಳ ಸಾಮಗಳಿಗೂ (ಮೂಲರೂಪಳಾಗಿರುವೆ). ಭಗವತಿಯೆನಿಸಿರುವವಳೂ ತ್ರಯೀವೇದಮಾತೆಯೆನಿಸಿರುವವಳೂ ನೀನೇ. ಮತ್ತು ಸಕಲಜಗತ್ತಿನ ಅತಿ

ಹೆಚ್ಚಿನ ಸಂಕಟಗಳನ್ನೂ ನೀಗುವಂಥ ವಾಗ್ರೂಪಳಾಗಿ ಸಂಸಾರ(ವ್ಯವಹಾರ) ನಿರ್ವಹಣೆಗೂ (ಆಧಾರಳಾಗಿರುವೆ).

ಮೇಧಾಸಿ ದೇವಿ ವಿದಿತಾಖಿಲಶಾಸ್ತ್ರಸಾರಾ
ದುರ್ಗಾಸಿ ದುರ್ಗಭವಸಾಗರನೌರಸಂಗಾ ।
ಶ್ರೀಃ ಕೈಟಭಾರಿಹೃದಯೈಕಕೃತಾಧಿವಾಸಾ
ಗೌರೀ ತ್ವಮೇವ ಶಶಿಮೌಲಿಕೃತಪ್ರತಿಷ್ಠಾ ॥10॥

10. ಎಲೌ ದೇವಿಯೆ, ಸಕಲಶಾಸ್ತ್ರಗಳ ಸಾರವನ್ನೂ ಬಲ್ಲ ಮೇಧಾ ದೇವಿಯೇ ನೀನಾಗಿರುವೆ. ದಾಟಲಸಾಧ್ಯವಾದ ಸಂಸಾರವೆಂಬ ಸಾಗರದಲ್ಲಿ ಅಂಟಿಕೊಳ್ಳದ ಸ್ವಭಾವದ ದುರ್ಗೆಯೆಂಬ ಹಡಗಾಗಿ ಇದ್ದುಕೊಂಡಿರುವೆ. ಕೈಟಭಶತ್ರುವಾದ (ವಿಷ್ಣುವಿನ) ಹೃದಯವನ್ನೇ ಮುಖ್ಯವಾಸಸ್ಥಾನವಾಗಿ ಮಾಡಿಕೊಂಡು ವಾಸ ಮಾಡುತ್ತಿರುವ ಮಹಾಲಕ್ಷ್ಮಿಯೇ ನೀನಾಗಿರುವೆ. ಮತ್ತು ಚಂದ್ರಮೌಳಿಯಾದ ಮಹಾದೇವನ ಅರ್ಧಾಂಗಿಯಾಗಿ ನೆಲಸಿರುವ ಗೌರಿಯೂ ನೀನೇ.

ಈಷತ್ ಸಹಾಸಮಮಲಂ ಪರಿಪೂರ್ಣಚಂದ್ರ-
ಬಿಂಬಾನುಕಾರಿ ಕನಕೋತ್ತಮಕಾಂತಿಕಾಂತಮ್ ।
ಅತ್ಯದ್ಭುತಂ ಪ್ರಹೃತಮಾತ್ತರುಷಾ ತಥಾಪಿ
ವಕ್ತ್ರಂ ವಿಲೋಕ್ಯ ಸಹಸಾ ಮಹಿಷಾಸುರೇಣ ॥11॥

ದೃಷ್ಟ್ವಾತು ದೇವಿ ಕುಪಿತಂ ಭ್ರುಕುಟೀಕರಾಲ-
ಮುದ್ಯಚ್ಛಶಾಂಕಸದೃಶಚ್ಛವಿ ಯನ್ನ ಸದ್ಯಃ ।
ಪ್ರಾಣಾನ್‌ಮುಮೋಚ ಮಹಿಷ ಸ್ತದತೀವ ಚಿತ್ರಂ
ಕೈರ್ಜೀವ್ಯತೇ ಹಿ ಕುಪಿತಾಂತಕದರ್ಶನೇನ ॥12॥

11-12. ಸ್ವಲ್ಪಮಟ್ಟಿನ ಮುಗುಳುನಗೆಯಿಂದ ಕೂಡಿ ಶುಭ್ರವಾಗಿರುವ, ಪೂರ್ಣಚಂದ್ರನ ಬಿಂಬವನ್ನು ಹೋಲುವ, ಉತ್ತಮವಾದ (ಅಪ್ಪಟ) ಚಿನ್ನದಂತೆ ಕಾಂತಿಯುಕ್ತವಾದ ಮತ್ತು ಕೋಪದಿಂದ (ರಾಕ್ಷಸನು) ಹೊಡೆಯಲ್ಪಡುವಾಗಲೂ ಅತ್ಯದ್ಭುತ (ಸೌಂದರ್ಯ)ದಿಂದಲೇ ಕೂಡಿದ್ದ ಹಾಗೂ ಉದಯಿಸುತ್ತಿರುವ ಚಂದ್ರನಂತೆ ಕಾಂತಿಯುಳ್ಳ ನಿನ್ನ ಮುಖವನ್ನು ಮಹಿಷಾಸುರನು ಕಂಡಾಗ - ಎಲೌ ದೇವಿಯೆ, ಅದು ಗಂಟಿಕ್ಕಿದ ಹುಬ್ಬುಗಳಿಂದ ವಿಕೃತವಾಗಿ ಕೋಪದಿಂದ (ದುಗುಡವಾಗಿ)ದ್ದುಕೊಂಡಿತ್ತಲ್ಲವೆ ? ಅದನ್ನು ಕಂಡಕೂಡಲೆ ಆ ಮಹಿಷನು

ಪ್ರಾಣತ್ಯಾಗವನ್ನು ಮಾಡಲಿಲ್ಲವಷ್ಟೆ ! ಅದು ಅತ್ಯಾಶ್ಚರ್ಯಕರವಾಗಿದೆ. ಏಕೆಂದರೆ ಕೋಪಗೊಂಡ ಯಮನ ದರ್ಶನವಾದಾಗ ಯಾರುತಾನೆ ಬದುಕಿದ್ದಾರು ?

ದೇವಿ ಪ್ರಸೀದ ಪರಮಾ ಭವತೀ ಭವಾಯ
ಸದ್ಯೋ ವಿನಾಶಯಸಿ ಕೋಪವತೀ ಕುಲಾನಿ ।
ವಿಜ್ಞಾತಮೇತದಧುನೈವ ಯದಸ್ತಮೇತ-
ನ್ನೀತಂ ಬಲಂ ಸುವಿಪುಲಂ ಮಹಿಷಾಸುರಸ್ಯ ॥13॥

13. ಪರಮಳೂ ಪೂಜ್ಯಳೂ ಆದ ದೇವಿಯೆ, ನೀನು (ಜಗತ್ತಿನ) ಹುಟ್ಟು ಬೆಳವಣಿಗೆಗಳಿಗಾಗಿ ಪ್ರಸನ್ನಳಾಗು. ಏಕೆಂದರೆ ಕುಪಿತಳಾದೆಯಾದರೆ ಕುಲಗಳನ್ನೇ ಕೂಡಲೆ ನಾಶಮಾಡಿಬಿಡುವೆ. ಮಹಿಷಾಸುರನ ಅತಿದೊಡ್ಡ ಬಲಿಷ್ಠವಾದ (ಸೈನ್ಯ)ವೆಲ್ಲವೂ ಈಗಲೇ ವಿನಾಶವನ್ನು ಹೊಂದಿದ್ದನ್ನು ಕಂಡ (ನಮಗೆ) ಈ ವಿಚಾರವು ಗೊತ್ತಾಗಿದೆ.

ತೇ ಸಂಮತಾ ಜನಪದೇಷು ಧನಾನಿ ತೇಷಾಂ
ತೇಷಾಂ ಯಶಾಂಸಿ ನ ಚ ಸೀದತಿ ಧರ್ಮವರ್ಗಃ ।
ಧನ್ಯಾಸ್ತ ಏವ ನಿಭೃತಾತ್ಮಜಭೃತ್ಯದಾರಾ
ಯೇಷಾಂ ಸದಾಽಭ್ಯುದಯದಾ ಭವತೀ ಪ್ರಸನ್ನಾ ॥14॥

14. ಯಾರ ವಿಷಯಕ್ಕೆ ನೀನು ಅಭ್ಯುದಯದಾತ್ರಿಯಾಗಿ ಪ್ರಸನ್ನಳಾಗುವೆಯೋ ಅವರೇ ರಾಷ್ಟ್ರಗಳಲ್ಲಿ ಮಾನ್ಯರಾಗುವರು. ಅಂಥವರಿಗೆ ಧನ (ಲಕ್ಷ್ಮಿಯು) ಒಲಿಯುವಳು. ಅವರುಗಳಿಗೇ ಯಶಸ್ಸೂ(ಕೀರ್ತಿಯೂ) ಲಭಿಸಲಿದೆ. ಅಂಥವರ ಧರ್ಮಾನುಷ್ಠಾನಪರಂಪರೆಗಳು ಕುಸಿಯುವದಿಲ್ಲ, ಮಕ್ಕಳು, ಆಳುಗಳು, ಹೆಂಡಂದಿರನ್ನು (ಚೆನ್ನಾಗಿ) ಕಾಪಾಡಿಕೊಳ್ಳುವ ಅಂಥ ನಿನ್ನ(ಭಕ್ತರೇ) ಧನ್ಯರು.

ಧರ್ಮ್ಯಾಣಿ ದೇವಿ ಸಕಲಾನಿ ಸದೈವ ಕರ್ಮಾ-
ಣ್ಯತ್ಯಾದೃತಃ ಪ್ರತಿದಿನಂ ಸುಕೃತೀ ಕರೋತಿ ।
ಸ್ವರ್ಗಂ ಪ್ರಯಾತಿ ಚ ತತೋ ಭವತೀಪ್ರಸಾದಾ-
ಲ್ಲೋಕತ್ರಯೇಽಪಿ ಫಲದಾ ನನು ದೇವಿ ತೇನ ॥15॥

15. ಎಲೌ ದೇವಿ, ಪುಣ್ಯವಂತನಾದವನು ಯಾವಾಗಲೂ ಬಹಳ ಶ್ರದ್ಧಾಪೂರ್ವಕವಾಗಿ ಎಲ್ಲಾ ಧರ್ಮಕಾರ್ಯಗಳನ್ನೂ ಪ್ರತಿದಿನವೂ ಮಾಡುವನು. ಮತ್ತು ನಿನ್ನ ಅನುಗ್ರಹದಿಂದ ಅನಂತರ ಸ್ವರ್ಗವನ್ನೂ ಹೊಂದುವನು. ಆದರಿಂದ ನೀನು ಮೂರು ಲೋಕಗಳಲ್ಲಿಯೂ (ಕರ್ಮ) ಫಲಪ್ರದಳಾಗಿರುವೆ.

ದುರ್ಗೇ ಸ್ಮೃತಾ ಹರಸಿ ಭೀತಿಮಶೇಷಜಂತೋಃ
ಸ್ವಸ್ಥೈಃ ಸ್ಮೃತಾ ಮತಿಮತೀವ ಶುಭಾಂ ದದಾಸಿ ।
ದಾರಿದ್ರ್ಯದುಃಖಭಯಹಾರಿಣಿ ಕಾ ತ್ವದನ್ಯಾ
ಸರ್ವೋಪಕಾರಕರಣಾಯ ಸದಾರ್ದ್ರಚಿತ್ತಾ ॥16॥

16. ಎಲೌ ದುರ್ಗೆಯೆ, ನೀನು ನೆನೆಯಲ್ಪಟ್ಟೆಯಾದರೆ ಎಲ್ಲಾ ಪ್ರಾಣಿಗಳ ಸಕಲವಿಧವಾದ ಭಯವನ್ನೂ ಕಳೆಯುವವಳಾಗುವೆ. ಇನ್ನು ಶಾಂತಚಿತ್ತದಿಂದ ಸ್ಮರಿಸಲ್ಪಡುವೆಯಾದರೆ ಅತಿ ಹೆಚ್ಚಿನ ಕಲ್ಯಾಣಕರವಾದ ಬುದ್ಧಿಯನ್ನು ನೀಡುವೆಯಾಗುವೆ. ದಾರಿದ್ರ್ಯ ದುಃಖಭಯಗಳನ್ನು ಪರಿಹರಿಸುವ ದೇವಿಯೇ (ಪ್ರಾಣಿಗಳಿಗೆ) ಎಲ್ಲಾ ರೀತಿಯ ಉಪಕಾರಗಳನ್ನೂ ಮಾಡುವದಕ್ಕಾಗಿಯೇ ಯಾವಾಗಲೂ ಕರಗಿದ ಹೃದಯವುಳ್ಳವಳಾಗಿರುವಂಥವಳು ನಿನ್ನನ್ನು ಬಿಟ್ಟರೆ ಬೇರೆ ಯಾವಳಿದ್ದಾಳು ?

ಏಭಿರ್ಹತೈರ್ಜಗದುಪೈತಿ ಸುಖಂ ತಥೈತೇ
ಕುರ್ವಂತು ನಾಮ ನರಕಾಯ ಚಿರಾಯ ಪಾಪಮ್ ।
ಸಂಗ್ರಾಮಮೃತ್ಯುಮಧಿಗಮ್ಯ ದಿವಂ ಪ್ರಯಾಂತು
ಮತ್ವೇತಿ ನೂನಮಹಿತಾನ್ ವಿನಿಹಂಸಿ ದೇವಿ ॥17॥

17. ಎಲೌ ದೇವಿಯೆ, ಈ (ರಾಕ್ಷಸರು) ಕೊಲ್ಲಲ್ಪಟ್ಟದ್ದರಿಂದ ಜಗತ್ತು ಸುಖವನ್ನು ಹೊಂದಿರುತ್ತದೆ. ಹೀಗಿದ್ದರೂ (ಈವರೆಗೂ) ರಾಕ್ಷಸರೇಕೆ ಜಗತ್ತನ್ನು ಹಿಂಸಿಸಿದರು ? ಎಂದರೆ, ನಿನ್ನ ಸಂಕಲ್ಪವು ಹೀಗಿರಬೇಕು - ಇವರುಗಳು ಬಹಳಕಾಲದ ನರಕವಾಸಕ್ಕಾಗಿ ಪಾಪವನ್ನು ಮಾಡಲಿ. ಆದರೇನು ? ಅನಂತರ ಯುದ್ಧದಲ್ಲಿ (ಹಿಮ್ಮೆಟ್ಟದೆ ಕಾದಾಡಿ) ಮೃತರಾಗಿ ಸ್ವರ್ಗಕ್ಕೆ ಹೋಗಲಿ - ಹೀಗೆಂದು ಭಾವಿಸಿ ನೀನು ಈ ಲೋಕಕಂಟಕರನ್ನು ಸಂಹಾರಮಾಡಿರುವೆ.

ದೃಷ್ಟ್ವೈವ ಕಿಂ ನ ಭವತೀ ಪ್ರಕರೋತಿ ಭಸ್ಮ
ಸರ್ವಾಸುರಾನರಿಷು ಯತ್ಪ್ರಹಿಣೋಷಿ ಶಸ್ತ್ರಮ್ ।
ಲೋಕಾನ್ ಪ್ರಯಾಂತು ರಿಪವೋಽಪಿ ಹಿ ಶಸ್ತ್ರಪೂತಾ
ಇತ್ಥಂ ಮತಿರ್ಭವತಿ ತೇಷ್ವಪಿ ತೇಽತಿಸಾಧ್ವೀ ॥18॥

18. ಎಲ್ಲಾ ರಾಕ್ಷಸರನ್ನೂ ನೋಡಿದ ಮಾತ್ರದಿಂದಲೇ ನೀನು ಸುಟ್ಟುಹಾಕದೆ ಇರುವದೇಕೆಂದರೆ, ಮತ್ತು ಆ ಶತ್ರುಗಳನ್ನು ಸಂಹರಿಸಲು ಶಸ್ತ್ರಗಳನ್ನು ಬಳಸುವೆಯೇಕೆಂದರೆ - ಶಸ್ತ್ರ (ಪ್ರಹಾರದಿಂದ) ಪರಿಶುದ್ಧರಾದ ಅವರು ಶತ್ರುಗಳೇ

ಆದರೂ (ಪುಣ್ಯ) ಲೋಕಗಳನ್ನೇ ಪಡೆಯಲಿ-ಎಂಬುದೇ ಉದ್ದೇಶವಾಗಿದೆ. ಹೀಗೆ ಆ (ರಾಕ್ಷಸರುಗಳ) ವಿಷಯದಲ್ಲಿಯೂ ನಿನಗೆ ಅಲ್ಲಿ ಹೆಚ್ಚಿನ ಸದ್ಬುದ್ಧಿಯೇ ಉಂಟಾಗಿರುತ್ತದೆ.

ಖಡ್ಗ ಪ್ರಭಾನಿಕರವಿಸ್ಫುರಣೈಸ್ತಥೋಗ್ರೈಃ
ಶೂಲಾಗ್ರಕಾಂತಿನಿವಹೇನ ದೃಶೋಽಸುರಾಣಾಮ್ ।
ಯನ್ನಾಗತಾ ವಿಲಯಮಂಶುಮದಿಂದುಖಂಡ-
ಯೋಗ್ಯಾನನಂ ತವ ವಿಲೋಕಯತಾಂ ತದೇತತ್ ॥19॥

19. ಕತ್ತಿಯ ಹೊಳೆಯುವ ಕಾಂತಿಸಮೂಹದ ಪ್ರಸಾರದಿಂದಲೂ ಹಾಗೂ ಭಯಂಕರವಾದ ಶೂಲದ ತುದಿಯ ಪ್ರಕಾಶದಿಂದಲೂ ರಾಕ್ಷಸರ ಕಣ್ಣುಗಳು ಕುರುಡಾಗಿಹೋಗದೆ ಇದ್ದದ್ದೇಕೆಂದರೆ ಚಂದ್ರಕಲೆಗೆ ಸಮಾನವಾದ ಕಾಂತಿಯುಳ್ಳ ಉತ್ತಮ (ರೂಪಸಂಪನ್ನವಾದ) ನಿನ್ನ ಮುಖವನ್ನೂ ಅವರು ನೋಡುತ್ತಿದ್ದುದೇ ಕಾರಣವಿರಬೇಕು. (ನಿನ್ನ ದರ್ಶನವೇ ಅವರ ಕಣ್ಣುಗಳನ್ನು ರಕ್ಷಿಸಿದೆ).

ದುರ್ವೃತ್ತವೃತ್ತಶಮನಂ ತವ ದೇವಿ ಶೀಲಂ
ರೂಪಂ ತಥೈತದವಿಚಿಂತ್ಯಮತುಲ್ಯಮನ್ಯೈಃ ।
ವೀರ್ಯಂ ಚ ಹಂತೃ ಹೃತದೇವಪರಾಕ್ರಮಾಣಾಂ
ವೈರಿಷ್ವಪಿ ಪ್ರಕಟಿತೈವ ದಯಾ ತ್ವಯೇತ್ಥಮ್ ॥20॥

20. ಎಲೌ ದೇವಿಯೆ, ನಿನ್ನ ನಡತೆಯು ದುರ್ನಡತೆಯವರ ನಡೆಯನ್ನು ತಡೆಗಟ್ಟತಕ್ಕದ್ದು. ರೂಪವಾದರೊ, ಬೇರೊಬ್ಬರಿಗೆ ಹೋಲಿಸಲಾಗದ ಅಚಿಂತ್ಯ ಮಹಿಮಾನ್ವಿತವಾದುದು. ವೀರ್ಯವಾದರೊ, ದೇವತೆಗಳ ಶತ್ರುಗಳನ್ನು ನಾಶ ಗೊಳಿಸತಕ್ಕದ್ದು. ಹೀಗೆ ನೀನು ವೈರಿಗಳಲ್ಲಿಯೂ ದಯೆಯನ್ನೇ ತೋರಿರುತ್ತೀಯೆ.

ಕೇನೋಪಮಾ ಭವತು ತೇಽಸ್ಯ ಪರಾಕ್ರಮಸ್ಯ
ರೂಪಂ ಚ ಶತ್ರುಭಯಕಾರ್ಯತಿಹಾರಿ ಕುತ್ರ ।
ಚಿತ್ತೇ ಕೃಪಾ ಸಮರನಿಷ್ಠುರತಾ ಚ ದೃಷ್ಟಾ
ತ್ವಯ್ಯೇವ ದೇವಿ ವರದೇ ಭುವನತ್ರಯೇಽಪಿ ॥21॥

21. ನಿನ್ನ ಪರಾಕ್ರಮಕ್ಕಾಗಲಿ, ಶತ್ರುಗಳಿಗೆ ಭಯವನ್ನುಂಟುಮಾಡುವುದಾದರೂ ಮನಸ್ಸನ್ನು ಸೆಳೆಯುತ್ತಿರುವ ನಿನ್ನ ರೂಪಕ್ಕಾಗಲಿ-ಉಪಮಾನವೇನಿದ್ದೀತು ?

ಮನಸ್ಸಿನಲ್ಲಿ ದಯೆಯೂ (ಹೊರಗಡೆ) ಯುದ್ಧ (ರಂಗದಲ್ಲಿ) ದಿಟ್ಟತನವೂ ಕಂಡುಬರುತ್ತಿತ್ತಲ್ಲವೆ, ಇದು ಎಲೌ ವರದಳೆ, ಮೂರು ಲೋಕಗಳಲ್ಲಿ ಹುಡುಕಿದರೂ ನಿನ್ನಲ್ಲಿ ಮಾತ್ರವೇ (ಈ ಬಗೆಯ ನಡೆಯು ಕಂಡುಬರುತ್ತಿದೆ).

ತ್ರೈಲೋಕ್ಯಮೇತದಖಿಲಂ ರಿಪುನಾಶನೇನ
ತ್ರಾತಂ ತ್ವಯಾ ಸಮರಮೂರ್ಧನಿ ತೇಽಪಿ ಹತ್ವಾ।
ನೀತಾ ದಿವಂ ರಿಪುಗಣಾ ಭಯಮಪ್ಯಪಾಸ್ತಂ
ಅಸ್ಮಾಕಮುನ್ಮದಸುರಾರಿಭವಂ ನಮಸ್ತೇ ॥22॥

22. ನೀನು ಯುದ್ಧರಂಗದಲ್ಲಿ ಶತ್ರುಸಂಹಾರಮಾಡುವ ಮೂಲಕ ಈ ಎಲ್ಲಾ ಮೂರು ಲೋಕಗಳನ್ನೂ ಕಾಪಾಡಿರುತ್ತೀಯೆ. ಶತ್ರುಗಳ ಆ ಗುಂಪನ್ನಾದರೋ ನೀನು ಸಂಹಾರಮಾಡಿ ಅವರನ್ನೂ ಸ್ವರ್ಗಲೋಕಕ್ಕೆ ಕಳುಹಿಸಿರುತ್ತೀಯೆ. ಹಾಗೆಯೇ ಕೊಬ್ಬಿದ ದೇವಶತ್ರುಗಳಾದ ಅವರಿಂದ ಸಂಭವಿಸಿದ್ದ ನಮ್ಮ ಭಯವನ್ನೂ ಕಳೆದಿರುವೆ. ಇಂಥ ನಿನಗೆ ನಮಸ್ಕಾರವು.

ಶೂಲೇನ ಪಾಹಿ ನೋ ದೇವಿ ಪಾಹಿ ಖಡ್ಗೇನ ಚಾಂಬಿಕೇ ।
ಘಂಟಾಸ್ವನೇನ ನಃ ಪಾಹಿ ಚಾಪಜ್ಯಾ ನಿಃಸ್ವನೇನ ಚ ॥23॥

ಪ್ರಾಚ್ಯಾಂ ರಕ್ಷ ಪ್ರತೀಚ್ಯಾಂ ಚ ಚಂಡಿಕೇ ರಕ್ಷ ದಕ್ಷಿಣೇ ।
ಭ್ರಾಮಣೇನಾತ್ಮಶೂಲಸ್ಯ ಉತ್ತರಸ್ಯಾಂ ತಥೇಶ್ವರಿ ॥24॥

23-24. ಎಲೌ ದೇವಿಯೆ, ನಿನ್ನ ಶೂಲದಿಂದಲೂ ಖಡ್ಗದಿಂದಲೂ ನಮ್ಮನ್ನು ಕಾಪಾಡು. ಅಂಬಿಕೆಯೆ, ನಿನ್ನ ಘಂಟೆಯ ಸದ್ದಿನಿಂದಲೂ ಬಿಲ್ಲಿನ ಹಗ್ಗದ ಧ್ವನಿ ಯಿಂದಲೂ ನಮ್ಮನ್ನು ಕಾಪಾಡು. ಚಂಡಿಕೆಯೆ, ಈಶ್ವರಿಯೆ, ಪೂರ್ವ, ಪಶ್ಚಿಮ, ದಕ್ಷಿಣೋತ್ತರ ದಿಕ್ಕುಗಳಲ್ಲೆಲ್ಲ ನಿನ್ನ ಶೂಲವನ್ನು ತಿರುಗಿಸುವದರಿಂದ ಕಾಪಾಡು ವವಳಾಗು.

ಸೌಮ್ಯಾನಿ ಯಾನಿ ರೂಪಾಣಿ ತ್ರೈಲೋಕ್ಯೇ ವಿಚರಂತಿ ತೇ ।
ಯಾನಿ ಚಾತ್ಯಂತಘೋರಾಣಿ ತೈ ರಕ್ಷಾಸ್ಮಾನ್ ತಥಾ ಭುವಮ್ ॥25॥

ಖಡ್ಗಶೂಲಗದಾದೀನಿ ಯಾನಿ ಚಾಸ್ತ್ರಾಣಿ ತೇಽಂಬಿಕೇ ।
ಕರಪಲ್ಲವಸಂಗೀನಿ ತೈರಸ್ಮಾನ್ ರಕ್ಷ ಸರ್ವತಃ ॥26॥

25-26. ಮೂರು ಲೋಕಗಳಲ್ಲಿಯೂ ಸಂಚರಿಸುವ ನಿನ್ನ ಯಾವ ಸೌಮ್ಯ ರೂಪಗಳಿವೆಯೋ ಹಾಗೂ ಅತಿ ಹೆಚ್ಚಿನ ಭಯಂಕರವಾದ (ರೂಪಗಳಿವೆಯೋ)

ಅವುಗಳಿಂದ ನಮ್ಮನ್ನು ಹಾಗೂ ಭೂಮಿಯನ್ನೂ ಕಾಪಾಡುವವಳಾಗು. ಎಲೌ ಅಂಬಿಕೆಯೆ, ಕತ್ತಿ, ಶೂಲ, ಗದೆ- ಮುಂತಾದ ಯಾವ ನಿನ್ನ ಕೋಮಲವಾದ ಕೈಗಳಲ್ಲಿ ಧರಿಸಿರುವ ಆಯುಧಗಳಿವೆಯೋ ಅವುಗಳಿಂದ ಎಲ್ಲೆಲ್ಲಿಯೂ ನಮ್ಮನ್ನು ಕಾಪಾಡುವವಳಾಗು.

ಋಷಿರುವಾಚ –

ಏವಂ ಸ್ತುತಾ ಸುರೈರ್ದಿವ್ಯೈಃ ಕುಸುಮೈರ್ನಂದನೋದ್ಭವೈಃ ।
ಅರ್ಚಿತಾ ಜಗತಾಂ ಧಾತ್ರೀ ತಥಾ ಗಂಧಾನುಲೇಪನೈಃ ॥27॥

ಭಕ್ತ್ಯಾ ಸಮಸ್ತೈಃ ತ್ರಿದಶೈಃ ದಿವ್ಯೈರ್ಧೂಪೈಸುಃ ಧೂಪಿತಾ ।
ಪ್ರಾಹ ಪ್ರಸಾದಸುಮುಖೀ ಸಮಸ್ತಾನ್ ಪ್ರಣತಾನ್ ಸುರಾನ್ ॥28॥

27-28. ಋಷಿಯಿಂತೆಂದನು : ದೇವತೆಗಳಿಂದ ಹೀಗೆ ಸ್ತೋತ್ರ ಮಾಡಲ್ಪಟ್ಟ ಹಾಗೂ ನಂದನವನದ ಹೂಗಳಿಂದ ಗಂಧ-ಲೇಪನಗಳಿಂದಲೂ ಪೂಜಿಸಲ್ಪಟ್ಟ ಜಗನ್ಮಾತೆಯು ಸಂತುಷ್ಟಳಾದಳು. ಮತ್ತು ಭಕ್ತಿನಮ್ರರಾದ ಎಲ್ಲಾ ದೇವತೆಗಳೂ ದಿವ್ಯವಾದ ಸುವಾಸನೆಯ ಧೂಪಗಳಿಂದ ಸಂತೋಷಗೊಳಿಸಲಾಗಿ ಪ್ರಸಾದಮುಖಿಳಾದ ದೇವಿಯು ನಮಸ್ಕರಿಸಿದ ಸಮಸ್ತದೇವತೆಗಳನ್ನೂ ಕುರಿತು ಹೀಗೆಂದಳು :

ದೇವ್ಯುವಾಚ –

ವ್ರಿಯತಾಂ ತ್ರಿದಶಾಃ ಸರ್ವೇ ಯದಸ್ಮತ್ತೋಽಭಿವಾಂಛಿತಮ್ ॥29॥

29. ದೇವಿಯು ಹೀಗೆ ನುಡಿದಳು : 'ಎಲೈ ದೇವತೆಗಳಿರಾ, ನೀವೆಲ್ಲರೂ ನನ್ನಿಂದ ನಿಮಗೆ ಇಷ್ಟವಾದ ವರಗಳನ್ನು ಬೇಡಿಕೊಳ್ಳಿರಿ'.

ದೇವಾ ಊಚುಃ –

ಭಗವತ್ಯಾ ಕೃತಂ ಸರ್ವಂ ನ ಕಿಂಚಿದವಶಿಷ್ಯತೇ ।
ಯದಯಂ ನಿಹತಃ ಶತ್ರುರಸ್ಮಾಕಂ ಮಹಿಷಾಸುರಃ ॥30॥

ಯದಿ ಚಾಪಿ ವರೋ ದೇಯಃ ತ್ವಯಾಽಸ್ಮಾಕಂ ಮಹೇಶ್ವರಿ ।
ಸಂಸ್ಮೃತಾಽಸಂಸ್ಮೃತಾ ತ್ವಂ ನೋ ಹಿಂಸೇಥಾಃ ಪರಮಾಪದಃ ॥31॥

30-31. ದೇವತೆಗಳಿಂತೆಂದರು : ಪೂಜ್ಯಳಾದ ನಿನ್ನಿಂದ ನಮಗೆ ಎಲ್ಲವೂ ನಡೆಯಿಸಿಕೊಡಲ್ಪಟ್ಟೇ ಇದೆ. ನಾವು ಕೇಳಿಕೊಳ್ಳುವದೇನೂ ಉಳಿದಿರುವದಿಲ್ಲ. ನಮ್ಮ

ಶತ್ರುವಾದ ಮಹಿಷಾಸುರನು ಈಗಾಗಲೇ ಸಂಹರಿಸಲ್ಪಟ್ಟಿರುವನು. ಎಲೌ ಮಹೇಶ್ವರಿಯೆ, ಇನ್ನೂ ನೀನು ವರವನ್ನು ನಮಗೆ ಕೊಡಬೇಕೆನ್ನುವೆಯಾದರೆ ನಾವು ಸ್ಮರಣೆಮಾಡಿದಾಗಲೆಲ್ಲ ನೀನು ನಮ್ಮ ಸಂಕಟಗಳನ್ನು ನಾಶಗೊಳಿಸುತ್ತಿರಬೇಕು.

ಯಶ್ಚ ಮರ್ತ್ಯಃ ಸ್ತವೈರೇಭಿಃ ತ್ವಾಂ ಸ್ತೋಷ್ಯತ್ಯಮಲಾನನೇ ।
ತಸ್ಯ ವಿತ್ತರ್ಧಿವಿಭವೈರ್ಧನದಾರಾದಿಸಂಪದಾಮ್ ॥32॥

ವೃದ್ಧಯೇऽಸ್ಮತ್ಪ್ರಸನ್ನಾ ತ್ವಂ ಭವೇಥಾಃ ಸರ್ವದಾಂಬಿಕೇ ॥33॥

32-33. 'ಎಲೌ ನಿರ್ಮಲಾನನೆಯೆ, ಇನ್ನೂ ಯಾವ ಮನುಷ್ಯನು ಈ ಸ್ತೋತ್ರಗಳಿಂದ ನಿನ್ನನ್ನು ಸ್ತುತಿಮಾಡುವನೋ ಅವನಿಗೆ ಐಶ್ವರ್ಯ, ಸಮೃದ್ಧಿ, ವೈಭವ, ಹಣ, ಹೆಂಡತಿ – ಮುಂತಾದ ಸಂಪತ್ತುಗಳ ಅಭಿವೃದ್ಧಿಗೆ ಯಾವಾಗಲೂ ನೀನು ಕಾರಣಳಾಗು. ಎಲೌ ಅಂಬಿಕೆಯೆ, ನಮಗೆ ಪ್ರಸನ್ನಳಾಗಿರುವ ನೀನು ಈ ವರವನ್ನು ದಯಪಾಲಿಸು.

ಋಷಿರುವಾಚ –

ಇತಿ ಪ್ರಸಾದಿತಾ ದೇವೈರ್ಜಗತೋऽರ್ಥೇ ತಥಾತ್ಮನಃ ।
ತಥೇತ್ಯುಕ್ತ್ವಾ ಭದ್ರಕಾಲೀ ಬಭೂವಾಂತರ್ಹಿತಾ ನೃಪ ॥34॥

34. ಋಷಿಯಿಂತೆಂದನು : ಎಲೌ ರಾಜನೆ, ದೇವತೆಗಳಿಂದ ಹೀಗೆ ತಮಗಾಗಿಯೂ ಲೋಕ(ಕಲ್ಯಾಣ)ಕ್ಕಾಗಿಯೂ ಪ್ರಾರ್ಥಿಸಲ್ಪಟ್ಟ ದೇವಿಯಾದ ಭದ್ರಕಾಳಿಯು ಹಾಗೇ ಆಗಲಿ - ಎಂದು ಹೇಳಿದವಳಾಗಿ ಅಂತರ್ಧಾನಳಾದಳು.

ಇತ್ಯೇತತ್ ಕಥಿತಂ ಭೂಪ ಸಂಭೂತಾ ಸಾ ಯಥಾ ಪುರಾ ।
ದೇವೀ ದೇವಶರೀರೇಭ್ಯೋ ಜಗತ್ತ್ರಯಹಿತೈಷಿಣೀ ॥35॥

ಪುನಶ್ಚ ಗೌರೀದೇಹಾತ್ ಸಾ ಸಮುದ್ಭೂತಾ ಯಥಾऽಭವತ್ ।
ವಧಾಯ ದುಷ್ಟದೈತ್ಯಾನಾಂ ತಥಾ ಶುಂಭನಿಶುಂಭಯೋಃ ॥36॥

ರಕ್ಷಣಾಯ ಚ ಲೋಕಾನಾಂ ದೇವಾನಾಮುಪಕಾರಿಣೀ ।
ತಚ್ಛೃಣುಷ್ವ ಮಯಾಖ್ಯಾತಂ ಯಥಾವತ್ಕಥಯಾಮಿ ತೇ ॥ ಹ್ರೀಂ ಓಮ್
॥37॥

35-37. ಎಲೈ ರಾಜನೆ, ಹಿಂದೆ ಆಕೆಯು ಹೇಗೆ ಅವತಾರಮಾಡಿದಳು - ಎಂಬಿದನ್ನು ನಿನಗೆ ಹೇಳಿರುತ್ತೇನೆ. ದೇವತೆಗಳೆಲ್ಲರ ಶರೀರಗಳಿಂದ ಹೊರಬಿದ್ದ

(ತೇಜಸ್ಸು) ಮೂರು ಲೋಕಗಳಿಗೂ ಹಿತವನ್ನುಂಟುಮಾಡುವ ದೇವಿಯಾಗಿ ಆವಿರ್ಭವಿಸಿದ (ಕಥೆಯನ್ನು ಈವರೆಗೆ ಕೇಳಿದೆಯಷ್ಟೆ). ಮತ್ತೆ ಆಕೆಯು ಪಾರ್ವತಿಯ ದೇಹದಿಂದ ಹುಟ್ಟಿದವಳಾಗಿ ದುಷ್ಟರಾದ ರಾಕ್ಷಸರ ಹಾಗೂ ಶುಂಭ ನಿಶುಂಭರುಗಳ ವಧೆಗಾಗಿಯೂ ಲೋಕಗಳನ್ನು ಕಾಪಾಡುವದಕ್ಕಾಗಿಯೂ - ಹೇಗೆ ಕಾರ್ಯಪ್ರವೃತ್ತ ಳಾದಳೋ ಅದನ್ನು ಕೇಳುವವನಾಗು. ದೇವತೆಗಳಿಗೆ ಉಪಕಾರಿಣಿಯಾದ ಆಕೆಯ ಕಥೆಯನ್ನು ನಡೆದಂತೆ ನಿನಗೆ ಹೇಳುವೆನು.

ಇತಿ ಶ್ರೀ ಮಾರ್ಕಂಡೇಯಪುರಾಣೇ ದೇವೀಮಹಾತ್ಮ್ಯೇ
ಚತುರ್ಥೋಽಧ್ಯಾಯಃ

---

## ಐದನೆಯ ಅಧ್ಯಾಯ

ಧ್ಯಾನಮ್ –

ಘಂಟಾಶೂಲಹಲಾನಿ ಶಂಖಮುಸಲೇ ಚಕ್ರಂ ಧನುಃ ಸಾಯಕಂ
ಹಸ್ತಾಬ್ಜೈರ್ದಧತೀಂ ಘನಾಂತವಿಲಸತ್‌ಶೀತಾಂಶುತುಲ್ಯಪ್ರಭಾಮ್ ।
ಗೌರೀದೇಹಸಮುದ್ಭವಾಂ ತ್ರಿಜಗತಾಮಾಧಾರಭೂತಾಂ ಮಹಾ-
ಪೂರ್ವಾಮತ್ರ ಸರಸ್ವತೀಮನುಭಜೇ ಶುಂಭಾದಿದೈತ್ಯಾರ್ದಿನೀಮ್ ॥

ಘಂಟೆ, ಶೂಲ, ನೇಗಿಲು, ಶಂಖ, ಒನಕೆ, ಚಕ್ರ, ಬಿಲ್ಲು, ಬಾಣ-ಗಳನ್ನು ಕರಕಮಲಗಳಿಂದ ಧರಿಸಿದವಳಾಗಿ, ಮೋಡಗಳು ಕೊನೆಗೊಳ್ಳಲಾಗಿ ಬೆಳಗುವ ಚಂದ್ರನಂತೆ, ಕಾಂತಿಯುಳ್ಳವಳಾದ, ಗೌರೀದೇವಿಯ ದೇಹದಿಂದ ಹುಟ್ಟಿದ, ಮೂರು ಲೋಕಗಳಿಗೂ ಆಧಾರಭೂತಳಾದ ಮತ್ತು ಶುಂಭನೇ ಮೊದಲಾದ ರಾಕ್ಷಸರನ್ನು ಸಂಹಾರಮಾಡಿದ ಮಹಾಸರಸ್ವತಿಯನ್ನು ಭಜಿಸುವೆನು.

ಓಂ ಕ್ಲೀಂ ಋಷಿರುವಾಚ –

ಪುರಾ ಶುಂಭನಿಶುಂಭಾಭ್ಯಾಮಸುರಾಭ್ಯಾಂ ಶಚೀಪತೇಃ ।
ತ್ರೈಲೋಕ್ಯಂ ಯಜ್ಞಭಾಗಾಶ್ಚ ಹೃತಾ ಮದಬಲಾಶ್ರಯಾತ್ ॥1॥

ತಾವೇವ ಸೂರ್ಯತಾಂ ತದ್ವದಧಿಕಾರಂ ತಥೈಂದವಮ್ ।
ಕೌಬೇರಮಥ ಯಾಮ್ಯಂ ಚ ಚಕ್ರಾತೇ ವರುಣಸ್ಯ ಚ ॥2॥

ತಾವೇವ ಪವನರ್ಧಿಂ ಚ ಚಕ್ರತುರ್ವಹ್ನಿಕರ್ಮ ಚ ।

1-2. ಋಷಿಯಿಂತೆಂದನು : ಹಿಂದೆ ಶುಂಭ-ನಿಶುಂಭರೆಂಬ ಹೆಸರಿನ ಇಬ್ಬರು ರಾಕ್ಷಸರುಗಳಿಂದ ದೇವೇಂದ್ರನ ತ್ರೈಲೋಕ್ಯರಾಜ್ಯವೂ ಯಜ್ಞಭಾಗಗಳೂ ಬಲವೀರ್ಯಗಳಿಂದ ಅಪಹರಿಸಲ್ಪಟ್ಟವು. ಅವರಿಬ್ಬರೇ ಸೂರ್ಯನ ಕೆಲಸವನ್ನೂ ಹಾಗೂ ಸ್ಥಾನವನ್ನೂ ಆಕ್ರಮಿಸಿಬಿಟ್ಟರು. ಮತ್ತು ಚಂದ್ರನ , ಕುಬೇರನ, ಯಮನ, ವರುಣನ, ವಾಯುವಿನ, ಅಗ್ನಿಯ - ಹೀಗೆ ಎಲ್ಲಾ ದೇವತೆಗಳ ಕರ್ಮಗಳನ್ನೂ ಸ್ಥಾನ-ಅಧಿಕಾರಗಳನ್ನೂ ಹೊಂದಿ, ನಡೆಸಲಾರಂಭಿಸಿದರು.

ತತೋ ದೇವಾ ವಿನಿರ್ಧೂತಾ ಭ್ರಷ್ಟರಾಜ್ಯಾಃ ಪರಾಜಿತಾಃ ।
ಹೃತಾಧಿಕಾರಾಸ್ತ್ರಿದಶಾಸ್ತಾಭ್ಯಾಂ ಸರ್ವೇ ನಿರಾಕೃತಾಃ ॥3॥
ಮಹಾಸುರಾಭ್ಯಾಂ ತಾಂ ದೇವೀಂ ಸಂಸ್ಮರಂತ್ಯಪರಾಜಿತಾಮ್ ।

3. ಅನಂತರ ದೇವತೆಗಳು ಆ ಇಬ್ಬರು ರಾಕ್ಷಸರ (ಹಾವಳಿಯಿಂದ) ರಾಜ್ಯಗಳನ್ನು ಕಳೆದುಕೊಂಡು ಸೋತವರಾಗಿ, (ಸ್ವರ್ಗದಿಂದ) ಹೊರತಳ್ಳಲ್ಪಟ್ಟವ ರಾಗಿ ಅಧಿ ಕಾರಗಳಿಂದಲೂ ದೂಡಲ್ಪಟ್ಟವರಾಗಿಬಿಟ್ಟರು. ಆಗ ಆ ದೇವತೆಗಳು ಪರಾಜಯವನ್ನೇ ಎಂದೆಂದಿಗೂ ಕಾಣದ ಆ ದೇವಿಯನ್ನು ನೆನೆಸುವವರಾದರು.

ತಯಾಸ್ಮಾಕಂ ವರೋ ದತ್ತೋಃ ಯಥಾಪತ್ಸು ಸ್ಮೃತಾಖಿಲಾಃ ।
ಭವತಾಂ ನಾಶಯಿಷ್ಯಾಮಿ ತತ್ ಕ್ಷಣಾತ್ ಪರಮಾಪದಃ ॥4॥

ಇತಿ ಕೃತ್ವಾ ಮತಿಂ ದೇವಾ ಹಿಮವಂತಂ ನಗೇಶ್ವರಮ್ ।
ಜಗ್ಮುಸ್ತತ್ರ ತತೋ ದೇವೀಂ ವಿಷ್ಣುಮಾಯಾಂ ಪ್ರತುಷ್ಟುವುಃ ॥5॥

4-5. 'ನಮ್ಮಗಳಿಗೆ ಆ ದೇವಿಯು ತಾನು ಕಷ್ಟಕಾಲದಲ್ಲಿ ಸ್ಮರಿಸಲ್ಪಟ್ಟರೆ ಆ ಕೂಡಲೆ ನಿಮ್ಮ ಎಲ್ಲ ರೀತಿಯ ಹೆಚ್ಚಿನ ಕಷ್ಟಗಳನ್ನೂ ನಾಶಗೊಳಿಸಿ ಬಿಡುವೆನು- ಎಂದು ವರವನ್ನು ನೀಡಿರುತ್ತಾಳೆ' - ಹೀಗೆಂದು ಭಾವಿಸಿಕೊಂಡು ದೇವತೆಗಳು ಪರ್ವತ ರಾಜನಾದ ಹಿಮಾಚಲನೆಡೆಗೆ ಹೊರಟರು. ಅನಂತರ ಅಲ್ಲಿ ವಿಷ್ಣುಮಾಯೆಯಾದ ದೇವಿಯನ್ನು ಕುರಿತು ಹೀಗೆ ಸ್ತೋತ್ರ ಮಾಡಿದರು.

ದೇವಾ ಊಚುಃ –

ನಮೋ ದೇವ್ಯೈ ಮಹಾದೇವ್ಯೈ ಶಿವಾಯೈ ಸತತಂ ನಮಃ ।
ನಮಃ ಪ್ರಕೃತ್ಯೈ ಭದ್ರಾಯೈ ನಿಯತಾಃ ಪ್ರಣತಾಃ ಸ್ಮ ತಾಮ್ ॥6॥

ರೌದ್ರಾಯೈ ನಮೋ ನಿತ್ಯಾಯೈ ಗೌರ್ಯೈ ಧಾತ್ರ್ಯೈ ನಮೋ ನಮಃ ।
ಜ್ಯೋತ್ಸ್ನಾಯೈ ಚೇಂದುರೂಪಿಣ್ಯೈ ಸುಖಾಯೈ ಸತತಂ ನಮಃ ॥7॥

6-7. ದೇವತೆಗಳಿಂತೆಂದರು : ಮಹಾದೇವಿಯೂ ಶಿವೆಯೂ ಪ್ರಕೃತಿ ಮಾತೆಯೂ ಮಂಗಳದೇವಿಯೂ ಆದ ತಾಯಿಗೆ ನಮಸ್ಕಾರ. ಆಕೆಯನ್ನು ನೇಮದಿಂದ (ಗೊತ್ತಾದ ಕಟ್ಟಲೆಯಿಂದ) ಯಾವಾಗಲೂ ನಮಸ್ಕರಿಸುವೆವು. ರುದ್ರನ ಮಹಿಮಾರೂಪಳೂ ನಿತ್ಯಳೂ ಗೌರವರ್ಣದವಳೂ ಆದ, ಪೋಷಕಿಯಾದ ದೇವಿಗೆ ನಮಸ್ಕಾರಗಳು. ಚಂದ್ರರೂಪಳೂ ಬೆಳದಿಂಗಳಿನ ರೂಪಳೂ ಆದ ಸುಖ-ಸ್ವರೂಪಳಾದ ದೇವಿಗೆ ಯಾವಾಗಲೂ ನಮ್ಮ(ಅನಂತ) ನಮಸ್ಕಾರಗಳಿರಲಿ!

**ಕಲ್ಯಾಣ್ಯೈ ಪ್ರಣತಾಂ ವೃದ್ಧ್ಯೈ ಸಿದ್ಧ್ಯೈ ಕೂರ್ಮ್ಯೈ ನಮೋ ನಮಃ ।**
**ನೈರ್ಋತ್ಯೈ ಭೂಭೃತಾಂ ಲಕ್ಷ್ಮ್ಯೈ ಶರ್ವಾಣ್ಯೈ ತೇ ನಮೋ ನಮಃ ॥8॥**

**ದುರ್ಗಾಯೈ ದುರ್ಗಪಾರಾಯೈ ಸಾರಾಯೈ ಸರ್ವಕಾರಿಣ್ಯೈ ।**
**ಖ್ಯಾತ್ಯೈ ತಥೈವ ಕೃಷ್ಣಾಯೈ ಧೂಮ್ರಾಯೈ ಸತತಂ ನಮಃ ॥9॥**

**ಅತಿಸೌಮ್ಯಾತಿರುದ್ರಾಯೈ ನತಾಸ್ತಸ್ಯೈ ನಮೋ ನಮಃ ।**
**ನಮೋ ಜಗತ್ಪ್ರತಿಷ್ಠಾಯೈ ದೇವ್ಯೈ ಕೃತ್ಯೈ ನಮೋ ನಮಃ ॥10॥**

8-10. ಕಲ್ಯಾಣಿಯೂ ನಮಸ್ಕರಿಸಿದವರನ್ನು ಬೆಳೆಸುವವಳೂ ಸಿದ್ಧಿರೂಪಳೂ ಆದವಳಿಗೆ ನಮಸ್ಕಾರ. ನಿಋುಋುತಿಯ ಶಕ್ತಿರೂಪಳೂ ಭೂಪತಿಗಳ ರಾಜ್ಯಲಕ್ಷ್ಮಿಯೂ ಆದ, ಶರ್ವನೆಂಬ (ಶಿವನ ಪತ್ನಿಯಾದ) ನಿನಗೆ ನಮಸ್ಕಾರ. ದುರ್ಗೆಯೂ ದುರ್ಗಗಳನ್ನು ದಾಟಿದವಳೂ (ಸರ್ವ)ಸಾರಳೂ ಸರ್ವವನ್ನೂ ಉಂಟುಮಾಡುವವಳೂ ಕೀರ್ತಿರೂಪಳೂ, ಕೃಷ್ಣವರ್ಣಳೂ ಧೂಮ್ರವರ್ಣಳೂ ಆದ ದೇವಿಗೆ ಯಾವಾಗಲೂ ನಮಸ್ಕಾರ. ಅತಿಸೌಮ್ಯಳೂ ಅತಿರೌದ್ರಳೂ ಆದ ಆಕೆಗೆ ನಮಸ್ಕರಿಸುವೆವು. ಜಗತ್ತಿಗೆ ಆಧಾರಳಾದ ದೇವಿಗೆ ಹಾಗೂ ಪ್ರಯತ್ನರೂಪಳಿಗೆ (ಅನಂತ) ನಮಸ್ಕಾರಗಳು.

**ಯಾ ದೇವೀ ಸರ್ವಭೂತೇಷು ವಿಷ್ಣುಮಾಯೇತಿ ಶಬ್ದಿತಾ ॥**
**ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥11॥[1]**

**ಯಾ ದೇವೀ ಸರ್ವಭೂತೇಷು ಚೇತನೇತ್ಯಭಿಧೀಯತೇ ॥12॥**

**ಯಾ ದೇವೀ ಸರ್ವಭೂತೇಷು ಬುದ್ಧಿರೂಪೇಣ ಸಂಸ್ಥಿತಾ ॥13॥**

---

1. ಈ ಶ್ಲೋಕಾರ್ಧವನ್ನು ಮುಂದಿನ 30ನೆಯ ಶ್ಲೋಕದ ಪೂರ ಆಯಾ ಶ್ಲೋಕಗಳ ಪೂರ್ವಾರ್ಧದೊಡನೆ ಸೇರಿಸಿಕೊಂಡು (ಅನುಷಂಗಮಾಡಿಕೊಂಡು) ಓದಬೇಕು;

**ಯಾ ದೇವೀ ಸರ್ವಭೂತೇಷು ನಿದ್ರಾರೂಪೇಣ ಸಂಸ್ಥಿತಾ ॥14॥**

11-14. ಯಾವ ದೇವಿಯು ಎಲ್ಲಾ ಪ್ರಾಣಿಗಳಲ್ಲಿಯೂ ವಿಷ್ಣುಮಾಯೆಯೆನಿಸಿ ವ್ಯಾಪಿಸಿಕೊಂಡಿರುವಳೋ ಆಕೆಗೆ ನಮಸ್ಕಾರ, ಆಕೆಗೆ ನಮಸ್ಕಾರಗಳು. ಹಾಗೆಯೇ ಎಲ್ಲಾ ಪ್ರಾಣಿಗಳಲ್ಲಿಯೂ ಯಾವಾಕೆಯು ಚೇತನಳೆನಿಸಿರುವಳೋ ಬುದ್ಧಿರೂಪ ದಿಂದಿದ್ದು ಕೊಂಡಿರುವಳೋ, ನಿದ್ರಾರೂಪದಿಂದಿದ್ದು ಕೊಂಡಿರುವಳೋ ಆಕೆಗೆ (ಮೂರು ಬಾರಿ) ವಂದನೆಗಳು.

**ಯಾ ದೇವೀ ಸರ್ವಭೂತೇಷು ಕ್ಷುಧಾರೂಪೇಣ ಸಂಸ್ಥಿತಾ ॥15॥**
**ಯಾ ದೇವೀ ಸರ್ವಭೂತೇಷು ಛಾಯಾರೂಪೇಣ ಸಂಸ್ಥಿತಾ ॥16॥**
**ಯಾ ದೇವೀ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ ॥17॥**
**ಯಾ ದೇವೀ ಸರ್ವಭೂತೇಷು ತೃಷ್ಣಾರೂಪೇಣ ಸಂಸ್ಥಿತಾ ॥18॥**

15-18. ಯಾವ ದೇವಿಯು ಎಲ್ಲಾ ಪ್ರಾಣಿಗಳಲ್ಲಿಯೂ ಹಸಿವಿನ ರೂಪದಿಂದಿದ್ದು ಕೊಂಡಿರುವಳೋ, ನೆರಳಿನ ರೂಪದಿಂದಿದ್ದು ಕೊಂಡಿರುವಳೋ, ಶಕ್ತಿರೂಪದಿಂದಿದ್ದು ಕೊಂಡಿರುವಳೋ, ಆಸೆಯ ರೂಪದಿಂದಿದ್ದು ಕೊಂಡಿರುವಳೋ ಆಕೆಗೆ ಮತ್ತೆ ಮತ್ತೆ ನಮಸ್ಕಾರಗಳು.

**ಯಾ ದೇವೀ ಸರ್ವಭೂತೇಷು ಕ್ಷಾಂತಿರೂಪೇಣ ಸಂಸ್ಥಿತಾ ॥19॥**
**ಯಾ ದೇವೀ ಸರ್ವಭೂತೇಷು ಜಾತಿರೂಪೇಣ ಸಂಸ್ಥಿತಾ ॥20॥**
**ಯಾ ದೇವೀ ಸರ್ವಭೂತೇಷು ಲಜ್ಜಾರೂಪೇಣ ಸಂಸ್ಥಿತಾ ॥21॥**
**ಯಾ ದೇವೀ ಸರ್ವಭೂತೇಷು ಶಾಂತಿರೂಪೇಣ ಸಂಸ್ಥಿತಾ ॥22॥**

19-22. ಯಾವ ದೇವಿಯು ಎಲ್ಲಾ ಪ್ರಾಣಿಗಳಲ್ಲಿಯೂ ಸಹನೆಯ ರೂಪ ದಿಂದಿದ್ದುಕೊಂಡಿರುವಳೋ, (ಮನುಷ್ಯತ್ವ, ಗೋತ್ವ, ಪಕ್ಷಿತ್ವವೇ-ಮುಂತಾದ) ಸಾಮಾನ್ಯರೂಪದಿಂದಿದ್ದು ಕೊಂಡಿರುವಳೋ,[1] ನಾಚಿಕೆಯರೂಪದಿಂದಿದ್ದು ಕೊಂಡಿರುವಳೋ, ಶಾಂತಿರೂಪದಿಂದಿದ್ದು ಕೊಂಡಿರುವಳೋ ಆಕೆಗೆ ಮತ್ತೆ ಮತ್ತೆ ನಮಸ್ಕಾರಗಳು.

---

1. ಜಾತಿಯೆಂಬುದನ್ನು ಸಾಮಾನ್ಯವೆಂದೂ ವ್ಯಕ್ತಿಯನ್ನು ವಿಶೇಷವೆಂದೂ ಕರೆಯುವದು ಶಾಸ್ತ್ರಕಾರರ ಪ್ರಕ್ರಿಯೆಯಾಗಿದೆ.

ಯಾ ದೇವೀ ಸರ್ವಭೂತೇಷು ಶ್ರದ್ಧಾರೂಪೇಣ ಸಂಸ್ಥಿತಾ ॥23॥

ಯಾ ದೇವೀ ಸರ್ವಭೂತೇಷು ಕಾಂತಿರೂಪೇಣ ಸಂಸ್ಥಿತಾ ॥24॥

ಯಾ ದೇವೀ ಸರ್ವಭೂತೇಷು ಲಕ್ಷ್ಮೀರೂಪೇಣ ಸಂಸ್ಥಿತಾ ॥25॥

ಯಾ ದೇವೀ ಸರ್ವಭೂತೇಷು ವೃತ್ತಿರೂಪೇಣ ಸಂಸ್ಥಿತಾ ॥26॥

23-26. ಯಾವ ದೇವಿಯು ಎಲ್ಲಾ ಭೂತಗಳಲ್ಲಿಯೂ ಶ್ರದ್ಧಾರೂಪದಿಂದಿದ್ದುಕೊಂಡಿರುವಳೋ, ಕಾಂತಿರೂಪದಿಂದಿದ್ದುಕೊಂಡಿರುವಳೋ ಲಕ್ಷ್ಮೀರೂಪದಿಂದಿದ್ದುಕೊಂಡಿರುವಳೋ, ವೃತ್ತಿರೂಪದಿಂದಿದ್ದುಕೊಂಡಿರುವಳೋ ಆಕೆಗೆ ಮತ್ತೆ ಮತ್ತೆ ನಮಸ್ಕಾರಗಳು.

ಯಾ ದೇವೀ ಸರ್ವಭೂತೇಷು ಸ್ಮೃತಿರೂಪೇಣ ಸಂಸ್ಥಿತಾ ॥27॥

ಯಾ ದೇವೀ ಸರ್ವಭೂತೇಷು ದಯಾರೂಪೇಣ ಸಂಸ್ಥಿತಾ ॥28॥

ಯಾ ದೇವೀ ಸರ್ವಭೂತೇಷು ತುಷ್ಟಿರೂಪೇಣ ಸಂಸ್ಥಿತಾ ॥29॥

ಯಾ ದೇವೀ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ ॥30॥

ಯಾ ದೇವೀ ಸರ್ವಭೂತೇಷು ಭ್ರಾಂತಿರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥31॥

27-31. ಯಾವ ದೇವಿಯು ಸಮಸ್ತಪ್ರಾಣಿಗಳಲ್ಲಿಯೂ ಸ್ಮೃತಿರೂಪದಿಂದಿದ್ದುಕೊಂಡಿರುವಳೋ, ದಯಾರೂಪದಿಂದಿದ್ದು ಕೊಂಡಿರುವಳೋ ತುಷ್ಟಿರೂಪದಿಂದಿದ್ದು ಕೊಂಡಿರುವಳೋ, ತಾಯಿಯ ರೂಪದಿಂದಿದ್ದು ಕೊಂಡಿರುವಳೋ, ಭ್ರಾಂತಿರೂಪದಿಂದಿದ್ದು ಕೊಂಡಿರುವಳೋ ಆಕೆಗೆ ಮೂರು ಮೂರು ಬಾರಿ ನಮಸ್ಕಾರಗಳು.

ಇಂದ್ರಿಯಾಣಾಮಧಿಷ್ಠಾತ್ರೀ ಭೂತಾನಾಂ ಚಾಖಿಲೇಷು ಯಾ ।
ಭೂತೇಷು ಸತತಂ ತಸ್ಯೈ ವ್ಯಾಪ್ತ್ಯೈದೇವ್ಯೈ ನಮೋ ನಮಃ ॥32॥

ಚಿತಿರೂಪೇಣ ಯಾ ಕೃತ್ಸ್ನಮೇತದ್ ವ್ಯಾಪ್ಯ ಸ್ಥಿತಾ ಜಗತ್ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥33॥

32-33. ಇಂದ್ರಿಯಗಳಿಗೆ ಆಶ್ರಯಳಾಗಿಯೂ ಎಲ್ಲಾ ಭೂತಗಳಲ್ಲಿಯೂ ಸತತವಾಗಿ ವ್ಯಾಪಿಸಿರುವವಳಾಗಿಯೂ ಯಾವಳಿರುವಳೋ ಅಂಥ ವ್ಯಾಪ್ತಿ ದೇವಿಗೆ ನಮಸ್ಕಾರಗಳು. ಮತ್ತು ಯಾವಾಕೆಯು ಚಿತ್ಸ್ವರೂಪದಿಂದ ಸಮಸ್ತವನ್ನೂ

ವ್ಯಾಪಿಸಿದವಳಾಗಿ ಜಗತ್ತಿನಲ್ಲೆಲ್ಲ ಇದ್ದುಕೊಂಡಿರುವಳೋ ಆ ದೇವಿಗೆ ಮೂರು ಬಾರಿ ನಮಸ್ಕಾರಗಳು.

ಸ್ತುತಾ ಸುರೈಃ ಪೂರ್ವಮಭೀಷ್ಟ ಸಂಶ್ರಯಾ-
ತ್ತಥಾ ಸುರೇಂದ್ರೇಣ ದಿನೇಷು ಸೇವಿತಾ ।
ಕರೋತು ಸಾ ನಃ ಶುಭಹೇತುರೀಶ್ವರೀ
ಶುಭಾನಿ ಭದ್ರಾಣ್ಯಭಿಹಂತು ಚಾಪದಃ ॥34॥

34. ಹಿಂದೆ ದೇವತೆಗಳಿಂದ ಸ್ತುತಿಸಲ್ಪಟ್ಟವಳಾಗಿ ಇಷ್ಟಾರ್ಥಗಳನ್ನು ನೀಡಿದವಳಾಗಿಯೂ ಹಾಗೂ ದೇವೇಂದ್ರನಿಂದ (ಕಷ್ಟದ) ದಿನಗಳಲ್ಲಿ ಸೇವಿಸಲ್ಪಟ್ಟವಳಾಗಿಯೂ ಇರುವ, ಶುಭಕಾರಣಳೂ ಈಶ್ವರಿಯೂ ಆದ ಆಕೆಯು ನಮ್ಮಗಳಿಗೆ ಶುಭಗಳನ್ನೂ ಮಂಗಳಗಳನ್ನೂ ಉಂಟುಮಾಡಲಿ. ಆಪತ್ತುಗಳನ್ನು ನಾಶಗೊಳಿಸುವವಳಾಗಲಿ !

ಯಾ ಸಾಂಪ್ರತಂ ಚೋದ್ಧ ತದೈತ್ಯತಾಪಿತೈ-
ರಸ್ಮಾಭಿರೀಶಾ ಚ ಸುರೈರ್ನಮಸ್ಯತೇ ।
ಯಾ ಚ ಸ್ಮೃತಾ ತತ್ ಕ್ಷಣಮೇವ ಹಂತಿ ನಃ
ಸರ್ವಾಪದೋ ಭಕ್ತಿವಿನಮ್ರಮೂರ್ತಿಭಿಃ ॥35॥

35. ಯಾವ ದೇವಿಯು ಈಗ ಕೊಬ್ಬಿದ ರಾಕ್ಷಸರ (ಬಲದಿಂದ) ಬೆಂದಿರುವ ದೇವತೆಗಳಾದ ನಮ್ಮಗಳಿಂದ ನಮಸ್ಕರಿಸಲ್ಪಡುತ್ತಿರುವಳೋ ಮತ್ತು ಯಾವಾಕೆಯು ನೆನಪಿಸಿಕೊಂಡಮಾತ್ರದಿಂದ ಆ ಕೂಡಲೆ ನಮ್ಮ ಸರ್ವಾಪತ್ತುಗಳನ್ನೂ ಕಳೆದುಬಿಡುವಳೋ ಅವಳು ಭಕ್ತಿಯಿಂದ ಬಾಳುವ ಸ್ವಭಾವದವರಾದ (ನಮ್ಮನ್ನು ಕಾಪಾಡಲಿ).

ಋಷಿರುವಾಚ –

ಏವಂ ಸ್ತವಾಭಿಯುಕ್ತಾನಾಂ ದೇವಾನಾಂ ತತ್ರ ಪಾರ್ವತೀ ।
ಸ್ನಾತುಮಭ್ಯಾಯಯೌ ತೋಯೇ ಜಾಹ್ನವ್ಯಾ ನೃಪನಂದನ ॥36॥

ಸಾऽಬ್ರವೀತ್ತಾನ್ ಸುರಾನ್ ಸುಭ್ರೂರ್ಭವದ್ಭಿಃ ಸ್ತೂಯತೇऽತ್ರ ಕಾ ।
ಶರೀರಕೋಶತಶ್ಚಾಸ್ಯಾಃ ಸಮೂದ್ಭೂತಾಬ್ರವೀಚ್ಛಿವಾ ॥37॥

ಸ್ತೋತ್ರಂ ಮಮೈತತ್ ಕ್ರಿಯತೇ ಶುಂಭದೈತ್ಯನಿರಾಕೃತೈಃ ।
ದೇವೈಃ ಸಮೇತ್ಯೈಃ ಸಮರೇ ನಿಶುಂಭೇನ ಪರಾಜಿತೈಃ ॥38॥

36-38. ಋಷಿಯಿಂತೆಂದನು : ಎಲೈ ರಾಜಪುತ್ರನೆ, ಹೀಗೆ ಸ್ತುತಿ ಮಾಡುತ್ತಿದ್ದ ದೇವತೆಗಳ ಸಮಕ್ಷಮದಲ್ಲಿಯೇ ಪಾರ್ವತಿಯು ಗಂಗಾನದಿಯ ನೀರಿನಲ್ಲಿ ಸ್ನಾನಮಾಡುವದಕ್ಕಾಗಿ ಹೊರಟಳು. ಶೋಭನವಾದ ಹುಬ್ಬುಗಳುಳ್ಳ ಆಕೆಯು ಆ ದೇವತೆಗಳನ್ನು ಕುರಿತು ಹೀಗೆಂದಳು. 'ನೀವುಗಳು ಯಾವ ದೇವಿಯನ್ನು ಸ್ತುತಿಮಾಡುತ್ತಿರುವಿರಿ ?' ಹೀಗೆನ್ನುತ್ತಿರುವಂತೆಯೇ ಆಕೆಯ ಶರೀರಕೋಶದಿಂದ ಹುಟ್ಟಿದ (ಅಂಶಳಾದ) ಶಿವೆಯು ಹೀಗೆಂದಳು : 'ಶುಂಭ ರಾಕ್ಷಸನಿಂದ ತಿರಸ್ಕರಿಸಲ್ಪಟ್ಟು ನಿಶುಂಭನಿಂದ ಯುದ್ಧದಲ್ಲಿ ಸೋಲಿಸಲ್ಪಟ್ಟ ಒಟ್ಟುಗೂಡಿದ ದೇವತೆಗಳಿಂದ ನನ್ನನ್ನು ಕುರಿತು ಸ್ತೋತ್ರವು ಮಾಡಲ್ಪಡುತ್ತಿದೆಯಲ್ಲವೆ ?'

ಶರೀರಕೋಶಾದ್ಯತ್ತಸ್ಯಾಃ ಪಾರ್ವತ್ಯಾ ನಿಃಸೃತಾಂಬಿಕಾ ।
ಕೌಶಿಕೀತಿ ಸಮಸ್ತೇಷು ತತೋ ಲೋಕೇಷು ಗೀಯತೇ ॥39॥

ತಸ್ಯಾಂ ವಿನಿರ್ಗತಾಯಾಂ ತು ಕೃಷ್ಣಾಭೂತ್ ಸಾಽಪಿ ಪಾರ್ವತೀ ।
ಕಾಲಿಕೇತಿ ಸಮಾಖ್ಯಾತಾ ಹಿಮಾಚಲಕೃತಾಶ್ರಯಾ ॥40॥

39-40. ಪಾರ್ವತಿಯ ಶರೀರಕೋಶದಿಂದ ಯಾವ ಅಂಬಿಕೆಯು ಹೀಗೆ ಹೊರಬಂದಳೋ ಆ ಕಾರಣದಿಂದ ಅವಳು ಎಲ್ಲಾ ಲೋಕಗಳಲ್ಲಿಯೂ 'ಕೌಶಿಕೀ' ಎಂದೇ ಕರೆಯಲ್ಪಡುವಳು. (ಪಾರ್ವತಿಯ) ಶರೀರದಿಂದ ಹೊರಬಂದ ಅನಂತರ ಆಕೆಯೇ "ಕೃಷ್ಣಾ" ಎನಿಸಿದಳು. ಅನಂತರ ಅವಳು ಹಿಮಾಚಲ ಪರ್ವತವನ್ನಾಶ್ರಯಿಸಿದವಳಾಗಿ ಕಾಳಿಕೆಯೆಂದೂ ಕರೆಯಲ್ಪಟ್ಟಳು.

ತತೋಂಬಿಕಾಂ ಪರಂ ರೂಪಂ ಬಿಭ್ರಾಣಾಂ ಸುಮನೋಹರಮ್ ।
ದದರ್ಶ ಚಂಡೋ ಮುಂಡಶ್ಚ ಭೃತ್ಯೌ ಶುಂಭನಿಶುಂಭಯೋಃ ॥41॥

ತಾಭ್ಯಾಂ ಶುಂಭಾಯ ಚಾಖ್ಯಾತಾ ಸಾತೀವ ಸುಮನೋಹರಾ ।
ಕಾಪ್ಯಾಸ್ತೇ ಸ್ತ್ರೀ ಮಹಾರಾಜ ಭಾಸಯಂತೀ ಹಿಮಾಚಲಮ್ ॥42॥

41-42. ಅನಂತರ ಹೆಚ್ಚಿನ ಮನೋಹರವೂ ಸುಂದರವೂ ಆದ ಅಂಬಿಕೆಯ ಪರಮರೂಪವನ್ನು ಶುಂಭನಿಶುಂಭರ ಸೇವಕರುಗಳಾದ ಚಂಡ-ಮುಂಡರು ನೋಡಿದರು. ಅವರಿಬ್ಬರೂ ಸೇರಿ ಈ ವಿಚಾರಗಳನ್ನು ಶುಂಭನಿಗೆ ಹೇಳಿದರು. ಹೇಗೆಂದರೆ : ಎಲೈ ಮಹಾರಾಜನೆ, ಅತ್ಯಂತ ಮನೋಹರಳೂ ಹಿಮಾಚಲವನ್ನೆಲ್ಲ ಬೆಳಗುವವಳೂ ಆದ ಒಬ್ಬ ಸ್ತ್ರೀಯು ಯಾವಳೋ ಕಾಣಿಸಿಕೊಂಡಿರುವಳು.

ನೈವ ತಾದೃಕ್ ಕ್ವಚಿದ್ ರೂಪಂ ದೃಷ್ಟಂ ಕೇನಚಿದುತ್ತಮಮ್ ।
ಜ್ಞಾಯತಾಂ ಕಾಪ್ಯಸೌ ದೇವೀ ಗೃಹ್ಯತಾಂ ಚಾಸುರೇಶ್ವರ ॥43॥

ಸ್ತ್ರೀರತ್ನಮತಿಚಾರ್ವಂಗೀ ದ್ಯೋತಯಂತೀ ದಿಶಸ್ತ್ವಿಷಾ ।
ಸಾ ತು ತಿಷ್ಠತಿ ದೈತ್ಯೇಂದ್ರ ತಾಂ ಭವಾನ್ ದ್ರಷ್ಟುಮರ್ಹತಿ ॥44॥

43-44. "ಯಾವನೊಬ್ಬನೂ ಎಲ್ಲಿಯೂ ಅಂಥ ಉತ್ತಮರೂಪವತಿಯನ್ನು ನೋಡಿರಲಾರನು. ಎಲೈ ಅಸುರರಾಜನೆ, ಆ ದೇವಿಯು ಯಾರಿರಬಹುದು ? ಎಂದು ತಿಳಿಯಿರಿ. ಮತ್ತು ಸ್ವೀಕರಿಸಿರಿ. ಎಲೈ ದೈತ್ಯಶ್ರೇಷ್ಠನೆ, ಬಹುಸುಂದರಾಂಗಿಯೂ ತನ್ನ ಕಾಂತಿಯಿಂದ ದಿಕ್ಕುಗಳನ್ನೆಲ್ಲ ಬೆಳಗುವವಳಾಗಿಯೂ ಇರುವ ಸ್ತ್ರೀರತ್ನಳಾಗಿರುವಳು. ಆಕೆಯು ಆ (ಹಿಮಾಚಲ)ದಲ್ಲಿರುವಳು. ಆಕೆಯನ್ನು ನೀನು ನೋಡಬೇಕು.

ಯಾನಿ ರತ್ನಾನಿ ಮಣಯೋ ಗಜಾಶ್ವಾದೀನಿ ವೈ ಪ್ರಭೋ ।
ತ್ರೈಲೋಕ್ಯೇ ತು ಸಮಸ್ತಾನಿ ಸಾಂಪ್ರತಂ ಭಾಂತಿ ತೇ ಗೃಹೇ ॥45॥

ಐರಾವತಃ ಸಮಾನೀತೋ ಗಜರತ್ನಂ ಪುರಂದರಾತ್ ।
ಪಾರಿಜಾತತರುಶ್ಚಾಯಂ ತಥೈವೋಚ್ಚೈಃಶ್ರವಾ ಹಯಃ ॥46॥

ವಿಮಾನಂ ಹಂಸಸಂಯುಕ್ತಮೇತತ್ತಿಷ್ಠತಿ ತೇಽಂಗಣೇ ।
ರತ್ನಭೂತಮಿಹಾನೀತಂ ಯದಾಸೀದ್ವೇಧಸೋಽದ್ಭುತಮ್ ॥47॥

45-47. 'ಪ್ರಭುವೆ, ಮೂರು ಲೋಕಗಳಲ್ಲಿಯೂ ಯಾವ ಯಾವ (ದಿವ್ಯ) ರತ್ನಗಳು, ಮಣಿಗಳು, ಆನೆ, ಕುದುರೆಗಳು- ಮುಂತಾದ ಎಲ್ಲಾ ಪದಾರ್ಥಗಳಿವೆಯೋ ಅವೆಲ್ಲವೂ ನಿನ್ನ ಮನೆಯಲ್ಲಿಯೇ ಇದ್ದುಕೊಂಡಿವೆ. ಇಂದ್ರನ ಕಡೆಯಿಂದ ಐರಾವತವೆಂಬ ಶ್ರೇಷ್ಠವಾದ ಆನೆಯೂ ಹಾಗೆಯೇ ಪಾರಿಜಾತವೆಂಬ ವೃಕ್ಷವೂ ಉಚ್ಚೈಃಶ್ರವಸ್ಸೆಂಬ ಕುದುರೆಯೂ ತರಲ್ಪಟ್ಟಿವೆ. ಬ್ರಹ್ಮದೇವನ ಅದ್ಭುತವಾದ ಹಂಸಯುಕ್ತವಾದ ಯಾವ ವಿಮಾನವಿತ್ತೋ ಅದು ರತ್ನಪ್ರಾಯವಾಗಿತ್ತು, ಈಗ ಅದು ಕೂಡ ನಿನ್ನ (ಅರಮನೆಯ) ಅಂಗಳದಲ್ಲೇ ಇದ್ದುಕೊಂಡಿದೆ.

ನಿಧಿರೇಷ ಮಹಾಪದ್ಮಃ ಸಮಾನೀತೋ ಧನೇಶ್ವರಾತ್ ।
ಕಿಂಜಲ್ಕಿನೀಂ ದದೌ ಚಾಬ್ಧಿಃ ಮಾಲಾಮಮ್ಲಾನಪಂಕಜಾಮ್ ॥48॥

ಛತ್ರಂ ತೇ ವಾರುಣಂ ಗೇಹೇ ಕಾಂಚನಸ್ರಾವಿ ತಿಷ್ಠತಿ ।
ತಥಾಯಂ ಸ್ಯನ್ದನವರೋ ಯಃ ಪುರಾಸೀತ್ ಪ್ರಜಾಪತೇಃ ॥49॥

48-49. ಧನರಾಜನಾದ ಕುಬೇರನಿಂದ ಈ ಮಹಾಪದ್ಮವೆಂಬ ನಿಧಿಯು ತರಲ್ಪಟ್ಟಿದೆ. ಸಮುದ್ರರಾಜನು ಬಾಡದೆ ಇರುವ ತಾವರೆಗಳುಳ್ಳ ಕಿಂಜಲ್ಕಿನೀ - ಎಂಬ ಮಾಲೆಯನ್ನು ಕೊಟ್ಟಿರುವನು. ವರುಣನ ಸ್ವತ್ತಾಗಿದ್ದ ಹಾಗೂ ಚಿನ್ನವನ್ನು ಸುರಿಸುವ ಛತ್ರಿಯೂ ನಿನ್ನದಾಗಿದ್ದುಕೊಂಡಿದೆ. ಹಾಗೆಯೇ ಹಿಂದೆ ಪ್ರಜಾಪತಿಯಲ್ಲಿದ್ದ ಶ್ರೇಷ್ಠವಾದ ರಥವೂ ಈಗ ನಿನ್ನ ವಶದಲ್ಲಿಯೇ ಇದೆ.

ಮೃತ್ಯೋರುತ್ಕ್ರಾಂತಿದಾ ನಾಮ ಶಕ್ತಿರೀಶ ತ್ವಯಾ ಹೃತಾ ।
ಪಾಶಃ ಸಲಿಲರಾಜಸ್ಯ ಭ್ರಾತುಸ್ತವ ಪರಿಗ್ರಹೇ ॥50॥

ನಿಶುಂಭಸ್ಯಾಬ್ಧಿಜಾತಾಶ್ಚ ಸಮಸ್ತಾ ರತ್ನಜಾತಯಃ ।
ವಹ್ನಿಶ್ಚಾಪಿ ದದೌ ತುಭ್ಯಮಗ್ನಿಶೌಚೇ ಚ ವಾಸಸೀ ॥51॥

ಏವಂ ದೈತ್ಯೇಂದ್ರ ರತ್ನಾನಿ ಸಮಸ್ತಾನ್ಯಾಹೃತಾನಿ ತೇ ।
ಸ್ತ್ರೀರತ್ನಮೇಷಾ ಕಲ್ಯಾಣೀ ತ್ವಯಾ ಕಸ್ಮಾನ್ನ ಗೃಹ್ಯತೇ ॥52॥

50-52. ಎಲೈ ಒಡೆಯನೆ, ಮೃತ್ಯುದೇವತೆಯ ಉತ್ಕ್ರಾಂತಿದಾ - ಎಂಬ ಹೆಸರಿನ ಶಕ್ತ್ಯಾಯುಧವನ್ನು ನೀನೇ ಕಸಿದುಕೊಂಡಿದ್ದೀಯೆ, ವರುಣನ ಪಾಶವಾದರೊ, ನಿನ್ನ ಸಹೋದರನ ಸ್ವಾಧೀನದಲ್ಲಿದೆ. ಅಗ್ನಿದೇವನೂ ಕೂಡ ನಿನಗೆ ವಹ್ನಿಶುದ್ಧವಾದ ಎರಡು ವಸ್ತ್ರಗಳನ್ನು ಸಮರ್ಪಿಸಿರುವನು. ಎಲೈ ದೈತ್ಯರಾಜನೆ, ಹೀಗೆ ನೀನು ಎಲ್ಲಾ ರತ್ನ(ಪ್ರಾಯ)ವಾದ ವಸ್ತುಗಳನ್ನೂ ಅಪಹರಿಸಿರುವೆ. ಹೀಗಿರುವಲ್ಲಿ ಈ ಮಂಗಳಾಂಗಿಯಾದ ಸ್ತ್ರೀ ರತ್ನಳನ್ನು ನೀನೇಕೆ ಸ್ವೀಕರಿಸದಿರುವೆ ?

ಋಷಿರುವಾಚ –

ನಿಶಮ್ಯೇತಿ ವಚಃ ಶುಂಭಃ ಸ ತದಾ ಚಂಡಮುಂಡಯೋಃ ।
ಪ್ರೇಷಯಾಮಾಸ ಸುಗ್ರೀವಂ ದೂತಂ ದೇವ್ಯಾ ಮಹಾಸುರಮ್ ॥53॥

ಇತಿ ಚೇತಿ ಚ ವಕ್ತವ್ಯಾ ಸಾ ಗತ್ವಾ ವಚನಾತ್ ಮಮ ।
ಯಥಾ ಚಾಭ್ಯೇತಿ ಸಂಪ್ರೀತ್ಯಾ ತಥಾ ಕಾರ್ಯಂ ತ್ವಯಾ ಲಘು ॥54॥

ಸ ತತ್ರ ಗತ್ವಾ ಯತ್ರಾಸ್ತೇ ಶೈಲೋದ್ದೇಶೇಽತಿಶೋಭನೇ ।
ತಾಂಚ ದೇವೀಂ ತತಃ ಪ್ರಾಹ ಶ್ಲಕ್ಷ್ಣಂ ಮಧುರಯಾ ಗಿರಾ ॥55॥

53-55. ಋಷಿಯಿಂತೆಂದನು : ಆಗ ಶುಂಭನು ಚಂಡಮುಂಡರ ಈ ಮಾತುಗಳನ್ನು ಕೇಳಿದವನಾಗಿ ಸುಗ್ರೀವನೆಂಬ ಮಹಾರಾಕ್ಷಸನನ್ನು ದೇವಿಯ ಬಳಿಗೆ

ದೂತನನ್ನಾಗಿ ಕಳುಹಿಸಿದನು. 'ಎಲೈ ದೂತನೆ, ನೀನು ಅವಳ ಬಳಿಗೆ ಹೋಗಿ ನನ್ನ ಮಾತಿನಂತೆ ಹೀಗೆ ಹೀಗೆ ಹೇಳಬೇಕು. ನೀನು ಆಕೆಯು ಸುಲಭವಾಗಿ ಪ್ರೀತಿಯಿಂದ ನನ್ನ ಬಳಿಗೆ ಬರಲು ಹೇಗೆ ಸಾಧ್ಯವಾದಲೋ ಹಾಗೆ ಮಾಡಬೇಕು'- ಎಂದನು. ಅವನಾದರೊ, ಬಹಳ ಶೋಭನವಾದ ಬೆಟ್ಟದ ತಪ್ಪಲಿನ ಯಾವ ಸ್ಥಳದಲ್ಲಿ ಆಕೆಯಿದ್ದಳೋ ಅಲ್ಲಿಗೆ ಹೋಗಿ ಆ ದೇವಿಯನ್ನು ಕುರಿತು ಮಧುರವಾದ ಮಾತುಗಳಿಂದ ಮೃದುವಾಗಿ ಹೀಗೆಂದನು :

**ದೂತ ಉವಾಚ –**

**ದೇವಿ ದೈತ್ಯೇಶ್ವರಃ ಶುಂಭಸ್ತ್ರೈಲೋಕ್ಯೇ ಪರಮೇಶ್ವರಃ ।**
**ದೂತೋಽಹಂ ಪ್ರೇಷಿತಸ್ತೇನ ತ್ವತ್ಸಕಾಶಮಿಹಾಗತಃ ॥56॥**

**ಅವ್ಯಾಹತಾಜ್ಞಃ ಸರ್ವಾಸು ಯಃ ಸದಾ ದೇವಯೋನಿಷು ।**
**ನಿರ್ಜಿತಾಖಿಲದೈತ್ಯಾರಿಃ ಸ ಯದಾಹ ಶೃಣುಷ್ವ ತತ್ ॥57॥**

**ಮಮ ತ್ರೈಲೋಕ್ಯಮಖಿಲಂ ಮಮ ದೇವಾ ವಶಾನುಗಾಃ ।**
**ಯಜ್ಞಭಾಗಾನಹಂ ಸರ್ವಾನುಪಾಶ್ನಾಮಿ ಪೃಥಕ್ ಪೃಥಕ್ ॥58॥**

56-58. ದೂತನಿಂತೆಂದನು : ಎಲೌ ದೇವಿಯೆ, (ಕೇಳು) ಶುಂಭನೆಂಬ ಮೂರು ಲೋಕಗಳ ಒಡೆಯನಿಂದ ಕಳುಹಿಸಲ್ಪಟ್ಟ ದೂತನಾದ ನಾನು ಈಗ ನಿನ್ನ ಬಳಿಗೆ ಬಂದಿರುವೆನು. ಯಾವ ಆತನು ಯಾವಾಗಲೂ ಎಲ್ಲಾ ದೇವತೆಗಳಲ್ಲಿಯೂ ತಡೆಯಿಲ್ಲದ ಆಜ್ಞೆಯುಳ್ಳವನಾಗಿದ್ದು ಸಮಸ್ತರಾದ ಆಸುರಶತ್ರುಗಳನ್ನೂ ಗೆದ್ದವನಾಗಿರುವನು. ಆತನೇನು ಹೇಳಿಕಳುಹಿಸಿರುವನೆಂಬುದನ್ನು ಈಗ ಕೇಳು. ಎಲ್ಲಾ ಮೂರು ಲೋಕಗಳೂ ದೇವತೆಗಳೂ ನನಗೆ ಅಧೀನರು. ನಾನೇ ಬೇರೆಬೇರೆಯ (ರೂಪದಿಂದ) ಯಜ್ಞಭಾಗಗಳನ್ನು ಭೋಜನಮಾಡುತ್ತಿರುವೆನು.

**ತ್ರೈಲೋಕ್ಯೇ ವರರತ್ನಾನಿ ಮಮ ವಶ್ಯಾನ್ಯಶೇಷತಃ ।**
**ತಥೈವ ಗಜರತ್ನಂ ಚ ಹೃತ್ವಾ ದೇವೇಂದ್ರವಾಹನಮ್ ॥59॥**

**ಕ್ಷೀರೋದಮಥನೋದ್ಭೂತಮಶ್ವರತ್ನಂ ಮಮಾಮರೈಃ ।**
**ಉಚ್ಚೈಃ ಶ್ರವಸಸಂಜ್ಞಂ ತತ್ ಪ್ರಣಿಪತ್ಯ ಸಮರ್ಪಿತಮ್ ॥60॥**

**ಯಾನಿ ಚಾನ್ಯಾನಿ ದೇವೇಷು ಗಂಧರ್ವೇಷೂರಗೇಷು ಚ ।**
**ರತ್ನಭೂತಾನಿ ಭೂತಾನಿ ತಾನಿ ಮಯ್ಯೇವ ಶೋಭನೇ ॥61॥**

59-61. ಮೂರುಲೋಕಗಳಲ್ಲಿಯೂ ಇರುವ ಶ್ರೇಷ್ಠವಾದ ರತ್ನಗಳೆಲ್ಲವೂ ಪೂರ್ಣವಾಗಿ ನನಗೆ ಅಧೀನವಾಗಿರುವವು. ಹಾಗೆಯೇ ಕ್ಷೀರಸಮುದ್ರಮಥನದಿಂದ ಹುಟ್ಟಿದ ದೇವೇಂದ್ರನ ವಾಹನವಾದ ಆನೆಯೂ ಉಚ್ಚೈಃಶ್ರವಸವೆಂಬ ಶ್ರೇಷ್ಠ ಕುದುರೆಯೂ ದೇವತೆಗಳಿಂದಲೇ ನಮಸ್ಕಾರಪೂರ್ವಕವಾಗಿ ನನಗೆ ಸಮರ್ಪಿಸಲ್ಪಟ್ಟಿತು. ಹಾಗೆಯೇ ದೇವ-ಗಂಧರ್ವ-ಉರಗಜಾತಿಯವರಲ್ಲಿ ಯಾವ ಯಾವ ವಸ್ತುಗಳು ರತ್ನಭೂತವಾಗಿರುವವೋ ಈಗ ಅವೆಲ್ಲವೂ ಎಲೌ ಶೋಭನಾಂಗಿಯೆ, ನನ್ನಲ್ಲಿಯೇ ಇದ್ದುಕೊಂಡಿವೆ.

ಸ್ತ್ರೀರತ್ನಭೂತಾಂ ತ್ವಾಂ ದೇವಿ ಲೋಕೇ ಮನ್ಯಾಮಹೇ ವಯಮ್ ।
ಸಾ ತ್ವಮಸ್ಮಾನುಪಾಗಚ್ಛ ಯತೋ ರತ್ನಭುಜೋ ವಯಮ್ ॥62॥

ಮಾಂ ವಾ ಮಮಾನುಜಂ ವಾಪಿ ನಿಶುಂಭಮುರುವಿಕ್ರಮಮ್ ।
ಭಜ ತ್ವಂ ಚಂಚಲಾಪಾಂಗಿ ರತ್ನಭೂತಾಸಿ ವೈ ಯತಃ ॥63॥

ಪರಮೈಶ್ವರ್ಯಮತುಲಂ ಪ್ರಾಪ್ಸ್ಯಸೇ ಮತ್ಪರಿಗ್ರಹಾತ್ ।
ಏತತ್ ಬುದ್ಧ್ಯಾ ಸಮಾಲೋಚ್ಯ ಮತ್ಪರಿಗ್ರಹತಾಂ ವ್ರಜ ॥64॥

62-64. ಎಲೌ ದೇವಿಯೆ, ಲೋಕದಲ್ಲಿ ನೀನು ಸ್ತ್ರೀಯರಲ್ಲಿ ರತ್ನಪ್ರಾಯಳೆಂದು ನಾವು ತಿಳಿದಿರುವೆವು. ನೀನು ನಮ್ಮನ್ನು ಸೇರುವಳಾಗು ; ಏಕೆಂದರೆ ರತ್ನಪ್ರಾಯವಾದವುಗಳನ್ನೇ ನಾವು ಅನುಭವಿಸುತ್ತಿರುವೆವು. ನನ್ನನ್ನಾಗಲೀ, ನನ್ನ ಸಹೋದರನಾದ ಮಹಾಪರಾಕ್ರಮಶಾಲಿಯಾದ ನಿಶುಂಭನನ್ನಾಗಲಿ ಎಲೌ ಚಂಚಲಾಕ್ಷಿಯೆ, ನೀನು ಸೇವಿಸುವವಳಾಗು ; ಏಕೆಂದರೆ ನೀನು ರತ್ನಪ್ರಾಯಳಾಗಿರುವೆ. ನನ್ನನ್ನು ಕೈಹಿಡಿಯುವದರಿಂದ ಪರಮವಾದ ಐಶ್ವರ್ಯವನ್ನು ಹೊಂದುವೆ. ಇದನ್ನು ಬುದ್ಧಿಯಿಂದ ಚೆನ್ನಾಗಿ ಆಲೋಚಿಸಿ ನನ್ನ ಹೆಂಡತಿಯಾಗು.

ಋಷಿರುವಾಚ–

ಇತ್ಯುಕ್ತಾ ಸಾ ತದಾ ದೇವೀ ಗಂಭೀರಾಂತಃಸ್ಮಿತಾ ಜಗೌ ।
ದುರ್ಗಾ ಭಗವತೀ ಭದ್ರಾ ಯಯೇದಂ ಧಾರ್ಯತೇ ಜಗತ್ ॥65॥

ದೇವ್ಯುವಾಚ –

ಸತ್ಯಮುಕ್ತಂ ತ್ವಯಾ ನಾತ್ರ ಮಿಥ್ಯಾ ಕಿಂಚಿತ್ ತ್ವಯೋದಿತಮ್ ।
ತ್ರೈಲೋಕ್ಯಾಧಿಪತಿಃ ಶುಂಭೋ ನಿಶುಂಭಶ್ಚಾಪಿ ತಾದೃಶಃ ॥66॥

65-66. ಋಷಿಯಿಂತೆಂದನು : ಭಗವತಿಯೂ ಮಂಗಳಪ್ರದಳೂ ಆದ ಹಾಗೂ ಈ ಬ್ರಹ್ಮಾಂಡವನ್ನೆಲ್ಲ (ತನ್ನ ಶಕ್ತಿಯಿಂದ) ಧರಿಸಿರುವ ದುರ್ಗೆಯು ಗಾಢವಾದ ಒಳನಗೆಯುಳ್ಳವಳಾಗಿ (ರಾಕ್ಷಸದೂತನಿಂದ) ಹೀಗೆ ಹೇಳಲ್ಪಟ್ಟವಳಾಗಿ ಅವನಿಗೆ ಉತ್ತರವನ್ನು ಕೊಡುವವಳಾಗಿ ಹೀಗೆಂದಳು : 'ನೀನು ಹೇಳಿದ್ದೆಲ್ಲವೂ ನಿಜವೇ. ಅದರಲ್ಲಿ ಏನೇನೂ ಸುಳ್ಳಿರುವದಿಲ್ಲ. ತ್ರೈಲೋಕ್ಯದೊಡೆಯನಾದ ಶುಂಭನೂ ನಿಶುಂಭನೂ ಅಂಥವರೇ - ಎಂಬುದು ಸರಿ.

**ಕಿಂ ತ್ವತ್ರ ಯತ್ಪ್ರತಿಜ್ಞಾತಂ ಮಿಥ್ಯಾ ತತ್ಕ್ರಿಯತೇ ಕಥಮ್ ।**
**ಶ್ರೂಯತಾಮಲ್ಪಬುದ್ಧಿತ್ವಾತ್ ಪ್ರತಿಜ್ಞಾಯಾ ಕೃತಾ ಪುರಾ ॥67॥**

**ಯೋ ಮಾಂ ಜಯತಿ ಸಂಗ್ರಾಮೇ ಯೋ ಮೇ ದರ್ಪಂ ವ್ಯಪೋಹತಿ ।**
**ಯೋ ಮೇ ಪ್ರತಿಬಲೋ ಲೋಕೇ ಸ ಮೇ ಭರ್ತಾ ಭವಿಷ್ಯತಿ ॥68॥**

**ತದಾಗಚ್ಛತು ಶುಂಭೋಽತ್ರ ನಿಶುಂಭೋ ವಾ ಮಹಾಸುರಃ ।**
**ಮಾಂ ಜಿತ್ವಾ ಕಿಂ ಚಿರೇಣಾತ್ರ ಪಾಣಿಂ ಗೃಹ್ಣಾತು ಮೇ ಲಘು ॥69॥**

67-69. ಆದರೆ ಈ ಸಂದರ್ಭದಲ್ಲಿ ನಾನು ಏನು ಪ್ರತಿಜ್ಞೆ ಮಾಡಿರುವೆನೋ ಅದನ್ನು ಹೇಗೆ ಸುಳ್ಳಾಗಿಸಲಿ ? ಹಿಂದೆ ನಾನು ತಿಳಿವಳಿಕೆಯು ಸಾಲದೆ ಏನು ಪ್ರತಿಜ್ಞೆಮಾಡಿದ್ದೆನೋ ಅದನ್ನು ಕೇಳು. ಯಾವನು ಯುದ್ಧದಲ್ಲಿ ನನ್ನನ್ನು ಗೆದ್ದು ನನ್ನ ದರ್ಪವನ್ನು ಹೋಗಲಾಡಿಸಲಿರುವನೋ ಹಾಗೂ ಯಾವನು ನನಗೆ ಸರಿಯಾದ ಎದುರಾಳಿಯಾಗಬಲ್ಲನೋ ಅವನೇ ನನಗೆ ಗಂಡನಾಗಲಿ- ಎಂದು (ಶಪಥ ಮಾಡಿದ್ದೇನೆ). ಆದ್ದರಿಂದ ಮಹಾಸುರನಾದ ಶುಂಭನಾಗಲಿ, ನಿಶುಂಭನಾಗಲಿ-ಇಲ್ಲಿಗೆ ಬರಲಿ ; ನನ್ನನ್ನು ಗೆದ್ದು ಕೈಹಿಡಿಯಲಿ. ಈ ವಿಷಯದಲ್ಲಿ ತಡವೇಕೆ ?

**ದೂತ ಉವಾಚ –**

**ಅವಲಿಪ್ತಾಸಿ ಮೈವಂ ತ್ವಂ ದೇವಿ ಬ್ರೂಹಿ ಮಮಾಗ್ರತಃ ।**
**ತ್ರೈಲೋಕ್ಯೇ ಕಃ ಪುಮಾಂಸ್ತಿಷ್ಠೇದಗ್ರೇ ಶುಂಭನಿಶುಂಭಯೋಃ ॥70॥**

**ಅನ್ಯೇಷಾಮಪಿ ದೈತ್ಯಾನಾಂ ಸರ್ವೇ ದೇವಾ ನ ವೈ ಯುಧಿ ।**
**ತಿಷ್ಠಂತಿ ಸಮ್ಮುಖೇ ದೇವಿ ಕಿಂ ಪುನಃ ಸ್ತ್ರೀ ತ್ವಮೇಕಿಕಾ ॥71॥**

70-71. ದೂತನಿಂತೆಂದನು : 'ಎಲೌ ದೇವಿಯೆ, ನೀನು ಬಹಳ ಗರ್ವಿಷ್ಠಳಾಗಿರುವೆ. ಹೀಗೆಲ್ಲ ನನ್ನೆದುರಿಗೆ ಮಾತನಾಡದಿರು. ಶುಂಭನಿಶುಂಭರೆದುರಿಗೆ ಈ ಮೂರು ಲೋಕಗಳಲ್ಲಿಯಾಗಲಿ, ಯಾವ ಗಂಡಸು ತಾನೆ ಎದುರಿಗೆ ನಿಂತಾನು ?

ಉಳಿದ ರಾಕ್ಷಸರುಗಳ (ಮುಂದೆಯೂ) ಎಲ್ಲಾ ದೇವತೆಗಳೂ ಕೂಡಿಯಾದರೂ ಯುದ್ಧದಲ್ಲಿ ಎದುರು ನಿಲ್ಲಲಾರರು. ಹೀಗಿರುವಲ್ಲಿ ಹೆಂಗಸಾಗಿರುವ ನೀನೊಬ್ಬಳು ಹೇಗೆ ತಾನೆ ಎದುರಿಸಿ ನಿಂತುಕೊಳ್ಳಬಲ್ಲೆ?

ಇಂದ್ರಾದ್ಯಾಃ ಸಕಲಾ ದೇವಾಸ್ತಸ್ಥುರ್ಯೇಷಾಂ ನ ಸಂಯುಗೇ ।
ಶುಂಭಾದೀನಾಂ ಕಥಂ ತೇಷಾಂ ಸ್ತ್ರೀ ಪ್ರಯಾಸ್ಯಸಿ ಸಂಮ್ಮುಖಮ್ ॥72॥

ಸಾ ತ್ವಂ ಗಚ್ಛ ಮಯೈವೋಕ್ತಾ ಪಾರ್ಶ್ವಂ ಶುಂಭನಿಶುಂಭಯೋಃ ।
ಕೇಶಾಕರ್ಷಣನಿರ್ಧೂತಗೌರವಾ ಮಾ ಗಮಿಷ್ಯಸಿ ॥73॥

72-73. ಇಂದ್ರನೇ ಮೊದಲಾದ ಸಮಸ್ತರಾದ ದೇವತೆಗಳೂ ಯಾರ ಮುಂದೆ ಯುದ್ಧದಲ್ಲಿ ನಿಲ್ಲಲಾರದೆ ಹೋದರೋ ಅಂಥ ಶುಂಭಾದಿ (ರಾಕ್ಷಸರ) ಮುಂದೆ ಸ್ತ್ರೀಯಾದ ನೀನು ಹೇಗೆ ತಾನೆ ಎದುರಾಳಿಯಾಗಿ ಹೋದೀಯೆ ? ಆದ್ದರಿಂದ ಈಗ ನಾನು ಹೇಳಿದುದನ್ನು ಕೇಳಿಕೊಂಡು ಶುಂಭನಿಶುಂಭರ ಬಳಿಗೆ ಹೋಗುವವಳಾಗು. ಆದರೆ ತಲೆಗೂದಲನ್ನು ಹಿಡಿದು ಎಳೆದು ತರುವ ಮೂಲಕ ಗೌರವವನ್ನೆಂದಿಗೂ ಕೆಡಿಸಿಕೊಳ್ಳಬೇಡ.

ದೇವ್ಯುವಾಚ–

ಏವಮೇತದ್ ಬಲೀ ಶುಂಭೋ ನಿಶುಂಭಶ್ಚಾತಿವೀರ್ಯವಾನ್ ।
ಕಿಂ ಕರೋಮಿ ಪ್ರತಿಜ್ಞಾ ಮೇ ಯದನಾಲೋಚಿತಾ ಪುರಾ ॥74॥

ಸ ತ್ವಂ ಗಚ್ಛ ಮಯೋಕ್ತಂ ತೇ ಯದೇತತ್ ಸರ್ವಮಾದೃತಃ ।
ತದಾಚಕ್ಷ್ವಾಸುರೇಂದ್ರಾಯ ಸ ಚ ಯುಕ್ತಂ ಕರೋತು ಯತ್ ॥75॥

74-74. ದೇವಿಯಿಂತೆಂದಳು : ನಿಶುಂಭನೂ ಶುಂಭನೂ ಅತಿ ಹೆಚ್ಚಿನ ಬಲಿಷ್ಠರೆಂಬುದು ಸರಿಯೇ. ಆದರೆ ಹಿಂದೆ ನಾನು ಆಲೋಚನೆಯನ್ನು ಮಾಡದೆ ಸ್ವೀಕರಿಸಿರುವ ಶಪಥದ ವಿಷಯಕ್ಕೆ ಈಗೇನು ಮಾಡಲಿ ? ಆದ್ದರಿಂದ ನೀನು ಈಗ ಹೊರಡು. ನಾನು ಹೇಳಿದುದೆಲ್ಲವನ್ನೂ ಶ್ರದ್ಧೆಯಿಂದ ಆ ಅಸುರಶ್ರೇಷ್ಠನಿಗೆ ಹೇಳುವವನಾಗು. ಅವನು ಯುಕ್ತವೆಂದು ಕಂಡದ್ದನ್ನು ಮಾಡಲಿ.

ಇತಿ ಶ್ರೀ ಮಾರ್ಕಂಡೇಯಪುರಾಣೇ ದೇವೀಮಹಾತ್ಮ್ಯೇ
ಪಂಚಮೋಽಧ್ಯಾಯಃ

# ಆರನೆಯ ಅಧ್ಯಾಯ

ಧ್ಯಾನಮ್ –

ನಾಗಾಧೀಶ್ವರವಿಷ್ಟರಾಂ ಫಣಿಫಣೋತ್ತಂಸೋರುರತ್ನಾವಳೀ–
ಭಾಸ್ವದ್ದೇಹಲತಾಂ ದಿವಾಕರನಿಭಾಂ ನೇತ್ರತ್ರಯೋದ್ಭಾಸಿತಾಮ್ ।
ಮಾಲಾಕುಂಭಕಪಾಲನೀರಜಕರಾಂ ಚಂದ್ರಾರ್ಧಚೂಡಾಂ ಪರಾಂ
ಸರ್ವಜ್ಞೇಶ್ವರಭೈರವಾಂಕನಿಲಯಾಂ ಪದ್ಮಾವತೀಂ ಚಿಂತಯೇ ॥

ಆದಿಶೇಷನನ್ನೇ ಆಸನವಾಗಿ ಮಾಡಿಕೊಂಡು ಆ ನಾಗರಾಜನ ಹೆಡೆಗಳಲ್ಲಿರುವ ರತ್ನಗಳ ಸಾಲುಗಳಂತೆ ಹೊಳೆಯುವ ಬಳುಕುದೇಹವುಳ್ಳ, ಸೂರ್ಯನಂತೆ ಪ್ರಕಾಶಮಾನಳಾದ ಮತ್ತು ಮೂರು ಕಣ್ಣುಗಳಿಂದ ವಿರಾಜಮಾನಳಾದ, ಹಾಗೂ ಹೂಮಾಲೆ, ಕುಂಭ, ಕಪಾಲ, ತಾವರೆಗಳನ್ನು ಕೈಯಲ್ಲಿ ಹಿಡಿದವಳಾದ ಅರ್ಧಚಂದ್ರನನ್ನು ಜಡೆಯಲ್ಲಿ ಮುಡಿದವಳಾದ, ಪರಮಳಾದ ಸರ್ವಜ್ಞನೂ ಎಲ್ಲಕ್ಕೂ ಒಡೆಯನೂ ಆದ ಭೈರವನ ತೊಡೆಯಲ್ಲಿ ಕುಳಿತಿರುವ ಪದ್ಮಾವತಿಯನ್ನು ಚಿಂತಿಸುವೆನು.

ಋಷಿರುವಾಚ –

ಇತ್ಯಾಕರ್ಣ್ಯ ವಚೋ ದೇವ್ಯಾಃ ಸ ದೂತೋಽಮರ್ಷಪೂರಿತಃ ।
ಸಮಾಚಷ್ಟ ಸಮಾಗಮ್ಯ ದೈತ್ಯರಾಜಾಯ ವಿಸ್ತರಾತ್ ॥1॥

ತಸ್ಯ ದೂತಸ್ಯ ತದ್ವಾಕ್ಯಮಾಕರ್ಣ್ಯಾಸುರರಾಟ್ ತತಃ ।
ಸಕ್ರೋಧಃ ಪ್ರಾಹ ದೈತ್ಯಾನಾಮಧಿಪಂ ಧೂಮ್ರಲೋಚನಮ್ ॥2॥

1-2. ಋಷಿಯಿಂತೆಂದನು : ದೇವಿಯ ಈ ಮಾತುಗಳನ್ನು ಕೇಳಿ ಕೋಪಗೊಂಡವನಾದ ಆ ದೂತನು ಹಿಂದಿರುಗಿ ಬಂದು ದೈತ್ಯರಾಜನಿಗೆ ವಿಸ್ತಾರವಾಗಿ ಎಲ್ಲವನ್ನೂ ಹೇಳಿಬಿಟ್ಟನು. ಅನಂತರ ಅಸುರರಾಜನಾದ ಆತನು (ಶುಂಭನು) ಆ ದೂತನ ಮಾತನ್ನು ಕೇಳಿ ಕ್ರೋಧವಶನಾಗಿ ಧೂಮ್ರಲೋಚನನೆಂಬ ದೈತ್ಯರ ಒಡೆಯನಿಗೆ ಹೀಗೆಂದನು :

ಹೇ ಧೂಮ್ರಲೋಚನಾಶು ತ್ವಂ ಸ್ವಸೈನ್ಯಪರಿವಾರಿತಃ ।
ತಮಾನಯ ಬಲಾದ್ದುಷ್ಟಾಂ ಕೇಶಾಕರ್ಷಣವಿಹ್ವಲಾಮ್ ॥3॥

ತತ್ಪರಿತ್ರಾಣದಃ ಕಶ್ಚಿತ್ ಯದಿ ವೋತ್ತಿಷ್ಠತೇಽಪರಃ ।
ಸ ಹಂತವ್ಯೋಽಮರೋ ವಾಪಿ ಯಕ್ಷೋ ಗಂಧರ್ವ ಏವ ವಾ ॥4॥

3-4. 'ಎಲೈ ಧೂಮ್ರಲೋಚನನೆ, ನಿನ್ನ ಸೈನ್ಯದೊಡನೆ ಕೂಡಿ ಜಾಗ್ರತೆಯಾಗಿ (ಹೊರಟು) ಬಲಾತ್ಕಾರವಾಗಿ ಆ ದುಷ್ಟಳಾದ ಹಾಗೂ ಜಡೆಯನ್ನೆಳೆಸಿಕೊಳ್ಳಲು ತವಕಪಡುತ್ತಿರುವ (ದೇವಿಯನ್ನು) ಕರೆದು ತರುವನಾಗು. ಒಂದು ವೇಳೆ ಯಾವನಾದರೂ ಆಕೆಯನ್ನು ಕಾಪಾಡಲು ಮೇಲೆ ಬಿದ್ದನಾದರೆ ಅವನು ದೇವತೆ ಯಾಗಿರಲಿ, ಯಕ್ಷ-ಗಂಧರ್ವನಾಗಿರಲಿ ಅಂಥವನನ್ನು ಕೊಂದು ಬಿಡುವವನಾಗು.

ಋಷಿರುವಾಚ –

ತೇನಾಜ್ಞಪ್ತಃ ತತಃ ಶೀಘ್ರಂ ಸ ದೈತ್ಯೋ ಧೂಮ್ರಲೋಚನಃ ।
ವೃತಃ ಷಷ್ಟ್ಯಾ ಸಹಸ್ರಾಣಾಮಸುರಾಣಾಂ ದ್ರುತಂ ಯಯೌ ॥5॥

ಸ ದೃಷ್ಟ್ವಾ ತಾಂ ತತೋ ದೇವೀಂ ತುಹಿನಾಚಲಸಂಸ್ಥಿತಾಮ್ ।
ಜಗಾದೋಚ್ಚೈಃ ಪ್ರಯಾಹೀತಿ ಮೂಲಂ ಶುಂಭನಿಶುಂಭಯೋಃ ॥6॥

5-6. ಋಷಿಯಿಂತೆಂದನು : ಅನಂತರ ಬೇಗನೆ ಆಜ್ಞಾಪಿಸಲ್ಪಟ್ಟ ಧೂಮ್ರಲೋಚನನೆಂಬ ದೈತ್ಯನು ಅರುವತ್ತುಸಾವಿರ ರಾಕ್ಷಸರೊಡಗೂಡಿದವನಾಗಿ ವೇಗದಿಂದ ಹೊರಟನು. ಅವನು ಆ ಮೇಲೆ ಹಿಮಗಿರಿಯಲ್ಲಿ ನೆಲೆಸಿದ್ದ ಆ ದೇವಿಯನ್ನು ಕಂಡು 'ಶುಂಭನಿಶುಂಭರ ಬಳಿಗೆ ಬಾ' ಎಂದು ಗಟ್ಟಿಯಾಗಿ ಕೂಗಿಕೊಂಡನು.

ನ ಚೇತ್ ಪ್ರೀತ್ಯಾದ್ಯ ಭವತೀ ಮದ್ಭರ್ತಾರಮುಪೈಷ್ಯತಿ ।
ತತೋ ಬಲಾನ್ನಯಾಮ್ಯೇಷ ಕೇಶಾಕರ್ಷಣವಿಹ್ವಲಾಮ್ ॥7॥

7. ನೀನು ಸಂತೋಷದಿಂದ ಈಗ ನನ್ನೊಡೆಯನನ್ನು ಸೇರಲಾರೆಯಾದರೆ ಅನಂತರ ಈ ನಾನು ಜಡೆಗಳನ್ನೆಳೆಸಿಕೊಳ್ಳಲು ಆಶಿಸುವ ನಿನ್ನನ್ನು ಬಲಾತ್ಕಾರದಿಂದ ಕರೆದೊಯ್ಯುವೆನು- (ಎಂದನು).

ದೇವ್ಯುವಾಚ –

ದೈತ್ಯೇಶ್ವರೇಣ ಪ್ರಹಿತೋ ಬಲವಾನ್ ಬಲಸಂಹೃತಃ ।
ಬಲಾನ್ನಯಸಿ ಮಾಮೇವ ತತಃ ಕಿಂ ತೇ ಕರೋಮ್ಯಹಮ್ ॥8॥

8. ದೇವಿಯಿಂತೆಂದಳು : ದೈತ್ಯರಾಜನಿಂದ ಕಳುಹಿಸಲ್ಪಟ್ಟ ಬಲಿಷ್ಠನೂ (ಸೇನಾ) ಬಲಪರಿವಾರಿತನೂ ಆದ ನೀನು ಬಲಾತ್ಕಾರದಿಂದ ನನ್ನನ್ನೇ ಕರೆದೊಯ್ಯುವೆಯಾದರೆ ಇನ್ನು ನಿನಗೆ ನಾನೇನು ಮಾಡಿಯೇನು !

**ಋಷಿರುವಾಚ –**

**ಇತ್ಯುಕ್ತಃ ಸೋಽಭ್ಯಧಾವತ್ತಾಮಸುರೋ ಧೂಮ್ರಲೋಚನಃ ।**
**ಹುಂಕಾರೇಣೈವ ತಂ ಭಸ್ಮ ಸಾ ಚಕಾರಾಂಬಿಕಾ ತತಃ ॥9॥**

**ಅಥ ಕ್ರುದ್ಧಂ ಮಹಾಸೈನ್ಯಮಸುರಾಣಾಂ ತಥಾಂಬಿಕಾ ।**
**ವವರ್ಷ ಸಾಯಕೈಸ್ತೀಕ್ಷ್ಣೈಃ ತಥಾ ಶಕ್ತಿಪರಶ್ವಧೈಃ ॥10॥**

9-10. ಋಷಿಯಿಂತೆಂದನು : ಹೀಗೆ ಹೇಳಲ್ಪಟ್ಟ ಆ ಧೂಮ್ರಲೋಚನನೆಂಬ ರಾಕ್ಷಸನು (ದೇವಿಯನ್ನು ಅಬಲೆಯೆಂದು ಭಾವಿಸಿ) ಮೇಲೆ ನುಗ್ಗಿದನು. ಅನಂತರ ಅಂಬಿಕೆಯು ಹುಂಕಾರಮಾತ್ರದಿಂದಲೇ ಅವನನ್ನು ಸುಟ್ಟುಬೂದಿಮಾಡಿಬಿಟ್ಟಳು. ಅನಂತರ ಕೋಪಗೊಂಡು (ನುಗ್ಗಿದ ಆ) ರಾಕ್ಷಸರ ಮಹಾಸೈನ್ಯವನ್ನೆಲ್ಲ ಚೂಪಾದ ಬಾಣಗಳು, ಶಕ್ತಿ ಪರಶ್ವಧಗಳೆಂಬ ಆಯುಧಗಳಿಂದಲೂ ಮಳೆಗರೆದು (ತುಂಬಿದಳು).

**ತತೋ ಧುತಸಟಃ ಕೋಪಾತ್ ಕೃತ್ವಾ ನಾದಂ ಸುಭೈರವಮ್ ।**
**ಪಪಾತಾಸುರಸೇನಾಯಾಂ ಸಿಂಹೋ ದೇವ್ಯಾಃ ಸ್ವವಾಹನಃ ॥11॥**

**ಕಾಂಶ್ಚಿತ್ ಕರಪ್ರಹಾರೇಣ ದೈತ್ಯಾನಾಸ್ಯೇನ ಚಾಪರಾನ್ ।**
**ಆಕ್ರಮ್ಯ ಚಾಧರೇಣಾನಾನ್ಯಾನ್ ಸ ಜಘಾನ ಮಹಾಸುರಾನ್ ॥12॥**

11-12. ಅನಂತರ ತನ್ನ ಕೇಸರಗಳನ್ನು ಕೊಡವುತ್ತಾ ಭಯಂಕರವಾಗಿ ಗರ್ಜಿಸುತ್ತಾ ಕೋಪದಿಂದ ದೇವಿಯ ವಾಹನವಾದ ಸಿಂಹವು ಸೈನ್ಯದ ಮೇಲೆ ಬಿದ್ದಿತು. ಕೆಲವರನ್ನು ತನ್ನ ಕೈ (ಮುಂಗಾಲುಗಳ) ಹೊಡೆತದಿಂದಲೂ ಮತ್ತೆ ಕೆಲವರನ್ನು ಮುಖದಿಂದ ಕಚ್ಚುವದರಿಂದಲೂ ಉಳಿದವರನ್ನು ಹಿಂಭಾಗದ (ಕಾಲುಗಳಿಂದಲೂ) ಆಕ್ರಮಣಮಾಡಿ ಮಹಾರಾಕ್ಷಸರನ್ನೆಲ್ಲ ಅದು ಕೊಂದಿತು.

**ಕೇಷಾಂಚಿತ್ ಪಾಟಯಾಮಾಸ ನಖೈಃ ಕೋಷ್ಠಾನಿ ಕೇಸರೀ ।**
**ತಥಾ ತಲಪ್ರಹಾರೇಣ ಶಿರಾಂಸಿ ಕೃತವಾನ್ ಪೃಥಕ್ ॥13॥**

ವಿಚ್ಛಿನ್ನಬಾಹುಶಿರಸಃ ಕೃತಾಸ್ತೇನ ತಥಾಪರೇ ।
ಪಪೌ ಚ ರುಧಿರಂ ಕೋಷ್ಠಾದನ್ಯೇಷಾಂ ಧುತಕೇಸರಃ ॥14॥

13-14. ಆ ಸಿಂಹವು ಕೆಲವರ ಹೊಟ್ಟೆಗಳನ್ನು ಉಗುರುಗಳಿಂದ ಸೀಳಿತು. ಹಾಗೆಯೇ ಪಂಜಗಳಿಂದ (ಕೆಲವರ) ತಲೆಗಳನ್ನು ತುಂಡುಮಾಡಿತು. ಇನ್ನು ಕೆಲವರು ತಲೆತೋಳುಗಳನ್ನು ಕತ್ತರಿಸಿಕೊಂಡು ಬೀಳಿಸಲ್ಪಟ್ಟರು. ಮತ್ತೆ ಕೆಲವರ ಹೊಟ್ಟೆಯಿಂದ ಆ ಕೆರಳಿದ ಸಿಂಹವು ರಕ್ತವನ್ನು ಕುಡಿಯಿತು.

ಕ್ಷಣೇನ ತದ್ಬಲಂ ಸರ್ವಂ ಕ್ಷಯಂ ನೀತಂ ಮಹಾತ್ಮನಾ ।
ತೇನ ಕೇಸರಿಣಾ ದೇವ್ಯಾ ವಾಹನೇನಾತಿಕೋಪಿನಾ ॥15॥

15. ಕ್ಷಣಮಾತ್ರದಲ್ಲಿ ಮಹಾಬಲಶಾಲಿಯಾದ ಆ ಸಿಂಹದಿಂದ ಎಲ್ಲ ಸೈನ್ಯವೂ ನಾಶವನ್ನು ಹೊಂದಿತು. ಹೀಗೆ ಅತಿಕೋಪದಿಂದ ಕೂಡಿದ ಆ ದೇವಿಯ ವಾಹನವಾದ ಸಿಂಹವು (ಎಲ್ಲ ರಾಕ್ಷಸರನ್ನೂ ಸಂಹರಿಸಿತು).

ಶ್ರುತ್ವಾ ತಮಸುರಂ ದೇವ್ಯಾ ನಿಹತಂ ಧೂಮ್ರಲೋಚನಮ್ ।
ಬಲಂ ಚ ಕ್ಷಯಿತಂ ಕೃತ್ಸ್ನಂ ದೇವೀಕೇಸರಿಣಾ ತತಃ ॥16॥

ಚುಕೋಪ ದೈತ್ಯಾಧಿಪತಿಃ ಶುಂಭಃ ಪ್ರಸ್ಫುರಿತಾಧರಃ ।
ಆಜ್ಞಾಪಯಾಮಾಸ ಚ ತೌ ಚಂಡಮುಂಡೌ ಮಹಾಸುರೌ ॥17॥

16-17. ಧೂಮ್ರಲೋಚನನೆಂಬ ಆ ರಾಕ್ಷಸನನ್ನು ದೇವಿಯು ಸಂಹಾರ ಮಾಡಿದ್ದನ್ನೂ ಅನಂತರ ದೇವಿಯ ಸಿಂಹವು ಎಲ್ಲಾ ರಾಕ್ಷಸಬಲವನ್ನೂ ನಾಶಮಾಡಿದ್ದನ್ನೂ ಕೇಳಿ ದೈತ್ಯಾಧಿಪನಾದ ಶುಂಭನು ಕೋಪಾವಿಷ್ಟನಾಗಿ ತುಟಿಗಳನ್ನು ಅಳ್ಳಾಡಿಸುತ್ತಾ ಆ ಮಹಾರಾಕ್ಷಸರಾದ ಚಂಡಮುಂಡರುಗಳಿಗೆ (ಹೀಗೆಂದು) ಅಪ್ಪಣೆಮಾಡಿದನು.

ಹೇ ಚಂಡ ಹೇ ಮುಂಡ ಬಲೈರ್ಬಹುಭಿಃ ಪರಿವಾರಿತೌ ।
ತತ್ರ ಗಚ್ಛತ ಗತ್ವಾ ಚ ಸಾ ಸಮಾನೀಯತಾಂ ಲಘು ॥18॥

ಕೇಶೇಷ್ವಾಕೃಷ್ಯ ಬದ್ಧ್ವಾ ವಾ ಯದಿ ವಃ ಸಂಶಯೋ ಯುಧಿ ।
ತದಾಽಶೇಷಾಯುಧೈಃ ಸರ್ವೈರಸುರೈರ್ವಿನಿಹನ್ಯತಾಮ್ ॥19॥

ತಸ್ಯಾಂ ಹತಾಯಾಂ ದುಷ್ಟಾಯಾಂ ಸಿಂಹೇ ಚ ವಿನಿಪಾತಿತೇ ।
ಶೀಘ್ರಮಾಗಮ್ಯತಾಂ ಬದ್ಧ್ವಾ ಗೃಹೀತ್ವಾ ತಾಮಥಾಂಬಿಕಾಮ್ ॥20॥

18-20. ಎಲೈ ಚಂಡನೆ, ಮುಂಡನೆ, ನೀವುಗಳು ಹೆಚ್ಚಿನ ಸೈನ್ಯಬಲದಿಂದ ಕೂಡಿದವರಾಗಿ ಅಲ್ಲಿಗೆ ಹೋಗಿರಿ. ಹೋದನಂತರ ಹಗುರವಾಗಿ ಆಕೆಯನ್ನು ಹಿಡಿದು ತನ್ನಿರಿ. ಒಂದುವೇಳೆ ನಿಮಗೆ ಯುದ್ಧದಲ್ಲಿ (ಜಯವು) ಸಂಶಯವಾದರೆ ಆಕೆಯನ್ನು ಕೂದಲುಹಿಡಿದೆಳೆದುಕೊಂಡಾಗಲಿ, ಕಟ್ಟಿಹಾಕಿಯಾಗಲಿ ತನ್ನಿರಿ. ಮತ್ತು ಅಂಥ ಸಮಯದಲ್ಲಿ ಎಲ್ಲಾ ರಾಕ್ಷಸರೂ ಸೇರಿ ಎಲ್ಲಾ ಆಯುಧಗಳಿಂದಲೂ (ಆಕೆಯು ಹಿಮ್ಮೆಟ್ಟುವಂತೆ) ಹೊಡೆಯಿರಿ. ಹೀಗೆ ಆಕೆಯು ಸೋಲಿಸಲ್ಪಡಲಾಗಿ ಅನಂತರ ಅವಳ ಸಿಂಹವನ್ನೂ ಕೆಡವಿದಮೇಲೆ ಆ ಅಂಬಿಕೆಯನ್ನು ಕಟ್ಟಿ ಹಿಡಿದುಹಾಕಿ ಬೇಗನೆ ಕರೆತನ್ನಿರಿ- (ಎಂದು ಆಜ್ಞೆ ಮಾಡಿದನು).

ಇತಿ ಶ್ರೀ ಮಾರ್ಕಂಡೇಯಪುರಾಣೇ ದೇವೀಮಹಾತ್ಮ್ಯೇ
ಷಷ್ಠೋಽಧ್ಯಾಯಃ

---

## ಏಳನೆಯ ಅಧ್ಯಾಯ

ಧ್ಯಾನಮ್ –

ಧ್ಯಾಯೇಯಂ ರತ್ನಪೀಠೇ ಶುಕಕಲಪಠಿತಂ ಶೃಣ್ವತೀ ಶ್ಯಾಮಲಾಂಗೀಂ
ನ್ಯಸ್ತೈಕಾಂಘ್ರಿಂಸರೋಜೇ ಶಶಿಶಕಲಧರಾಂ ವಲ್ಲಕೀಂ ವಾದಯಂತೀಮ್ ।
ಕಲ್ಹಾರಾ ಬದ್ಧಮಾಲಾಂ ನಿಯಮಿತವಿಲಸಚ್ಚೋಲಿಕಾಂ ರಕ್ತವಸ್ತ್ರಾಂ
ಮಾತಂಗೀಂ ಶಂಖಪಾತ್ರಾಂ ಮಧುರಮಧುಮದಾಂ ಚಿತ್ರಕೋದ್ಭಾಸಿಭಾಲಾಮ್ ॥

ರತ್ನಪೀಠದಲ್ಲಿ ಕುಳಿತಿರುವ, ಗಿಳಿಯ ಮಾತುಗಳನ್ನು ಕೇಳುತ್ತಾ (ಆನಂದಿಸುತ್ತಿರುವ) ನೀಲಶರೀರವುಳ್ಳ , ಹಾಗೂ ಕಮಲದ ಮೇಲೆ ಒಂದು ಕಾಲನ್ನು ಇಳಿಬಿಟ್ಟು ಕುಳಿತಿರುವ, ಚಂದ್ರನ ಕಲೆಯನ್ನು ಮುಡಿಯಲ್ಲಿ ಧರಿಸಿದವಳಾಗಿ ವೀಣೆಯನ್ನು ನುಡಿಸುತ್ತಾ ಇರುವವಳಾದ, ಕಲ್ಹಾರಪುಷ್ಪಗಳಿಂದ ಕಟ್ಟಲ್ಪಟ್ಟ ಮಾಲೆಯನ್ನು ಧರಿಸಿದವಳಾದ, ಅಚ್ಚುಕಟ್ಟಾಗಿ ತೊಡಲ್ಪಟ್ಟ ರವಿಕೆಯಿಂದ ವಿರಾಜಮಾನಳಾದ, ಕೆಂಪಾದ ಸೀರೆಯನ್ನುಟ್ಟಿರುವ, ಶಂಖಪಾತ್ರೆಯನ್ನು ಧರಿಸಿ ರುಚಿಕರವಾದ ಹಾಗೂ ಮದವೇರಿಸುವ ಮಧುವನ್ನು ಪಾನಮಾಡುತ್ತಿರುವ, ಹಣೆಯಲ್ಲಿ ಕುಂಕುಮವನ್ನು ಧರಿಸಿರುವವಳಾದ ಮಾತಂಗಿಯನ್ನು ಧ್ಯಾನಿಸುವೆನು.

ಋಷಿರುವಾಚ-

ಆಜ್ಞಪ್ತಾಸ್ತೇ ತತೋ ದೈತ್ಯಾಶ್ಚಂಡಮುಂಡಪುರೋಗಮಾಃ ।
ಚತುರಂಗಬಲೋಪೇತಾ ಯಯುರಭ್ಯುದ್ಯತಾಯುಧಾಃ ॥1॥

ದದೃಶುಸ್ತೇ ತತೋ ದೇವೀಮೀಷದ್ಧಾಸಾಂ ವ್ಯವಸ್ಥಿತಾಮ್ ।
ಸಿಂಹಸ್ಯೋಪರಿ ಶೈಲೇಂದ್ರಶೃಂಗೇ ಮಹತಿ ಕಾಂಚನೇ ॥2॥

1-2. ಋಷಿಯಿಂತೆಂದನು : ಚಂಡಮುಂಡನೇ ಮೊದಲಾದ (ಶುಂಭನಿಂದ) ಅಪ್ಪಣೆಯನ್ನು ಪಡೆದ ಆ ದೈತ್ಯರುಗಳು ಚತುರಂಗಬಲಸಮೇತರಾಗಿ ಆಯುಧಗಳ ನ್ನೆತ್ತಿಕೊಂಡು ಹೊರಟರು. ಅನಂತರ ಅವರುಗಳು ದೊಡ್ಡ ಬೆಟ್ಟದ ಚಿನ್ನದ ಶಿಖರದ ಮೇಲೆ ಸಿಂಹವನ್ನೇರಿ ಕುಳಿತು ಸ್ವಲ್ಪ ಮುಗುಳುನಗೆಯಿಂದ ಕೂಡಿದ ಮುಖವುಳ್ಳ ದೇವಿಯನ್ನು ಕಂಡರು.

ತೇ ದೃಷ್ಟ್ವಾ ತಾಂ ಸಮಾದಾತುಮುದ್ಯಮಂ ಚಕ್ರುರುದ್ಯತಾಃ ।
ಆಕೃಷ್ಟಚಾಪಾಸಿಧರಾಸ್ತಥಾನ್ಯೇ ತತ್ಸಮೀಪಗಾಃ ॥3॥

ತತಃ ಕೋಪಂ ಚಕಾರೋಚ್ಚೈರಂಬಿಕಾ ತಾನರೀನ್ ಪ್ರತಿ ।
ಕೋಪೇನ ಚಾಸ್ಯಾ ವದನಂ ಮಷೀವರ್ಣಮಭೂತ್ತದಾ ॥4॥

3-4. ಅವರು ಆಕೆಯನ್ನು ನೋಡಿದ ನಂತರ ಎತ್ತಿಕೊಂಡು ಹೋಗಲು ಪ್ರಯತ್ನವನ್ನಾರಂಭಿಸಿದರು. ಹಾಗೆಯೇ ಅವರ ಜೊತೆಯಲ್ಲಿದ್ದ ಕೆಲವರು ಬಾಣ, ಕತ್ತಿಗಳನ್ನು ಸೆಳೆದವರಾಗಿ ನಿಂತರು. ಅನಂತರ ಅಂಬಿಕೆಯು ಆ ಶತ್ರುಗಳ ಮೇಲೆ ಕೋಪಗೊಂಡವಳಾದಳು. ಆಗ ಆಕೆಯ ಮುಖವು ಕೋಪದಿಂದ ಮಷಿಯಂತೆ ಕಪ್ಪಿಟ್ಟಿತು.

ಭ್ರುಕುಟೀಕುಟಿಲಾತ್ತಸ್ಯಾ ಲಲಾಟಫಲಕಾತ್ ದ್ರುತಮ್ ।
ಕಾಲೀ ಕರಾಲವದನಾ ವಿನಿಷ್ಕ್ರಾಂತಾಸಿಪಾಶಿನೀ ॥5॥

ವಿಚಿತ್ರಖಟ್ವಾಂಗಧರಾ ನರಮಾಲಾವಿಭೂಷಣಾ ।
ದ್ವೀಪಿಚರ್ಮಪರೀಧಾನಾ ಶುಷ್ಕಮಾಂಸಾತಿಭೈರವಾ ॥6॥

ಅತಿವಿಸ್ತಾರವದನಾ ಜಿಹ್ವಾಲಲನಭೀಷಣಾ ।
ನಿಮಗ್ನಾರಕ್ತನಯನಾ ನಾದಾ ಪೂರಿತದಿಙ್ಮುಖಾ ॥7॥

5-7. ಆಕೆಯ ಹುಬ್ಬುಗಂಟುಗಳುಳ್ಳ ಹಣೆಯ ಭಾಗದಿಂದ ಬೇಗನೆ ಭಯಂಕರಮುಖವುಳ್ಳ, ಕೈಗಳಲ್ಲಿ ಕತ್ತಿಯನ್ನೂ ಪಾಶವನ್ನೂ ಹಿಡಿದವಳೂ, ವಿಚಿತ್ರವಾದ ಖಟ್ವಾಂಗವೆಂಬ ಆಯುಧ, ರುಂಡಮಾಲೆಗಳ ಅಲಂಕಾರ, ಆನೆಯ ಚರ್ಮದ ಉಡುವ ಬಟ್ಟೆಯುಳ್ಳವಳೂ ಆದ, ಒಣಗಿದ (ಮೈಯಿಂದ) ಮಾಂಸವಿಲ್ಲದ ದೇಹಧಾರಿಣಿಯಾದ, ಬಹಳ ಭಯಂಕರಳೂ ಬಹಳ ಅಗಲವಾಗಿ ತೆರೆದ ಬಾಯುಳ್ಳವಳೂ ನಾಲಗೆಯನ್ನು ಅಳ್ಳಾಡಿಸುವದರಿಂದ ಅತಿಭಯಂಕರಳೂ ಆಗಿ ಕಾಣುವ, ಸುತ್ತಲೂ ಕೆಂಪಾದ ಕಣ್ಣುಗಳುಳ್ಳವಳೂ ತನ್ನ ಘರ್ಜನೆಯಿಂದ ದಿಗಂತಗಳನ್ನೆಲ್ಲ ತುಂಬಿದವಳೂ ಆದ ಕಾಳಿಯು ಹೊರಬಂದಳು.

ಸಾ ವೇಗೇನಾಭಿಪತಿತಾ ಘಾತಯಂತೀ ಮಹಾಸುರಾನ್ ।
ಸೈನ್ಯೇ ತತ್ರ ಸುರಾರೀಣಾಮಭಕ್ಷಯತ ತದ್ಬಲಮ್ ॥8॥

ಪಾರ್ಷ್ಣಿಗ್ರಾಹಾಂಕುಶಗ್ರಾಹಿಯೋಧಘಂಟಾಸಮನ್ವಿತಾನ್ ।
ಸಮಾದಾಯೈಕಹಸ್ತೇನ ಮುಖೇ ಚಿಕ್ಷೇಪ ವಾರಣಾನ್ ॥9॥

ತಥೈವ ಯೋಧಂ ತುರಗೈ ರಥಂ ಸಾರಥಿನಾ ಸಹ ।
ನಿಕ್ಷಿಪ್ಯ ವಕ್ತ್ರೇ ದಶನೈಶ್ಚರ್ವಯಂತ್ಯತಿಭೈರವಮ್ ॥10॥

8-10. ಆಕೆಯು ವೇಗದಿಂದ ಮೇಲೆ ಬಿದ್ದವಳಾಗಿ ಮಹಾರಾಕ್ಷಸರುಗಳನ್ನು ಕೊಲ್ಲುತ್ತ ಆ ರಕ್ಕಸರ ಸೈನ್ಯದಲ್ಲಿನ (ಚತುರಂಗ) ಬಲವೆಲ್ಲವನ್ನೂ ತಿನ್ನಲಾರಂಭಿಸಿದಳು. ಆನೆಗಳ ಅಕ್ಕಪಕ್ಕಗಳನ್ನು ಹಿಡಿದಿದ್ದ ಹಾಗೂ ಅಂಕುಶವನ್ನು ಹಿಡಿದು ಮೇಲೆ ಕುಳಿತಿದ್ದ ಭಟರು, ಅವುಗಳಿಗೆ ಕಟ್ಟಿದ್ದ ಗಂಟೆಗಳು – ಎಲ್ಲದರ ಸಮೇತವಾಗಿ ಒಂದೇ ಕೈಯಿಂದ ಆನೆಗಳನ್ನೆತ್ತಿ ಬಾಯಿಗೆ ತುರುಕಿಕೊಂಡಳು. ಹಾಗೆಯೇ ಕುದುರೆ ಸಮೇತನಾದ ಯೋಧನನ್ನೂ ಸಾರಥಿ ಸಹಿತವಾದ ರಥವನ್ನೂ ಬಾಯೊಳಗೆ ಹಾಕಿಕೊಂಡು ಹಲ್ಲುಗಳಿಂದ ಅಗಿಯುತ್ತಾ ಅತಿಭಯಂಕರಳಾಗಿ ಕಂಡಳು.

ಏಕಂ ಜಗ್ರಾಹ ಕೇಶೇಷು ಗ್ರೀವಾಯಾಮಥ ಚಾಪರಮ್ ।
ಪಾದೇನಾಕ್ರಮ್ಯ ಚೈವಾನ್ಯಮುರಸಾನ್ಯಮಪೋಥಯತ್ ॥11॥

ತೈರ್ಮುಕ್ತಾನಿ ಚ ಶಸ್ತ್ರಾಣಿ ಮಹಾಸ್ತ್ರಾಣಿ ತಥಾಽಸುರೈಃ ।
ಮುಖೇನ ಜಗ್ರಾಹ ರುಷಾ ದಶನೈರ್ಮಥಿತಾನ್ಯಪಿ ॥12॥

11-12. ಒಬ್ಬ(ರಾಕ್ಷಸ)ನನ್ನು ಜುಟ್ಟು ಹಿಡಿದವಳಾಗಿಯೂ ಬೇರೊಬ್ಬನನ್ನು ಕುತ್ತಿಗೆ ಹಿಡಿದವಳಾಗಿಯು ಮತ್ತೊಬ್ಬನನ್ನು ಕಾಲಿನಿಂದ ಮೆಟ್ಟಿದವಳಾಗಿಯೂ

ಇನ್ನೊಬ್ಬನನ್ನು ಎದೆಯಿಂದ ತಳ್ಳಿದವಳಾಗಿಯೂ ಕೆಡವಿಬಿಟ್ಟಳು. ಅವರುಗಳು ಪ್ರಯೋಗಿಸಿದ ಶಸ್ತ್ರಾಸ್ತ್ರಗಳನ್ನೂ ಹಾಗೂ ಉಳಿದ ರಾಕ್ಷಸರುಗಳು ಬಳಸಿದವುಗಳನ್ನೂ ಕೋಪದಿಂದ ಕೂಡಿ ಬಾಯಿಂದಲೇ ನುಂಗಿದಳು. ಕೆಲವರನ್ನು (ಕಬ್ಬಿನಂತೆ) ಅಗಿದುಗುಳಿಬಿಟ್ಟಳು.

ಬಲಿನಾಂ ತದ್ಬಲಂ ಸರ್ವಮಸುರಾಣಾಂ ದುರಾತ್ಮನಾಮ್ ।
ಮಮರ್ದಾಭಕ್ಷಯಚ್ಚಾನ್ಯಾನನ್ಯಾಂಶ್ಚಾತಾಡಯತ್ತಥಾ ॥13॥

ಅಸಿನಾ ನಿಹತಾಃ ಕೇಚಿತ್ ಕೇಚಿತ್ ಖಟ್ವಾಂಗತಾಡಿತಾಃ ।
ಜಗ್ಮುರ್ವಿನಾಶಮಸುರಾ ದಂತಾಗ್ರಾಭಿಹತಾಸ್ತಥಾ ॥14॥

13-14. ದುರಾತ್ಮರಾದ ಆ ರಾಕ್ಷಸರ ಬಲವೆಲ್ಲವನ್ನೂ ಆಕೆಯು ಚೆನ್ನಾಗಿ ಪುಡಿಮಾಡಿಬಿಟ್ಟಳು. ಕೆಲವರನ್ನು ತಿಂದುಹಾಕಿದಳು. ಕೆಲವರನ್ನು ಚೆನ್ನಾಗಿ ಹೊಡೆದಳು. ಕೆಲವರು ಕತ್ತಿಯಿಂದಲೂ ಕೆಲವರು ಖಟ್ವಾಂಗದೆಂಬ ಆಯುಧ ದಿಂದಲೂ ಬೀಳಿಸಲ್ಪಟ್ಟರು. ಮತ್ತೆ ಕೆಲವರು ಕೋರೆಹಲ್ಲುಗಳ ತುದಿಯಿಂದ ಹೊಡೆಯಲ್ಪಟ್ಟರು. ಹೀಗೆ ರಾಕ್ಷಸರೆಲ್ಲರೂ ನಾಶವಾಗಿಬಿಟ್ಟರು.

ಕ್ಷಣೇನ ತದ್ಬಲಂ ಸರ್ವಮಸುರಾಣಾಂ ನಿಪಾತಿತಮ್ ।
ದೃಷ್ಟ್ವಾ ಚಂಡೋಽಭಿದುದ್ರಾವ ತಾಂ ಕಾಲೀಮತಿಭೀಷಣಾಮ್ ॥15॥

ಶರವರ್ಷೈರ್ಮಹಾಭೀಮೈರ್ಭೀಮಾಕ್ಷೀಂ ತಾಂ ಮಹಾಸುರಃ ।
ಛಾದಯಾಮಾಸ ಚಕ್ರೈಶ್ಚ ಮುಂಡಃ ಕ್ಷಿಪ್ತೈಃ ಸಹಸ್ರಶಃ ॥16॥

ತಾನಿ ಚಕ್ರಾಣ್ಯನೇಕಾನಿ ವಿಶಮಾನಾನಿ ತನ್ಮುಖಮ್ ।
ಬಭುರ್ಯಥಾರ್ಕಬಿಂಬಾನಿ ಸುಬಹೂನಿ ಘನೋದರಮ್ ॥17॥

15-17. ಆ ರಾಕ್ಷಸರ ಬಲವೆಲ್ಲವೂ ಕ್ಷಣಮಾತ್ರದಲ್ಲಿ ಕೆಳಕ್ಕೆ ಕೆಡವಲ್ಪಟ್ಟಿತು. ಇದನ್ನು ನೋಡಿ ಆ ಅತಿಭಯಂಕರಳಾದ ಕಾಳಿಯ ಮೇಲೆ ಚಂಡನು ನುಗ್ಗಿದನು. ಭಯಂಕರವಾದ ಕಣ್ಣುಗಳುಳ್ಳ ಆಕೆಯನ್ನು ಆ ಮಹಾರಾಕ್ಷಸನಾದ ಮುಂಡನು ಬಾಣಗಳ ಮಳೆಯಿಂದಲೂ ಸಹಸ್ರಾರು ಚಕ್ರಪ್ರಯೋಗಗಳಿಂದಲೂ ಮುಚ್ಚಿದನು. ಆ ಚಕ್ರಗಳೆಲ್ಲವೂ ಆಕೆಯ ಮುಖವನ್ನು ಪ್ರವೇಶಮಾಡಿದವುಗಳಾಗಿ ಮೋಡಗಳನ್ನು ಪ್ರವೇಶಮಾಡಿರುವ ಸೂರ್ಯಬಿಂಬಗಳಂತೆ ಹೊಳೆಯುತ್ತಿದ್ದವು.

ತತೋ ಜಹಾಸಾತಿರುಷಾ ಭೀಮಂ ಭೈರವನಾದಿನೀ ।
ಕಾಲೀ ಕರಾಲವಕ್ತ್ರಾನ್ತರ್ದುರ್ದರ್ಶದಶನೋಜ್ವಲಾ ॥18॥

**ಉತ್ಥಾಯ ಚ ಮಹಾಸಿಂಹಂ ದೇವೀ ಚಂಡಮಧಾವತ ।**
**ಗೃಹೀತ್ವಾ ಚಾಸ್ಯ ಕೇಶೇಷು ಶಿರಸ್ತೇನಾಸಿನಾಚ್ಛಿನತ್ ॥19॥**

18-19. ಅನಂತರ ಭಯಂಕರಧ್ವನಿಯುಳ್ಳ ಆ ದೇವಿಯು ಬಹು ಕೋಪದಿಂದ ಗಟ್ಟಿಯಾಗಿ ನಕ್ಕಳು. ಆಗ ಆ ಕಾಳಿಯು ಭಯವುಂಟುಮಾಡುವ ಬಾಯೊಳಗೆ ಹೊಳೆಯುವ ಹಲ್ಲುಗಳುಳ್ಳವಳಾಗಿದ್ದು ನೋಡಲಸಾಧ್ಯಳಾಗಿದ್ದಳು. ಅಂಥ ದೇವಿಯು ತಾನು ಮೇಲೆದ್ದು ಸಿಂಹವನ್ನೂ ಎಬ್ಬಿಸಿ ಚಂಡನಮೇಲೆ ಎರಗಿದಳು. ಅವನ ಕೂದಲುಗಳನ್ನು ಹಿಡಿದು ಕತ್ತಿಯಿಂದ ಅವನ ತಲೆಯನ್ನು ತುಂಡರಿಸಿಬಿಟ್ಟಳು.

**ಅಥ ಮುಂಡೋಽಭ್ಯಧಾವತ್ತಾಂ ದೃಷ್ಟ್ವಾ ಚಂಡಂ ನಿಪಾತಿತಮ್ ।**
**ತಮಪ್ಯಪಾತಯದ್ ಭೂಮೌ ಸಾ ಖಡ್ಗಾಭಿಹತಂ ರುಷಾ ॥20॥**

**ಹತಶೇಷಂ ತತಃ ಸೈನ್ಯಂ ದೃಷ್ಟ್ವಾ ಚಂಡಂ ನಿಪಾತಿತಮ್ ।**
**ಮುಂಡಂ ಚ ಸುಮಹಾವೀರ್ಯಂ ದಿಶೋ ಭೇಜೇ ಭಯಾತುರಮ್ ॥21॥**

20-21. ಅನಂತರ ಚಂಡನು ಬಿದ್ದುದನ್ನು ಕಂಡು ಮುಂಡನೂ ಆಕೆಯ ಮೇಲೆ ಮುನ್ನುಗ್ಗಿದನು. ಅವಳು ಅವನನ್ನು ಕೋಪದಿಂದ ಕತ್ತಿಯಿಂದ ತುಂಡುಮಾಡಿ ಕೆಳಗೆ ಕೆಡವಿಬಿಟ್ಟಳು. ಅನಂತರ ಉಳಿದ ಸೈನ್ಯವೆಲ್ಲವೂ ಚಂಡನೂ ಮಹಾವೀರ್ಯಶಾಲಿಯಾದ ಮುಂಡನೂ ಬಿದ್ದುಹೋದುದನ್ನು ಕಂಡು ಭಯಪಟ್ಟದ್ದಾಗಿ ದಿಕ್ಕಾಪಾಲಾಗಿ ಓಡಿಹೋಯಿತು.

**ಶಿರಶ್ಚಂಡಸ್ಯ ಕಾಲೀ ಚ ಗೃಹೀತ್ವಾ ಮುಂಡಮೇವ ಚ ।**
**ಪ್ರಾಹ ಪ್ರಚಂಡಾಟ್ಟಹಾಸಮಿಶ್ರಮಭ್ಯೇತ್ಯ ಚಂಡಿಕಾಮ್ ॥22॥**

**ಮಯಾ ತವಾತ್ರೋಪಹೃತೌ ಚಂಡಮುಂಡೌ ಮಹಾಪಶೂ ।**
**ಯುದ್ಧಯಜ್ಞೇ ಸ್ವಯಂ ಶುಂಭಂ ನಿಶುಂಭಂ ಚ ಹನಿಷ್ಯಸಿ ॥23॥**

22-23. ಕಾಳಿಯು ಚಂಡನ ತಲೆಯನ್ನೂ ಮತ್ತು ಮುಂಡನ (ತಲೆಯ)ನ್ನೂ ತೆಗೆದುಕೊಂಡು ಚಂಡಿಕೆಯ ಬಳಿಗೆ ಬಂದು ಅಟ್ಟಹಾಸದಿಂದ ಕೂಡಿದವಳಾಗಿ ಹೀಗೆಂದಳು : ''ಚಂಡ-ಮುಂಡರೆಂಬ ಈ ಮಹಾಪಶುಗಳನ್ನು ನಿನಗೆ ಕಾಣಿಕೆಯಾಗಿ ತಂದಿರುವೆನು. ಇನ್ನು ಮುಂದೆ ಯುದ್ಧಯಜ್ಞದಲ್ಲಿ ನೀನೇ ಸಾಕ್ಷಾತ್ತಾಗಿ 'ಶುಂಭ-ನಿಶುಂಭ'ರನ್ನು ಕೊಲ್ಲುವೆಯಂತೆ'' (ಎಂದಳು).

ಋಷಿರುವಾಚ –

ತಾವಾನೀತೌ ತತೋ ದೃಷ್ಟ್ವಾ ಚಂಡಮುಂಡೌ ಮಹಾಸುರೌ ।
ಉವಾಚ ಕಾಲೀಂ ಕಲ್ಯಾಣೀ ಲಲಿತಂ ಚಂಡಿಕಾ ವಚಃ ॥24॥

ಯಸ್ಮಾಚ್ಚಂಡಂ ಚ ಮುಂಡಂ ಚ ಗೃಹೀತ್ವಾ ತ್ವಮುಪಾಗತಾ ।
ಚಾಮುಂಡೇತಿ ತತೋ ಲೋಕೇ ಖ್ಯಾತಾ ದೇವಿ ಭವಿಷ್ಯಸಿ ॥25॥

24-25. ಮಂಗಳೆಯಾದ ಚಂಡಿಕೆಯು ಕಾಳಿಯನ್ನು ನೋಡಿ ಆಕೆಯು ಆ ಚಂಡಮುಂಡರೆಂಬ ಮಹಾರಾಕ್ಷಸರನ್ನು ಸಂಹರಿಸಿ ತಂದಿದ್ದ ತಲೆಗಳನ್ನು ಕಂಡು - "ಎಲೆ, ನೀನು ಚಂಡನನ್ನೂ ಮುಂಡನನ್ನೂ (ಸಂಹರಿಸಿ) ತೆಗೆದುಕೊಂಡು ಬಂದಿರುವೆಯಾಗಿ ಇನ್ನು ಮುಂದೆ ಲೋಕದಲ್ಲಿ 'ಚಾಮುಂಡಿ'ಯೆಂದೇ ಪ್ರಸಿದ್ಧಳಾಗುವೆ"-ಎಂದು ಹರಸಿದಳು.

ಇತಿ ಶ್ರೀ ಮಾರ್ಕಂಡೇಯಪುರಾಣೇ ದೇವೀಮಹಾತ್ಮ್ಯೇ
ಸಪ್ತಮೋಽಧ್ಯಾಯಃ

---

## ಎಂಟನೆಯ ಅಧ್ಯಾಯ

ಧ್ಯಾನಮ್ –

ಅರುಣಾಂ ಕರುಣಾತರಂಗಿತಾಕ್ಷೀಂ ಧೃತಪಾಶಾಂಕುಶಬಾಣಚಾಪಹಸ್ತಾಮ್ ।
ಅಣಿಮಾದಿಭಿರಾವೃತಾಂ ಮಯೂಖೈರಹಮಿತ್ಯೇವ ವಿಭಾವಯೇ ಭವಾನೀಮ್ ॥

ತಿಳಿಗೆಂಪು ಬಣ್ಣದವಳೂ, ಕರುಣೆಯಿಂದ ಚಂಚಲವಾದ ಕಣ್ಣುಗಳುಳ್ಳವಳೂ, ಪಾಶ, ಅಂಕುಶ, ಬಾಣ, ಬಿಲ್ಲುಗಳಿಂದಲಂಕೃತವಾದ ಕೈಗಳುಳ್ಳವಳೂ ಅಣಿಮಾದಿ ಸಿದ್ಧಿಗಳೆಂಬ ಕಿರಣಗಳಿಂದ ಆವೃತಳಾದ ಭವಪತ್ನಿಯಾದ ಅಂಬಿಕೆಯನ್ನು ನಾನೇ ಎಂದುಕೊಂಡು ಧ್ಯಾನಿಸುವೆನು.

ಓಂ ॥ ಋಷಿರುವಾಚ –

ಚಂಡೇ ಚ ನಿಹತೇ ದೈತ್ಯೇ ಮುಂಡೇ ಚ ವಿನಿಪಾತಿತೇ ।
ಬಹುಲೇಷು ಚ ಸೈನ್ಯೇಷು ಕ್ಷಯಿತೇಷ್ವಸುರೇಶ್ವರಃ ॥1॥

**ತತಃ ಕೋಪಪರಾಧೀನಚೇತಾಃ ಶುಂಭಃ ಪ್ರತಾಪವಾನ್ ।**
**ಉದ್ಯೋಗಂ ಸರ್ವಸೈನ್ಯಾನಾಂ ದೈತ್ಯಾನಾಮಾದಿದೇಶ ಹ ॥2॥**

1-2. ಋಷಿಯಿಂತೆಂದನು : ದೈತ್ಯನಾದ ಚಂಡನೂ ಮುಂಡನೂ ನಾಶವಾಗಲಾಗಿ ಹಾಗೂ ಬಹಳವಾದ (ರಾಕ್ಷಸ) ಸೈನ್ಯವೂ ಕ್ಷೀಣವಾಗಲಾಗಿ, ಪ್ರತಾಪಶಾಲಿಯಾದ ಶುಂಭನು ಕೋಪಕ್ಕೆ ವಶವಾದ ಚಿತ್ತವುಳ್ಳವನಾಗಿ ರಾಕ್ಷಸರ ಎಲ್ಲಾ ಸೈನ್ಯಕ್ಕೂ (ಯುದ್ಧ)ಕರ್ಮವನ್ನು ಮಾಡುವಂತೆ ಅಪ್ಪಣೆ ಮಾಡಿದನು.

**ಅದ್ಯ ಸರ್ವಬಲೈರ್ದೈತ್ಯಾಃ ಷಡಶೀತಿರುದಾಯುಧಾಃ .**
**ಕಂಬೂನಾಂ ಚತುರಾಶೀತಿರ್ನಿರ್ಯಾಂತು ಸ್ವಬಲೈರ್ವೃತಾಃ ॥3॥**

**ಕೋಟಿವೀರ್ಯಾಣಿ ಪಂಚಾಶದಸುರಾಣಾಂ ಕುಲಾನಿ ವೈ ।**
**ಶತಂ ಕುಲಾನಿ ಧೌಮ್ರಾಣಾಂ ನಿರ್ಗಚ್ಛಂತು ಮಮಾಜ್ಞಯಾ ॥4॥**

**ಕಾಲಕಾ ದೌರ್ಹೃದಾ ಮೌರ್ಯಾಃ ಕಾಲಕೇಯಾಸ್ತಥಾಽಸುರಾಃ ।**
**ಯುದ್ಧಾಯ ಸಜ್ಜಾ ನಿರ್ಯಾಂತು ಆಜ್ಞಯಾ ತ್ವರಿತಾ ಮಮ ॥5॥**

**ಇತ್ಯಾಜ್ಞಾಪ್ಯಾಸುರಪತಿಃ ಶುಂಭೋ ಭೈರವಶಾಸನಃ ।**
**ನಿರ್ಜಗಾಮ ಮಹಾಸೈನ್ಯಸಹಸ್ರೈರ್ಬಹುಭಿಃ ವೃತಃ ॥6॥**

3-6. "ಈಗ ಎಲ್ಲೈ ದೈತ್ಯರುಗಳಿರ, ನೀವು ಎಲ್ಲಾ ಸೈನ್ಯಗಳನ್ನೂ (ಹೊರಡಿಸಿಕೊಂಡು) ಆಯುಧಗಳನ್ನೆತ್ತಿದವರಾಗಿ ಎಂಬತ್ತಾರು ಬಗೆಯ (ಅಸುರರೊಡಗೂಡಿ) ಹೊರಡುವವರಾಗಿರಿ. ಹಾಗೆಯೇ ಕಂಬು ಎಂಬ ಹೆಸರಿನ ಎಂಬತ್ತುನಾಲ್ಕು ಬಗೆಯ (ರಕ್ಕಸರು) ತಮ್ಮ ಬಲಗಳೊಡನೆ ಕೂಡಿದವರಾಗಿ ಹೊರಡಲಿ. ಐವತ್ತು ಕುಲಗಳ ಕೋಟಿವೀರ್ಯರಾದ ಅಸುರರೂ ಧೌಮ್ರರೆಂಬ ಹೆಸರಿನ ನೂರುಕುಲದವರೂ ನನ್ನ ಅಪ್ಪಣೆಯಂತೆ ಹೊರಡಲಿ. ಇನ್ನು ಕಾಲಕರು, ದೌರ್ಹೃದರು, ಮೌರ್ಯರು, ಕಾಲಕೇಯರು, ಇವರುಗಳೂ ನನ್ನ ಆಜ್ಞೆಯಂತೆ ಬೇಗನೆ ಯುದ್ಧಕ್ಕೆ ಸನ್ನದ್ಧರಾಗಿ ಹೊರಡಲಿ". ಹೀಗೆಂದು ಆ ರಾಕ್ಷಸರೊಡೆಯನೂ, ಭಯಂಕರವಾದ ಆಜ್ಞೆಯುಳ್ಳವನೂ ಆದ ಶುಂಭನು ಅಪ್ಪಣೆಮಾಡಿದವನಾಗಿ ಸಹಸ್ರಸಂಖ್ಯೆಯ ಮಹಾಸೈನ್ಯದಿಂದಲೂ ಬಹು (ರಾಕ್ಷಸರಿಂದಲೂ) ಕೂಡಿದವಾಗಿ ಹೊರಟನು.

**ಆಯಾಂತಂ ಚಂಡಿಕಾ ದೃಷ್ಟ್ವಾ ತತ್ಸೈನ್ಯಮತಿಭೀಷಣಮ್ ।**
**ಜ್ಯಾಸ್ವನೈಃ ಪೂರಯಾಮಾಸ ಧರಣೀಗಗನಾಂತರಮ್ ॥7॥**

ತತಃ ಸಿಂಹೋ ಮಹಾನಾದಮತೀವ ಕೃತವಾನ್ ನೃಪ ।
ಗಂಟಾಸ್ವನೇನ ತನ್ನಾದಮಂಬಿಕಾ ಚೋಪಬೃಂಹಯತ್ ॥8॥

ಧನುಜ್ಯಾಸಿಂಹಘಂಟಾನಾಂ ನಾದಾಪೂರಿತದಿಙ್ಮುಖಾ ।
ನಿನಾದೈರ್ಭೀಷಣೈಃ ಕಾಲೀ ಜಿಗ್ಯೇ ವಿಸ್ತಾರಿತಾನನಾ ॥9॥

7-9. ಎಲೈ ರಾಜನೆ, ಅತಿಭಯಂಕರವಾದ ಆ (ರಾಕ್ಷಸ) ಸೈನ್ಯವು ಬರುತ್ತಿರುವದನ್ನು ಕಂಡ ಆ ಚಂಡಿಕೆಯು ಭೂಮ್ಯಾಕಾಶಗಳ ನಡುವನ್ನೆಲ್ಲ ತನ್ನ (ಬಿಲ್ಲಿನ) ಹಗ್ಗದ ನಾದದಿಂದ ತುಂಬಿಬಿಟ್ಟಳು. ಅನಂತರ ಸಿಂಹವು ಅತಿಯಾಗಿ ಬಹಳ ಗಟ್ಟಿಯಾಗಿ ಘರ್ಜಿಸುತ್ತಾ ಇತ್ತು. ಅಂಬಿಕೆಯು ತನ್ನಲ್ಲಿದ್ದ ಘಂಟೆಯನ್ನು ಬಾರಿಸುವದರ ಮೂಲಕ ಆ ಧ್ವನಿಯನ್ನು ಇನ್ನೂ ಎತ್ತರಿಸಿಬಿಟ್ಟಳು. ಹೀಗೆ ಬಿಲ್ಲಿನ ಹಗ್ಗದ, ಸಿಂಹದ ಹಾಗೂ ಘಂಟೆಯ ನಾದಗಳು ಒಟ್ಟುಗೂಡಿ ದಿಕ್ಕುಗಳೆಲ್ಲವೂ ಧ್ವನಿಯಿಂದ ತುಂಬಿಹೋಗಲಾಗಿ ಕಾಳಿಯು ಬಾಯಿಯನ್ನು ತೆರೆದುಕೊಂಡವಳಾಗಿ (ಶಬ್ದದಿಂದ ರಾಕ್ಷಸರನ್ನೆಲ್ಲ) ಗೆದ್ದಳು.

ತಂ ನಿನಾದಮುಪಶ್ರುತ್ಯ ದೈತ್ಯಸೈನ್ಯೈಶ್ಚತುರ್ದಿಶಮ್ ।
ದೇವೀ ಸಿಂಹಸ್ತಥಾ ಕಾಲೀ ಸರೋಷೈಃ ಪರಿವಾರಿತಾಃ ॥10॥

10. ಆ ದೊಡ್ಡ ಧ್ವನಿಯನ್ನು ಕೇಳಿ ಕೋಪದಿಂದ ಕೂಡಿದ ರಾಕ್ಷಸ ಸೈನ್ಯವು ನಾಲ್ಕು ದಿಕ್ಕುಗಳಿಂದಲೂ ದೇವಿಯನ್ನೂ ಹಾಗೂ ಸಿಂಹ, ಕಾಳಿಯರನ್ನೂ ಆವರಿಸಿಬಿಟ್ಟವು.

ಏತಸ್ಮಿನ್ನಂತರೇ ಭೂಪ ವಿನಾಶಾಯ ಸುರದ್ವಿಷಾಮ್ ।
ಭವಾಯಾಮರಸಿಂಹಾನಾಮತಿವೀರ್ಯಬಲಾನ್ವಿತಾಃ ॥11॥

ಬ್ರಹ್ಮೇಶಗುಹವಿಷ್ಣೂನಾಂ ತಥೇಂದ್ರಸ್ಯ ಚ ಶಕ್ತಯಃ ।
ಶರೀರೇಭ್ಯೋ ವಿನಿಷ್ಕ್ರಮ್ಯ ತದ್ರೂಪೈಶ್ಚಂಡಿಕಾಂ ಯಯುಃ ॥12॥

ಯಸ್ಯ ದೇವಸ್ಯ ಯದ್ರೂಪಂ ಯಥಾಭೂಷಣವಾಹನಮ್ ।
ತದ್ವದೇವ ಹಿ ತಚ್ಛಕ್ತಿರಸುರಾನ್ ಯೋದ್ಧುಮಾಯಯೌ ॥13॥

11-13. ಎಲೈ ರಾಜನೆ, ಈ ನಡುವೆ ದೇವಶತ್ರುಗಳ ನಾಶಕ್ಕಾಗಿ ಹಾಗೂ ದೇವಶ್ರೇಷ್ಠರುಗಳ ಉದ್ಧಾರಕ್ಕಾಗಿ ಹೆಚ್ಚಿನ ಬಲ, ವೀರ್ಯಗಳಿಂದ ಕೂಡಿದ ಬ್ರಹ್ಮ, ಈಶ್ವರ, ಷಣ್ಮುಖ, ವಿಷ್ಣು, ಹಾಗೂ ಇಂದ್ರನ ಶರೀರಗಳಿಂದ ಹೊರಬಿದ್ದ ಆಯಾ

ಶಕ್ತಿದೇವತೆಗಳು ಆಯಾ ರೂಪದಿಂದಲೇ ಚಂಡಿಕೆಯ ಹತ್ತಿರಕ್ಕೆ ಸಾರಿದರು. ಯಾವ ದೇವತೆಗೆ ಯಾವ ರೂಪವೋ ಯಾವ ಒಡವೆ-ವಾಹನಗಳೋ ಹಾಗೆಯೇ ಆ ಶಕ್ತಿದೇವತೆಯೂ ಧರಿಸಿಕೊಂಡು ರಾಕ್ಷಸರೊಡನೆ ಯುದ್ಧಮಾಡಲು ಹೊರಟಳು.

ಹಂಸಯುಕ್ತವಿಮಾನಾಗ್ರೇ ಸಾಕ್ಷಸೂತ್ರ ಕಮಂಡಲುಃ ।
ಆಯಾತಾ ಬ್ರಹ್ಮಣಃ ಶಕ್ತಿಃ ಬ್ರಹ್ಮಾಣೀ ಸಾಭಿಧೀಯತೇ ॥14॥

ಮಾಹೇಶ್ವರೀ ವೃಷಾರೂಢಾ ತ್ರಿಶೂಲವರಧಾರಿಣೀ ।
ಮಹಾಹಿವಲಯಾ ಪ್ರಾಪ್ತಾ ಚಂದ್ರರೇಖಾವಿಭೂಷಣಾ ॥15॥

ಕೌಮಾರೀ ಶಕ್ತಿಹಸ್ತಾ ಚ ಮಯೂರವರವಾಹನಾ ।
ಯೋದ್ಧುಮಭ್ಯಾಯಯೌ ದೈತ್ಯಾನಂಬಿಕಾ ಗುಹರೂಪಿಣೀ ॥16॥

14-16. ಹಂಸದಿಂದ ಕೂಡಿದ ಶ್ರೇಷ್ಠವಾದ ವಿಮಾನದಲ್ಲಿ ಕುಳಿತು ಜಪಸರ, ಕಮಂಡಲುಗಳನ್ನು ಹಿಡಿದಿರುವ ಬ್ರಹ್ಮನ ಶಕ್ತಿಯು ದೇವೀರೂಪದಿಂದ ಹೊರಬಂದಳು. ಆಕೆಯನ್ನು ಬ್ರಹ್ಮಾಣೀ ಎನ್ನುವರು. ಹಾಗೆಯೇ ಎತ್ತಿನ ವಾಹನವನ್ನೇರಿ ಶ್ರೇಷ್ಠವಾದ ತ್ರಿಶೂಲವನ್ನು ಹಿಡಿದು ದೊಡ್ಡ ಸರ್ಪಗಳನ್ನೇ ಬಳೆಗಳಾಗಿ ಧರಿಸಿದಂಥ, ಚಂದ್ರಕಲೆಯಿಂದಲಂಕೃತವಾದ (ಮುಡಿಉಳ್ಳ) ಮಾಹೇಶ್ವರಿಯೂ ಬಂದಳು. ಇನ್ನು ಶಕ್ತ್ಯಾಯುಧವನ್ನು ಕೈಯಲ್ಲಿ ಹಿಡಿದು ಶ್ರೇಷ್ಠವಾದ ನವಿಲನ್ನು ವಾಹನವಾಗಿ ಮಾಡಿಕೊಂಡವಳಾದ, ಕುಮಾರ ಸ್ವಾಮಿಯ (ಶಕ್ತಿ)ರೂಪಿಣಿಯಾದ ಕೌಮಾರೀದೇವಿಯು ರಾಕ್ಷಸರೊಡನೆ ಕಾದಾಡುವದಕ್ಕಾಗಿ ಹೊರಟುಬಂದಳು.

ತಥೈವ ವೈಷ್ಣವೀಶಕ್ತಿರ್ಗರುಡೋಪರಿ ಸಂಸ್ಥಿತಾ ।
ಶಂಖಚಕ್ರಗದಾಶಾರ್ಙ್ಗಖಡ್ಗ ಹಸ್ತಾಭ್ಯುಪಾಯಯೌ ॥17॥

ಯಜ್ಞವಾರಾಹಮತುಲಂ ರೂಪಂ ಯಾ ಬಿಭ್ರತೋ ಹರೇಃ ।
ಶಕ್ತಿಃ ಸಾಪ್ಯಾಯಯೌ ತತ್ರ ವಾರಾಹೀಂ ಬಿಭ್ರತೀ ತನುಮ್ ॥18॥

ನಾರಸಿಂಹೀ ನೃಸಿಂಹಸ್ಯ ಬಿಭ್ರತೀ ಸದೃಶಂ ವಪುಃ ।
ಪ್ರಾಪ್ತಾ ತತ್ರ ಸಟಾಕ್ಷೇಪಕ್ಷಿಪ್ತನಕ್ಷತ್ರಸಂಹತಿಃ ॥19॥

17-19. ಹಾಗೆಯೇ ಗರುಡನನ್ನೇರಿ ಬಂದ, ಮತ್ತು ಶಂಖ, ಚಕ್ರ, ಗದೆ, ಶಾರ್ಙ್ಗವೆಂಬ ಬಿಲ್ಲು, ಕತ್ತಿ-ಗಳನ್ನು ಕೈಯಲ್ಲಿ ಹಿಡಿದಿರುವ ವೈಷ್ಣವೀ ಶಕ್ತಿಯು ಅಲ್ಲಿ (ಕಾಣಿಸಿಕೊಂಡಳು). ಶ್ರೀಹರಿಯ ಮಹತ್ತಾದ ಯಜ್ಞವರಾಹ ರೂಪವನ್ನು ಧರಿಸಿದ

ವಾರಾಹೀ ಎಂಬ ಆ ಶಕ್ತಿಯೂ ವರಾಹದ ಶರೀರವನ್ನು ಧರಿಸಿ ಬಂದಳು. ನಾರಸಿಂಹೀ ಶಕ್ತಿಯಾದರೊ, ನರಸಿಂಹನಿಗೆ ಸಮಾನವಾದ ಶರೀರವನ್ನು ಧರಿಸಿ ಕೇಸರಗಳನ್ನು ಕೊಡುವುದರ ಮೂಲಕ ನಕ್ಷತ್ರಗಳ ಗುಂಪನ್ನೇ ಚದುರಿಸುವವಳಾಗಿ ಬಂದಳು.

ವಜ್ರಹಸ್ತಾ ತಥೈವೈಂದ್ರೀ ಗಜರಾಜೋಪರಿ ಸ್ಥಿತಾ ।
ಪ್ರಾಪ್ತಾ ಸಹಸ್ರನಯನಾ ಯಥಾ ಶಕ್ರಸ್ತಥೈವ ಸಾ ॥20॥

ತತಃ ಪರಿವೃತಸ್ತಾಭಿರೀಶಾನೋ ದೇವಶಕ್ತಿಭಿಃ ।
ಹನ್ಯನ್ತಾಮಸುರಾಃ ಶೀಘ್ರಂ ಮಮ ಪ್ರೀತ್ಯಾಽಽಹ ಚಂಡಿಕಾಮ್ ॥21॥

20-21. ಹಾಗೆಯೇ ವಜ್ರಾಯುಧಧಾರಿಣಿಯಾದ, ಗಜರಾಜನನ್ನೇರಿ ಬಂದ, ಮತ್ತು ಇಂದ್ರನಂತೆಯೇ ಸಾವಿರಕಣ್ಣುಗಳುಳ್ಳ ಐಂದ್ರೀಶಕ್ತಿಯು ಅಲ್ಲಿಗೆ ಬಂದಳು. ಅನಂತರ. ಆ ಎಲ್ಲಾ ದೇವಶಕ್ತಿ ಸಮೂಹದಿಂದಲೂ ಸುತ್ತುವರೆಯಲ್ಪಟ್ಟ ಈಶ್ವರನು ಚಂಡಿಕೆಯನ್ನು ಕುರಿತು ರಾಕ್ಷಸರನ್ನೆಲ್ಲ ನನ್ನ ಪ್ರೀತಿಗಾಗಿ ಕೊಲ್ಲಿರಿ-ಎಂದು ಹೇಳಿದನು.

ತತೋ ದೇವೀಶರೀರಾತ್ತು ವಿನಿಷ್ಕ್ರಾಂತಾತಿಭೀಷಣಾ ।
ಚಂಡಿಕಾಶಕ್ತಿರತ್ಯುಗ್ರಾ ಶಿವಾಶತನಿನಾದಿನೀ ॥22॥

ಸಾ ಚಾಹ ಧೂಮ್ರಜಟಿಲಮೀಶಾನಮಪರಾಜಿತಾ ।
ದೂತಂ ತ್ವಂ ಗಚ್ಛ ಭಗವನ್ ಪಾರ್ಶ್ವಂ ಶುಂಭನಿಶುಂಭಯೋಃ ॥23।

ಬ್ರೂಹಿ ಶುಂಭಂ ನಿಶುಂಭಂ ಚ ದಾನವಾವತಿಗರ್ವಿತೌ ।
ಯೇ ಚಾನ್ಯೇ ದಾನವಾಸ್ತತ್ರ ಯುದ್ಧಾಯ ಸಮುಪಸ್ಥಿತಾಃ ॥24॥

22-24. ಅನಂತರ ದೇವಿಯ ಶರೀರದಿಂದ ಹೊರಬಂದ ಅತಿಭಯಂಕರವಾದ ಹಾಗೂ ನೂರು ನರಿಗಳ ಕೂಗಿನಂತೆ ಧ್ವನಿಯುಳ್ಳ, ದಾರುಣವಾದ ಯಾರಿಂದಲೂ ಸೋಲಿಸಲಾಗದ ಆ ಚಂಡಿಕಾಶಕ್ತಿಯು, ಹೊಗೆಯಂತೆ ಕಂದು ಬಣ್ಣದ ಜಡೆಯುಳ್ಳ, ಈಶ್ವರನನ್ನು ಕುರಿತು 'ಎಲೈ ಪೂಜ್ಯನೆ, ನೀನು ಶುಂಭ ನಿಶುಂಭರ ಬಳಿಗೆ ಹೋಗುವವನಾಗು. ಬಹಳವಾಗಿ ಕೊಬ್ಬಿ ಹೋಗಿರುವ ಆ ದಾನವರಾದ ಶುಂಭನಿಶುಂಭರಿಗೂ-ಇನ್ನು ಯುದ್ಧಮಾಡಲೆಳಸಿ ಹೊರಟಿರುವ ಉಳಿದ ದಾನವರಿಗೂ (ಹೀಗೆಂದು) ಹೇಳುವವನಾಗು'- ಎಂದಳು.

ತ್ರೈಲೋಕ್ಯಮಿಂದ್ರೋ ಲಭತಾಂ ದೇವಾಃ ಸಂತು ಹವಿರ್ಭುಜಃ ।
ಯೂಯಂ ಪ್ರಯಾತ ಪಾತಾಲಂ ಯದಿ ಜೀವಿತುಮಿಚ್ಛಥ ॥25॥

ಬಲಾವಲೇಪಾದಥ ಚೇದ್ಭವಂತೋ ಯುದ್ಧಕಾಂಕ್ಷಿಣಃ ।
ತದಾಗಚ್ಛತ ತೃಪ್ಯಂತು ಮಚ್ಛಿವಾಃ ಪಿಶಿತೇನ ವಃ ॥26॥

25-26. "ಇಂದ್ರನು ತ್ರೈಲೋಕ್ಯದ ಒಡೆತನವನ್ನು ಪಡೆಯಲಿ ; ದೇವತೆಗಳು ಹವಿರ್ಭಾಗವನ್ನು ಉಣ್ಣುವಂತಾಗಲಿ ! ನೀವೆಲ್ಲರೂ ಬದುಕಲು ಆಸೆಯಿದ್ದರೆ ಪಾತಾಳಕ್ಕೆ ಹೋಗಿರಿ. ಹಾಗಿಲ್ಲದೆ (ತೋಳು)ಬಲದ ಗರ್ವದಿಂದ ನೀವುಗಳೇನಾದರೂ ಯುದ್ಧವನ್ನು ಬಯಸುವಿರಾದರೆ ಆಗ ಬನ್ನಿರಿ. ನಿಮ್ಮಗಳ ಮಾಂಸದಿಂದ ನಮ್ಮ ನರಿಗಳು ತೃಪ್ತರಾಗಲಿ !" (ಹೀಗೆಂದು ಹೇಳಿ ಕಳುಹಿಸಿದಳು).

ಯತೋ ನಿಯುಕ್ತೋ ದೌತ್ಯೇನ ತಥಾ ದೇವ್ಯಾ ಶಿವಃ ಸ್ವಯಮ್ ।
ಶಿವದೂತೀತಿ ಲೋಕೇಽಸ್ಮಿನ್ ತತಃ ಸಾ ಖ್ಯಾತಿಮಾಗತಾ ॥27॥

ತೇಽಪಿ ಶ್ರುತ್ವಾ ವಚೋ ದೇವ್ಯಾಃ ಶರ್ವಾಖ್ಯಾತಂ ಮಹಾಸುರಾಃ ।
ಅಮರ್ಷಾಪೂರಿತಾ ಜಗ್ಮುರ್ಯತ್ರ ಕಾತ್ಯಾಯನೀ ಸ್ಥಿತಾ ॥28॥

ತತಃ ಪ್ರಥಮಮೇವಾಗ್ರೇ ಶರಶಕ್ತ್ಯೃಷ್ಟಿವೃಷ್ಟಿಭಿಃ ।
ವವರ್ಷುರುದ್ಧತಾಮರ್ಷಾಸ್ತಾಂ ದೇವೀಮಮರಾರಯಃ ॥29॥

27-29. ಯಾವ ದೇವಿಯಿಂದ ಶಿವನೇ ಸಾಕ್ಷಾತ್ತಾಗಿ ದೂತನ ಕೆಲಸದಲ್ಲಿ ನೇಮಿಸಲ್ಪಟ್ಟನೋ ಆ ಕಾರಣದಿಂದ ಲೋಕದಲ್ಲಿ ದೇವಿಯು ಶಿವದೂತಿ ಎಂದು ಪ್ರಸಿದ್ಧಳಾದಳು. ಶಿವನು ತಿಳಿಸಿದ ಮಾತನ್ನು ಕೇಳಿ ಆ ಮಹಾಸುರರು ಕೋಪದಿಂದ ಕೆರಳಲ್ಪಟ್ಟವರಾಗಿ ಕಾತ್ಯಾಯನಿಯು ಇದ್ದ ಬಳಿಗೆ ಹೊರಟರು. ಮೊದಲೇ ಬಾಣ, ಶಕ್ತ್ಯಾಯುಧ, ಋಷ್ಟಿ- ಎಂಬ ಶಸ್ತ್ರಗಳನ್ನು ಮಳೆಗರೆದರು. ಆ ದೇವಿಯನ್ನು ಹೀಗೆ ಆ ದೇವಶತ್ರುಗಳು ಮೇಲೆದ್ದು (ಕೋಪದಿಂದ) ಎದುರಿಸಿದರು.

ಸಾ ಚ ತಾನ್ ಪ್ರಹಿತಾನ್ ಬಾಣಾನ್ ಶೂಲಶಕ್ತಿ ಪರಶ್ವಧಾನ್ ।
ಚಿಚ್ಛೇದ ಲೀಲಯಾಧ್ಮಾತಧನುರ್ಮುಕ್ತೈರ್ಮಹೇಷುಭಿಃ ॥30॥

ತಸ್ಯಾಗ್ರತಃ ತಥಾ ಕಾಲೀ ಶೂಲಪಾಶವಿದಾರಿತಾನ್ ।
ಖಟ್ವಾಂಗಪೋಥಿತಾಶ್ಚಾರೀನ್ ಕುರ್ವತೀ ವ್ಯಚರತ್ ತದಾ ॥31॥

30-31. ಆಕೆಯಾದರೊ, ಆ ರಾಕ್ಷಸರು ಪ್ರಯೋಗಿಸಿದ ಬಾಣಗಳನ್ನೂ ಶೂಲ, ಶಕ್ತಿ, ಪರಶ್ವಧ-ಮುಂತಾದ ಆಯುಧಗಳನ್ನೂ ಲೀಲಾಮಾತ್ರದಿಂದ, ಹೆದೆಯೇರಿಸಿದ ತನ್ನ ಧನುಸ್ಸಿನಿಂದ ಹೊರಬಿದ್ದ ಮಹಾಬಾಣಗಳಿಂದ ಕತ್ತರಿಸಿದಳು.

ಆಕೆಯ ಮುಂಭಾಗದಲ್ಲಿ ಕಾಳಿಕಾದೇವಿಯು ಶತ್ರುಗಳನ್ನು ಶೂಲದ ಹೊಡೆತಗಳಿಂದ ಸೀಳಿದವರನ್ನಾಗಿಯೂ ಖಟ್ವಾಂಗವೆಂಬ ಆಯುಧದಿಂದ ಜಜ್ಜಲ್ಪಟ್ಟವರನ್ನಾಗಿಯೂ ಮಾಡುತ್ತಾ ಸಂಚರಿಸಿದಳು.

ಕಮಂಡಲುಜಲಾಕ್ಷೇಪಹತವೀರ್ಯಾನ್ ಹತೌಜಸಃ ।
ಬ್ರಹ್ಮಾಣೀ ಚಾಕರೋತ್ ಶತ್ರೂನ್ ಯೇನ ಯೇನ ಸ್ಮ ಧಾವತಿ ॥32॥

32. ಬ್ರಹ್ಮಾಣಿಯು ತನ್ನ ಕಮಂಡಲುವಿನ ನೀರನ್ನು ಎಸೆಯುವದರಿಂದ ಹಿಮ್ಮೆಟ್ಟಿಸಲ್ಪಟ್ಟ ವೀರ್ಯ ಹಾಗೂ ಶಕ್ತಿಯುಳ್ಳವರನ್ನಾಗಿ ಶತ್ರುಗಳನ್ನು - ತಾನು ಯಾರುಯಾರನ್ನು ಅಟ್ಟಿಸಿಕೊಂಡು ಹೋದಳೋ ಅಲ್ಲೆಲ್ಲ (ಪರಾಭೂತರನ್ನಾಗಿ) ಮಾಡಿದಳು.

ಮಾಹೇಶ್ವರೀ ತ್ರಿಶೂಲೇನ ತಥಾ ಚಕ್ರೇಣ ವೈಷ್ಣವೀ ।
ದೈತ್ಯಾನ್ ಜಘಾನ ಕೌಮಾರೀ ತಥಾ ಶತ್ತ್ಯಾತಿಕೋಪನಾ ॥33॥

ಐಂದ್ರೀಕುಲಿಶಪಾತೇನ ಶತಶೋ ದೈತ್ಯದಾನವಾಃ ।
ಪೇತುರ್ವಿದಾರಿತಾಃ ಪೃಥ್ವ್ಯಾಂ ರುಧಿರೌಘಪ್ರವರ್ಷಿಣಃ ॥34॥

33-34. ಹಾಗೆಯೇ ಮಾಹೇಶ್ವರಿಯು ತ್ರಿಶೂಲದಿಂದಲೂ ವೈಷ್ಣವಿಯು ಚಕ್ರದಿಂದಲೂ ಅತಿ ಸಿಟ್ಟಾದ ಕೌಮಾರಿಯು ಶಕ್ತ್ಯಾಯುಧದಿಂದಲೂ ರಾಕ್ಷಸರನ್ನು ಸಂಹರಿಸಿದರು. ನೂರಾರು ದೈತ್ಯದಾನವರು ಐಂದ್ರೀದೇವಿಯ ವಜ್ರಾಯುಧದ ಹೊಡೆತದಿಂದ ಸೀಳಲ್ಪಟ್ಟು ರಕ್ತದ ಪ್ರವಾಹವನ್ನು ಹರಿಸುತ್ತಾ ಭೂಮಿಯಲ್ಲಿ ಬಿದ್ದರು.

ತುಂಡಪ್ರಹಾರವಿಧ್ವಸ್ತಾ ದಂಷ್ಟ್ರಾಗ್ರಕ್ಷತವಕ್ಷಸಃ ।
ವಾರಾಹಮೂರ್ತ್ಯಾ ನ್ಯಪತಂಶ್ಚಕ್ರೇಣ ಚ ವಿದಾರಿತಾಃ ॥35॥

ನಖೈರ್ವಿದಾರಿತಾಂಶ್ಚಾನ್ಯಾನ್ ಭಕ್ಷಯಂತೀ ಮಹಾಸುರಾನ್ ।
ನಾರಸಿಂಹೀ ಚಚಾರಾಜೌ ನಾದಾಪೂರ್ಣದಿಗಂಬರಾ ॥36॥

ಚಂಡಾಟ್ಟಹಾಸೈರಸುರಾಃ ಶಿವದೂತ್ಯಭಿದೂಷಿತಾಃ ।
ಪೇತುಃ ಪೃಥಿವ್ಯಾಂ ಪತಿತಾಂಸ್ತಾಂಶ್ಚಖಾದಾಥ ಸಾ ತದಾ ॥37॥

35-37. ವಾರಾಹೀಮೂರ್ತಿದೇವಿಯ ಮುಸುಡಿಯ ಹೊಡೆತದಿಂದ ಪುಡಿಯಾದ, ಹಾಗೂ ಹೊರಚಾಚಿದ್ದ ಹಲ್ಲುಗಳ ತುದಿಯಿಂದ ಗಾಯಗೊಳಿಸಲ್ಪಟ್ಟ ಎದೆಯುಳ್ಳ ರಾಕ್ಷಸರು ಮತ್ತು ಚಕ್ರಾಯುಧದಿಂದ ಸೀಳಲ್ಪಟ್ಟ ದೈತ್ಯರು ಸಹ ಕೆಳಗೆ

ಬಿದ್ದರು. ನಾರಸಿಂಹೀಶಕ್ತಿದೇವಿಯು ತನ್ನ ಧ್ವನಿಯ ವೇಗದಿಂದ ದಿಕ್ಕುಗಳನ್ನೆಲ್ಲ ತುಂಬುತ್ತಾ ಕೆಲವರು ಮಹಾರಾಕ್ಷಸರನ್ನು ಉಗುರುಗಳಿಂದ ಸೀಳುತ್ತಾ (ಕೆಲವರನ್ನು) ತಿಂದುಹಾಕುತ್ತಾ ಯುದ್ಧರಂಗದಲ್ಲಿ ಸಂಚರಿಸಿದಳು. ಶಿವದೂತಿಯ ಭಯಂಕರವಾದ ಅಟ್ಟಹಾಸಗಳಿಂದ ವಿಮೋಹಿತರಾಗಿ ರಾಕ್ಷಸರು (ಮೂರ್ಛೆಹೊಂದಿದವರಾಗಿ) ನೆಲದಮೇಲೆ ಬಿದ್ದರು. ಆಕೆಯು ಅವರನ್ನೆಲ್ಲ ತಿಂದುಬಿಟ್ಟಳು.

ಇತಿ ಮಾತೃಗಣಂ ಕ್ರುದ್ಧಂ ಮರ್ದಯಂತಂ ಮಹಾಸುರಾನ್ ।
ದೃಷ್ಟ್ವಾಭ್ಯುಪಾಯೈರ್ವಿವಿಧೈರ್ನೇಶುರ್ದೇವಾರಿಸೈನಿಕಾಃ ॥38॥

ಪಲಾಯನಪರಾನ್ ದೃಷ್ಟ್ವಾ ದೈತ್ಯಾನ್ ಮಾತೃಗಣಾರ್ದಿತಾನ್ ।
ಯೋದ್ಧುಮಭ್ಯಾಯಯೌ ಕ್ರುದ್ಧೋ ರಕ್ತಬೀಜೋ ಮಹಾಸುರಃ ॥39॥

ರಕ್ತಬಿಂದುರ್ಯದಾ ಭೂಮೌ ಪತತ್ಯಸ್ಯ ಶರೀರತಃ ।
ಸಮುತ್ಪತತಿ ಮೇದಿನ್ಯಾಂ ತತ್ಪ್ರಮಾಣಸ್ತದಾಸುರಃ ॥40॥

38-40. ಹೀಗೆ ಕುಪಿತರಾದ ಮಾತೃಗಣದೇವಿಯರು ಮಹಾರಾಕ್ಷಸರನ್ನು ನಾನಾರೀತಿಯ ಉಪಾಯಗಳಿಂದ ಸದೆಬಡಿಯುತ್ತಿರುವದನ್ನು ಕಂಡ ರಾಕ್ಷಸ ಸೈನಿಕರು (ಯುದ್ಧರಂಗದಲ್ಲಿ ನಿಲ್ಲಲು) ಸಮರ್ಥರಾಗಲಿಲ್ಲ. ಮಾತೃಗಣದವರಿಂದ ಹಿಮ್ಮೆಟ್ಟಿಸಲ್ಪಟ್ಟು ಓಡಿಹೋಗುತ್ತಿರುವ ರಾಕ್ಷಸರನ್ನು ನೋಡಿ ಕುಪಿತನಾದ ಮಹಾಸುರನಾದ ರಕ್ತಬೀಜನು-ಯುದ್ಧ ಮಾಡಲೆಳಸಿದವನಾಗಿ ಹೊರಟನು. ಅವನ ದೇಹದಿಂದ ಒಂದು ಹನಿ ರಕ್ತವು ಯಾವಾಗ ಭೂಮಿಗೆ ಬೀಳುವದೋ ಆ ಕೂಡಲೆ ಅವನಷ್ಟೆ ಪ್ರಮಾಣದ (ಬಲವೀರ್ಯಾದಿಸಂಪನ್ನನಾದ) ರಾಕ್ಷಸನು ಹುಟ್ಟುತ್ತಿದ್ದನು.

ಯುಯುಧೇ ಸ ಗದಾಪಾಣಿರಿಂದ್ರಶಕ್ತ್ಯಾ ಮಹಾಸುರಃ .
ತತಶ್ಚೈಂದ್ರೀ ಸ್ವವಜ್ರೇಣ ರಕ್ತಬೀಜಮತಾಡಯತ್ ॥41।

ಕುಲಿಶೇನಾಹತಸ್ಯಾಶು ಬಹು ಸುಸ್ರಾವ ಶೋಣಿತಮ್ ।
ಸಮುತ್ತಸ್ಥುಃ ತತೋ ಯೋಧಾಸ್ತದ್ರೂಪಾಸ್ತತ್ಪರಾಕ್ರಮಾಃ ॥42॥

ಯಾವನ್ತಃ ಪತಿತಾಸ್ತಸ್ಯ ಶರೀರಾದ್ ರಕ್ತ ಬಿಂದವಃ ।
ತಾವನ್ತಃ ಪುರುಷಾ ಜಾತಾಸ್ತದ್ವೀರ್ಯಬಲವಿಕ್ರಮಾಃ ॥43॥

41-43. ಗದಾಧಾರಿಯಾದ ಆ ಮಹಾರಾಕ್ಷಸನು ಯುದ್ಧಮಾಡಲಾರಂಭಿಸಿದನು. ಅನಂತರ ಐಂದ್ರೀಶಕ್ತಿಯು ತನ್ನ ವಜ್ರಾಯುಧದಿಂದ ರಕ್ತಬೀಜನನ್ನು

ಹೊಡೆದಳು. ವಜ್ರಾಯುಧದಿಂದ ಹೊಡೆಯಲ್ಪಟ್ಟ ಅವನ (ಶರೀರದಿಂದ) ಬಹಳವಾಗಿ ರಕ್ತವು ಹರಿಯಿತು. ಅನಂತರ ಅವನಂತೆಯೇ ಆಕಾರ ಪರಾಕ್ರಮಗಳುಳ್ಳ ಯೋಧರು ಮೇಲೆದ್ದು ಬಂದರು. ಅವನಷ್ಟೇ ಬಲವೀರ್ಯ ಪರಾಕ್ರಮಸಂಪನ್ನರಾದ ಪುರುಷರು ಆ (ರಾಕ್ಷಸನ) ದೇಹದಿಂದ ರಕ್ತದ ಹನಿಗಳು ಎಷ್ಟು ಬಿದ್ದವೋ ಅಷ್ಟೇ ಸಂಖ್ಯೆಯವರು ಹುಟ್ಟಿಬಂದರು.

**ತೇ ಚಾಪಿ ಯುಯುಧುಸ್ತತ್ರ ಪುರುಷಾ ರಕ್ತಸಂಭವಾಃ ।**
**ಸಮಂ ಮಾತೃಭಿರತ್ಯುಗ್ರಶಸ್ತ್ರಪಾತಾತಿಭೀಷಣಮ್ ॥44॥**

**ಪುನಶ್ಚ ವಜ್ರಪಾತೇನ ಕ್ಷತಮಸ್ಯ ಶಿರೋ ಯದಾ ।**
**ವವಾಹ ರಕ್ತಂ ಪುರುಷಾಸ್ತತೋ ಜಾತಾಃ ಸಹಸ್ರಶಃ ॥45॥**

44-45. ರಕ್ತದಿಂದ ಹುಟ್ಟಿಬಂದ ಆ (ರಾಕ್ಷಸ)ಪುರುಷರೂ ಮಾತೃಗಣಗಳೊಡನೆ ಭಯಂಕರವಾದ ಶಸ್ತ್ರಗಳ ಪ್ರಯೋಗಗಳಿಂದ ದಾರುಣವಾಗಿ ಯುದ್ಧ ಮಾಡಿದರು. ಮತ್ತೆ ಆ (ರಕ್ತಬೀಜನ) ತಲೆಯು ವಜ್ರಾಯುಧದ ಏಟಿನಿಂದ ಗಾಯವಾದೊಡನೆಯೇ ರಕ್ತವು ಹರಿಯಿತು. ಅದರಿಂದ ಸಾವಿರಾರು ಪುರುಷರು ಹುಟ್ಟಿದರು.

**ವೈಷ್ಣವೀ ಸಮರೇ ಚೈನಂ ಚಕ್ರೇಣಾಭಿಜಘಾನ ಹ ।**
**ಗದಯಾ ತಾಡಯಾಮಾಸ ಐಂದ್ರೀ ತಮಸುರೇಶ್ವರಮ್ ॥46॥**

**ವೈಷ್ಣವೀಚಕ್ರಭಿನ್ನಸ್ಯ ರುಧಿರಸ್ರಾವಸಂಭವೈಃ ।**
**ಸಹಸ್ರಶೋ ಜಗದ್ ವ್ಯಾಪ್ತಂ ತತ್ಪ್ರಮಾಣೈರ್ಮಹಾಸುರೈಃ ॥47॥**

46-47. ಯುದ್ಧದಲ್ಲಿ ಇವನನ್ನು ವೈಷ್ಣವಿಯು ಚಕ್ರದಿಂದ ಹೊಡೆದಳು. ಐಂದ್ರಿಯು ಆ ಅಸುರಮುಖ್ಯನನ್ನು ಗದೆಯಿಂದ ಹೊಡೆದಳು. ವೈಷ್ಣವಿಯ ಚಕ್ರಾಯುಧದಿಂದ ಸೀಳಿದ ಶರೀರದಿಂದ ಹರಿದುಬಂದ ರಕ್ತದ ಕೋಡಿಯಿಂದ ಲೋಕವೆಲ್ಲವೂ ಅಷ್ಟೇ ಸಹಸ್ರಾರು ಸಂಖ್ಯೆಯ ಮಹಾರಾಕ್ಷಸರ (ಗುಂಪಿನಿಂದ) ತುಂಬಿಹೋಯಿತು.

**ಶಕ್ತ್ಯಾ ಜಘಾನ ಕೌಮಾರೀ ವಾರಾಹೀ ಚ ತಥಾಸಿನಾ ।**
**ಮಾಹೇಶ್ವರೀ ತ್ರಿಶೂಲೇನ ರಕ್ತಬೀಜಂ ಮಹಾಸುರಮ್ ॥48॥**

**ಸ ಚಾಪಿ ಗದಯಾ ದೈತ್ಯಃ ಸರ್ವಾ ಏವಾಹನತ್ ಪೃಥಕ್ ।**
**ಮಾತೄಃ ಕೋಪಸಮಾವಿಷ್ಟೋ ರಕ್ತಬೀಜೋ ಮಹಾಸುರಃ ॥49॥**

48-49. ಕೌಮಾರೀದೇವಿಯು ತನ್ನ ಶಕ್ತ್ಯಾಯುಧದಿಂದಲೂ ವಾರಾಹಿಯು ತನ್ನ ಕತ್ತಿಯಿಂದಲೂ ಮಾಹೇಶ್ವರಿಯು ತ್ರಿಶೂಲದಿಂದಲೂ ಆ ಮಹಾಸುರನಾದ ರಕ್ತಬೀಜನನ್ನು ಹೊಡೆದರು. ಆ ದೈತ್ಯನಾದ ರಕ್ತಬೀಜ ರಾಕ್ಷಸನು ಕೂಡ ಕೋಪಗೊಂಡವನಾಗಿ ಎಲ್ಲ ಮಾತೃಕೆಯರನ್ನು ಬೇರೆ ಬೇರೆಯಾಗಿ ಹೊಡೆದನು.

ತಸ್ಯಾಹತಸ್ಯ ಬಹುಧಾ ಶಕ್ತಿಶೂಲಾದಿಭಿರ್ಭುವಿ ।
ಪಪಾತ ಯೋ ವೈ ರಕ್ತೌಘಃ ತೇನಾಸನ್ ಶತಶೋಽಸುರಾಃ ॥50॥

ತೈಶ್ಚಾಸುರಾಸೃಕ್ ಸಂಭೂತೈರಸುರೈಃ ಸಕಲಂ ಜಗತ್ ।
ವ್ಯಾಪ್ತಮಾಸೀತ್ತತೋ ದೇವಾ ಭಯಮಾಜಗ್ಮುರುತ್ತಮಮ್ ॥51॥

ತಾನ್ ವಿಷಣ್ಣಾನ್ ಸುರಾನ್ ದೃಷ್ಟ್ವಾ ಚಂಡಿಕಾ ಪ್ರಾಹ ಸತ್ವರಾ ।
ಉವಾಚ ಕಾಲೀಂ ಚಾಮುಂಡೇ ವಿಸ್ತೀರ್ಣಂ ವದನಂ ಕುರು ॥52॥

50-52. ದೇವಿಯರಿಂದ ಬಹಳವಾಗಿ ಶಕ್ತಿಶೂಲಾದ್ಯಾಯುಧಗಳಿಂದ ಮರ್ದಿಸಲ್ಪಟ್ಟ ಆ ರಾಕ್ಷಸನ (ಶರೀರದಿಂದ) ಯಾವ ರಕ್ತಪ್ರವಾಹವು ಹರಿಯಿತೋ ಅದರಿಂದ ನೂರಾರುಗಟ್ಟಳೆ ರಾಕ್ಷಸರು ಉಂಟಾದರು. ರಾಕ್ಷಸನ ರಕ್ತದಿಂದ ಹುಟ್ಟಿದ ಅಸುರರಿಂದ ಇಡಿಯ ಜಗತ್ತೆಲ್ಲವೂ ತುಂಬಿಹೋಗಿಬಿಟ್ಟಿತು. ಅನಂತರ ದೇವತೆಗಳು ಹೆಚ್ಚಿನ ಭಯವನ್ನು ಹೊಂದಿದರು. ಹೀಗೆ ಕುಸಿದು ಹೋದ ದೇವತೆಗಳನ್ನು ಕಂಡು ಬೇಗನೆ ಚಂಡಿಕೆಯು ಕಾಲಿಯನ್ನು ಕುರಿತು 'ಚಾಮುಂಡಿಯೆ, ನೀನು ಬಾಯನ್ನು ಅಗಲಿಸುವವಳಾಗು' ಎಂದಳು.

ಮಚ್ಛಸ್ತ್ರಪಾತಸಂಭೂತಾನ್ ರಕ್ತಬಿಂದೂನ್ ಮಹಾಸುರಾನ್ ।
ರಕ್ತಬಿಂದೋಃ ಪ್ರತೀಚ್ಛ ತ್ವಂ ವಕ್ತ್ರೇಣಾನೇನ ವೇಗಿನಾ ॥53॥

ಭಕ್ಷಯಂತೀ ಚರ ರಣೇ ತದುತ್ಪನ್ನಾನ್ ಮಹಾಸುರಾನ್ ।
ಏವಮೇಷ ಕ್ಷಯಂ ದೈತ್ಯಃ ಕ್ಷೀಣರಕ್ತೋ ಗಮಿಷ್ಯತಿ ॥54॥

ಭಕ್ಷ್ಯಮಾಣಸ್ತ್ವಯಾ ಚೋಗ್ರಾ ನ ಚೋತ್ಪತ್ಸ್ಯಂತಿ ಚಾಪರೇ ।
ಇತ್ಯುಕ್ತ್ವಾ ತಾಂ ತತೋ ದೇವೀ ಶೂಲೇನಾಭಿಜಘಾನ ತಮ್ ॥55॥

53-55. ನನ್ನ ಶಸ್ತ್ರದ ಹೊಡೆತದಿಂದ ರಕ್ತಬೀಜನ ದೇಹದಿಂದ ಹೊರಬೀಳುವ ರಕ್ತದ ಹನಿಗಳನ್ನೂ (ಅವುಗಳಿಂದ ಹುಟ್ಟುವ) ರಾಕ್ಷಸರನ್ನೂ ನೀನು ಭಯಂಕರವಾದ ಮುಖದಿಂದ ಸ್ವೀಕರಿಸುವವಳಾಗು. ಹಾಗೂ ಆ ರಕ್ತೋತ್ಪನ್ನರಾದ ರಾಕ್ಷಸರನ್ನೂ

ತಿನ್ನುವವಳಾಗಿ ಯುದ್ಧದಲ್ಲಿ ಸಂಚರಿಸುತ್ತಿರು. ಹೀಗಾದರೆ ಈ ರಾಕ್ಷಸನು ರಕ್ತವನ್ನು ಕಳೆದುಕೊಂಡವನಾಗಿ ಸಾಯುವನು. (ರಕ್ತವನ್ನು) ನೀನು ಕುಡಿದುಬಿಡುವದರಿಂದ ಹೊಸ ರಾಕ್ಷಸರು ಮತ್ತೆ ಹುಟ್ಟುವದಿಲ್ಲ. ಹೀಗೆಂದೇ ಹೇಳಿ ದೇವಿಯು ಶೂಲಾಯುಧದಿಂದ (ರಕ್ತಬೀಜನನ್ನು) ತಿವಿದಳು.

ಮುಖೇನ ಕಾಳೀ ಜಗೃಹೇ ರಕ್ತಬೀಜಸ್ಯ ಶೋಣಿತಮ್ ।
ತತೋಽಸಾವಾಜಘಾನಾಥ ಗದಯಾ ತತ್ರ ಚಂಡಿಕಾಮ್ ॥56॥

ನ ಚಾಸ್ಯ ವೇದನಾಂ ಚಕ್ರೇ ಗದಾಪಾತೋಽಲ್ಪಿಕಾಮಪಿ ।
ತಸ್ಯಾಹತಸ್ಯ ದೇಹಾತ್ತು ಬಹು ಸುಸ್ರಾವ ಶೋಣಿತಮ್ ॥57॥
ಯತಸ್ತ ತಸ್ತದ್ವಕ್ತ್ರೇಣ ಚಾಮುಂಡಾ ಸಂಪ್ರತೀಚ್ಛತಿ ।

56-57. ಕಾಳಿಯಾದರೊ, ರಕ್ತಬೀಜನ ರಕ್ತವನ್ನು ಮುಖದಿಂದ ಸ್ವೀಕರಿಸಿದಳು. ಅನಂತರ ಆತನು ಚಂಡಿಕೆಯನ್ನು ಗದೆಯಿಂದ ಪ್ರಹಾರ ಮಾಡಿದನು. ಆ ಗದೆಯ ಏಟು ಆಕೆಗೆ ಸ್ವಲ್ಪವಾದರೂ ನೋವನ್ನುಂಟುಮಾಡಲಿಲ್ಲ. (ದೇವಿಯಿಂದ) ಹೊಡೆಯಲ್ಪಟ್ಟ ಆ ರಾಕ್ಷಸನ ದೇಹದಿಂದ ರಕ್ತವು ಬಹಳವಾಗಿ ಸುರಿಯಿತು. ಎಲ್ಲೆಲ್ಲಿಂದ ಅದು ಹೊರಬಂತೋ ಅದನ್ನೆಲ್ಲ ಚಾಮುಂಡಿಯು ತನ್ನ ಬಾಯಿಯಿಂದ ಸ್ವೀಕರಿಸುತ್ತಿದ್ದಳು.

ಮುಖೇ ಸಮುದ್ಗತಾ ಯೇಽಸ್ಯಾ ರಕ್ತಪಾತಾನ್ಮಹಾಸುರಾಃ ।
ತಾಂಶ್ಚಖಾದಾಥ ಚಾಮುಂಡಾ ಪಪೌ ತಸ್ಯ ಚ ಶೋಣಿತಮ್ ॥58॥

ದೇವೀ ಶೂಲೇನ ವಜ್ರೇಣ ಬಾಣೈರಸಿಭಿರ್ಋಷ್ಟಿಭಿಃ ।
ಜಘಾನ ರಕ್ತಬೀಜಂ ತಂ ಚಾಮುಂಡಾಪೀತಶೋಣಿತಮ್ ॥59॥

58-59. ಚಾಮುಂಡಿಯೆನಿಸಿದ ಈ ಕಾಳಿಕೆಯ ಮುಖದಲ್ಲಿ ಬಿದ್ದ ರಕ್ತದಿಂದ ಯಾವ ರಾಕ್ಷಸರು ಹೊರಬರುತ್ತಿರುವರೋ ಅವರುಗಳನ್ನೂ (ಚಾಮುಂಡಿಯು) ತಿನ್ನುತ್ತಿದ್ದಳು. ರಕ್ತವನ್ನೂ ಕುಡಿಯುತ್ತಿದ್ದಳು. ಹೀಗೆ ಚಾಮುಂಡಿಯಿಂದ ಕುಡಿಯಲ್ಪಟ್ಟ ರಕ್ತವುಳ್ಳವನಾದ ರಕ್ತಬೀಜನನ್ನು ದೇವಿಯು ಶೂಲದಿಂದಲೂ, ವಜ್ರ, ಬಾಣ, ಕತ್ತಿ, ಋಷ್ಟಿ-ಮುಂತಾದ ಆಯುಧಗಳಿಂದಲೂ ಸಂಹರಿಸಿದಳು.

ಸ ಪಪಾತ ಮಹೀಪೃಷ್ಠೇ ಶಸ್ತ್ರಸಂಘಸಮಾಹತಃ ।
ನೀರಕ್ತಶ್ಚ ಮಹೀಪಾಲ ರಕ್ತಬೀಜೋ ಮಹಾಸುರಃ ॥60॥

ತತಸ್ತೇ ಹರ್ಷಮತುಲಮವಾಪುಸ್ತ್ರಿದಶಾ ನೃಪ ।
ತೇಷಾಂ ಮಾತೃಗಣೋ ಜಾತೋ ನನರ್ತಾಸೃಙ್ಮದೋದ್ಧತಃ ॥61॥

60-61. ಎಲೈ ರಾಜನೆ, ಆ ರಕ್ತಬೀಜಾಸುರನು ರಕ್ತಹೀನನಾಗಿ ಶಸ್ತ್ರಸಂಘಗಳಿಂದ ಹೊಡೆಯಲ್ಪಟ್ಟವನಾಗಿ ನೆಲದಮೇಲೆ ಬಿದ್ದನು. ಅನಂತರ ಆ ದೇವತೆಗಳೆಲ್ಲರೂ ಹೆಚ್ಚಿನ ಸಂತೋಷವನ್ನು ಹೊಂದಿದರು. ಆ (ದೇವತೆಗಳ ಕಡೆಯವರಾದ) ಮಾತೃಗಣಗಳು ರಕ್ತ(ಪಾನ)ದಿಂದ ಕೊಬ್ಬಿದವರಾಗಿ ಕುಣಿದಾಡಿದರು. (ಹೀಗೆ ಮಾತೃಗಣಗಳು ಸಂತುಷ್ಟರಾದರು).

ಇತಿ ಶ್ರೀ ಮಾರ್ಕಂಡೇಯಪುರಾಣೇ ದೇವೀಮಹಾತ್ಮ್ಯೇ
ಅಷ್ಟಮೋಽಧ್ಯಾಯಃ

---

# ಒಂಬತ್ತನೆಯ ಅಧ್ಯಾಯ

ಧ್ಯಾನಮ್ –
ಬಂಧೂಕಕಾಂಚನನಿಭಂ ರುಚಿರಾಕ್ಷಮಾಲಾಂ
ಪಾಶಾಂಕುಶೌ ಚ ವರದಾಂ ನಿಜಬಾಹುದಂಡೈಃ ।
ಬಿಭ್ರಾಣಮಿಂದುಶಕಲಾಭರಣಂ ತ್ರಿನೇತ್ರ-
ಮರ್ಧಾಂಬಿಕೇಶಮನಿಶಂ ವಪುರಾಶ್ರಯಾಮಿ ॥

ಕೆಂಪುದಾಸಿವಾಳ ಹಾಗೂ ಚಿನ್ನದ ಬಣ್ಣದಂತೆ ಕಾಂತಿಯುಳ್ಳ, ಸುಂದರವಾದ ಜಪಸರವನ್ನೂ ಪಾಶಾಂಕುಶಗಳನ್ನೂ ವರದಹಸ್ತವನ್ನೂ ತನ್ನ ತೋಳುಗಳಿಂದ ಧರಿಸಿ ಚಂದ್ರರೇಖೆಯನ್ನು (ಜಡೆಯಲ್ಲಿ) ಧರಿಸಿ ಮೂರು ಕಣ್ಣುಗಳಿಂದ ವಿರಾಜಮಾನವಾದ ಅರ್ಧನಾರೀಶ್ವರಮೂರ್ತಿಯನ್ನು ನಾನು ಆಶ್ರಯಿಸುತ್ತೇನೆ.

ಓಂ ॥ ರಾಜೋವಾಚ–

ವಿಚಿತ್ರಮಿದಮಾಖ್ಯಾತಂ ಭಗವನ್ ಭವತಾ ಮಮ ।
ದೇವ್ಯಾಶ್ಚರಿತಮಾಹಾತ್ಮ್ಯಂ ರಕ್ತಬೀಜವಧಾಶ್ರಿತಮ್ ॥1॥
ಭೂಯಶ್ಚೇಚ್ಛಾಮ್ಯಹಂ ಶ್ರೋತುಂ ರಕ್ತಬೀಜೇ ನಿಪಾತಿತೇ ।
ಚಕಾರ ಶುಂಭೋ ಯತ್ಕರ್ಮ ನಿಶುಂಭಶ್ಚಾತಿಕೋಪನಃ ॥2॥

1-2. ರಾಜನಿಂತೆಂದನು : ಪೂಜ್ಯರೆ, ತಾವು ನನಗೆ ಹೇಳಿದ ದೇವಿಯ ಮಹಾತ್ಮ್ಯವೂ ಚರಿತ್ರೆಯೂ ಹಾಗೂ ರಕ್ತಬೀಜನ ಸಂಹಾರದ ಕಥೆಯೂ ಬಹಳ ಆಶ್ಚರ್ಯಕರವಾಗಿದೆ. ಆದ್ದರಿಂದ ರಕ್ತಬೀಜನ ವಧೆಯ ಅನಂತರ ಶುಂಭನೂ ಕಡುಕೋಪಿಯಾದ ನಿಶುಂಭನೂ ಏನು ಮಾಡಿದರೋ ಅದನ್ನು ಮತ್ತೆ (ಮುಂದುವರೆಸಿ) ಕೇಳಲು ಬಯಸುತ್ತೇನೆ.

ಋಷಿರುವಾಚ–

ಚಕಾರ ಕೋಪಮತುಲಂ ರಕ್ತಬೀಜೇ ನಿಪಾತಿತೇ ।
ಶುಂಭಾಸುರೋ ನಿಶುಂಭಶ್ಚ ಹತೇಷ್ವನ್ಯೇಷು ಚಾಹವೇ ॥3॥

ಹನ್ಯಮಾನಂ ಮಹಾಸೈನ್ಯಂ ವಿಲೋಕ್ಯಾಮರ್ಷಮುದ್ವಹನ್ ।
ಅಭ್ಯಧಾವನ್ನಿಶುಂಭೋಽಥ ಮುಖ್ಯಯಾಽಸುರಸೇನಯಾ ॥4॥

ತಸ್ಯಾಗ್ರತಃ ತಥಾ ಪೃಷ್ಠೇ ಪಾರ್ಶ್ವಯೋಶ್ಚ ಮಹಾಸುರಾಃ ।
ಸಂದಷ್ಟೌಷ್ಠಪುಟಾಃ ಕ್ರುದ್ಧಾ ಹಂತುಂ ದೇವೀಮುಪಾಯಯುಃ ॥5॥

3-5. ಋಷಿಯಿಂತೆಂದನು : ರಕ್ತಬೀಜನು ನಿಧನನಾಗಲಾಗಿ ಹಾಗೂ ಇನ್ನೂ ಕೆಲವು (ರಾಕ್ಷಸರು) ಯುದ್ಧದಲ್ಲಿ ಕೊಲ್ಲಲ್ಪಡಲಾಗಿ ಶುಂಭಾಸುರನೂ ನಿಶುಂಭನೂ ಹೆಚ್ಚಿನ ಕೋಪವನ್ನು ಮಾಡಿದರು. ಅನಂತರ ತನ್ನ ಮಹಾಸೈನ್ಯವು ಕೊಲ್ಲಲ್ಪಡುತ್ತಿರುವದನ್ನು ನೋಡಿ ಕೋಪಗೊಂಡ ನಿಶುಂಭನು ಮುಖ್ಯವಾದ ರಾಕ್ಷಸಸೈನ್ಯದೊಡಗೂಡಿದವನಾಗಿ ಮುನ್ನುಗ್ಗಿ ಬಂದನು. ಅವನ ಮುಂದೆ, ಹಿಂದೆ, ಅಕ್ಕಪಕ್ಕಗಳಲ್ಲಿ ಮಹಾರಾಕ್ಷಸರುಗಳು ತುಟಿಗಳನ್ನು ಕಚ್ಚಿದವರಾಗಿ ಸಿಟ್ಟಿನಿಂದ ಮುನ್ನುಗ್ಗಿ ದೇವಿಯನ್ನು ಕೊಲ್ಲಲು ಅನುವಾದರು.

ಆಜಗಾಮ ಮಹಾವೀರ್ಯಃ ಶುಂಭೋಽಪಿ ಸ್ವಬಲೈರ್ವೃತಃ ।
ನಿಹಂತುಂ ಚಂಡಿಕಾಂ ಕೋಪಾತ್ ಕೃತ್ವಾ ಯುದ್ಧಂ ತು ಮಾತೃಭಿಃ ॥6॥

ತತೋ ಯುದ್ಧಮತೀವಾಸೀದ್ದೇವ್ಯಾ ಶುಂಭನಿಶುಂಭಯೋಃ ।
ಶರವರ್ಷಮತೀವೋಗ್ರಂ ಮೇಘಯೋರಿವ ವರ್ಷತೋಃ ॥7॥

ಚಿಚ್ಛೇದಾಸ್ತಾನ್ ಶರಾನ್ ತಾಭ್ಯಾಂ ಚಂಡಿಕಾ ಸ್ವಶರೋತ್ಕರೈಃ ।
ತಾಡಯಾಮಾಸ ಚಾಂಗೇಷು ಶಸ್ತ್ರೌಘೈರಸುರೇಶ್ವರೌ ॥8॥

6-8. ಆ ವೇಳೆಗೆ ಮಹಾವೀರ್ಯಶಾಲಿಯಾದ ಶುಂಭನು ಕೂಡ ಮಾತೃಗಣಗಳೊಡನೆ ಯುದ್ಧಮಾಡಿ ತನ್ನ ಬಲದೊಡನೆ ಚಂಡಿಕೆಯನ್ನು ಕೊಲ್ಲುವದಕ್ಕಾಗಿ ಕೋಪಾವಿಷ್ಟನಾಗಿ ಅಲ್ಲಿಗೆ ಬಂದನು. ಅನಂತರ ಅತಿಯಾದ ಬಿರುಸಿನ ಯುದ್ಧವನ್ನು ಶುಂಭನಿಶುಂಭರೊಡನೆ ದೇವಿಯು ಕೈಗೊಂಡಳು. ಮಳೆಗರೆಯುತ್ತಿರುವ ಎರಡು ಮಹಾಮೇಘಗಳಂತೆ (ಅವರಿಬ್ಬರೂ) ಬಾಣಗಳ ಮಳೆಯನ್ನೇ ಸುರಿಸಿದರು. ಚಂಡಿಕೆಯು ಅವುಗಳನ್ನು ತನ್ನ ಬಾಣಗಳ ಸಮೂಹಗಳಿಂದ ಕತ್ತರಿಸಿದಳು. ಮತ್ತು ಅಸುರರಾಜನನ್ನು ಶಸ್ತ್ರಗಳ ಸಮೂಹದಿಂದ (ಅವರ) ಅವಯವಗಳನ್ನೇ ಗುರಿಯಿಟ್ಟು ಹೊಡೆದಳು.

ನಿಶುಂಭೋ ನಿಶಿತಂ ಖಡ್ಗಂ ಚರ್ಮ ಚಾದಾಯ ಸುಪ್ರಭಮ್ .
ಅತಾಡಯನ್ಮೂರ್ಧ್ನಿ ಸಿಂಹಂ ದೇವ್ಯಾ ವಾಹನಮುತ್ತಮಮ್ ॥9॥

ತಾಡಿತೇ ವಾಹನೇ ದೇವೀ ಕ್ಷುರಪ್ರೇಣಾಸಿಮುತ್ತಮಮ್ ।
ನಿಶುಂಭಸ್ಯಾಶು ಚಿಚ್ಛೇದ ಚರ್ಮ ಚಾಪ್ಯಷ್ಟಚಂದ್ರಕಮ್ ॥10॥

ಛಿನ್ನೇ ಚರ್ಮಣಿ ಖಡ್ಗೇ ಚ ಶಕ್ತಿಂ ಚಿಕ್ಷೇಪ ಸೋಽಸುರಃ ।
ತಾಮಪ್ಯಸ್ಯ ದ್ವಿಧಾ ಚಕ್ರೇ ಚಕ್ರೇಣಾಭಿಮುಖಾಗತಾಮ್ ॥11॥

9-10. ನಿಶುಂಭನಾದರೊ, ತೀಕ್ಷ್ಣವಾದ ಅಲುಗಿನ ಕತ್ತಿಯನ್ನೂ ಹೊಳೆಯುವ ಗುರಾಣಿಯನ್ನೂ ಹಿಡಿದು ನುಗ್ಗಿದವನಾಗಿ ದೇವಿಯ ವಾಹನವಾದ ಸಿಂಹಕ್ಕೆ ತಲೆಯಮೇಲೆ ಹೊಡೆದನು. ಆಗ ದೇವಿಯು ಸಿಂಹವನ್ನು ಹೊಡೆದದ್ದನ್ನು ಕಂಡು ಕೂಡಲೆ ತನ್ನ ಕೋಶ(ಚೀಲ)ದಿಂದ ಕತ್ತಿಯನ್ನೆಳೆದು ನಿಶುಂಭನ ಕತ್ತಿಯನ್ನೂ ಎಂಟು ಚಂದ್ರರ ಚಿತ್ರವುಳ್ಳ ಗುರಾಣಿಯನ್ನೂ ತುಂಡರಿಸಿಬಿಟ್ಟಳು. ಹೀಗೆ ಕತ್ತಿಗುರಾಣಿಗಳು ತುಂಡಾಗಿ ಬೀಳಲಾಗಿ ಆ ರಾಕ್ಷಸನು ಶಕ್ತ್ಯಾಯುಧವನ್ನು ಬಳಸಿದನು. ಎದುರಿಗೆ ಬಂದ ಆ ಶಕ್ತಿಯನ್ನು ಕೂಡ ದೇವಿಯು ಎರಡು ಭಾಗವಾಗಿ ಸೀಳಿಬಿಟ್ಟಳು.

ಕೋಪಾಧ್ಮಾತೋ ನಿಶುಂಭೋಽಥ ಶೂಲಂ ಜಗ್ರಾಹ ದಾನವಃ ।
ಆಯಾಂತಂ ಮುಷ್ಟಿಪಾತೇನ ದೇವೀ ತಚ್ಚಾಪ್ಯಚೂರ್ಣಯತ್ ॥12॥

ಆವಿಧ್ಯಾಥ ಗದಾಂ ಸೋಽಪಿ ಚಿಕ್ಷೇಪ ಚಂಡಿಕಾಂ ಪ್ರತಿ ।
ಸಾಪಿ ದೇವ್ಯಾ ತ್ರಿಶೂಲೇನ ಭಿನ್ನಾ ಭಸ್ಮತ್ವಮಾಗತಾ ॥13॥

ತತಃ ಪರಶುಹಸ್ತಂ ತಮಾಯಾಂತಂ ದೈತ್ಯಪುಂಗವಮ್ ।
ಆಹತ್ಯ ದೇವೀ ಬಾಣೌಘೈರಪಾತಯತ ಭೂತಲೇ ॥14॥

12-14. ದಾನವನಾದ ಆ ನಿಶುಂಭನು ಕೋಪದಿಂದ ಉರಿದು ಬೀಳುವವನಾಗಿ ಶೂಲವನ್ನು ಹಿಡಿದು ನುಗ್ಗಿದನು. ದೇವಿಯು ಆ ಶೂಲವನ್ನೂ ತನ್ನ ಮುಷ್ಟಿಗಳ ಹೊಡೆತದಿಂದ ಪುಡಿಮಾಡಿದಳು. ಆಗ ಅವನಾದರೊ, ಗದೆಯನ್ನು ಮೇಲೆತ್ತಿ ಚಂಡಿಕೆಯ ಕಡೆಗೆ ಎಸೆದನು. ದೇವಿಯ ತ್ರಿಶೂಲಾಯುಧದ ಏಟಿನಿಂದ ಅದು ಕೂಡ ತುಂಡಾಗಿ ಸುಟ್ಟು ಬೂದಿಯಾಗಿಬಿಟ್ಟಿತು. ಅನಂತರ ಕೊಡಲಿಯನ್ನು ಹಿಡಿದು ನುಗ್ಗಿಬರುತ್ತಿದ್ದ ದೈತ್ಯಶ್ರೇಷ್ಠನಾದ ಆತನನ್ನು ದೇವಿಯು ಬಾಣಗಳಿಂದ ಚೆನ್ನಾಗಿ ಹೊಡೆದು ನೆಲದಮೇಲೆ ಕೆಡವಿಬಿಟ್ಟಳು.

ತಸ್ಮಿನ್ನಿಪತಿತೇ ಭೂಮೌ ನಿಶುಂಭೇ ಭೀಮವಿಕ್ರಮೇ ।
ಭ್ರಾತರ್ಯತೀವ ಸಂಕ್ರುದ್ಧಃ ಪ್ರಯಯೌ ಹಂತುಮಂಬಿಕಾಮ್ ॥15॥

ಸ ರಥಸ್ಥಸ್ತಥಾತ್ಯುಚ್ಚೈರ್ಗೃಹೀತಪರಮಾಯುಧೈಃ ।
ಭುಜೈರಷ್ಟಾಭಿರತುಲೈರ್ವ್ಯಾಪ್ಯಾಶೇಷಂ ಬಭೌ ನಭಃ ॥16॥

ತಮಾಯಾಂತಂ ಸಮಾಲೋಕ್ಯ ದೇವೀ ಶಂಖಮವಾದಯತ್ ।
ಜ್ಯಾಶಬ್ದಂ ಚಾಪಿ ಧನುಷಃ ಚಕಾರಾತೀವ ದುಸ್ಸಹಮ್ ॥17॥

ಪೂರಯಾಮಾಸ ಕಕುಭೋ ನಿಜಘಂಟಾಸ್ವನೇನ ಚ ।
ಸಮಸ್ತದೈತ್ಯಸೈನ್ಯಾನಾಂ ತೇಜೋವಧವಿಧಾಯಿನಾ ॥18॥

15-18. ಭಯಂಕರಪರಾಕ್ರಮಶಾಲಿಯಾದ ನಿಶುಂಭನು ಹೀಗೆ ನೆಲದ ಮೇಲೆ ಬೀಳಲಾಗಿ (ಶುಂಭನು ತನ್ನ) ಸಹೋದರನ ಪರಾಜಯವನ್ನು ಕಂಡು ಹೆಚ್ಚಿನ ಕೋಪವುಳ್ಳವನಾಗಿ ಅಂಬಿಕೆಯನ್ನು ಕೊಲ್ಲುವದಕ್ಕಾಗಿ ಹೊರಟನು. ಅವನು ರಥದಲ್ಲಿ ಕುಳಿತು ಎಂಟು ಭುಜಗಳಿಂದಲೂ ಪರಮಶ್ರೇಷ್ಠವಾದ ಆಯುಧಗಳನ್ನು ಹಿಡಿದವನಾಗಿ ಸರಿಸಾಟಿಯಿಲ್ಲದ ತನ್ನ ಬಲ-ತೇಜಸ್ಸುಗಳಿಂದ ಆಕಾಶವನ್ನೆಲ್ಲ ಬೆಳಗಿದನು. ಹಾಗೆ ಬರುತ್ತಿರುವ ಅವನನ್ನು ಕಂಡು ದೇವಿಯು ಶಂಖವನ್ನೂದಿದಳು. ಸಹಿಸಲಸಾಧ್ಯವಾದ ರೀತಿಯ ಧನುಷ್ಟಂಕಾರವನ್ನೂ ಮಾಡಿದಳು. ಸಮಸ್ತರಾಕ್ಷಸ ಸೈನ್ಯದ ತೇಜಸ್ಸನ್ನೂ ನಾಶಗೊಳಿಸುವಮಟ್ಟಿನ ತನ್ನ ಘಂಟಾಧ್ವನಿಯಿಂದ ದಿಕ್ಕುಗಳನ್ನೆಲ್ಲ ತುಂಬಿದಳು.

ತತಃ ಸಿಂಹೋ ಮಹಾನಾದೈಃ ತ್ಯಾಜಿತೇಭಮಹಾಮದೈಃ ।
ಪೂರಯಾಮಾಸ ಗಗನಂ ಗಾಂ ತಥೈವ ದಿಶೋ ದಶ ॥19॥

ತತಃ ಕಾಲೀ ಸಮುತ್ಪತ್ಯ ಗಗನಂ ಕ್ಷ್ಮಾಮತಾಡಯತ್ ।
ಕರಾಭ್ಯಾಂ ತನ್ನಿನಾದೇನ ಪ್ರಾಕ್ಸ್ವನಾಸ್ತೇ ತಿರೋಹಿತಾಃ ॥20॥

ಅಟ್ಟಾಟ್ಟಹಾಸಮಶಿವಂ ಶಿವದೂತೀ ಚಕಾರ ಹ ।
ತೈಶ್ಶಬ್ದೈರಸುರಾಸ್ತ್ರೇಸುಃ ಶುಂಭಃ ಕೋಪಂ ಪರಂ ಯಯೌ ॥21॥

19-21. ಅನಂತರ (ದೇವಿಯ ವಾಹನವಾದ) ಸಿಂಹವು ಆನೆಗಳ ಮದವನ್ನು ಹಿಮ್ಮೆಟ್ಟಿಸುವಂಥ ಹಾಗೂ ಹತ್ತು ದಿಕ್ಕುಗಳನ್ನೂ ಆಕಾಶವನ್ನೂ ವ್ಯಾಪಿಸುವಂಥ ಧ್ವನಿಯಿಂದ ಘರ್ಜನೆಮಾಡಿತು. ಅನಂತರ ಕಾಳಿಕಾದೇವಿಯು ನೆಗೆದು ಬಂದು ಆಕಾಶವನ್ನೂ ಭೂಮಿಯನ್ನೂ ಎರಡುಕೈಗಳಿಂದ ಬಡಿದಳು. ಆ ಶಬ್ದದಿಂದ ಹಿಂದಿನ ಗದ್ದಲಗಳೆಲ್ಲ ಮುಚ್ಚಿಹೋದವು. ಅನಂತರ ಶಿವದೂತಿಯು (ರಾಕ್ಷಸರಿಗೆ) ಅಮಂಗಳಕರವಾಗಿ ಅತಿ ಘೋರವಾದ ನಗುವನ್ನು ಬೀರಿದಳು. ಆ ಶಬ್ದಗಳಿಂದ ರಾಕ್ಷಸರೆಲ್ಲರೂ ನಡುಗಿಹೋದರು. ಶುಂಭನು ಹೆಚ್ಚಿನ ಕೋಪವನ್ನು ಹೊಂದಿದನು.

ದುರಾತ್ಮನ್ ತಿಷ್ಠ ತಿಷ್ಠೇತಿ ವ್ಯಾಜಹಾರಾಂಬಿಕಾ ಯದಾ ।
ತದಾ ಜಯೇತ್ಯಭಿಹಿತಂ ದೇವೈರಾಕಾಶಸಂಸ್ಥಿತೈಃ ॥22॥

ಶುಂಭೇನಾಗತ್ಯ ಯಾ ಶಕ್ತಿ ರ್ಮುಕ್ತಾ ಜ್ವಾಲಾತಿಭೀಷಣಾ ।
ಆಯಾಂತೀ ವಹ್ನಿಕೂಟಾಭಾ ಸಾ ನಿರಸ್ತಾ ಮಹೋಲ್ಕಯಾ ॥23॥

22-23. ಎಲೈ ದುರಾತ್ಮನೆ, ನಿಲ್ಲು, ನಿಲ್ಲು-ಎಂಬುದಾಗಿ ಅಂಬಿಕೆಯು ಹೇಳುತ್ತಿರಲು ಆಗ ಆಕಾಶದಲ್ಲಿದ್ದ ದೇವತೆಗಳು 'ಜಯ' ಎಂದು ಘೋಷ ಮಾಡಿದರು. ಶುಂಭನು ಪ್ರಯೋಗಿಸಿದ ಉರಿಯುತ್ತಿರುವ ಭಯಂಕರವಾದ ಯಾವ ಶಕ್ತಿಯು ಬೆಂಕಿಯ ಕೆಂಡದಂತೆ ಬಂದಿತೋ ಅದನ್ನು ದೇವಿಯು ಮಹೋಲ್ಕವೆಂಬ ಶಕ್ತಿಯಿಂದ ನಿವಾರಿಸಿಬಿಟ್ಟಳು.

ಸಿಂಹನಾದೇನ ಶುಂಭಸ್ಯ ವ್ಯಾಪ್ತಂ ಲೋಕತ್ರಯಾಂತರಮ್ ।
ನಿರ್ಘಾತನಿಃಸ್ವನೋ ಘೋರೋ ಜಿತವಾನವನೀಪತೇ ॥24॥

ಶುಂಭಮುಕ್ತಾನ್ ಶರಾನ್ ದೇವೀ ಶುಂಭಸ್ತತ್ಪ್ರಹಿತಾನ್ ಶರಾನ್ ।
ಚಿಚ್ಛೇದ ಸ್ವಶರೈರುಗ್ರೈಃ ಶತಶೋಽಥ ಸಹಸ್ರಶಃ ॥25॥

ತತಃ ಸಾ ಚಂಡಿಕಾ ಕ್ರುದ್ಧಾ ಶೂಲೇನಾಭಿಜಘಾನ ತಮ್ ।
ಸ ತದಾಽಭಿಹತೋ ಭೂಮೌ ಮೂರ್ಛಿತೋ ನಿಪಪಾತ ಹ ॥26॥

24-26. ಎಲೈ ರಾಜನೆ, ಶುಂಭನ ಸಿಂಹನಾದದಿಂದ ಮೂರು ಲೋಕಗಳೂ ಒಳಗೂ (ಹೊರಗೂ) ತುಂಬಿಹೋದವು. ಆದರೆ ಆಕಾಶದಿಂದ ಹೊರಬಿದ್ದ ಒಂದು ದೊಡ್ಡ ಸಿಡಿಲಿನ ಧ್ವನಿಯು (ಆ ಸಿಂಹನಾದವನ್ನೂ) ಅಡಗಿಸಿ ಬಿಟ್ಟಿತು. ತಾನೇ ಗೆದ್ದಿತು. (ಆ ಧ್ವನಿಯು ದೇವಿಯ ಶಕ್ತ್ಯಾಯುಧದಿಂದ ಹೊರಬಿದ್ದುದಾಗಿತ್ತು.) ಶುಂಭನು ಬಿಟ್ಟ ಬಾಣಗಳನ್ನು ದೇವಿಯೂ, ದೇವಿಯು ಬಿಟ್ಟ ಬಾಣಗಳನ್ನು ಶುಂಭನೂ ನೂರಾರು, ಸಾವಿರಾರುಗಟ್ಟಲೆಯಾಗಿ ತಮ್ಮ ತಮ್ಮ ಉಗ್ರವಾದ ಬಾಣಗಳಿಂದ ಕತ್ತರಿಸಿದರು. ಅನಂತರ ಆ ಚಂಡಿಕೆಯು ಕುಪಿತಳಾಗಿ ಅವನನ್ನು ಶೂಲದಿಂದ ಹೊಡೆದಳು. ಆಗ ಅವನು ಮೂರ್ಛಿತನಾಗಿ ನೆಲದಮೇಲೆ ಬಿದ್ದನು.

**ತತೋ ನಿಶುಂಭಃ ಸಂಪ್ರಾಪ್ಯ ಚೇತನಾಮಾತ್ತಕಾರ್ಮುಕಃ ।**
**ಆಜಘಾನ ಶರೈರ್ದೇವೀಂ ಕಾಲೀಂ ಕೇಸರಿಣಂ ತಥಾ ॥27॥**

**ಪುನಶ್ಚ ಕೃತ್ವಾ ಬಾಹೂನಾಮಯುತಂ ದನುಜೇಶ್ವರಃ ।**
**ಚಕ್ರಾಯುಧೇನ ದಿತಿಜಶ್ಛಾದಯಾಮಾಸ ಚಂಡಿಕಾಮ್ ॥28॥**

**ತತೋ ಭಗವತೀ ಕ್ರುದ್ಧಾ ದುರ್ಗಾ ದುರ್ಗಾರ್ತಿನಾಶಿನೀ ।**
**ಚಿಚ್ಛೇದ ತಾನಿ ಚಕ್ರಾಣಿ ಸ್ವಶರೈಃ ಸಾಯಕಾಂಶ್ಚ ತಾನ್ ॥29॥**

27-29. ಅನಂತರ ನಿಶುಂಭನು (ಆ ವೇಳೆಗೆ ಎಚ್ಚತ್ತವನಾಗಿ ಧನುಸ್ಸನ್ನು ತೆಗೆದುಕೊಂಡು ಬಾಣಗಳನ್ನು ಹೂಡಿ ಕಾಳಿಕೆಯನ್ನೂ (ವಾಹನವಾದ) ಸಿಂಹವನ್ನೂ ಚೆನ್ನಾಗಿ ಥಳಿಸಿದನು. ಮತ್ತೆ ಹತ್ತು ಸಾವಿರ ತೋಳುಗಳನ್ನು ಸೃಷ್ಟಿಮಾಡಿಕೊಂಡು ದಿತಿಯ ಪುತ್ರನಾದ ಆ ರಾಕ್ಷಸೇಶ್ವರನು ಎಲ್ಲಾ ತೋಳುಗಳಿಂದಲೂ ಚಕ್ರಾಯುಧವನ್ನು ಹರಡಿ ದೇವಿಯನ್ನು ಮುಚ್ಚಿಬಿಟ್ಟನು. ಭಯಂಕರವಾದ ಕಷ್ಟಗಳಿಂದ (ಭಕ್ತರನ್ನು) ಕಾಪಾಡುವ ಭಗವತಿಯಾದ ದುರ್ಗೆಯು ತನ್ನ ಬಾಣಗಳಿಂದ ಅವನ ಬಾಣಗಳನ್ನೂ ಆ ಚಕ್ರಗಳನ್ನೂ ತುಂಡುಮಾಡಿಬಿಟ್ಟಳು.

**ತತೋ ನಿಶುಂಭೋ ವೇಗೇನ ಗದಾಮಾದಾಯ ಚಂಡಿಕಾಮ್ ।**
**ಅಭ್ಯಧಾವತ ವೈ ಹಂತುಂ ದೈತ್ಯಸೇನಾಸಮಾವೃತಃ ॥30॥**

**ತಸ್ಯಾಪತತ ಏವಾಶು ಗದಾಂ ಚಿಚ್ಛೇದ ಚಂಡಿಕಾ ।**
**ಖಡ್ಗೇನ ಶಿತಧಾರೇಣ ಸ ಚ ಶೂಲಂ ಸಮಾದದೇ ॥31॥**

**ಶೂಲಹಸ್ತಂ ಸಮಾಯಾಂತಂ ನಿಶುಂಭಮಮರಾರ್ದನಮ್ ।**
**ಹೃದಿ ವಿವ್ಯಾಧ ಶೂಲೇನ ವೇಗಾವಿದ್ಧೇನ ಚಂಡಿಕಾ ॥32॥**

30-32. ಅನಂತರ ನಿಶುಂಭನು ಗದೆಯನ್ನು ತೆಗೆದುಕೊಂಡು ದೈತ್ಯ ಸೇನಾಸಮೇತನಾಗಿ ಚಂಡಿಕೆಯನ್ನು ಸಂಹಾರಮಾಡುವದಕ್ಕಾಗಿ ವೇಗದಿಂದ ನುಗ್ಗಿದನು. ಆವನು ಮುನ್ನುಗ್ಗುತ್ತಿರುವಷ್ಟರಲ್ಲಿಯೇ ಚಂಡಿಕೆಯು ಅವನ ಗದೆಯನ್ನು ತೀಕ್ಷ್ಣವಾದ ಅಲುಗಿನ ಕತ್ತಿಯಿಂದ ಕತ್ತರಿಸಿಬಿಟ್ಟಳು. ಅವನಾದರೊ, ಮತ್ತೆ ಶೂಲವನ್ನು ತೆಗೆದುಕೊಂಡನು. ದೇವತೆಗಳನ್ನು ಹಿಂಸಿಸುವ ಹಾಗೂ ಶೂಲವನ್ನು ಹಿಡಿದು ಬರುತ್ತಿರುವ ನಿಶುಂಭನನ್ನು ಚಂಡಿಕೆಯು ವೇಗದಿಂದ ಪ್ರಯೋಗಿಸಲ್ಪಟ್ಟ (ತನ್ನ) ಶೂಲದಿಂದ ಎದೆಯಲ್ಲಿ ತಿವಿದಳು.

ಭಿನ್ನಸ್ಯ ತಸ್ಯ ಶೂಲೇನ ಹೃದಯಾನ್ನಿಸ್ಸೃತೋಽಪರಃ ।
ಮಹಾಬಲೋ ಮಹಾವೀರ್ಯಸ್ತಿಷ್ಠೇತಿ ಪುರುಷೋ ವದನ್ ॥33॥

ತಸ್ಯ ನಿಷ್ಕ್ರಾಮತೋ ದೇವೀ ಪ್ರಹಸ್ಯ ಸ್ವನವತ್ ತತಃ ।
ಶಿರಶ್ಚಿಚ್ಛೇದ ಖಡ್ಗೇನ ತತೋಽಸಾವಪತತ್ ಭುವಿ ॥34॥

ತತಃ ಸಿಂಹಶ್ಚಖಾದೋಗ್ರಂ ದಂಷ್ಟ್ರಾಕ್ಷುಣ್ಣಶಿರೋಧರಾನ್ ।
ಅಸುರಾಂಸ್ತಾಂಸ್ತಥಾ ಕಾಲೀ ಶಿವದೂತೀ ತಥಾಽಪರಾನ್ ॥35॥

33-35. ಶೂಲದಿಂದ ಸೀಳಲ್ಪಟ್ಟ ಅವನ ಹೃದಯದಿಂದ ಮಹಾಬಲಶಾಲಿಯೂ ಮಹಾವೀರ್ಯವಂತನೂ ಆದ ಬೇರೊಬ್ಬ ಪುರುಷನು ನಿಲ್ಲು-ಎನ್ನುತ್ತಾ ಹೊರಬಂದನು. ಹಾಗೆ (ಅವನು) ಹೊರಬರುತ್ತಿರುವಾಗಲೇ ದೇವಿಯು ಧ್ವನಿ ಮಾಡಿ ನಗುತ್ತಾ ತನ್ನ ಕತ್ತಿಯಿಂದ ಅವನ ತಲೆಯನ್ನು ಕತ್ತರಿಸಿಬಿಟ್ಟಳು. ಅನಂತರ ಅವನು ನೆಲದಮೇಲೆ ಬಿದ್ದನು. ಅನಂತರ ಸಿಂಹವು ತನ್ನ ಕೋರೆದಾಡೆಗಳಿಂದ ಪುಡಿಮಾಡಲ್ಪಟ್ಟ ಕಿರೀಟಗಳುಳ್ಳ ರಾಕ್ಷಸರನ್ನು ತಿಂದುಹಾಕಿತು. ಕಾಳಿಕಾದೇವಿಯೂ ಶಿವದೂತಿಯೂ ಬೇರೆಯ ಕೆಲವರನ್ನು ತಿಂದರು.

ಕೌಮಾರೀಶಕ್ತಿನಿರ್ಭಿನ್ನಾಃ ಕೇಚಿನ್ನೇಶುರ್ಮಹಾಸುರಾಃ ।
ಬ್ರಹ್ಮಾಣೀಮಂತ್ರಪೂತೇನ ತೋಯೇನಾನ್ಯೇ ನಿರಾಕೃತಾಃ ॥36॥

ಮಾಹೇಶ್ವರೀತ್ರಿಶೂಲೇನ ಭಿನ್ನಾಃ ಪೇತುಃ ತಥಾಽಪರೇ ।
ವಾರಾಹೀತುಂಡಘಾತೇನ ಕೇಚಿಚ್ಚೂರ್ಣೀಕೃತಾ ಭುವಿ ॥37॥

36-37. ಕೌಮಾರೀದೇವಿಯ ಶಕ್ತ್ಯಾಯುಧದ ಪ್ರಹಾರದಿಂದ ಕೆಲ ಕೆಲವು ಮಹಾರಾಕ್ಷಸರು ನಾಶವಾದರು. ಬ್ರಹ್ಮಾಣಿಯ ಮಂತ್ರಪವಿತ್ರವಾದ ನೀರಿನಿಂದ ಮತ್ತೆ ಕೆಲವರು ಹೊಡೆದೋಡಿಸಲ್ಪಟ್ಟರು. ಮಾಹೇಶ್ವರೀದೇವಿಯ ತ್ರಿಶೂಲದಿಂದ

ಸೀಳಲ್ಪಟ್ಟ ಕೆಲವರು ಬಿದ್ದುಹೋದರು. ವಾರಾಹಿಯ ಕೋರೆದಾಡೆಗಳ ಹೊಡೆತದಿಂದ ಕೆಲವರು ಪುಡಿಮಾಡಲ್ಪಟ್ಟು ನೆಲದಲ್ಲಿ ಬಿದ್ದರು.

ಖಂಡಂ ಖಂಡಂ ಚ ಚಕ್ರೇಣ ವೈಷ್ಣವ್ಯಾ ದಾನವಾಃ ಕೃತಾಃ ।
ವಜ್ರೇಣ ಚೈಂದ್ರೀಹಸ್ತಾಗ್ರವಿಮುಕ್ತೇನ ತಥಾಽಪರೇ ॥38॥

ಕೇಚಿದ್ವಿನೇಶುರಸುರಾಃ ಕೇಚಿನ್ನಷ್ಟಾ ಮಹಾಹವಾತ್ ।
ಭಕ್ಷಿತಾಶ್ಚಾಪರೇ ಕಾಲೀಶಿವದೂತೀಮೃಗಾಧಿಪೈಃ ॥39॥

38-39. ವೈಷ್ಣವೀದೇವಿಯ ಚಕ್ರಾಯುಧದಿಂದ ಕೆಲವು ದಾನವರು ತುಂಡುತುಂಡುಮಾಡಲ್ಪಟ್ಟರು. ಹಾಗೆಯೇ ಮತ್ತೆ ಕೆಲವರು ಐಂದ್ರೀದೇವಿಯ ಕೈಯಲ್ಲಿದ್ದ ವಜ್ರಾಯುಧದ ಏಟಿನಿಂದಲೂ ತುಂಡರಿಸಲ್ಪಟ್ಟರು. ಹೀಗೆ ಮಹಾ ಯುದ್ಧದ ದೆಸೆಯಿಂದ ಕೆಲವು ರಾಕ್ಷಸರು ನಷ್ಟರಾದರು. ಕೆಲವರು ಸಾವನ್ನು ಹೊಂದಿದರು, ಕಾಳಿ, ಶಿವದೂತಿ, ಸಿಂಹ-ಗಳಿಂದ ಕೆಲವರು ತಿನ್ನಲ್ಪಟ್ಟರು.

ಇತಿ ಶ್ರೀ ಮಾರ್ಕಂಡೇಯಪುರಾಣೇ ದೇವೀಮಹಾತ್ಮ್ಯೇ
ನವಮೋಽಧ್ಯಾಯಃ

---

## ಹತ್ತನೆಯ ಅಧ್ಯಾಯ

ಧ್ಯಾನಮ್ –

ಉತ್ತಪ್ತಹೇಮರುಚಿರಾಂ ರವಿಚಂದ್ರವಹ್ನಿ –
ನೇತ್ರಾಂ ಧನುಃಶರಯುತಾಂಕುಶಪಾಶಶೂಲಮ್ ।
ರಮ್ಯೈರ್ಭುಜೈಶ್ಚ ದಧತೀಂ ಶಿವಶಕ್ತಿರೂಪಾಂ
ಕಾಮೇಶ್ವರೀಂ ಹೃದಿ ಭಜಾಮಿ ಧೃತೇಂದುಲೇಖಾಮ್ ॥

ಚೆನ್ನಾಗಿ ಪುಟವಿಟ್ಟ ಚಿನ್ನದಂತೆ ಕಾಂತಿಯುಳ್ಳ , ಸೂರ್ಯ, ಚಂದ್ರ, ಅಗ್ನಿಗಳನ್ನು ಕಣ್ಣುಗಳನ್ನಾಗಿ ಹೊಂದಿರುವ, ಬಾಣದೊಡಗೂಡಿದ ಅಂಕುಶ, ಪಾಶ, ಶೂಲಗಳನ್ನು ರಮ್ಯವಾದ ಭುಜಗಳಿಂದ ಧರಿಸಿರುವ, ಶಿವಶಕ್ತಿ ಸ್ವರೂಪಳಾದ, ಚಂದ್ರಲೇಖೆಯನ್ನು ಧರಿಸಿರುವ ಕಾಮೇಶ್ವರಿಯನ್ನು ಹೃದಯದಲ್ಲಿ ಚಿಂತಿಸುತ್ತೇನೆ.

ಓಂ ಋಷಿರುವಾಚ–

ನಿಶುಂಭಂ ನಿಹತಂ ದೃಷ್ಟ್ವಾ ಭ್ರಾತರಂ ಪ್ರಾಣಸಂಮಿತಮ್ ।
ಹನ್ಯಮಾನಂ ಬಲಂ ಚೈವ ಶುಂಭಃ ಕ್ರುದ್ಧೋಽಬ್ರವೀದ್ವಚಃ ॥1॥

ಬಲಾವಲೇಪಾದ್ ದುಷ್ಟೇ ತ್ವಂ ಮಾ ದುರ್ಗೇ ಗರ್ವಮಾವಹ ।
ಅನ್ಯಾಸಾಂ ಬಲಮಾಶ್ರಿತ್ಯ ಯುಧ್ಯಸೇ ಯಾತಿಮಾನಿನೀ ॥2॥

1-2. ಋಷಿಯಿಂತೆಂದನು : ಪ್ರಾಣಕ್ಕೆ ಸಮಾನನಾದ ಸೋದರನಾದ ನಿಶುಂಭನು ಕೊಲ್ಲಲ್ಪಟ್ಟದ್ದನ್ನು ನೋಡಿ, ಹಾಗೂ ಸಾಯುತ್ತಿರುವ ರಾಕ್ಷಸ ಬಲವನ್ನೂ ಕಂಡು ಕುಪಿತನಾದ ಶುಂಭನು ಹೀಗೆಂದನು : ಎಲೌ ದುಷ್ಟಳಾದ ದುರ್ಗೆಯೆ, ಬಲಪರಾಕ್ರಮಗಳ ಕೊಬ್ಬಿನಿಂದ ಜಂಭವನ್ನು ಮಾಡದಿರು. ಏಕೆಂದರೆ ಬಹಳ ಗರ್ವಪೂರಿತಳಾದ ನೀನು ಬೇರೆಯವರ ಬಲಸಹಾಯಗಳನ್ನು ಆಶ್ರಯಿಸಿ ಯುದ್ಧಮಾಡುತ್ತಿರುವೆಯಲ್ಲವೆ ?

ದೇವ್ಯುವಾಚ –

ಏಕೈವಾಹಂ ಜಗತ್ಯತ್ರ ದ್ವಿತೀಯಾ ಕಾ ಮಮಾಪರಾ ।
ಪಶ್ಯೈತಾ ದುಷ್ಟ ಮಯ್ಯೇವ ವಿಶನ್ತ್ಯೋ ಮದ್ವಿಭೂತಯಃ ॥3॥

ತತಃ ಸಮಸ್ತಾಸ್ತಾ ದೇವ್ಯೋ ಬ್ರಹ್ಮಾಣೀಪ್ರಮುಖಾ ಲಯಮ್ ।
ತಸ್ಯಾ ದೇವ್ಯಾಸ್ತನೌ ಜಗ್ಮುರೇಕೈವಾಸೀತ್ತದಾಂಬಿಕಾ ॥4॥

3-4. ದೇವಿಯಿಂತೆಂದಳು : 'ಈ ಜಗತ್ತಿನಲ್ಲಿ ನಾನೊಬ್ಬಳೇ ದೇವಿಯು. ನನಗೆ ಎರಡನೆಯವಳು ಯಾವಳಿದ್ದಾಳು ? ಎಲೌ ದುಷ್ಟನೆ, ನನ್ನ ವಿಭೂತಿ ರೂಪವೇ ಆಗಿರುವ ಈ (ಬ್ರಾಹ್ಮ್ಯಾದಿದೇವಿಯರು) ನನ್ನಲ್ಲಿಯೇ ಪ್ರವೇಶ ಮಾಡುತ್ತಿರುವದನ್ನು ಈಗ ನೋಡು'. ಹೀಗೆಂದ ಕೂಡಲೆ ಆ ಎಲ್ಲಾ ಬ್ರಹ್ಮಾಣಿಯೇ ಮುಂತಾದ ದೇವಿಯರೂ ಆ ಚಂಡಿಕೆಯ ಶರೀರದಲ್ಲಿಯೇ ಸೇರಿ ಅದೃಶ್ಯರಾಗಿಬಿಟ್ಟರು, ಆಗ ಅಂಬಿಕೆಯು ತಾನು ಒಬ್ಬಳೇ ಆಗಿಬಿಟ್ಟಳು.

ದೇವ್ಯುವಾಚ –

ಅಹಂ ವಿಭೂತ್ಯಾ ಬಹುಭಿರಿಹ ರೂಪೈರ್ಯದಾ ಸ್ಥಿತಾ ।
ತತ್ಸಂಹೃತಂ ಮಯೈಕೈವ ತಿಷ್ಠಾಮ್ಯಾಜೌ ಸ್ಥಿರೋ ಭವ ॥5॥

5. ದೇವಿಯಿಂತೆಂದಳು : ನಾನು ವಿಭೂತಿಗಳಿಂದ ಬಹುರೂಪಳಾಗಿ ಯಾವಾಗ ತೋರಿಕೊಂಡಿದ್ದೇನೋ ಆ ನಾನೇ ಈಗ ಎಲ್ಲವನ್ನೂ ಅಡಗಿಸಿಕೊಂಡು ಒಬ್ಬಳೇ ಆಗಿ ನಿಂತಿದ್ದೇನೆ. ಇನ್ನು ಯುದ್ಧದಲ್ಲಿ ನೀನು ದೃಢವಾಗಿ ನಿಲ್ಲು.

ಋಷಿರುವಾಚ –

ತತಃ ಪ್ರವವೃತೇ ಯುದ್ಧಂ ದೇವ್ಯಾಃ ಶುಂಭಸ್ಯ ಚೋಭಯೋಃ ।
ಪಶ್ಯತಾಂ ಸರ್ವದೇವಾನಾಮಸುರಾಣಾಂ ಚ ದಾರುಣಮ್ ॥6॥

ಶರವರ್ಷೈಃ ಶಿತೈಃಶಸ್ತ್ರೈಃ ತಥಾಸ್ತ್ರೈಶ್ಚೈವ ದಾರುಣೈಃ ।
ತಯೋರ್ಯುದ್ಧಮಭೂತ್ ಭೂಯಃ ಸರ್ವಲೋಕಭಯಂಕರಮ್ ॥7॥

6-7. ಋಷಿಯಿಂತೆದನು : ಅನಂತರ ಶುಂಭನಿಗೂ ದೇವಿಗೂ ಇಬ್ಬರಿಗೂ ಪರಸ್ಪರವಾಗಿ ಸಮಸ್ತ ದೇವತೆಗಳೂ ರಾಕ್ಷಸರೂ ನೋಡುತ್ತಿರುವಂತೆಯೇ ಭಯಂಕರವಾದ ಯುದ್ಧವು ಪ್ರಾರಂಭವಾಯಿತು. ಬಾಣಗಳ ಸುರಿಮಳೆಯಿಂದಲೂ ತೀಕ್ಷ್ಣವಾದ ಆಯುಧಗಳಿಂದಲೂ ಹಾಗೂ ಅಸ್ತ್ರಗಳಿಂದಲೂ ಕೂಡಿದ ಸರ್ವಲೋಕಕ್ಕೂ ಭಯವನ್ನು ಉಂಟುಮಾಡುವ ಯುದ್ಧವು ಅವರಿಬ್ಬರಿಗೂ ನಡೆಯಿತು.

ದಿವ್ಯಾನ್ಯಸ್ತ್ರಾಣಿ ಶತಶೋ ಮುಮುಚೇ ಯಾನ್ಯಥಾಂಬಿಕಾ ।
ಬಭಂಜ ತಾನಿ ದೈತ್ಯೇಂದ್ರಃ ತತ್ಪ್ರತೀಘಾತಕರ್ತೃಭಿಃ ॥8॥

ಮುಕ್ತಾನಿ ತೇನ ಚಾಸ್ತ್ರಾಣಿ ದಿವ್ಯಾನಿ ಪರಮೇಶ್ವರೀ ।
ಬಭಂಜ ಲೀಲಯೈವೋಗ್ರಹುಂಕಾರೋಚ್ಚಾರಣಾದಿಭಿಃ ॥9॥

ತತಃ ಶರಶತೈರ್ದೇವೀಮಾಚ್ಛಾದಯತ ಸೋऽಸುರಃ ।
ಸಾಪಿ ತತ್ಕುಪಿತಾ ದೇವೀ ಧನುಶ್ಚಿಚ್ಛೇದ ಚೇಷುಭಿಃ ॥10॥

8-10. ಅನಂತರ ಅಂಬಿಕೆಯು ಯಾವಯಾವ ದಿವ್ಯವಾದ ಅಸ್ತ್ರಗಳನ್ನು ಪ್ರಯೋಗಿಸಿದಳೋ ದೈತ್ಯರಾಜನು ಅವುಗಳೆಲ್ಲವನ್ನೂ (ಆಯಾ ಅಸ್ತ್ರಗಳನ್ನು) ಪ್ರತಿಯಾಗಿ ಹೊಡೆಯುವ ಅಸ್ತ್ರಗಳಿಂದ ಮುರಿದುಹಾಕಿಬಿಟ್ಟನು. ಅವನು ಉಪಯೋಗಿಸಿದ ದಿವ್ಯವಾದ ಅಸ್ತ್ರಗಳನ್ನು ಪರಮೇಶ್ವರಿಯು ಉಗ್ರವಾದ ಹುಂಕಾರ ವನ್ನು ಮಾಡುವ (ನೆಪದಿಂದಲೇ) ಲೀಲಾಮಾತ್ರದಿಂದ ಮುರಿದುಹಾಕಿದಳು.

ಅನಂತರ ಆ ರಾಕ್ಷಸನು ನೂರುಬಾಣಗಳಿಂದ ದೇವಿಯನ್ನು ಮುಚ್ಚಿಬಿಟ್ಟನು. ಆಕೆಯಾದರೊ, ಕೋಪದಿಂದ ಅವನ ಬಿಲ್ಲನ್ನು ತನ್ನ ಬಾಣಗಳಿಂದ ಕತ್ತರಿಸಿಬಿಟ್ಟಳು.

ಛಿನ್ನೇ ಧನುಷಿ ದೈತ್ಯೇಂದ್ರಃ ತಥಾ ಶಕ್ತಿಮಥಾದದೇ ।
ಚಿಚ್ಛೇದ ದೇವೀ ಚಕ್ರೇಣ ತಾಮಪ್ಯಸ್ಯ ಕರೇ ಸ್ಥಿತಾಮ್ ॥11॥

ತತಃ ಖಡ್ಗಮುಪಾದಾಯ ಶತಚಂದ್ರಂ ಚ ಭಾನುಮತ್ ।
ಅಭ್ಯಧಾವತ್ತದಾ ದೇವೀಂ ದೈತ್ಯಾನಾಮಧಿಪೇಶ್ವರಃ ॥12॥

ತಸ್ಯಾಪತತ ಏವಾಶು ಖಡ್ಗಂ ಚಿಚ್ಛೇದ ಚಂಡಿಕಾ ।
ಧನುರ್ಮುಕ್ತೈಃ ಶಿತೈರ್ಬಾಣೈಶ್ಚರ್ಮ ಚಾರ್ಕಕರಾಮಲಮ್ ॥13॥

11-13. ಆ ದೈತ್ಯರಾಜನು ಬಿಲ್ಲು ತುಂಡಾಗಿ ಬೀಳುವಾಗ ಶಕ್ತ್ಯಾಯುಧವನ್ನು ತೆಗೆದುಕೊಂಡನು. ಅವನ ಕೈಯಲ್ಲಿದ್ದ ಆ ಆಯುಧವನ್ನೂ ದೇವಿಯು ಚಕ್ರದಿಂದ ತುಂಡರಿಸಿಬಿಟ್ಟಳು. ಅನಂತರ ದೈತ್ಯರುಗಳೊಡೆಯನಾದ ಆತನು ಕತ್ತಿಯನ್ನೂ ನೂರುಚಂದ್ರರ (ಚಿತ್ರವುಳ್ಳ) ಪ್ರಕಾಶಮಾನವಾದ ಗುರಾಣಿಯನ್ನೂ ತೆಗೆದುಕೊಂಡು ದೇವಿಯ ಕಡೆಗೆ ನುಗ್ಗಿದನು. ಅವನು ಮುನ್ನುಗ್ಗುತ್ತಿದ್ದಂತೆಯೇ ಚಂಡಿಕೆಯು ತನ್ನ ಬಿಲ್ಲಿನಿಂದ ಹೊರಬಿದ್ದ ತೀಕ್ಷ್ಣವಾದ ಬಾಣಗಳಿಂದ ಕತ್ತಿಯನ್ನೂ ಸೂರ್ಯಕಿರಣಗಳಂತೆ ಹೊಳೆಯುತ್ತಿದ್ದ ಗುರಾಣಿಯನ್ನೂ ಕತ್ತರಿಸಿದಳು.

ಹತಾಶ್ವಃ ಸ ತದಾ ದೈತ್ಯಃ ಛಿನ್ನಧನ್ವಾ ವಿಸಾರಥಿಃ ।
ಜಗ್ರಾಹ ಮುದ್ಗರಂ ಘೋರಮಂಬಿಕಾನಿಧನೋದ್ಯತಃ ॥14॥

ಚಿಚ್ಛೇದಾಪತತಸ್ತಸ್ಯ ಮುದ್ಗರಂ ನಿಶಿತೈಃ ಶರೈಃ ।
ತಥಾಪಿ ಸೋಽಭ್ಯಧಾವತ್ತಾಂ ಮುಷ್ಟಿಮುದ್ಯಮ್ಯ ವೇಗವಾನ್ ॥15॥

ಸ ಮುಷ್ಟಿಂ ಪಾತಯಾಮಾಸ ಹೃದಯೇ ದೈತ್ಯಪುಂಗವಃ ।
ದೇವ್ಯಾಸ್ತಂ ಚಾಪಿ ಸಾ ದೇವೀ ತಲೇನೋರಸ್ಯತಾಡಯತ್ ॥16॥

14-16. (ದೇವಿಯು ಆ ರಾಕ್ಷಸನ ರಥವನ್ನೂ ಸಾರಥಿ-ಕುದುರೆಗಳೊಡನೆ ಕೆಡವಿದಳು). ಹೀಗೆ ಸಾರಥಿಯಿಲ್ಲದ, ಬಿಲ್ಲು ಮುರಿದುಹೋದ, ಕುದುರೆಗಳೂ ನಷ್ಟವಾಗಿ ಹೋದ, ಆತನು ಅಂಬಿಕೆಯನ್ನು ಕೊಲ್ಲಲುದ್ಯುಕ್ತನಾಗಿ ಮುದ್ಗರವೆಂಬ ಘೋರವಾದ ಆಯುಧವನ್ನು ಹಿಡಿದನು. ಆಗ ಅವನ ಮುದ್ಗರವನ್ನು ಹರಿತವಾದ ಬಾಣಗಳಿಂದ (ದೇವಿಯು) ಕತ್ತರಿಸಿಬಿಟ್ಟನು. ಹಾಗಾದರೂ ಅವನು ಬಲುಚುರುಕಾಗಿ

ಕೈಮುಷ್ಟಿಯನ್ನು ಎತ್ತಿಕೊಂಡು ಎದುರಾಗಿ ನುಗ್ಗಿ ಬಂದನು. ಮತ್ತು ಆ ದೈತ್ಯಪುಂಗವನು ತನ್ನ ಮುಷ್ಟಿಯನ್ನೆತ್ತಿ ದೇವಿಯ ಎದೆಗೆ ಹೊಡೆದನು. ಆಗಲೇ ದೇವಿಯೂ ತನ್ನ ಮುಷ್ಟಿಯಿಂದ ಅವನ ಎದೆಗೆ ಗುದ್ದಿದಳು.

ತಲ ಪ್ರಹಾರಾಭಿಹತೋ ನಿಪಪಾತ ಮಹೀತಲೇ ।
ಸ ದೈತ್ಯರಾಜಃ ಸಹಸಾ ಪುನರೇವ ತಥೋತ್ಥಿತಃ ॥17॥

ಉತ್ಪತ್ಯ ಚ ಪ್ರಗೃಹ್ಯೋಚ್ಚೈರ್ದೇವೀಂ ಗಗನಮಾಸ್ಥಿತಃ ।
ತತ್ರಾಪಿ ಸಾ ನಿರಾಧಾರಾ ಯುಯುಧೇ ತೇನ ಚಂಡಿಕಾ ॥18॥

ನಿಯುದ್ಧಂ ಖೇ ತದಾ ದೈತ್ಯಶ್ಚಂಡಿಕಾ ಚ ಪರಸ್ಪರಮ್ ।
ಚಕ್ರತುಃ ಪ್ರಥಮಂ ಸಿದ್ಧಮುನಿವಿಸ್ಮಯಕಾರಕಮ್ ॥19॥

17-19. ಗುದ್ದಿನ ಏಟಿನಿಂದ ಅವನು ನೆಲದಮೇಲೆ ಉರುಳಿಬಿದ್ದನು. ಕೂಡಲೆ ಆ ದೈತ್ಯರಾಜನು ಮತ್ತೆ ಹಠಾತ್ತನೆ ಮೇಲೆದ್ದನು. ಎದ್ದ ಅನಂತರ ದೇವಿಯನ್ನು ಮೇಲಕ್ಕೆ ಎತ್ತಿಕೊಂಡು ಆಕಾಶಕ್ಕೆ ಹಾರಿದನು. ನಿರಾಧಾರಳಾಗಿ ಚಂಡಿಕೆಯು ಅಲ್ಲಿಯೂ ಕೂಡ ಅವನೊಡನೆ ಯುದ್ಧಮಾಡಿದಳು. ಆಗ ರಾಕ್ಷಸನೂ ಚಂಡಿಕೆಯೂ ಅನ್ಯೋನ್ಯವಾಗಿ ಮೊದಲಬಾರಿಗೆ ಆಕಾಶದಲ್ಲಿ ಮಲ್ಲಯುದ್ಧವನ್ನು ಸಿದ್ಧಮುನಿಗಳಿಗೂ ಆಶ್ಚರ್ಯವಾಗುವ ರೀತಿಯಲ್ಲಿ ಮಾಡಿದರು.

ತತೋ ನಿಯುದ್ಧಂ ಸುಚಿರಂ ಕೃತ್ವಾ ತೇನಾಂಬಿಕಾ ಸಹ ।
ಉತ್ಪಾತ್ಯ ಭ್ರಾಮಯಾಮಾಸ ಚಿಕ್ಷೇಪ ಧರಣೀತಲೇ ॥20॥

ಸ ಕ್ಷಿಪ್ತೋ ಧರಣೀಂ ಪ್ರಾಪ್ಯ ಮುಷ್ಟಿಮುದ್ಯಮ್ಯ ವೇಗಿತಃ ।
ಅಭ್ಯಧಾವತ ದುಷ್ಟಾತ್ಮಾ ಚಂಡಿಕಾಹನನೇಚ್ಛಯಾ ॥21॥

ತಮಾಯಾಂತಂ ತತೋ ದೇವೀ ಸರ್ವದೈತ್ಯಜನೇಶ್ವರಮ್ ।
ಜಗತ್ಯಾಂ ಪಾತಯಾಮಾಸ ಭಿತ್ವಾ ಶೂಲೇನ ವಕ್ಷಸಿ ॥22॥

ಸ ಗತಾಸುಃ ಪಪಾತೋರ್ವ್ಯಾಂ ದೇವೀಶೂಲಾಗ್ರವಿಕ್ಷತಃ ।
ಚಾಲಯನ್ ಸಕಲಾಂ ಪೃಥ್ವೀಂ ಸಾಬ್ಧಿದ್ವೀಪಾಂ ಸಪರ್ವತಾಮ್ ॥23॥

20-23. ಅನಂತರ ಅವನೊಡನೆ ಅಂಬಿಕೆಯು ಮುಷ್ಟಿಯುದ್ಧವನ್ನು ಬಹುಕಾಲ ಮಾಡಿ ಮೇಲಕ್ಕೆತ್ತಿ ತಿರುಗಿಸಿ ನೆಲದಮೇಲೆ ಬಿಸುಟಳು. ಹೀಗೆ ಎಸೆಯಲ್ಪಟ್ಟ ದುಷ್ಟನಾದ

ಆತನು ನೆಲದಮೇಲೆ ಬಿದ್ದು (ಪುನಃ) ಎದ್ದು ವೇಗದಿಂದ ಕೈಮುಷ್ಟಿಯನ್ನು ಮೇಲೆತ್ತಿ ಚಂಡಿಕೆಯನ್ನು ಸಂಹಾರಮಾಡುವದಕ್ಕಾಗಿ ಓಡಿಬಂದನು. ಅನಂತರ ಹಾಗೆ ಬಂದ, ಎಲ್ಲಾ ದೈತ್ಯರಿಗೂ ಒಡೆಯನಾದ ಅವನನ್ನು ಎದೆಯಲ್ಲಿ ಶೂಲದಿಂದ ತಿವಿದು ಭೂಮಿಯಲ್ಲಿ ಕೆಡವಿದಳು. ದೇವಿಯ ಶೂಲದ ತುದಿಯಿಂದ ಗಾಯಗೊಳಿಸಲ್ಪಟ್ಟ ಆತನು ಪ್ರಾಣವನ್ನು ಕಳೆದುಕೊಂಡವನಾಗಿ ಬೀಳುವಾಗ ಸಮುದ್ರಗಳಿಂದಲೂ ದ್ವೀಪಗಳಿಂದಲೂ ಪರ್ವತಗಳಿಂದಲೂ ಕೂಡಿದ ಇಡಿಯ ಭೂಮಿಯನ್ನೆಲ್ಲಾ ಅಳ್ಳಾಡಿಸುವವನಾಗಿ ಬಿದ್ದುಹೋದನು.

ತತಃ ಪ್ರಸನ್ನಮಖಿಲಂ ಹತೇ ತಸ್ಮಿನ್ ದುರಾತ್ಮನಿ ।
ಜಗತ್ ಸ್ವಾಸ್ಥ್ಯಮತೀವಾಪ ನಿರ್ಮಲಂ ಚಾಭವನ್ನಭಃ ॥24॥

ಉತ್ಪಾತಮೇಘಾಃ ಸೋಲ್ಕಾ ಯೇ ಪ್ರಾಗಾಸಂಸ್ತೇ ಶಮಂ ಯಯುಃ ।
ಸರಿತೋ ಮಾರ್ಗವಾಹಿನ್ಯಃ ತಥಾಸಂಸ್ತತ್ರ ಪಾತಿತೇ ॥25॥

24-25. ಆನಂತರ ಆ ದುರಾತ್ಮನು ಸತ್ತು ಬೀಳಲಾಗಿ ಎಲ್ಲವೂ ಪ್ರಸನ್ನವಾಯಿತು. ಜಗತ್ತೆಲ್ಲವೂ ಬಹಳವಾಗಿ ಶಾಂತವಾಯಿತು. ಆಕಾಶವೆಲ್ಲವೂ ನಿರ್ಮಲವಾಯಿತು. ಹಿಂದೆ ತೋರಿಕೊಂಡಿದ್ದ ಉಲ್ಕಾಪಾತಗಳಿಂದ ಕೂಡಿದ್ದ ವಿಪತ್ತನ್ನು ಸೂಚಿಸುವ ಮೋಡಗಳೆಲ್ಲವೂ ಶಾಂತವಾದವು. ನದಿಗಳೆಲ್ಲವೂ ತಮ್ಮ ಪಾತ್ರಗಳಲ್ಲಿಯೇ ಹರಿಯತೊಡಗಿದವು. (ಆ ಶುಂಭರಾಕ್ಷಸನು) ನಾಶವಾಗಲಾಗಿ ಎಲ್ಲವೂ ನೆಟ್ಟಗಾದವು.

ತತೋ ದೇವಗಣಾಃ ಸರ್ವೇ ಹರ್ಷನಿರ್ಭರಮಾನಸಾಃ ।
ಬಭೂವುರ್ನಿಹತೇ ತಸ್ಮಿನ್ ಗಂಧರ್ವಾ ಲಲಿತಂ ಜಗುಃ ॥26॥

ಅವಾದಯಂಸ್ತಥೈವಾನ್ಯೇ ನನೃತುಶ್ಚಾಪ್ಸರೋಗಣಾಃ ।
ವವುಃ ಪುಣ್ಯಾಸ್ತಥಾ ವಾತಾಃ ಸುಪ್ರಭೋಽಭೂದ್ದಿವಾಕರಃ ॥27॥
ಜಜ್ವಲುಶ್ಚಾಗ್ನಯಃ ಶಾಂತಾಃ ಶಾಂತಾ ದಿಗ್ಜನಿತಸ್ವನಾಃ ।

26-27. ಅನಂತರ ದೇವತೆಗಳೆಲ್ಲರೂ ಸಂತೋಷಯುಕ್ತರಾದರು. ಆ ರಾಕ್ಷಸನು ನಾಶವಾಗಲಾಗಿ ಗಂಧರ್ವರು ಸುಂದರವಾಗಿ ಹಾಡಿದರು. ಮತ್ತೆ ಕೆಲವರು ವಾದ್ಯಗಳನ್ನು ಬಾರಿಸಿದರು. ಅಪ್ಸರಗಣಗಳ ಸ್ತ್ರೀಯರು ಕುಣಿದಾಡಿದರು. ಪುಣ್ಯಕರವಾದ (ವಾಯು) ಮಾರುತಗಳು ಬೀಸಿದವು. ಸೂರ್ಯನು ಹೆಚ್ಚಿನ

ಕಾಂತಿಯುಕ್ತನಾಗಿ ಬೆಳಗಿದನು. ಅಗ್ನಿಗಳೆಲ್ಲವೂ ಹೊಗೆಯಿಲ್ಲದೆ, ನಿಧಾನವಾಗಿ ಉರಿದವು. ದಿಕ್ಕುಗಳಲ್ಲಿ ಕೇಳಿಬರುತ್ತಿದ್ದ (ಭಯಸೂಚಕವಾದ) ಶಬ್ದಗಳೂ ತಣ್ಣಗಾದವು.

ಇತಿ ಶ್ರೀ ಮಾರ್ಕಂಡೇಯ ಪುರಾಣೇ ದೇವೀಮಹಾತ್ಮ್ಯೇ
ದಶಮೋಽಧ್ಯಾಯಃ

---

## ಹನ್ನೊಂದನೆಯ ಅಧ್ಯಾಯ

ಧ್ಯಾನಮ್ –

ಬಾಲರವಿದ್ಯುತಿಮಿಂದುಕಿರೀಟಾಂ
ತುಂಗಕುಚಾಂ ನಯನತ್ರಯಯುಕ್ತಾಮ್ ।
ಸ್ಮೇರಮುಖೀಂ ವರದಾಂಕುಶಪಾಶಾ–
(ಅ)ಭೀತಿಕರಾಂ ಪ್ರಭಜೇ ಭುವನೇಶೀಮ್ ॥

ಉದಯಸೂರ್ಯನಂತೆ ಕಾಂತಿಯುಳ್ಳ, ಚಂದ್ರಕಲೆಯುಳ್ಳ ಕಿರೀಟವನ್ನು ಧರಿಸಿರುವ, ಉನ್ನತವಾದ ವಕ್ಷಸ್ಥಲವುಳ್ಳ, ಮೂರು ಕಣ್ಣುಗಳಿಂದ ಕೂಡಿದ ಮುಗುಳುನಗೆಯ ಮುಖವುಳ್ಳ, ವರದಹಸ್ತ ಅಂಕುಶ, ಪಾಶ, ಅಭಯಹಸ್ತಗಳಿಂದ ಕೂಡಿರುವ ಭುವನೇಶ್ವರಿಯಾದ ದೇವಿಯನ್ನು ಭಜಿಸುವೆನು.

ಋಷಿರುವಾಚ –

ದೇವ್ಯಾ ಹತೇ ತತ್ರ ಮಹಾಸುರೇಂದ್ರೇ
ಸೇಂದ್ರಾಃ ಸುರಾ ವಹ್ನಿಪುರೋಗಮಾಸ್ತಾಮ್ ।
ಕಾತ್ಯಾಯನೀಂ ತುಷ್ಟುವುರಿಷ್ಟಲಾಭಾತ್
ವಿಕಾಶಿವಕ್ತ್ರಾಬ್ಜ ವಿಕಾಶಿತಾಶಾಃ ॥1॥

1. ಋಷಿಯಿಂತೆಂದನು : ಆ ಮಹಾರಾಕ್ಷಸನು ದೇವಿಯಿಂದ ಕೊಲ್ಲಲ್ಪಡಲಾಗಿ ಇಂದ್ರನೇ ಮುಂತಾದ ದೇವತೆಗಳು ಅಗ್ನಿಯನ್ನು ಮುಂದಿಟ್ಟುಕೊಂಡು ಬಂದು ತಮ್ಮ ಇಷ್ಟಾರ್ಥವು ನೆರವೇರಿದುದಕ್ಕಾಗಿ ಅರಳಿದ ಮುಖವುಳ್ಳವರಾಗಿ ದಿಕ್ಕುಗಳನ್ನೆಲ್ಲ ಬೆಳಗುತ್ತಾ ಕಾತ್ಯಾಯನಿಯೆನಿಸಿದ ದೇವಿಯನ್ನು ಸ್ತೋತ್ರ ಮಾಡಿದರು.

ದೇವಿ ಪ್ರಪನ್ನಾರ್ತಿಹರೇ ಪ್ರಸೀದ
ಪ್ರಸೀದ ಮಾತರ್ಜಗತೋಽಖಿಲಸ್ಯ ।
ಪ್ರಸೀದ ವಿಶ್ವೇಶ್ವರಿ ಪಾಹಿ ವಿಶ್ವಂ
ತ್ವಮೀಶ್ವರೀ ದೇವಿ ಚರಾಚರಸ್ಯ ॥2॥

ಆಧಾರಭೂತಾ ಜಗತಸ್ತ್ವಮೇಕಾ
ಮಹೀಸ್ವರೂಪೇಣ ಯತಃ ಸ್ಥಿತಾಸಿ ।
ಅಪಾಂ ಸ್ವರೂಪಸ್ಥಿತಯಾ ತ್ವಯೈತತ್
ಆಪ್ಯಾಯತೇ ಕೃತ್ಸ್ನಮಲಂಘ್ಯವೀರ್ಯೇ ॥3॥

2-3. ಎಲೌ ದೇವಿಯೆ, ಶರಣಾಗತರ ಸಂಕಟಗಳನ್ನು ಪರಿಹರಿಸುವವಳೆ, ಪ್ರಸನ್ನಳಾಗು. ಸಕಲಜಗತ್ತಿಗೂ ತಾಯಿಯಾದ ನೀನು ಪ್ರಸನ್ನಳಾಗು. ಎಲೌ ವಿಶ್ವೇಶ್ವರಿಯೆ, ಜಗತ್ತನ್ನು ಕಾಪಾಡುವವಳಾಗು ; ನೀನಾದರೂ, ಚೇತನಾಚೇತನಾತ್ಮಕ ವಾದ ಜಗತ್ತೆಲ್ಲಕ್ಕೂ ಒಡೆಯಳು. ಜಗತ್ತಿಗೆಲ್ಲ ನೀನೊಬ್ಬಳೇ ಆಶ್ರಯಳು. ಏಕೆಂದರೆ ಭೂರೂಪದಿಂದ ಎಲ್ಲೆಲ್ಲೂ ನೀನೇ ಇದ್ದುಕೊಂಡಿರುವೆ. ಹಾಗೆಯೇ ನೀರಿನ ರೂಪದಿಂದಿರುವ ನಿನ್ನಿಂದ ಇದೆಲ್ಲವೂ-ಎಲ್ಲೆ ದಾಟಲಸಾಧ್ಯವಾದ ಪರಾಕ್ರಮ ವುಳ್ಳವಳೆ, ನೀರುಣಿಸಲ್ಪಡುತ್ತದೆ.

ತ್ವಂ ವೈಷ್ಣವೀಶಕ್ತಿರನಂತವೀರ್ಯಾ
ವಿಶ್ವಸ್ಯ ಬೀಜಂ ಪರಮಾಸಿ ಮಾಯಾ ।
ಸಂಮೋಹಿತಂ ದೇವಿ ಸಮಸ್ತಮೇತತ್
ತ್ವಂ ವೈ ಪ್ರಸನ್ನಾ ಭುವಿ ಮುಕ್ತಿಹೇತುಃ ॥4॥

ವಿದ್ಯಾಃ ಸಮಸ್ತಾಃ ತವ ದೇವಿ ಭೇದಾಃ
ಸ್ತ್ರಿಯಃ ಸಮಸ್ತಾಃ ಸಕಲಾ ಜಗತ್ಸು ।
ತ್ವಯೈಕಯಾ ಪೂರಿತಮಂಬಯೈತತ್
ಕಾ ತೇ ಸ್ತುತಿಃ ಸ್ತವ್ಯಪರಾಪರೋಕ್ತಿಃ ॥5॥

4-5. ನೀನಾದರೊ, ಜಗತ್ತಿಗೆ ಬೀಜವಾದ ಪರಮವಾದ ಅನಂತ ವೀರ್ಯ ವಿಶಿಷ್ಟವಾದ ವೈಷ್ಣವೀಮಾಯಾಶಕ್ತಿಯಾಗಿರುವೆ. ಎಲೌ ದೇವಿಯೆ, ಇದೆಲ್ಲವೂ ನಿನ್ನ ಆವಿರ್ಭಾವದಿಂದ ಸಂಮೋಹಿತವಾಗಿಬಿಟ್ಟಿದೆ. ನೀನು ಪ್ರಸನ್ನಳಾದದ್ದೇ ಆದರೆ ಈ ಭೂಲೋಕದಲ್ಲಿ ಮುಕ್ತಿಗೆ ಕಾರಣಳಾಗುವೆ. ಎಲೌ ದೇವಿಯೆ, ಜಗತ್ತಿನಲ್ಲಿರುವ ಸಮಸ್ತ

ವಿದ್ಯೆಗಳೂ, ಎಲ್ಲಾ ಸ್ತ್ರೀಯರೂ ನಿನ್ನ ಅಂಶವೇ ಆಗಿರುವರು. ತಾಯೆ, ನಿನ್ನೊಬ್ಬಳಿಂದಲೇ ಇಡಿಯ ಜಗತ್ತೆಲ್ಲವೂ ತುಂಬಿಹೋಗಿದೆ. ಹೀಗಿರುವಲ್ಲಿ ನಿನ್ನನ್ನು ಸ್ತೋತ್ರಮಾಡತಕ್ಕದ್ದೇನಿದೆ ? ಮತ್ತು ಹೆಚ್ಚು-ಕಡಿಮೆ ಎಂದು ವಿಂಗಡಿಸುವದಾದರೂ (ಈ ಪ್ರಪಂಚದಲ್ಲಿ) ಏನಿದ್ದೀತು ?

ಸರ್ವಭೂತಾ ಯದಾ ದೇವೀ ಸ್ವರ್ಗಮುಕ್ತಿ ಪ್ರದಾಯಿನೀ ।
ತ್ವಂ ಸ್ತುತಾ ಸ್ತುತಯೇ ಕಾ ವಾ ಭವಂತು ಪರಮೋಕ್ತಯಃ ॥6॥

ಸರ್ವಸ್ಯ ಬುದ್ಧಿರೂಪೇಣ ಜನಸ್ಯ ಹೃದಿ ಸಂಸ್ಥಿತೇ ।
ಸ್ವರ್ಗಾಪವರ್ಗದೇ ದೇವಿ ನಾರಾಯಣಿ ನಮೋಽಸ್ತು ತೇ ॥7॥

ಕಲಾಕಾಷ್ಠಾದಿರೂಪೇಣ ಪರಿಣಾಮ ಪ್ರದಾಯಿನಿ ।
ವಿಶ್ವಸ್ಯೋಪರತೌ ಶಕ್ತೇ ನಾರಾಯಣಿ ನಮೋಽಸ್ತು ತೇ ॥8॥

6-8. ದೇವಿಯಾದ ನೀನು ಸರ್ವಭೂತಾತ್ಮಕಳೆಂದೂ ಸ್ವರ್ಗಮೋಕ್ಷಗಳನ್ನು ಅನುಗ್ರಹಿಸುವವಳೆಂದೂ ಸ್ತುತಿಸಲ್ಪಟ್ಟಮೇಲೆ ಅದಕ್ಕಿಂತ ಹೆಚ್ಚಿನ ಸ್ತುತಿಯ ಮಾತುಗಳು ಇನ್ನೇನುತಾನೆ ಇದ್ದಾವು ? ಎಲೌ ನಾರಾಯಣ (ಸಹೋದರಿಯಾದ) ದೇವಿಯೆ, ಎಲ್ಲಾ ಜನರಲ್ಲಿಯೂ ಬುದ್ಧಿರೂಪದಿಂದ ಹೃದಯದಲ್ಲಿ ನೆಲಸಿದ್ದು ಭೋಗಮೋಕ್ಷಗಳನ್ನು ಕೊಡುತ್ತಿರುವ ನಿನಗೆ ನಮಸ್ಕಾರಗಳು. ಕಾಲವನ್ನಳೆಯುವ ಕಲಾ, ಕಾಷ್ಠ-ಮುಂತಾದ ಪರಿಮಾಣಗಳ ರೂಪದಿಂದಿದ್ದುಕೊಂಡು ಜಗತ್ತನ್ನೆಲ್ಲ ಪಕ್ವಗೊಳಿಸಿ ಕಡೆಯಲ್ಲಿ ಅದು ಶಾಂತವಾಗಿ ಅದೃಶ್ಯವಾಗಿಬಿಡುವಂತೆ ಮಾಡಲು ಶಕ್ತಳಾಗಿರುವ ನಾರಾಯಣಿಯೆ, ನಿನಗೆ ನಮಸ್ಕಾರಗಳು.

ಸರ್ವಮಂಗಲಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ ।
ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣಿ ನಮೋಽಸ್ತುತೇ ॥9॥

ಸೃಷ್ಟಿಸ್ಥಿತಿವಿನಾಶಾನಾಂ ಶಕ್ತಿಭೂತೇ ಸನಾತನಿ ।
ಗುಣಾಶ್ರಯೇ ಗುಣಮಯೇ ನಾರಾಯಣಿ ನಮೋಽಸ್ತುತೇ ॥10॥

ಶರಣಾಗತದೀನಾರ್ತಪರಿತ್ರಾಣಪರಾಯಣೇ ।
ಸರ್ವಸ್ಯಾರ್ತಿಹರೇ ದೇವಿ ನಾರಾಯಣಿ ನಮೋಽಸ್ತು ತೇ ॥11॥

9-11. ಎಲ್ಲಾ ಮಂಗಳಪರಂಪರೆಗೂ ಮಂಗಳಸ್ವರೂಪಳಾದ, ಶಿವನ ಪತ್ನಿಯಾದ, ಸಕಲೇಷ್ಟಾರ್ಥಗಳನ್ನೂ ಸಾಧಿಸಿಕೊಡುವವಳಾದ ದೀನರಿಗೆ ಶರಣ್ಯಳಾದ

ಮುಕ್ಕಣ್ಣೆಯಾದ ಗೌರವರ್ಣದ ದೇಹವುಳ್ಳ, ನಾರಾಯಣಿಯೆ, ನಿನಗೆ ಮತ್ತೆ ವಂದನೆಗಳು. ಪ್ರಪಂಚದ ಉತ್ಪತ್ತಿ, ಸ್ಥಿತಿ, ಲಯಗಳನ್ನು ನಿರ್ವಹಿಸುವ ಶಕ್ತಿಯುಳ್ಳ, ಸನಾತನೆಯೆನಿಸಿದ, ಗುಣಾಶ್ರಯಳೂ ಗುಣಮಯಳೂ ಆದ ನಾರಾಯಣಿಯೆ, ನಿನಗೆ ವಂದನೆಗಳು. ಶರಣಾಗತರಾಗಿ ಬಂದ ದೀನಜನರನ್ನು ಕಾಪಾಡುವದರಲ್ಲಿಯೇ ತತ್ಪರಳಾದ, ಎಲ್ಲರ ದುಃಖಗಳನ್ನೂ ಪರಿಹರಿಸುವ, ದೇವಿಯಾದ ನಾರಾಯಣಿಯೆ, ನಿನಗೆ ನಮಸ್ಕಾರಗಳು.

ಹಂಸಯುಕ್ತ ವಿಮಾನಸ್ಥೇ ಬ್ರಹ್ಮಾಣೀರೂಪಧಾರಿಣಿ ।
ಕೌಶಾಂಭಃಕ್ಷರಿಕೇ ದೇವಿ ನಾರಾಯಣಿ ನಮೋಽಸ್ತುತೇ ॥12॥

ತ್ರಿಶೂಲಚಂದ್ರಾಹಿಧರೇ ಮಹಾವೃಷಭವಾಹಿನಿ ।
ಮಾಹೇಶ್ವರೀಸ್ವರೂಪೇಣ ನಾರಾಯಣಿ ನಮೋಽಸ್ತು ತೇ ॥13॥

ಮಯೂರಕುಕ್ಕುಟವೃತೇ ಮಹಾಶಕ್ತಿಧರೇಽನಘೇ ।
ಕೌಮಾರೀರೂಪಸಂಸ್ಥಾನೇ ನಾರಾಯಣಿ ನಮೋಽಸ್ತು ತೇ ॥14॥

12-14. ಹಂಸದಿಂದ ಕೂಡಿದ ವಿಮಾನದಲ್ಲಿ ಕುಳಿತು ಬ್ರಹ್ಮನ ರಾಣಿಯೆನಿಸಿ ಕಮಂಡಲೂದಕದಿಂದ ಶತ್ರುಗಳನ್ನು ಕ್ಷಯಗೊಳಿಸುತ್ತಿದ್ದ ನಾರಾಯಣಿಯಾದ ದೇವಿಯೆ, ನಿನಗೆ ವಂದನೆಗಳು. ತ್ರಿಶೂಲವನ್ನೂ ಚಂದ್ರಲೇಖೆಯನ್ನೂ ಹಾವುಗಳನ್ನೂ ಧರಿಸಿ ದೊಡ್ಡವೃಷಭವನ್ನೇರಿ ಮಹೇಶ್ವರನ ಶಕ್ತಿರೂಪಿಣಿಯಾಗಿ ತೋರಿಕೊಂಡ ನಾರಾಯಣಿಯೆ, ನಿನಗೆ ನಮಸ್ಕಾರಗಳು. ನವಿಲು, ಕೋಳಿಗಳಿಂದ ಪರಿವೃತಳಾಗಿ ಮಹಾಶಕ್ತ್ಯಾಯುಧವನ್ನು ಹಿಡಿದು ಕುಮಾರಸ್ವಾಮಿಯ ಶಕ್ತಿರೂಪದಿಂದಿರುವ, ಪಾಪರಹಿತಳಾದ ನಾರಾಯಣಿಯೆ, ನಿನಗೆ ವಂದನೆಗಳು.

ಶಂಖಚಕ್ರಗದಾಶಾರ್ಙ್ಗಗೃಹೀತಪರಮಾಯುಧೇ ।
ಪ್ರಸೀದ ವೈಷ್ಣವೀರೂಪೇ ನಾರಾಯಣಿ ನಮೋಽಸ್ತು ತೇ ॥15॥

ಗೃಹೀತೋಗ್ರಮಹಾಚಕ್ರೇ ದಂಷ್ಟ್ರೋದ್ಧೃತವಸುಂಧರೇ ।
ವರಾಹರೂಪಿಣಿ ಶಿವೇ ನಾರಾಯಣಿ ನಮೋಽಸ್ತು ತೇ ॥16॥

ನೃಸಿಂಹರೂಪೇಣೋಗ್ರೇಣ ಹಂತುಂ ದೈತ್ಯಾನ್ ಕೃತೋದ್ಯಮೇ ।
ತ್ರೈಲೋಕ್ಯತ್ರಾಣಸಹಿತೇ ನಾರಾಯಣಿ ನಮೋಽಸ್ತು ತೇ ॥17॥

15-17. ಶಂಖ, ಚಕ್ರ, ಗದೆ, ಶಾರ್ಙ್ಗವೆಂಬ ಬಿಲ್ಲು- ಈ ಪರಮಾಯುಧಗಳನ್ನು ಹಿಡಿದವಳಾದ, ವಿಷ್ಣುಶಕ್ತಿರೂಪಳಾದ ನಾರಾಯಣಿಯೆ, ನಿನಗೆ ನಮಸ್ಕಾರಗಳು. ಮಹಾಚಕ್ರಾಯುಧವನ್ನು ಹಿಡಿದವಳಾಗಿ ಕೋರೆದಾಡೆಗಳಿಂದ ಭೂಮಿಯನ್ನೆತ್ತಿ ತಂದವಳಾದ ವರಾಹರೂಪಿಣಿಯಾದ ಮಂಗಳಸ್ವರೂಪಳಾದ ನಾರಾಯಣಿಯೆ, ನಿನಗೆ ನಮಸ್ಕಾರಗಳು. ಉಗ್ರವಾದ ನರಸಿಂಹವೇಷದಿಂದ ರಾಕ್ಷಸರುಗಳನ್ನು ಕೊಲ್ಲಲು ಉದ್ಯುಕ್ತಳಾದ ಹಾಗೂ ಮೂರುಲೋಕಗಳನ್ನೂ ಕಾಪಾಡುವ ಕಾರ್ಯದಿಂದ ಕೂಡಿರುವ ನಾರಾಯಣಿಯೆ, ನಿನಗೆ ನಮಸ್ಕಾರಗಳು.

ಕಿರೀಟಿನಿ ಮಹಾವಜ್ರೇ ಸಹಸ್ರನಯನೋಜ್ಜ್ವಲೇ ।
ವೃತ್ರಪ್ರಾಣಹರೇ ಚೈಂದ್ರಿ ನಾರಾಯಣಿ ನಮೋಽಸ್ತು ತೇ ॥18॥

ಶಿವದೂತೀಸ್ವರೂಪೇಣ ಹತದೈತ್ಯಮಹಾಬಲೇ ।
ಘೋರರೂಪೇ ಮಹಾರಾವೇ ನಾರಾಯಣಿ ನಮೋಽಸ್ತು ತೇ ॥19॥

ದಂಷ್ಟ್ರಾಕರಾಲವದನೇ ಶಿರೋಮಾಲಾವಿಭೂಷಣೇ ।
ಚಾಮುಂಡೇ ಮುಂಡಮಥನೇ ನಾರಾಯಣಿ ನಮೋಽಸ್ತು ತೇ ॥20॥

18-20. ಕಿರೀಟವನ್ನೂ ಮಹಾವಜ್ರಾಯುಧವನ್ನೂ ಧರಿಸಿ ಸಾವಿರ ಕಣ್ಣುಗಳಿಂದ ಹೊಳೆಯುತ್ತಿರುವವಳಾಗಿ ವೃತ್ರಾಸುರನ ಪ್ರಾಣಗಳನ್ನು ನಾಶಮಾಡಿದ ಇಂದ್ರಶಕ್ತಿರೂಪಳಾದ ನಾರಾಯಣಿಯೆ, ನಿನಗೆ ವಂದನೆಗಳು. ಶಿವದೂತಿಯ ರೂಪದಿಂದ ದೈತ್ಯರ ಮಹಾಸೈನ್ಯವನ್ನು ಸಂಹಾರಮಾಡಿದ, ಭಯಂಕರರೂಪಳೂ, ಹೆಚ್ಚಿನ ಘೋಷ(ಶಬ್ದ)ವುಳ್ಳವಳೂ ಆದ ನಾರಾಯಣಿಯೆ, ನಿನಗೆ ವಂದನೆಗಳು. ಕೋರೆದಾಡೆಗಳಿಂದ ಭಯಾನಕಮುಖವುಳ್ಳವಳಾದ, ತಲೆಬುರುಡೆಗಳ ಮಾಲೆಗಳಿಂದ ಅಲಂಕೃತಳಾದ, ಮುಂಡನೆಂಬ ರಾಕ್ಷಸನನ್ನು ಚೆಂಡಾಡಿದ ಚಾಮುಂಡಿಯೆನಿಸಿದ ನಾರಾಯಣಿಯೆ, ನಿನಗೆ ನಮಸ್ಕಾರಗಳು.

ಲಕ್ಷ್ಮಿ ಲಜ್ಜೇ ಮಹಾವಿದ್ಯೇ ಶ್ರದ್ಧೇ ಪುಷ್ಟಿ ಸ್ವಧೇ ಧ್ರುವೇ ।
ಮಹಾರಾತ್ರಿ ಮಹಾವಿದ್ಯೇ ನಾರಾಯಣಿ ನಮೋಽಸ್ತು ತೇ ॥21॥

ಮೇಧೇ ಸರಸ್ವತಿ ವರೇ ಭೂತಿ ಬಾಭ್ರವಿ ತಾಮಸಿ ।
ನಿಯತೇ ತ್ವಂ ಪ್ರಸೀದೇಶೇ ನಾರಾಯಣಿ ನಮೋಽಸ್ತು ತೇ ॥22॥

ಸರ್ವಸ್ವರೂಪೇ ಸರ್ವೇಶೇ ಸರ್ವಶಕ್ತಿ ಸಮನ್ವಿತೇ ।
ಭಯೇಭ್ಯಸ್ತ್ರಾಹಿ ನೋ ದೇವಿ ದುರ್ಗೇ ದೇವಿ ನಮೋಽಸ್ತು ತೇ ॥23॥

21-23. ಎಲೌ ಲಕ್ಷ್ಮಿಯೆ, ಲಜ್ಜೆಯೆ, ಮಹಾವಿದ್ಯೆಯೆ, ಶ್ರದ್ಧೆಯೆ, ಪುಷ್ಟಿಯೆ, ಸ್ವಧಾದೇವಿಯೆ, ಧ್ರುವಳೆ, ಮಹಾರಾತ್ರಿಯೆ, ಮಹಾವಿದ್ಯೆಯೆ, ನಾರಾಯಣಿ, ನಿನಗೆ ವಂದನೆಗಳು. ಎಲೌ ಮೇಧೆಯೆ, ಸರಸ್ವತಿಯೆ, ಶ್ರೇಷ್ಠಳೆ, ಐಶ್ವರ್ಯಯುಕ್ತಳೆ, ಧಾರಣಾಶಕ್ತಿರೂಪಳೆ, ತಾಮಸಿಯೆ, ಅದೃಷ್ಟರೂಪಳೆ, ನೀನು ಪ್ರಸನ್ನಳಾಗು ; ಎಲೌ ಈಶ್ವರಿಯಾದ ನಾರಾಯಣಿಯೆ, ನಿನಗೆ ವಂದನೆಗಳು. ಸರ್ವಸ್ವರೂಪಳೆ, ಸರ್ವಕ್ಕೂ ಒಡೆಯಳೆ, ಸರ್ವಶಕ್ತಿ ಸಮನ್ವಿತಳೆ, ದುರ್ಗಾದೇವಿಯೆ, ನೀನು ಭಯಗಳಿಂದ ನಮ್ಮನ್ನು ಕಾಪಾಡು. ನಿನಗೆ ನಮಸ್ಕಾರಗಳು.

**ಏತತ್ತೇ ವದನಂ ಸೌಮ್ಯಂ ಲೋಚನತ್ರಯಭೂಷಿತಮ್ ।**
**ಪಾತು ನಃ ಸರ್ವಭೀತಿಭ್ಯಃ ಕಾತ್ಯಾಯನಿ ನಮೋಽಸ್ತು ತೇ ॥24॥**

**ಜ್ವಾಲಾಕರಾಲಮತ್ಯುಗ್ರಮಶೇಷಾಸುರಸೂದನಮ್ ।**
**ತ್ರಿಶೂಲಂ ಪಾತು ನೋ ಭೀತೇರ್ಭದ್ರಕಾಳಿ ನಮೋಽಸ್ತು ತೇ ॥25॥**

**ಹಿನಸ್ತಿ ದೈತ್ಯತೇಜಾಂಸಿ ಸ್ವನೇನಾಪೂರ್ಯ ಯಾ ಜಗತ್ ।**
**ಸಾ ಘಂಟಾ ಪಾತು ನೋ ದೇವಿ ಪಾಪೇಭ್ಯೋ ನಸ್ಸುತಾನಿವ ॥26॥**

**ಅಸುರಾಸೃಗ್ವಸಾಪಂಕಚರ್ಚಿತಸ್ತೇ ಕರೋಜ್ಜ್ವಲಃ ।**
**ಶುಭಾಯ ಖಡ್ಗೋ ಭವತು ಚಂಡಿಕೇ ತ್ವಾಂ ನತಾ ವಯಮ್ ॥27॥**

24-27. ಮೂರು ಕಣ್ಣುಗಳಿಂದಲಂಕೃತವಾದ ಈ ಸೌಮ್ಯವಾದ ನಿನ್ನ ಮುಖವು ನಮ್ಮನ್ನು ಎಲ್ಲಾ ಭಯಗಳಿಂದಲೂ ರಕ್ಷಿಸಲಿ ! ಎಲೌ ಕಾತ್ಯಾಯನಿಯೆ, ನಿನಗೆ ವಂದನೆಗಳು. ಅತಿಭಯಂಕರವಾದ ಬೆಂಕಿಯ ಜ್ವಾಲೆಗಳಿಂದ ಕೂಡಿದ ಹಾಗೂ ಸಮಸ್ತರಾಕ್ಷಸರನ್ನೂ ಸದೆಬಡಿಯುವ ನಿನ್ನ ತ್ರಿಶೂಲವು ನಮ್ಮನ್ನು ಭಯದಿಂದ ಕಾಪಾಡಲಿ. ಎಲೌ ಭದ್ರಕಾಳಿಯೆ, ನಿನಗೆ ನಮಸ್ಕಾರಗಳು. ಇನ್ನು ಯಾವ ನಿನ್ನಲ್ಲಿರುವ ಘಂಟೆಯು ತನ್ನ ಧ್ವನಿಯಿಂದ ಜಗತ್ತನ್ನೆಲ್ಲ ವ್ಯಾಪಿಸಿಕೊಂಡು ರಾಕ್ಷಸರ ತೇಜಸ್ಸನ್ನೆಲ್ಲ ಪರಾಭವಗೊಳಿಸುತ್ತಿದೆಯೋ ಅದು ಪಾಪಗಳಿಂದ - ತಾಯಿಯು ಮಕ್ಕಳನ್ನು ಹೇಗೋ ಹಾಗೆ - ನಮ್ಮನ್ನು ಕಾಪಾಡಲಿ. ಮತ್ತು ರಾಕ್ಷಸರ ರಕ್ತಮಾಂಸಗಳ ಕೆಸರಿನಿಂದ ಲಿಪ್ತವಾಗಿದ್ದು ನಿನ್ನ ಕೈಯಲ್ಲಿ ಹೊಳೆಯುತ್ತಿರುವ ಕತ್ತಿಯು ನಮ್ಮಗಳ ಶುಭಪರಂಪರೆಗೆ ಕಾರಣವಾಗಲಿ ! ಎಲೌ ಚಂಡಿಕೆಯೆ, ನಾವು ನಿನ್ನನ್ನು ನಮಸ್ಕರಿಸುವೆವು.

ರೋಗಾನಶೇಷಾನಪಹಂಸಿ ತುಷ್ಟಾ
ರುಷ್ಟಾತು ಕಾಮಾನ್ ಸಕಲಾನಭೀಷ್ಟಾನ್ ।
ತ್ವಾಮಾಶ್ರಿತಾನಾಂ ನ ವಿಪನ್ನರಾಣಾಂ
ತ್ವಾಮಾಶ್ರಿತಾ ಹ್ಯಾಶ್ರಯತಾಂ ಪ್ರಯಾಂತಿ ॥28॥

ಏತತ್ಕೃತಂ ಯತ್ಕದನಂ ತ್ವಯಾದ್ಯ
ಧರ್ಮದ್ವಿಷಾಂ ದೇವಿ ಮಹಾಸುರಾಣಾಮ್ ।
ರೂಪೈರನೇಕೈರ್ಬಹುಧಾತ್ಮಮೂರ್ತಿಂ
ಕೃತ್ವಾಂಬಿಕೇ ತತ್ಪ್ರಕರೋತಿ ಕಾನ್ಯಾ ॥29॥

28-29. ನೀನು ಸಂತುಷ್ಟಳಾದರೆ ಎಲ್ಲಾ ರೋಗಗಳನ್ನೂ ವಿನಾಶಗೊಳಿಸುವೆ. ಆದರೆ ಕುಪಿತಳಾದಾಗ ಎಲ್ಲಾ ಮನೋರಥಗಳನ್ನೂ ಮಣ್ಣು ಪಾಲು ಮಾಡಿಬಿಡುವೆ. ಹೀಗಿರುವದರಿಂದ ನಿನ್ನನ್ನು ಆಶ್ರಯಿಸಿರುವ ಮನುಷ್ಯರಿಗೆ ಯಾವ ಸಂಕಟವೂ ಸಂಭವಿಸುವದಿಲ್ಲ. ಅಷ್ಟೇ ಅಲ್ಲ, ನಿನ್ನನ್ನು ಆಶ್ರಯಿಸಿದವರು ಬೇರೊಬ್ಬರಿಗೂ ಆಶ್ರಯದಾತರಾಗುವರು. ಎಲೌ ದೇವಿಯೆ, ಧರ್ಮವನ್ನು ದ್ವೇಷಿಸುವ ರಾಕ್ಷಸರೊಡನೆ ಈಗ ನೀನು ಕೈಗೊಂಡ ಯಾವ ಯುದ್ಧವುಂಟೋ-ಹಾಗೂ ನೀನೊಬ್ಬಳೇ ಅನೇಕವಾದ ಬೇರೆಬೇರೆಯ ಶಕ್ತಿರೂಪಗಳಿಂದ ಕಾಣಿಸಿಕೊಂಡು ಕಾದಾಡಿದೆಯೋ-ಆ ಕಾರ್ಯವನ್ನು ಎಲೌ ತಾಯಿಯೆ, ನೀನಲ್ಲದೆ ಮತ್ತಾರು ಕೈಗೊಂಡಾರು ?

ವಿದ್ಯಾಸು ಶಾಸ್ತ್ರೇಷು ವಿವೇಕದೀಪೇ-
ಷ್ವಾದ್ಯೇಷು ವಾಕ್ಯೇಷು ಚ ಕಾ ತ್ವದನ್ಯಾ ।
ಮಮತ್ವಗರ್ತೇಽತಿಮಹಾಂಧಕಾರೇ
ವಿಭ್ರಾಮಯತ್ಯೇತದತೀವ ವಿಶ್ವಮ್ ॥30॥

ರಕ್ಷಾಂಸಿ ಯತ್ರೋಗ್ರವಿಷಾಶ್ಚ ನಾಗಾ
ಯತ್ರಾರಯೋ ದಸ್ಯುಬಲಾನಿ ಯತ್ರ ।
ದಾವಾನಲೋ ಯತ್ರ ತಥಾಬ್ಧಿಮಧ್ಯೇ
ತತ್ರ ಸ್ಥಿತಾ ತ್ವಂ ಪರಿಪಾಸಿ ವಿಶ್ವಮ್ ॥31॥

30-31. ಅವಿದ್ಯೆಯನ್ನು ಕಳೆದು ವಿದ್ಯೆಯನ್ನುಂಟುಮಾಡುವ- ಪ್ರದೀಪದಂತಿರುವ-ಶಾಸ್ತ್ರಗಳು, ತಿಳಿವಳಿಕೆಯಲ್ಲಿಯೂ ಆದ್ಯವಾಕ್ಯಗಳೆನಿಸಿರುವ (ಶ್ರುತಿ ಶಿರೋರತ್ನಗಳಾದ ವೇದಾಂತವಾಕ್ಯಗಳಲ್ಲಿಯೂ) ನೀನು (ಪ್ರತಿಪಾದ್ಯ)ಳಾಗಿ

ಇದ್ದುಕೊಂಡಿದ್ದರೂ ಜಗತ್ತಿನ (ಜನರು) ಕಂಡುಕೊಳ್ಳದೆ ಹೆಚ್ಚಿನ ಕಗ್ಗತ್ತಲೆಯೆನಿಸಿರುವ ನನ್ನದೆಂಬ ಅಭಿಮಾನದ ಗುಂಡಿಯಲ್ಲಿ ಬಿದ್ದು ದಿಕ್ಕುಗಾಣದೆ ಇರುವರು. (ಇದೊಂದು ದುರಂತವೇ ಸರಿ). ನೀನಾದರೊ, ಎಲ್ಲಿ ರಾಕ್ಷಸರೂ, ಉಗ್ರವಿಷವುಳ್ಳ ಹಾವುಗಳೂ, ಶತ್ರುಜನರೂ, ಕಳ್ಳರ ಗುಂಪೂ, ಕಾಡುಬೆಂಕಿಯೂ, ಸಮುದ್ರದ ಮಧ್ಯಭಾಗವೂ ಇರುವವೋ ಅಂಥ (ಅಪಾಯ ಸ್ಥಳಗಳಲ್ಲೆಲ್ಲ) ಇದ್ದುಕೊಂಡು ಪ್ರಪಂಚವನ್ನು (ಭಕ್ತವೃಂದವನ್ನು) ಕಾಪಾಡುತ್ತಿರುವೆ.

ವಿಶ್ವೇಶ್ವರಿ ತ್ವಂ ಪರಿಪಾಸಿ ವಿಶ್ವಂ
ವಿಶ್ವಾತ್ಮಿಕಾ ಧಾರಯಸೀತಿ ವಿಶ್ವಮ್ ।
ವಿಶ್ವೇಶವಂದ್ಯಾ ಭವತೀ ಭವಂತಿ
ವಿಶ್ವಾಶ್ರಯಾ ಯೇ ತ್ವಯಿ ಭಕ್ತಿನಮ್ರಾಃ ॥32॥

ದೇವಿ ಪ್ರಸೀದ ಪರಿಪಾಲಯ ನೋಽರಿಭೀತೇ-
ರ್ನಿತ್ಯಂ ಯಥಾಸುರವಧಾದಧುನೈವ ಸದ್ಯಃ ।
ಪಾಪಾನಿ ಸರ್ವಜಗತಾಂ ಪ್ರಶಮಂ ನಯಾಶು
ಉತ್ಪಾತಪಾಕಜನಿತಾಂಶ್ಚ ಮಹೋಪಸರ್ಗಾನ್ ॥33॥

ಪ್ರಣತಾನಾಂ ಪ್ರಸೀದ ತ್ವಂ ದೇವಿ ವಿಶ್ವಾರ್ತಿಹಾರಿಣಿ ।
ತ್ರೈಲೋಕ್ಯವಾಸಿನಾಮೀಡ್ಯೇ ಲೋಕಾನಾಂ ವರದಾ ಭವ ॥34॥

32-34. ನೀನು ವಿಶ್ವಕ್ಕೆಲ್ಲ ಆತ್ಮರೂಪಳಾಗಿ ವಿಶ್ವವನ್ನು ಧರಿಸಿರುವೆ ಯಾದ್ದರಿಂದ ವಿಶ್ವೇಶ್ವರಿಯೆನಿಸಿ ಜಗತ್ತನ್ನು ಸಲಹುತ್ತಿರುವೆ. ನೀನು ಜಗತ್ತಿನೊಡೆಯ ರೆನಿಸಿದವರೆಲ್ಲರಿಗೂ ವಂದ್ಯಳಾಗಿರುವೆ. ಆದ್ದರಿಂದಲೇ ನಿನ್ನಲ್ಲಿ ಯಾರು ಭಕ್ತಿಯಿಂದ ಬಾಗಿದವರಾಗಿರುವರೋ ಅವರು ಜಗತ್ತಿಗೆ ಆಶ್ರಯರಾಗುವರು. ಎಲೌ ದೇವಿಯೆ, ನೀನು ಪ್ರಸನ್ನಳಾಗು. ಈಗ ಹೇಗೆ ರಾಕ್ಷಸರ ವಧೆಯಿಂದ ನಮ್ಮನ್ನು ರಕ್ಷಿಸಿದೆಯೋ ಹಾಗೆ ಶತ್ರುಗಳ ಭಯದಿಂದ ನಮ್ಮನ್ನು ಕಾಪಾಡು. ಮತ್ತು ಸಮಸ್ತಜನರ ಪಾಪಗಳನ್ನೂ ವಿಶೇಷವಾಗಿ ನಾಶಗೊಳಿಸುವವಳಾಗು. ಹಾಗೂ ಉತ್ಪಾತಗಳಿಂದುಂಟಾದ ದೊಡ್ಡ ಸಂಕಟಗಳನ್ನೂ ಪರಿಹರಿಸುವವಳಾಗು. ಎಲೌ ದೇವಿಯೆ, ವಿಶ್ವದ ದುಃಖವನ್ನು ನಾಶ ಗೊಳಿಸುವವಳೆ, ನಮಸ್ಕರಿಸಿದವರಿಗೆ ಪ್ರಸನ್ನಳಾಗು. ಮೂರುಲೋಕಗಳ ನಿವಾಸಿ ಗಳಿಗೂ ನೀನು ಸ್ತೋತ್ರಾರ್ಹಳಾಗಿರುವೆ. ಜನರಿಗೆಲ್ಲ ವರಗಳನ್ನು ದಯಪಾಲಿಸು.

ದೇವ್ಯುವಾಚ-

ವರದಾಹಂ ಸುರಗಣಾ ವರಂ ಯನ್ಮನಸೇಚ್ಛಥ ।
ತಂ ವೃಣುಧ್ವಂ ಪ್ರಯಚ್ಛಾಮಿ ಜಗತಾಮುಪಕಾರಕಮ್ ॥35॥

35. ದೇವಿಯಿಂತೆಂದಳು : ಎಲೈ ದೇವಗಣಗಳಿರಾ, ನೀವು ಮನಸ್ಸಿನಲ್ಲಿ ಏನು ಬಯಸಿರುವಿರೋ ಅದನ್ನು ಕೇಳಿಕೊಳ್ಳಿರಿ. ನಾನು ವರದಾನಮಾಡಲಿದ್ದೇನೆ. ಜಗತ್ತಿಗೆ ಉಪಕಾರವಾಗುವಂಥದ್ದನ್ನು ಕೊಡುವೆನು.

ದೇವಾ ಊಚುಃ –

ಸರ್ವಬಾಧಾಪ್ರಶಮನಂ ತ್ರೈಲೋಕ್ಯಸ್ಯಾಖಿಲೇಶ್ವರಿ ।
ಏವಮೇವ ತ್ವಯಾ ಕಾರ್ಯಮಸ್ಮದ್ವೈರಿವಿನಾಶನಮ್ ॥36॥

36. ದೇವತೆಗಳಿಂತೆಂದರು : ಅಖಿಲಾಂಡೇಶ್ವರಿಯೆ, ಮೂರು ಲೋಕಗಳಲ್ಲಿನ ಎಲ್ಲಾ ವಿಧವಾದ ಸಂಕಟಗಳೂ ಶಾಂತವಾಗುವ ವರವನ್ನು ಕೊಡುವವಳಾಗು. ಹೀಗೆಯೇ ನಮ್ಮ ಶತ್ರುಗಳನ್ನು ನೀನು (ಸಂದರ್ಭಾನುಸಾರವಾಗಿ) ನಾಶಗೊಳಿಸುತ್ತಿರಬೇಕು.

ದೇವ್ಯುವಾಚ–

ವೈವಸ್ವತೇಽನ್ತರೇ ಪ್ರಾಪ್ತೇ ಅಷ್ಟಾವಿಂಶತಿಮೇ ಯುಗೇ ।
ಶುಂಭೋ ನಿಶುಂಭಶ್ಚೈವಾನ್ಯಾ ಉತ್ಪತ್ಸ್ಯೇತೇ ಮಹಾಸುರೌ ॥37॥

ನಂದಗೋಪಗೃಹೇ ಜಾತಾ ಯಶೋದಾಗರ್ಭಸಂಭವಾ ।
ತತಸ್ತೌ ನಾಶಯಿಷ್ಯಾಮಿ ವಿಂಧ್ಯಾಚಲನಿವಾಸಿನೀ ॥38॥

37-38. ದೇವಿಯಿಂತೆಂದಳು : ಇಪ್ಪತ್ತೆಂಟನೆಯ ವೈವಸ್ವತಮನ್ವಂತರವು ಬರಲಾಗಿ ಮಹಾರಾಕ್ಷಸರಾದ ಶುಂಭನಿಶುಂಭರೇ ಬೇರೆಯ (ಹೆಸರಿನಿಂದ) ಹುಟ್ಟಲಿರುವರು. ಆಗ ನಾನು ನಂದಗೋಪನ ಮನೆಯಲ್ಲಿ ಯಶೋದಾದೇವಿಯ ಉದರದಲ್ಲಿ ಹುಟ್ಟಿದವಳಾಗಿ, ಅನಂತರ ಅವರಿಬ್ಬರನ್ನೂ ನಾಶಗೊಳಿಸಿ ವಿಂಧ್ಯಾಚಲವನ್ನು ತೌರೂರಾಗಿ ಮಾಡಿಕೊಂಡು ನೆಲಸುವೆನು.

ಪುನರಪ್ಯತಿರೌದ್ರೇಣ ರೂಪೇಣ ಪೃಥಿವೀತಲೇ ।
ಅವತೀರ್ಯ ಹನಿಷ್ಯಾಮಿ ವೈಪ್ರಚಿತ್ತಾಂಸ್ತು ದಾನವಾನ್ ॥39॥

ಭಕ್ಷಯಂತ್ಯಾಶ್ಚ ತಾನುಗ್ರಾನ್ ವೈಪ್ರಚಿತ್ತಾನ್ ಮಹಾಸುರಾನ್ ।
ರಕ್ತಾ ದಂತಾ ಭವಿಷ್ಯಂತಿ ದಾಡಿಮೀಕುಸುಮೋಪಮಾಃ ॥40॥

ತತೋ ಮಾಂ ದೇವತಾಃ ಸ್ವರ್ಗೇ ಮರ್ತ್ಯಲೋಕೇ ಚ ಮಾನವಾಃ ।
ಸ್ತುವಂತೋ ವ್ಯಾಹರಿಷ್ಯಂತಿ ಸತತಂ ರಕ್ತದಂತಿಕಾಮ್ ॥41॥

39-41. ಮತ್ತೊಮ್ಮೆ ಅತಿಭಯಂಕರವಾದ ರೂಪದಿಂದ ಭೂಲೋಕದಲ್ಲಿ ಅವತಾರಮಾಡಿ ವೈಪ್ರಚಿತ್ತರೆಂಬ ದಾನವರನ್ನು ಕೊಲ್ಲುವೆನು. ಕ್ರೂರಿಗಳಾದ, ಮಹಾರಾಕ್ಷಸರಾದ ಆ ವೈಪ್ರಚಿತ್ತರುಗಳನ್ನು ತಿನ್ನುವಾಗ ನನ್ನ ಹಲ್ಲುಗಳೆಲ್ಲವೂ ದಾಳಿಂಬೆಹೂವಿನ (ಕೆಂಪು) ಬಣ್ಣದಂತೆ ಕೆಂಪಾಗಿಬಿಡುವವು. ಅನಂತರ ಸ್ವರ್ಗಲೋಕದಲ್ಲಿನ ದೇವತೆಗಳೂ ಮನುಷ್ಯಲೋಕದಲ್ಲಿನ ಮಾನವರೂ ನನ್ನನ್ನು ಸ್ತೋತ್ರಮಾಡುತ್ತಾ ''ರಕ್ತದಂತಿಕಾ'' ದೇವಿಯೆಂದೇ ಯಾವಾಗಲೂ ಕರೆಯುವರು.

ಭೂಯಶ್ಚ ಶತವಾರ್ಷಿಕ್ಯಾಮನಾವೃಷ್ಟ್ಯಾಮನಂಭಸಿ ।
ಮುನಿಭಿಃ ಸಂಸ್ತುತಾ ಭೂಮೌ ಸಂಭವಿಷ್ಯಾಮ್ಯಯೋನಿಜಾ ॥42॥

ತತಃ ಶತೇನ ನೇತ್ರಾಣಾಂ ನಿರೀಕ್ಷಿಷ್ಯಾಮಿ ಯನ್ಮುನೀನ್ ।
ಕೀರ್ತಯಿಷ್ಯಂತಿ ಮನುಜಾಃ ಶತಾಕ್ಷೀಮಿತಿ ಮಾಂ ತತಃ ॥43॥

42-43. ಮತ್ತೊಮ್ಮೆ ನೂರುವರ್ಷಗಳ ಮಳೆಬಾರದ ನೀರಿಲ್ಲದ ಬರಗಾಲದಲ್ಲಿ ಋಷಿಗಳಿಂದ ಸ್ತುತಿಸಲ್ಪಟ್ಟವಳಾಗಿ ಅಯೋನಿಜಳಾಗಿ ಭೂಮಿಯಲ್ಲಿ ಅವತಾರಮಾಡುವೆನು. ಅನಂತರ ಒಂದುನೂರು ಕಣ್ಣುಗಳಿಂದ ಋಷಿಗಳನ್ನು ನಾನು ನೋಡುವೆನಾದ್ದರಿಂದ ಆಮೇಲೆ ನನ್ನನ್ನು ಮಾನವರು ಶತಾಕ್ಷಿಯೆಂದೇ ಗಾನಮಾಡುವರು.

ತತೋಽಹಮಖಿಲಂ ಲೋಕಮಾತ್ಮದೇಹಸಮುದ್ಭವೈಃ ।
ಭರಿಷ್ಯಾಮಿ ಸುರಾಃ ಶಾಕೈರಾವೃಷ್ಟೇಃ ಪ್ರಾಣಧಾರಕೈಃ ॥44॥
ಶಾಕಂಭರೀತಿ ವಿಖ್ಯಾತಿಂ ತದಾ ಯಾಸ್ಯಾಮ್ಯಹಂ ಭುವಿ ।

44. ಎಲೈ ದೇವತೆಗಳಿರಾ, ಅನಂತರ ನಾನು ನನ್ನ ಶರೀರದಿಂದುಂಟಾದ ತರಕಾರಿಗಳಿಂದ ಲೋಕದ ಜನರ ಪ್ರಾಣಧಾರಣೆಗಾಗಿ ಮಳೆಯು ಬರುವವರೆಗೂ (ಎಲ್ಲವನ್ನೂ) ಕಾಪಾಡುವೆನು. ಆಗ ಭೂಲೋಕದಲ್ಲಿ ನಾನು ಶಾಕಂಭರೀ-ಎಂಬ ಹೆಸರನ್ನು ಹೊಂದಿ ಪ್ರಸಿದ್ಧಳಾಗುವೆನು.

ತತ್ರೈವ ಚ ವಧಿಷ್ಯಾಮಿ ದುರ್ಗಮಾಖ್ಯಂ ಮಹಾಸುರಮ್ ।
ದುರ್ಗಾ ದೇವೀತಿ ವಿಖ್ಯಾತಂ ತನ್ಮೇ ನಾಮ ಭವಿಷ್ಯತಿ ॥45॥

45. ಅದೇ (ಅವತಾರದಲ್ಲಿಯೇ) ದುರ್ಗಮನೆಂಬ ಮಹಾರಾಕ್ಷಸನನ್ನು ಕೊಂದುಹಾಕುವೆನು. ಆಗ ನನಗೆ ದುರ್ಗಾದೇವಿಯೆಂಬ ಹೆಸರುಂಟಾಗುವದು.

ಪುನಶ್ಚಾಹಂ ಯದಾ ಭೀಮಂ ರೂಪಂ ಕೃತ್ವಾ ಹಿಮಾಚಲೇ ।
ರಕ್ಷಾಂಸಿ ಭಕ್ಷಯಿಷ್ಯಾಮಿ ಮುನೀನಾಂ ತ್ರಾಣಕಾರಣಾತ್ ॥46॥

ತದಾ ಮಾಂ ಮುನಯಃ ಸರ್ವೇ ಸ್ತೋಷ್ಯಂತ್ಯಾನಮ್ರಮೂರ್ತಯಃ ।
ಭೀಮಾದೇವೀತಿ ವಿಖ್ಯಾತಂ ತನ್ಮೇ ನಾಮ ಭವಿಷ್ಯತಿ ॥47॥

46-47. ಮತ್ತೊಮ್ಮೆ ನಾನು ಭಯಂಕರವಾದ ರೂಪವನ್ನು ಧರಿಸಿ ಹಿಮಾಚಲದಲ್ಲಿರುವ ಋಷಿಮುನಿಗಳನ್ನು ಕಾಪಾಡುವ ಸಲುವಾಗಿ ರಾಕ್ಷಸರನ್ನೆಲ್ಲ ತಿಂದುಹಾಕುವೆನು. ಆಗ ನನ್ನನ್ನು ಎಲ್ಲಾ ಋಷಿಗಳೂ ಬಾಗಿದ ಶರೀರವುಳ್ಳವರಾಗಿ ಸ್ತೋತ್ರಮಾಡುವರು. ಆಗ ನನ್ನ ಹೆಸರು ಭೀಮಾದೇವಿಯೆಂದು ಪ್ರಸಿದ್ಧವಾಗುವದು.

ಯದಾರುಣಾಖ್ಯಃ ತ್ರೈಲೋಕ್ಯೇ ಮಹಾಬಾಧಾಂ ಕರಿಷ್ಯತಿ ।
ತದಾಹಂ ಭ್ರಾಮರಂ ರೂಪಂ ಕೃತ್ವಾಽಸಂಖ್ಯೇಯಷಟ್ಪದಮ್ ॥48॥

ತ್ರೈಲೋಕ್ಯಸ್ಯ ಹಿತಾರ್ಥಾಯ ವಧಿಷ್ಯಾಮಿ ಮಹಾಸುರಮ್ ।
ಭ್ರಾಮರೀತಿ ಚ ಮಾಂ ಲೋಕಸ್ತದಾ ಸ್ತೋಷ್ಯನ್ತಿ ಸರ್ವತಃ ॥49॥

48-49. ಯಾವಾಗ ಅರುಣನೆಂಬ (ದೈತ್ಯನು) ಮೂರು ಲೋಕಗಳಿಗೂ ಹೆಚ್ಚಿನ ತೊಂದರೆಯನ್ನುಂಟುಮಾಡುವನೋ ಆಗ ನಾನು ದುಂಬಿಯ ರೂಪವನ್ನು ಧರಿಸಿ ಅಗಣಿತಸಂಖ್ಯೆಯ ದುಂಬಿಗಳನ್ನು ಸೃಷ್ಟಿಸಿ ಮೂರು ಲೋಕಗಳ ಹಿತಕ್ಕಾಗಿ ಆ ಮಹಾಸುರನನ್ನು ಕೊಲ್ಲುವೆನು. ಆಗ ಲೋಕದ ಜನರು ಎಲ್ಲೆಲ್ಲಿಯೂ ನನ್ನನ್ನು ಭ್ರಾಮರೀ (ಭ್ರಮರಾಂಬೆ) ಎಂದು ಹೊಗಳುವರು.

ಇತ್ಥಂ ಯದಾ ಯದ ಬಾಧಾ ದಾನವೋತ್ಥಾ ಭವಿಷ್ಯತಿ ।
ತದಾ ತದಾವತೀರ್ಯಾಹಂ ಕರಿಷ್ಯಾಮ್ಯರಿಸಂಕ್ಷಯಮ್ ॥50॥

50. ಹೀಗೆ ಯಾವಯಾವಾಗ ದಾನವರಕಡೆಯಿಂದ ತೊಂದರೆಯು (ಲೋಕಕ್ಕೆ) ಉಂಟಾಗಲಿರುವದೋ ಆಯಾ ಕಾಲದಲ್ಲಿ ನಾನು ಅವತಾರಮಾಡಿ ಶತ್ರುನಾಶವನ್ನು ಕೈಗೊಳ್ಳುವೆನು.

ಇತಿ ಶ್ರೀ ಮಾರ್ಕಂಡೇಯಪುರಾಣೇ ದೇವೀಮಹಾತ್ಮ್ಯೇ
ಏಕಾದಶೋಽಧ್ಯಾಯಃ

# ಹನ್ನೆರಡನೆಯ ಅಧ್ಯಾಯ

ಧ್ಯಾನಮ್ –

ವಿದ್ಯುದ್ದಾಮಸಮಪ್ರಭಾಂ ಮೃಗಪತಿಸ್ಕಂಧಸ್ಥಿತಾಂ ಭೀಷಣಾಂ
ಕನ್ಯಾಭಿಃ ಕರವಾಲಖೇಟವಿಲಸದ್ ಹಸ್ತಾಭಿರಾಸೇವಿತಾಮ್ ।
ಹಸ್ತೈಶ್ಚಕ್ರಗದಾಸಿಖೇಟವಿಶಿಖಾಂಶ್ಚಾಪಂ ಗುಣಂ ತರ್ಜನೀಂ
ಬಿಭ್ರಾಣಾಮನಲಾತ್ಮಿಕಾಂ ಶಶಿಧರಾಂ ದುರ್ಗಾಂ ತ್ರಿನೇತ್ರಾಂ ಭಜೇ ।

ಮಿಂಚಿನ ಬಳ್ಳಿಗೆ ಸಮಾನವಾದ ಕಾಂತಿಯುಳ್ಳ, ಸಿಂಹದ ಹೆಗಲನ್ನೇರಿ ಕುಳಿತವಳಾದ, ಭಯಂಕರಾಕಾರಳಾದ, ಕತ್ತಿ, ಗುರಾಣಿಗಳಿಂದ ಅಲಂಕೃತವಾದ ಕೈಗಳುಳ್ಳ ಕನ್ನಿಕೆಯರಿಂದ ಸೇವ್ಯಳಾದ, (ತಾನಾದರೊ), ಚಕ್ರ, ಗದೆ, ಕತ್ತಿ, ಗುರಾಣಿ, ಬಾಣ, ಬಿಲ್ಲುಗಳಿಂದ ಕೂಡಿದ ಕೈಗಳಿಂದ ವಿರಾಜಮಾನಳಾಗಿ ತೋರುಬೆರಳಿನಿಂದ (ಬಿಲ್ಲಿನ) ಹುರಿಯನ್ನು ಮೀಟುತ್ತಿರುವಳಾದ, ಅಗ್ನಿದೇವತಾಸ್ವರೂಪಳಾದ, ಚಂದ್ರಾರ್ಧಶೇಖರಳಾದ ಮುಕ್ಕಣ್ಣೆಯಾದ ದುರ್ಗಾದೇವಿಯನ್ನು ಭಜಿಸುವೆನು.

ಓಂ ದೇವ್ಯುವಾಚ–

ಏಭಿಃ ಸ್ತವೈಶ್ಚ ಮಾಂ ನಿತ್ಯಂ ಸ್ತೋಷ್ಯತೇ ಯಃ ಸಮಾಹಿತಃ ।
ತಸ್ಯಾಹಂ ಸಕಲಾಂ ಬಾಧಾಂ ನಾಶಯಿಷ್ಯಾಮ್ಯಸಂಶಯಮ್ ॥1॥

ಮಧುಕೈಟಭನಾಶಂ ಚ ಮಹಿಷಾಸುರಘಾತನಮ್ ।
ಕೀರ್ತಯಿಷ್ಯಂತಿ ಯೇ ತದ್ವದ್ ವಧಂ ಶುಂಭನಿಶುಂಭಯೋಃ ॥2॥

ಅಷ್ಟಮ್ಯಾಂ ಚ ಚತುರ್ದಶ್ಯಾಂ ನವಮ್ಯಾಂ ಚೈಕಚೇತಸಃ ।
ಶ್ರೋಷ್ಯನ್ತಿ ಚೈವ ಯೇ ಭಕ್ತ್ಯಾ ಮಮ ಮಾಹಾತ್ಮ್ಯಮುತ್ತಮಮ್ ॥3॥

ನ ತೇಷಾಂ ದುಷ್ಕೃತಂ ಕಿಂಚಿತ್ ದುಷ್ಕೃತೋತ್ಥಾ ನ ಚಾಪದಃ ।
ಭವಿಷ್ಯತಿ ನ ದಾರಿದ್ರ್ಯಂ ನ ಚೈವೇಷ್ಟವಿಯೋಜನಮ್ ॥4॥

1-4. ದೇವಿಯಿಂತೆಂದಳು : ಯಾವನು ಈ ಸ್ತೋತ್ರಗಳಿಂದ ಯಾವಾಗಲೂ ಸಮಾಧಾನಚಿತ್ತನಾಗಿ ನನ್ನನ್ನು ಸ್ತುತಿಸುವನೋ ಅಂಥವನ ಸಕಲವಿಪತ್ತುಗಳನ್ನೂ ನಾನು ಪರಿಹರಿಸುವೆನು. ಈ ವಿಷಯದಲ್ಲಿ ಸಂಶಯವಿಲ್ಲ. ಮತ್ತು ಮಧುಕೈಟಭರ

ನಾಶವನ್ನೂ ಮಹಿಷಾಸುರವಧೆಯನ್ನೂ ಹಾಗೂ ಶುಂಭನಿಶುಂಭರ (ವಧೆಯನ್ನೂ) ಯಾರು ಅಷ್ಟಮೀ, ಚತುರ್ದಶೀ, ನವಮೀ-ದಿನಗಳಲ್ಲಿ ಅನನ್ಯಚಿತ್ತರಾಗಿ ಕೀರ್ತನೆಮಾಡುವರೋ ಹಾಗೂ ಭಕ್ತಿಯಿಂದ ನನ್ನ ಮಹಾತ್ಮ್ಯವನ್ನು ಕೇಳುವರೋ ಅಂಥವರಿಗೆ ಪಾಪಸಂಘಟನೆಯಾಗಲಿ, ಪಾಪನಿಮಿತ್ತವಾದ ಸಂಕಟಗಳಾಗಲಿ, ದಾರಿದ್ರ್ಯವಾಗಲಿ, ಇಷ್ಟಜನರ ವಿಯೋಗವಾಗಲಿ ಉಂಟಾಗುವದಿಲ್ಲ.

ಶತ್ರುತೋ ನ ಭಯಂ ತಸ್ಯ ದಸ್ಯುತೋ ವಾ ನ ರಾಜತಃ ।
ನ ಶಸ್ತ್ರಾನಲತೋಯೌಘಾತ್ ಕದಾಚಿತ್ ಸಂಭವಿಷ್ಯತಿ ॥5॥

ತಸ್ಮಾನ್ಮಮೈತನ್ಮಾಹಾತ್ಮ್ಯಂ ಪಠಿತವ್ಯಂ ಸಮಾಹಿತೈಃ ।
ಶ್ರೋತವ್ಯಂ ಚ ಸದಾ ಭಕ್ತ್ಯಾ ಪರಂ ಸ್ವಸ್ತ್ಯಯನಂ ಹಿ ತತ್ ॥6॥

5-6. ಅಂಥವನಿಗೆ ಶತ್ರುಗಳಿಂದಾಗಲಿ, ಕಳ್ಳರಿಂದಾಗಲಿ, ರಾಜನಿಂದಾಗಲಿ, ಶಸ್ತ್ರಗಳು, ಬೆಂಕಿ, ನೀರುಗಳ ಸಮೂಹದಿಂದಾಗಲಿ ಭಯವು ಎಂದಿಗೂ ಸಂಭವಿಸುವದಿಲ್ಲ. ಆದ್ದರಿಂದ ಈ ನನ್ನ ಮಾಹಾತ್ಮ್ಯವನ್ನು ಸಮಾಧಾನಚಿತ್ತವುಳ್ಳವರಾಗಿದ್ದು (ಭಕ್ತರು) ಭಕ್ತಿಯಿಂದ ಪಠಿಸಬೇಕು ಹಾಗೂ ಕೇಳಬೇಕು. ಇದು ಹೆಚ್ಚಿನ ಶುಭಪರಂಪರೆಗೆ ಕಾರಣವಾಗುತ್ತದೆ.

ಉಪಸರ್ಗಾನಶೇಷಾಂಸ್ತು ಮಹಾಮಾರೀಸಮುದ್ಭವಾನ್ ।
ತಥಾ ತ್ರಿವಿಧಮುತ್ಪಾತಂ ಮಾಹಾತ್ಮ್ಯಂ ಶಮಯೇನ್ಮಮ ॥7॥

ಯತ್ರೈತತ್ ಪಠ್ಯತೇ ಸಮ್ಯಕ್ ನಿತ್ಯಮಾಯತನೇ ಮಮ ।
ಸದಾ ನ ತದ್ ವಿಮೋಕ್ಷ್ಯಾಮಿ ಸಾಂನಿಧ್ಯಂ ತತ್ರ ಮೇ ಸ್ಥಿತಮ್ ॥8॥

7-8. ನನ್ನ ಮಹಾತ್ಮ್ಯ (ಕೀರ್ತನೆಯು), ಮಹಾಮಾರಿಯಿಂದ ಸಂಭವಿಸುವ ಎಲ್ಲಾ ರೀತಿಯ (ಕ್ಷಾಮ, ರೋಗ, ರಾಷ್ಟ್ರಕ್ಷೋಭೆ, ಅಶಾಂತಿ, ದಂಗೆ, ಮುಷ್ಕರ, ಯುದ್ಧ-ಮುಂತಾದವುಗಳನ್ನೂ ಆದ್ಯಾತ್ಮಿಕ್ರಾಧಿಭೌತಿಕಾಧಿದೈವಿಕಗಳೆಂಬ) ಮೂರು ವಿಧವಾದ ಸಂಕಟಗಳನ್ನೂ ಉಳಿದ ಎಲ್ಲಾ ವಿಪತ್ತುಗಳನ್ನೂ ಶಮನಗೊಳಿಸುತ್ತದೆ. ಈ ನನ್ನ ಮಹಾತ್ಮ್ಯೆಯು ಪ್ರತಿದಿನವೂ ಯಾವ ಮನೆಯಲ್ಲಿ ಪಠಿಸಲ್ಪಡುವದೋ ಆ ಸ್ಥಲವನ್ನು ನಾನು ಬಿಡುವದಿಲ್ಲ. ಅಲ್ಲಿ ನನ್ನ ಸಾನ್ನಿಧ್ಯವಿದ್ದೇ ಇರುವದು.

ಬಲಿಪ್ರದಾನೇ ಪೂಜಾಯಾಮಗ್ನಿಕಾರ್ಯೇ ಮಹೋತ್ಸವೇ ।
ಸರ್ವಂ ಮಮೈತಚ್ಚರಿತಮುಚ್ಚಾರ್ಯಂ ಶ್ರಾವ್ಯಮೇವ ಚ ॥9॥

ಜಾನತಾಽಜಾನತಾ ವಾಪಿ ಬಲಿಪೂಜಾಂ ತಥಾ ಕೃತಾಮ್ ।
ಪ್ರತೀಚ್ಛಿಷ್ಯಾಮ್ಯಹಂ ಪ್ರೀತ್ಯಾ ವಹ್ನಿಹೋಮಂ ತಥಾ ಕೃತಮ್ ॥10॥

9-10. ಬಲಿಪ್ರದಾನ, ಪೂಜೆ, ಹೋಮ-ಮುಂತಾದ ಮಹೋತ್ಸವಗಳಲ್ಲೆಲ್ಲ ನನ್ನ ಈ ಚರಿತ್ರೆಯನ್ನು ಪಠನಮಾಡಬೇಕು ; ಹಾಗೂ ಎಲ್ಲರಿಗೂ ಶ್ರವಣ ಮಾಡಿಸಬೇಕು. ಹಾಗೆ ಮಾಡಿದ ಬಲಿ-ಪೂಜಾದಿಗಳನ್ನು (ಯಜಮಾನನು) ತಿಳಿದೊ, ತಿಳಿಯದೆಯೊ-ಅನುಷ್ಠಾನಮಾಡಿದ್ದರೂ ನಾನು ಪ್ರೀತಿಯಿಂದ ಸ್ವೀಕರಿಸುವೆನು. ಮತ್ತು ಅಗ್ನಿಯಲ್ಲಿ ಸಮರ್ಪಿಸಿದ ಹೋಮವನ್ನೂ ಅಂಗೀಕರಿಸುವೆನು.

ಶರತ್ಕಾಲೇ ಮಹಾಪೂಜಾ ಕ್ರಿಯತೇ ಯಾ ಚ ವಾರ್ಷಿಕೀ .
ತಸ್ಯಾಂ ಮಮೈತನ್ಮಾಹಾತ್ಮ್ಯಂ ಶ್ರುತ್ವಾ ಭಕ್ತಿಸಮನ್ವಿತಃ ॥11॥

ಸರ್ವಬಾಧಾವಿನಿರ್ಮುಕ್ತೋ ಧನಧಾನ್ಯ ಸುತಾನ್ವಿತಃ ।
ಮನುಷ್ಯೋ ಮತ್ಪ್ರಸಾದೇನ ಭವಿಷ್ಯತಿ ನ ಸಂಶಯಃ ॥12॥

11-12. ಶರದೃತುವಿನಲ್ಲಿ ಪ್ರತಿವರ್ಷವೂ ನನಗೆ ಸಲ್ಲಿಸುವ ಮಹಾಪೂಜೆಯ ವೇಳೆಗೆ ಭಕ್ತಿವಂತನಾಗಿ ಯಾವನು ಈ ಮಹಾತ್ಮ್ಯೆಯನ್ನು ಕೇಳಿದನಾದರೆ, ಆ ಮನುಷ್ಯನು ನನ್ನ ಅನುಗ್ರಹದಿಂದ ಎಲ್ಲಾ ಸಂಕಟಗಳಿಂದಲೂ ನಿರ್ಮುಕ್ತನಾಗಿ ಧನ, ಧಾನ್ಯ, ಪುತ್ರರುಗಳಿಂದ ಕೂಡಿದವನಾಗಿ ಬಾಳುತ್ತಾನೆ.

ಶ್ರುತ್ವಾಮಮೈತನ್ಮಾಹಾತ್ಮ್ಯಂ ತಥಾ ಚೋತ್ಪತ್ತಯಃ ಶುಭಾಃ ।
ಪರಾಕ್ರಮಂ ಚ ಯುದ್ಧೇಷು ಜಾಯತೇ ನಿರ್ಭಯಃ ಪುಮಾನ್ ॥13॥

ರಿಪವಃ ಸಂಕ್ಷಯಂ ಯಾಂತಿ ಕಲ್ಯಾಣಂ ಚೋಪಪದ್ಯತೇ ।
ನಂದತೇ ಚ ಕುಲಂ ಪುಂಸಾಂ ಮಾಹಾತ್ಮ್ಯಂ ಮಮ ಶೃಣ್ವತಾಮ್ ॥14॥

13-14. ಈ ನನ್ನ ಮಹಾತ್ಮ್ಯೆಯನ್ನೂ ಹಾಗೂ ಅವತಾರಗಳನ್ನೂ ಯುದ್ಧದಲ್ಲಿ ಪ್ರದರ್ಶಿಸಿದ ಪರಾಕ್ರಮಗಳನ್ನೂ ಕೇಳಿದವನಾದರೆ ಮಾನವನು ಭಯವಿಲ್ಲದವನಾಗುವನು. ಶತ್ರುಗಳು ನಾಶವಾಗುವರು. ಮಂಗಳವನ್ನು ಹೊಂದುವನು. ಈ ಮಹಾತ್ಮ್ಯ ಶ್ರವಣಮಾಡಿದ ಮನುಷ್ಯರ ವಂಶೀಕರೆಲ್ಲರೂ ಆನಂದಪೂರಿತರಾಗಿರುವರು.

ಶಾಂತಿಕರ್ಮಣಿ ಸರ್ವತ್ರ ತಥಾ ದುಃಸ್ವಪ್ನದರ್ಶನೇ ।
ಗ್ರಹಪೀಡಾಸು ಚೋಗ್ರಾಸು ಮಾಹಾತ್ಮ್ಯಂ ಶೃಣುಯಾನ್ಮಮ ॥15॥

ಉಪಸರ್ಗಾಃ ಶಮಂ ಯಾಂತಿ ಗ್ರಹಪೀಡಾಶ್ಚ ದಾರುಣಾಃ ।
ದುಃಸ್ವಪ್ನಂ ಚ ನೃಭಿರ್ದೃಷ್ಟಂ ಸುಸ್ವಪ್ನಮುಪಜಾಯತೇ ॥16॥

15-16. ಎಲ್ಲಾ ಶಾಂತಿಕರ್ಮಗಳಲ್ಲಿಯೂ ಹಾಗೂ ಕೆಟ್ಟಕನಸುಗಳು ಕಾಣಿಸಿಕೊಂಡಾಗ, ಕಠಿನವಾದ ಗ್ರಹಗಳ ಪೀಡೆಯು ಸಂಭವಿಸಿದಾಗ ಈ ಮಹಾತ್ಮ್ಯವನ್ನು ಕೇಳಬೇಕು. ಇದರಿಂದ ವಿಘ್ನಗಳೂ ಭಯಂಕರವಾದ ಗ್ರಹಪೀಡೆಗಳೂ ತಣ್ಣಗಾಗುವವು. ಮನುಷ್ಯರು ಕಂಡ ದುಃಸ್ವಪ್ನಗಳೂ ಒಳ್ಳೆಯ ಕನಸುಗಳಾಗಿಬಿಡುವವು. (ಒಳ್ಳೆಯ ಕನಸಿನ ಫಲವನ್ನು ನೀಡುವವು).

ಬಾಲಗ್ರಹಾಭಿಭೂತಾನಾಂ ಬಾಲಾನಾಂ ಶಾಂತಿಕಾರಕಮ್ ।
ಸಂಘಾತಭೇದೇ ಚ ನೃಣಾಂ ಮೈತ್ರೀಕರಣಮುತ್ತಮಮ್ ॥17॥

ದುರ್ವೃತ್ತಾನಾಮಶೇಷಾಣಾಂ ಬಲಹಾನಿಕರಂ ಪರಮ್ ।
ರಕ್ಷೋಭೂತಪಿಶಾಚಾನಾಂ ಪಠನಾದೇವ ನಾಶನಮ್ ॥18॥

17-18. ಬಾಲಗ್ರಹಪೀಡೆಗೆ ಒಳಗಾದ ಮಕ್ಕಳಿಗೆ ಇದು ಶಾಂತಿಕರವಾಗಿದೆ. ಹಾಗೂ ಸಂಘಸಂಸ್ಥೆಗಳಲ್ಲಿ ಉಂಟಾದ ಒಡಕಿನ ಪರಿಹಾರಕ್ಕೆ ಉಪಾಯವಾಗಿದ್ದು ಸ್ನೇಹವನ್ನು ಬೆಳೆಸುತ್ತದೆ. ಮತ್ತು ಎಲ್ಲಾ ರೀತಿಯ ದುಷ್ಟರ ಹಾಗೂ ದುಷ್ಟಕೂಟಗಳ ಬಲವನ್ನು ಮುರಿದು ಹೆಚ್ಚಿನ (ಸುಖ)ವನ್ನುಂಟುಮಾಡುತ್ತದೆ. ಹಾಗೂ ರಾಕ್ಷಸರು, ಭೂತ-ಪಿಶಾಚಿಗಳ ಬಾಧೆಯನ್ನು ಪಠನ ಮಾತ್ರದಿಂದಲೇ ಪರಿಹರಿಸುವದು.

ಸರ್ವಂ ಮಮೈತನ್ಮಾಹಾತ್ಮ್ಯಂ ಮಮ ಸನ್ನಿಧಿಕಾರಕಮ್ ।
ಪಶುಪುಷ್ಪಾರ್ಘ್ಯಧೂಪೈಶ್ಚ ಗಂಧದೀಪೈಸ್ತಥೋತ್ತಮೈಃ ॥19॥

ವಿಪ್ರಾಣಾಂ ಭೋಜನೈರ್ಹೋಮೈಃ ಪ್ರೋಕ್ಷಣೀಯೈರಹರ್ನಿಶಮ್ ।
ಅನ್ಯೈಶ್ಚ ವಿವಿಧೈರ್ಭೋಗೈಃ ಪ್ರದಾನೈರ್ವತ್ಸರೇಣ ಯಾ ॥20॥
ಪ್ರೀತಿರ್ಮೇ ಕ್ರಿಯತೇ ಸಾಸ್ಮಿನ್ ಸಕೃತ್ ಸುಚರಿತೇ ಶ್ರುತೇ ॥

19-20. ಈ ನನ್ನ ಮಹಾತ್ಮ್ಯವೆಲ್ಲವೂ ನನ್ನ ಸಾನ್ನಿಧ್ಯವನ್ನುಂಟು ಮಾಡುವದಾಗಿರುತ್ತದೆ. ಪಶುಬಲಿಯನ್ನು ನೀಡುವದು, ಹೂವು, ಅರ್ಘ್ಯ, ಧೂಪ,

ಗಂಧ, ದೀಪಾದಿಗಳಿಂದ ಪೂಜಿಸುವದು, ಬ್ರಾಹ್ಮಣಭೋಜನವನ್ನು ಮಾಡಿಸುವದು, ಅಗ್ನಿಯಲ್ಲಿ ಹೋಮಮಾಡುವದು, ನಾನಾವಿಧವಾದ ನೈವೇದ್ಯಗಳನ್ನು ಅರ್ಪಿಸುವದು, ಇನ್ನೂ ಅನೇಕ ರೀತಿಯ ವಿವಿಧ ಭೋಗಸಾಮಗ್ರಿಗಳಿಂದ ಹಗಲಿರುಳೂ ಉಪಚಾರಮಾಡುತ್ತಾ ಒಂದು ವರ್ಷದಷ್ಟು ಕಾಲವೂ ನನ್ನನ್ನು ಆರಾಧಿಸುವದೇ ಮುಂತಾದ ವಿವಿಧರೀತಿಯ ಅನುಷ್ಠಾನಗಳಿಂದ ನನಗೆ ಯಾವ ತೃಪ್ತಿಯುಂಟಾಗುವದೋ ಅಂಥ ತೃಪ್ತಿಯು ಕೇವಲ ಈ ನನ್ನ ಮಹಾತ್ಮ್ಯೆಯನ್ನು ಕೇಳಿದ್ದರಿಂದಲೇ ಉಂಟಾಗಲಿದೆ.

**ಶ್ರುತಂ ಹರತಿ ಪಾಪಾನಿ ತಥಾರೋಗ್ಯಂ ಪ್ರಯಚ್ಛತಿ ।**
**ರಕ್ಷಾಂ ಕರೋತಿ ಭೂತೇಭ್ಯೋ ಜನ್ಮನಾಂ ಕೀರ್ತನಂ ಮಮ ॥21॥**

**ಯುದ್ಧೇಷು ಚರಿತಂ ಯನ್ಮೇ ದುಷ್ಟದೈತ್ಯನಿಬರ್ಹಣಮ್ ।**
**ತಸ್ಮಿನ್ ಶ್ರುತೇ ವೈರಿಕೃತಂ ಭಯಂ ಪುಂಸಾಂ ನ ಜಾಯತೇ ॥22॥**

21-22. (ಈ ಚರಿತ್ರೆಯು) ಕೇಳಲ್ಪಟ್ಟದ್ದೇ ಆದರೆ ಪಾಪವನ್ನು ನಾಶಗೊಳಿಸಿ ಆರೋಗ್ಯವನ್ನು ನೀಡುವದು. ನನ್ನ ಅವತಾರಗಳ ಕೀರ್ತನೆಯು ಭೂತಗಳ ಬಾಧೆಯ ದೆಸೆಯಿಂದ ಕಾಪಾಡುವದು. ಯುದ್ಧಗಳ (ಸಮಯದಲ್ಲಿ) ಯಾವ ಈ ನನ್ನ ಚರಿತ್ರೆಯು (ಪಠಿಸಲ್ಪಟ್ಟರೆ) ದುಷ್ಟರಾಕ್ಷಸರನ್ನು ನಾಶಗೊಳಿಸುತ್ತದೆ. ಇದನ್ನು ಕೇಳಿದರೆ ಶತ್ರುವಿನ ಕಡೆಯಿಂದ ಮಾನವರಿಗೆ ಭಯವುಂಟಾಗುವದಿಲ್ಲ.

**ಯುಷ್ಮಾಭಿಃ ಸ್ತುತಯೋ ಯಾಶ್ಚ ಯಾಶ್ಚ ಬ್ರಹ್ಮರ್ಷಿಭಿಃ ಕೃತಾಃ ।**
**ಬ್ರಹ್ಮಣಾ ಚ ಕೃತಾಸ್ತಾಸ್ತು ಪ್ರಯಚ್ಛಂತಿ ಶುಭಾಂ ಮತಿಮ್ ॥23॥**

23. (ದೇವತೆಗಳಾದ) ನೀವುಗಳು, ಬ್ರಹ್ಮರ್ಷಿಗಳು, (ಹಿರಣ್ಯಗರ್ಭ) ಬ್ರಹ್ಮನೇ ಮುಂತಾದವರಿಂದ ಮಾಡಲ್ಪಟ್ಟ ಸ್ತೋತ್ರಗಳು (ಅವುಗಳನ್ನು) (ಪಠಿಸುವವರಿಗೆ) ಒಳ್ಳೆಯ ಬುದ್ಧಿಯನ್ನು ಕೊಡುವವು.

**ಅರಣ್ಯೇ ಪ್ರಾಂತರೇ ವಾಪಿ ದಾವಾಗ್ನಿಪರಿವಾರಿತಃ ।**
**ದಸ್ಯುಭಿರ್ವಾ ವೃತಃ ಶೂನ್ಯೇ ಗೃಹೀತೋ ವಾಪಿ ಶತ್ರುಭಿಃ ॥24॥**

**ಸಿಂಹವ್ಯಾಘ್ರಾನುಯಾತೋ ವಾ ವನೇ ವಾ ವನಹಸ್ತಿಭಿಃ ।**
**ರಾಜ್ಞಾಕ್ರುದ್ಧೇನ ಚಾಜ್ಞಪ್ತೋ ವಧ್ಯೋ ಬಂಧಗತೋಽಪಿ ವಾ ॥25॥**

ಆ ಘೂರ್ಣಿತೋ ವಾ ಪಾತೇನ ಸ್ಥಿತಃ ಪೋತೇ ಮಹಾರ್ಣವೇ ।
ಪತತ್ಸು ಚಾಪಿ ಶಸ್ತ್ರೇಷು ಸಂಗ್ರಾಮೇ ಭೃಶದಾರುಣೇ ॥26॥

ಸರ್ವಬಾಧಾಸು ಘೋರಾಸು ವೇದನಾಭ್ಯರ್ದಿತೋಽಪಿ ವಾ ।
ಸ್ಮರನ್ ಮಮೈತಚ್ಚರಿತಂ ನರೋ ಮುಚ್ಯೇತ ಸಂಕಟಾತ್ ॥27॥

24-27. ಕಾಡಿನಲ್ಲಾಗಲಿ, ಬೆಂಗಾಡಿನಲ್ಲಾಗಲಿ, ಕಾಡುಕಿಚ್ಚಿನಿಂದ ಸುತ್ತವರೆಯಲ್ಪಟ್ಟಿರುವಾಗಲಾಗಲಿ, ನಿರ್ಜನದೇಶದಲ್ಲಿ ಕಳ್ಳರಿಂದ ಹಿಡಿಯಲ್ಪಟ್ಟಾಗಲಾಗಲಿ, ಶತ್ರುಗಳ ಕೈಗಳಿಗೆ ಸಿಕ್ಕಿಹಾಕಿಕೊಂಡಾಗಲಾಗಲಿ, ಹುಲಿ-ಸಿಂಹಗಳು ಓಡಿಸಿಕೊಂಡು ಬಂದಾಗಲಾಗಲಿ, ಕಾಡಾನೆಗಳಿಂದ ಅರಣ್ಯದಲ್ಲಿ ವಿಪತ್ತಿಗೊಳಗಾದಾಗಲಾಗಲಿ, ಕುಪಿತನಾದ ರಾಜನಿಂದ ಮರಣದಂಡನೆಗೆ ಗುರಿಯಾದಾಗಲಾಗಲಿ, ಬಂದೀಖಾನೆಯಲ್ಲಿಡಲ್ಪಟ್ಟಾಗಲಾಗಲಿ, ಮಹಾಸಮುದ್ರದಲ್ಲಿ ಹಡಗಿನಲ್ಲಿದ್ದಾಗ ಸುಂಟರಗಾಳಿಯಿಂದ ತಿರುಗಿಸಲ್ಪಟ್ಟು ವಿಪತ್ತಿಗೆ ತುತ್ತಾದಾಗಲಾಗಲಿ, ಭಯಂಕರವಾದ ಯುದ್ಧದಲ್ಲಿ ಆಯುಧಗಳು ಮೇಲೆ ಬೀಳುತ್ತಿರುವ ಸಮಯದಲ್ಲಾಗಲಿ, ಹೀಗೆ ಕ್ರೂರವಾದ ಎಲ್ಲಾ ಬಾಧೆಗಳಲ್ಲಿಯೂ ಸಂಕಟ ಪಡುತ್ತಿರುವಾಗ ಈ ನನ್ನ ಚರಿತ್ರೆಯನ್ನು ನೆನೆಸಿಕೊಳ್ಳುವ ಮನುಷ್ಯನು ಆಯಾ ಸಂಕಟಗಳಿಂದ ಪಾರಾಗುವನು.

ಮಮ ಪ್ರಭಾವಾತ್ ಸಿಂಹಾದ್ಯಾ ದಸ್ಯವೋ ವೈರಿಣಸ್ತಥಾ ।
ದೂರಾದೇವ ಪಲಾಯಂತೇ ಸ್ಮರತಶ್ಚರಿತಂ ಮಮ ॥28॥

28. ನನ್ನ ಪ್ರಭಾವದಿಂದ ಸಿಂಹಾದಿ (ಮೃಗಗಳೂ) ಕಳ್ಳರೂ ಶತ್ರುಗಳೂ ದೂರದಿಂದಲೇ ಓಡಿಹೋಗಿಬಿಡುವರು. ಯಾರು ನನ್ನ ಚರಿತ್ರೆಯನ್ನು ನೆನೆಯುವರೋ (ಅಂಥವರಿಗೆ ಈ ಫಲವಾಗುವದು).

ಋಷಿರುವಾಚ –

ಇತ್ಯುಕ್ತ್ವಾ ಸಾ ಭಗವತೀ ಚಂಡಿಕಾ ಚಂಡವಿಕ್ರಮಾ ।
ಪಶ್ಯತಾಮೇವ ದೇವಾನಾಂ ತತ್ರೈವಾಂತರಧೀಯತ ॥29॥

29. ಋಷಿಯಿಂತೆಂದನು : ಹೆಚ್ಚಿನಪರಾಕ್ರಮಸಂಪನ್ನೆಯಾದ ಪೂಜ್ಯಳಾದ ಆ ಚಂಡಿಕೆಯು ಹೀಗೆಂದು ಹೇಳಿ ದೇವತೆಗಳೆಲ್ಲರೂ ನೋಡುತ್ತಿರುವಂತೆಯೇ ಅಲ್ಲಿಯೇ ಅದೃಶ್ಯಳಾದಳು.

ತೇऽಪಿ ದೇವಾ ನಿರಾತಂಕಾಃ ಸಾಧಿಕಾರಾನ್ ಯಥಾ ಪುರಾ ।
ಯಜ್ಞಭಾಗಭುಜಃ ಸರ್ವೇ ಚಕ್ರುರ್ವಿನಿಹತಾರಯಃ ॥30॥

ದೈತ್ಯಾಶ್ಚ ದೇವ್ಯಾ ನಿಹತೇ ಶುಂಭೇ ದೇವರಿಪೌ ಯುಧಿ ।
ಜಗದ್ವಿಧ್ವಂಸಿನಿ ತಸ್ಮಿನ್ ಮಹೋಗ್ರೇऽತುಲವಿಕ್ರಮೇ ॥31॥
ನಿಶುಂಭೇ ಚ ಮಹಾವೀರ್ಯೇ ಶೇಷಾಃ ಪಾತಾಲಮಾಯಯುಃ ॥

30-31. ಆ ದೇವತೆಗಳಾದರೊ, ಯಾವ ಅಡ್ಡಿಯೂ ಇಲ್ಲವಾಗಲಾಗಿ ಹಿಂದಿನಂತೆಯೇ ತಮ್ಮ ಅಧಿಕಾರಗಳನ್ನು ನಿರ್ವಹಿಸುತ್ತಾ ಶತ್ರುಗಳಿಲ್ಲದವರಾಗಿ ಎಲ್ಲರೂ ತಮ್ಮ ತಮ್ಮ ಯಜ್ಞಭಾಗಗಳನ್ನು ಸ್ವೀಕರಿಸುತ್ತಾ ಇದ್ದರು. ರಾಕ್ಷಸರಾದರೊ, ದೇವಶತ್ರುವೂ ಜಗತ್ತನ್ನೇ ನಾಶಗೊಳಿಸುವವನೂ, ಮಹಾಕ್ರೂರಿಯೂ, ಅಮಿತಬಲ ಪರಾಕ್ರಮಿಯೂ, ಮಹಾವೀರ್ಯನೂ ಆದ ನಿಶುಂಭನು ದೇವಿಯಿಂದ ಹತನಾಗಲಾಗಿ- ಉಳಿದವರೆಲ್ಲವೂ ಪಾತಾಳಲೋಕಕ್ಕೆ ಹೊರಟು ಹೋದರು.

ಏವಂ ಭಗವತೀ ದೇವೀ ಸಾ ನಿತ್ಯಾಪಿ ಪುನಃ ಪುನಃ ।
ಸಂಭೂಯ ಕುರುತೇ ಭೂಪ ಜಗತಃ ಪರಿಪಾಲನಮ್ ॥32॥

ತಯೈತನ್ಮೋಹ್ಯತೇ ವಿಶ್ವಂ ಸೈವ ವಿಶ್ವಂ ಪ್ರಸೂಯತೇ ।
ಸಾ ಯಾಚಿತಾ ಚ ವಿಜ್ಞಾನಂ ತುಷ್ಟಾ ಋದ್ಧಿಂ ಪ್ರಯಚ್ಛತಿ ॥33॥

32-33. ಎಲೈ ರಾಜನೆ, ಹೀಗೆ ಪೂಜ್ಯಳಾದ ಆ ದೇವಿಯು ನಿತ್ಯಳಾಗಿದ್ದರೂ ಮತ್ತೆ ಮತ್ತೆ ಅವತರಿಸಿ ಜಗತ್ತನ್ನು ಕಾಪಾಡುವಳು. ಆಕೆಯಿಂದಲೇ ಈ ಜಗತ್ತೆಲ್ಲವೂ ಮೋಹಗೊಳಿಸಲ್ಪಡುವದು ; ಹಾಗೂ ಹಡೆಯಲ್ಪಡುವದು. ಮತ್ತು ಆಕೆಯನ್ನು ಬೇಡಿಕೊಂಡರೆ ತತ್ತ್ವಜ್ಞಾನವನ್ನೂ (ಐಹಿಕ ಪಾರಲೌಕಿಕ) ಸುಖಗಳನ್ನೂ ನೀಡುವಳು.

ವ್ಯಾಪ್ತಂ ತಯೈತತ್ ಸಕಲಂ ಬ್ರಹ್ಮಾಂಡಂ ಮನುಜೇಶ್ವರ ।
ಮಹಾಕಾಳ್ಯಾ ಮಹಾಕಾಲೇ ಮಹಾಮಾರೀಸ್ವರೂಪಯಾ ॥34॥

ಸೈವ ಕಾಲೇ ಮಹಾಮಾರೀ ಸೈವ ಸೃಷ್ಟಿರ್ಭವತ್ಯಜಾ ।
ಸ್ಥಿತಿಂ ಕರೋತಿ ಭೂತಾನಾಂ ಸೈವ ಕಾಲೇ ಸನಾತನೀ ॥35॥

34-35. ಎಲೈ ರಾಜನೆ, ಆಕೆಯಿಂದಲೇ ಸಕಲಬ್ರಹ್ಮಾಂಡವೂ ವ್ಯಾಪ್ತವಾಗಿದೆ. ಮಹಾಕಾಲನೆನಿಸಿರುವ ಪರಮೇಶ್ವರನ ಶಕ್ತಿರೂಪಳಾದ ಆ ಮಹಾಕಾಳಿಯು ಮಹಾಮಾರಿಯೆನಿಸಿರುವಳು. ಆಕೆಯೇ (ಪ್ರಲಯಕಾಲಕ್ಕೆ) ಮಹಾಮಾರಿಯಾಗಿ (ಜಗತ್ತನ್ನು) ಸಂಹರಿಸುವಳು. ಸೃಷ್ಟಿಕಾಲಕ್ಕೆ ಅಜಾ (ಪ್ರಕೃತಿ)ಯೆನಿಸಿ ಉಂಟುಮಾಡುವಳು. ಸನಾತನಿಯೆನಿಸಿರುವ ಆಕೆಯೇ ಸ್ಥಿತಿಕಾಲಕ್ಕೆ ಪ್ರಾಣಿಗಳನ್ನು ಕಾಪಾಡುತ್ತಿರುವಳು.

ಭವಕಾಲೇ ನೃಣಾಂ ಸೈವ ಲಕ್ಷ್ಮೀರ್ವೃದ್ಧಿಪ್ರದಾ ಗೃಹೇ ।
ಸೈವಾಭಾವೇ ತಥಾऽಲಕ್ಷ್ಮೀರ್ವಿನಾಶಾಯೋಪಜಾಯತೇ ॥36॥

ಸ್ತುತಾ ಸಂಪೂಜಿತಾ ಪುಷ್ಪೈರ್ಧೂಪಗಂಧಾದಿಭಿಸ್ತಥಾ ।
ದದಾತಿ ವಿತ್ತಂ ಪುತ್ರಾಂಶ್ಚ ಮತಿಂ ಧರ್ಮೇ ಗತಿಂ ಶುಭಾಮ್ ॥37॥

36-37. ಸ್ಥಿತಿಕಾಲದಲ್ಲಿ ಆಕೆಯೇ ವೃದ್ಧಿಯನ್ನುಂಟುಮಾಡುವ ಗೃಹಲಕ್ಷ್ಮಿಯಾಗಿರುವಳು. ಆಕೆಯೇ ಅಭಾವಕಾಲದಲ್ಲಿ ಅಲಕ್ಷ್ಮಿಯಾಗಿ ವಿನಾಶಕ್ಕೆ ಕಾರಣಳಾಗುವಳು. ಆದರೆ ಸ್ತೋತ್ರಮಾಡಿ ಪುಷ್ಪ, ಧೂಪ, ಗಂಧಾದಿಗಳಿಂದ ಪೂಜಿಸಿದ್ದೇ ಆದರೆ ಐಶ್ವರ್ಯವನ್ನೂ ಮಕ್ಕಳನ್ನೂ ಧರ್ಮಬುದ್ಧಿಯನ್ನೂ ಶುಭವಾದ ಸದ್ಗತಿಯನ್ನೂ ನೀಡಿ ಕಾಪಾಡುವಳು.

ಇತಿ ಶ್ರೀ ಮಾರ್ಕಂಡೇಯಪುರಾಣೇ ದೇವೀಮಹಾತ್ಮ್ಯೇ
ದ್ವಾದಶೋऽಧ್ಯಾಯಃ

---

## ಹದಿಮೂರನೆಯ ಅಧ್ಯಾಯ

ಧ್ಯಾನಮ್ –

ಬಾಲಾರ್ಕಮಂಡಲಾಭಾಸಾಂ ಚತುರ್ಬಾಹುಂ ತ್ರಿಲೋಚನಾಮ್ ।
ಪಾಶಾಂಕುಶವರಾಭೀತೀರ್ಧಾರಯಂತೀಂ ಶಿವಾಂ ಭಜೇ ॥1॥

1. ಬಾಲಸೂರ್ಯನ ತೇಜೋಮಂಡಲದಂತೆ ಕಾಂತಿಯುಳ್ಳ ಮುಕ್ಕಣ್ಣೆಯಾದ ಹಾಗೂ ಪಾಶ, ಅಂಕುಶ, ವರದಮುದ್ರೆ, ಅಭಯಮುದ್ರೆಗಳ ನಾಲ್ಕು ಕೈಗಳಿಂದ ಅಲಂಕೃತಳಾದ ಶಿವೆಯನ್ನು ಭಜಿಸುವೆನು.

ಓಂ ಋಷಿರುವಾಚ–

ಏತತ್ತೇ ಕಥಿತಂ ಭೂಪ ದೇವೀಮಾಹಾತ್ಮ್ಯಮುತ್ತಮಮ್ ।
ಏವಂ ಪ್ರಭಾವಾ ಸಾ ದೇವೀ ಯಯೇದಂ ಧಾರ್ಯತೇ ಜಗತ್ ॥1॥

ವಿದ್ಯಾ ತಥೈವ ಕ್ರಿಯತೇ ಭಗವದ್ವಿಷ್ಣುಮಾಯಯಾ ।
ತಯಾ ತ್ವಮೇಷ ವೈಶ್ಯಶ್ಚ ತಥೈವಾನ್ಯೇ ವಿವೇಕಿನಃ ॥2॥

ಮೋಹ್ಯನ್ತೇ ಮೋಹಿತಾಶ್ಚೈವ ಮೋಹಮೇಷ್ಯನ್ತಿ ಚಾಪರೇ ।
ತಾಮುಪೈಹಿ ಮಹಾರಾಜ ಶರಣಂ ಪರಮೇಶ್ವರೀಮ್ ॥3॥
ಆರಾಧಿತಾ ಸೈವ ನೃಣಾಂ ಭೋಗಸ್ವರ್ಗಾಪವರ್ಗದಾ ॥

1-3. ಋಷಿಯಿಂತೆಂದನು : ಎಲೈ ರಾಜನೆ, ಉತ್ತಮವಾದ ದೇವೀ ಮಹಾತ್ಮ್ಯವು ನಿನಗೆ ಹೇಳಲ್ಪಟ್ಟಿದೆ. ಆಕೆಯ ಮಹಿಮೆಯು ಇಂಥದ್ದಾಗಿದೆ. ಜಗತ್ತನ್ನು ಧರಿಸಿರುವವಳಾದ ದೇವಿಯು ಭಗವಂತನಾದ ವಿಷ್ಣುವಿನ ಮಾಯೆಯಿಂದ 'ವಿದ್ಯಾ' ಎನಿಸಿಕೊಂಡು (ಮುಕ್ತಿಕಾರಣಳಾಗಿರುವಳು). (ಅವಿದ್ಯೆಯೆನಿಸಿದಾಗ) ಆಕೆಯೇ ನಿನ್ನನ್ನೂ ಈ ವೈಶ್ಯನನ್ನೂ ಉಳಿದ ವಿವೇಕಿಗಳನ್ನೂ ಕೂಡ ಮೋಹನಗೊಳಿಸಿ ಬಿಡುವಳು. ಹಿಂದೆಯೂ ಅನೇಕರು ಮೋಹಿತರಾಗಿದ್ದು ಇನ್ನು ಕೆಲವರು ಮುಂದೆಯೂ ಮೋಹಕ್ಕೊಳಗಾಗಲಿರುವರು. ಆದ್ದರಿಂದ ಎಲೈ ಮಹಾರಾಜನೆ, ಆ ಪರಮೇಶ್ವರಿಯನ್ನು ಶರಣುಹೊಂದುವವನಾಗು. ಆಕೆಯೇ ಮನುಷ್ಯರಿಂದ ಪೂಜಿಸಲ್ಪಟ್ಟವಳಾಗಿ ಐಹಿಕಭೋಗಗಳನ್ನೂ ಸ್ವರ್ಗವನ್ನೂ ಮೋಕ್ಷವನ್ನೂ ದಯಪಾಲಿಸುವಳು.

ಮಾರ್ಕಂಡೇಯ ಉವಾಚ–

ಇತಿ ತಸ್ಯ ವಚಃ ಶ್ರುತ್ವಾ ಸುರಥಃ ಸ ನರಾಧಿಪಃ ।
ಪ್ರಣಿಪತ್ಯ ಮಹಾಭಾಗಂ ತಮೃಷಿಂ ಶಂಸಿತವ್ರತಮ್ ॥4॥

ನಿರ್ವಿಣ್ಣೋऽತಿಮಮತ್ವೇನ ರಾಜ್ಯಾಪಹರಣೇನ ಚ ।
ಜಗಾಮ ಸದ್ಯಸ್ತಪಸೇ ಸ ಚ ವೈಶ್ಯೋ ಮಹಾಮುನೇ ॥5॥

4-5. ಮಾರ್ಕಂಡೇಯನಿಂತೆಂದನು : ರಾಜನಾದ ಆ ಸುರಥನು ಋಷಿಯ ಆ ಮಾತನ್ನು ಕೇಳಿ ಸುಪ್ರಸಿದ್ಧ ವ್ರತನಿಷ್ಠನಾದ ಮಹಾಭಾಗನಾದ ಆ ಋಷಿಗೆ

ನಮಸ್ಕಾರಮಾಡಿ ಹೆಚ್ಚಿನ ಅಭಿಮಾನ ಹಾಗೂ ರಾಜ್ಯವನ್ನು ಕಳೆದುಕೊಂಡದ್ದರ ವಿಷಯಕ್ಕೆ ಬೇಸತ್ತವನಾಗಿ ಕೂಡಲೆ ತಪಸ್ಸಿಗೆಹೊರಟುಹೋದನು. ಎಲೈ ಮಹಾ ಮುನಿಯೆ, ಆ ವೈಶ್ಯನಾದರೊ–

ಸಂದರ್ಶನಾರ್ಥಮಂಬಾಯಾ ನದೀಪುಲಿನಸಂಸ್ಥಿತಃ ।
ಸ ಚ ವೈಶ್ಯಸ್ತಪಃ ತೇಪೇ ದೇವೀಸೂಕ್ತಂ ಪರಂ ಜಪನ್ ॥6॥

ತೌ ತಸ್ಮಿನ್ ಪುಲಿನೇ ದೇವ್ಯಾಃ ಕೃತ್ವಾ ಮೂರ್ತಿಂ ಮಹಿಮಯೀಮ್ ।
ಅರ್ಹಣಾಂ ಚಕ್ರತುಸ್ತಸ್ಯಾಃ ಪುಷ್ಪಧೂಪಾಗ್ನಿತರ್ಪಣೈಃ ॥7॥
ನಿರಾಹಾರೌ ಯತಾಹಾರೌ ತನ್ಮನಸ್ಕೌ ಸಮಾಹಿತೌ ॥

6-7. ದೇವಿಯನ್ನು ಸಾಕ್ಷಾತ್ಕರಿಸಿಕೊಳ್ಳಲಿಚ್ಛಿಸಿ ಆ ವೈಶ್ಯನು ನದಿಯ ಮರಳು ದಂಡೆಯ ಮೇಲೆ ಕುಳಿತು ಶ್ರೇಷ್ಠವಾದ ದೇವೀಸೂಕ್ತವನ್ನು ಜಪಿಸುತ್ತಾ ತಪಸ್ಸು ಮಾಡಿದನು. ಅವರಿಬ್ಬರೂ ಆ ಮರಳಿನ ಮೇಲೆಯೇ ಕುಳಿತು ಮಣ್ಣಿನಿಂದ ದೇವಿಯ ವಿಗ್ರಹವನ್ನು ಮಾಡಿಟ್ಟುಕೊಂಡು ಹೂವು, ಧೂಪ, ದೀಪ, ತರ್ಪಣಾದಿ ಉಪಚಾರಗಳಿಂದ ಆಕೆಯ ಪೂಜೆಯನ್ನು ಮಾಡಿದರು. ಹಾಗೆ ಪೂಜಿಸುವಾಗ ಉಪವಾಸವಿದ್ದು ಪ್ರಾಣಧಾರಣೆಗಾಗಿ ನಿಯಮಿತಾಹಾರವನ್ನು ಮಾತ್ರ ತೆಗೆದು ಕೊಂಡು ಸಮಾಧಾನಚಿತ್ತದಿಂದ ಏಕಾಗ್ರಮನಸ್ಕರಾಗಿ (ಆರಾಧಿಸಿದರು).

ದದತುಸ್ತೌ ಬಲಿಂ ಚೈವ ನಿಜಗಾತ್ರಾಸೃಗುಕ್ಷಿತಮ್ ।
ಏವಂ ಸಮಾರಾಧಯತೋಸ್ತ್ರಿಭಿರ್ವರ್ಷೈಃ ಯತಾತ್ಮನೋಃ ॥8॥
ಪರಿತುಷ್ಟಾ ಜಗದ್ಧಾತ್ರೀ ಪ್ರತ್ಯಕ್ಷಂ ಪ್ರಾಹ ಚಂಡಿಕಾ ॥

8. ಅವರಿಬ್ಬರೂ ತಮ್ಮ ದೇಹದ ರಕ್ತದಿಂದ ತೋಯಿಸಿದ ಬಲಿಯನ್ನು ನೀಡಿದರು. ಹೀಗೆ ಪ್ರಯತ್ನಶೀಲರಾಗಿದ್ದು ಆರಾಧನೆಮಾಡುತ್ತಿದ್ದ ಅವರಿಬ್ಬರಿಗೂ ಮೂರು ವರ್ಷಗಳ ಕಾಲವು ಕಳೆಯಲು ಸಂತುಷ್ಟಳಾದ ಜಗಜ್ಜನನಿಯಾದ ಚಂಡಿಕೆಯು ಪ್ರತ್ಯಕ್ಷಳಾಗಿ ಹೀಗೆಂದಳು :

ದೇವ್ಯುವಾಚ–

ಯತ್ ಪ್ರಾರ್ಥ್ಯತೇ ತ್ವಯಾ ಭೂಪ ತ್ವಯಾ ಚ ಕುಲನಂದನ ।
ಮತ್ತಸ್ತತ್ ಪ್ರಾಪ್ಯತಾಂ ಸರ್ವಂ ಪರಿತುಷ್ಟಾ ದದಾಮಿ ತತ್ ॥9॥

9. ದೇವಿಯಿಂತೆಂದಳು : ಎಲೈ ರಾಜನೆ, ಎಲೈ ಕುಲನಂದನನಾದ ವೈಶ್ಯನೆ, ನೀವುಗಳು ನನ್ನಿಂದ ಏನು ಬಯಸಿರುವಿರೋ ಅದನ್ನೆಲ್ಲವನ್ನೂ ಪಡೆದುಕೊಳ್ಳಿರಿ. ನಾನು ಸಂತುಷ್ಟಳಾಗಿದ್ದು ಅದನ್ನು ನಿಮಗೆ ಕೊಡಲಿದ್ದೇನೆ.

ಮಾರ್ಕಂಡೇಯ ಉವಾಚ –

ತತೋ ವವ್ರೇ ನೃಪೋ ರಾಜ್ಯಮವಿಭ್ರಂಶ್ಯನ್ಯಜನ್ಮನಿ ।
ಅತ್ರೈವ ಚ ನಿಜಂ ರಾಜ್ಯಂ ಹತಶತ್ರುಬಲಂ ಬಲಾತ್ ॥10॥

ಸೋಽಪಿ ವೈಶ್ಯಸ್ತತೋ ಜ್ಞಾನಂ ವವ್ರೇ ನಿರ್ವಿಣ್ಣಮಾನಸಃ ।
ಮಮೇತ್ಯಹಮಿತಿ ಪ್ರಾಜ್ಞಃ ಸಂಗವಿಚ್ಯುತಿಕಾರಕಮ್ ॥11॥

10-11. ಮಾರ್ಕಂಡೇಯನಿಂತೆಂದನು : ಅನಂತರ ರಾಜನು ಮತ್ತೊಂದು ಜನ್ಮದಲ್ಲಿ ಕೈತಪ್ಪಿಹೋಗಿರುವಂಥ ಶಾಶ್ವತ ರಾಜ್ಯ (ಪದವಿ)ಯನ್ನೂ ಈ ಜನ್ಮದಲ್ಲಿ ಶತ್ರುಬಲವೆಲ್ಲವೂ ನಷ್ಟವಾಗಿ (ನಿಷ್ಕಂಟಕವಾದ) ತನ್ನ ರಾಜ್ಯವನ್ನೂ ಕೇಳಿಕೊಂಡನು. ಆ ಪ್ರಾಜ್ಞನಾದ ವೈಶ್ಯನಾದರೊ, ವೈರಾಗ್ಯಮನಸ್ಕನಾಗಿ ನಾನು, ನನ್ನದೆಂಬ ಸಂಗವನ್ನು ಕಳೆಯುವಂಥ ಜ್ಞಾನವನ್ನು ಬೇಡಿಕೊಂಡನು.

ದೇವ್ಯುವಾಚ–

ಸ್ವಲ್ಪೈರಹೋಭಿರ್ನೃಪತೇ ಸ್ವಂ ರಾಜ್ಯಂ ಪ್ರಾಪ್ಸ್ಯತೇ ಭವಾನ್ ।
ಹತ್ವಾ ರಿಪೂನಸ್ಖಲಿತಂ ತವ ತತ್ರ ಭವಿಷ್ಯತಿ ॥12॥

ಮೃತಶ್ಚ ಭೂಯಃ ಸಂಪ್ರಾಪ್ಯ ಜನ್ಮ ದೇವಾದ್ ವಿವಸ್ವತಃ ।
ಸಾವರ್ಣಿಕೋ ನಾಮ ಮನುರ್ಭವಾನ್ ಭುವಿ ಭವಿಷ್ಯತಿ ॥13॥

ವೈಶ್ಯವರ್ಯ ತ್ವಯಾ ಯಶ್ಚ ವರೋಽಸ್ಮತ್ತೋಽಭಿವಾಂಛಿತಃ ।
ತಂ ಪ್ರಯಚ್ಛಾಮಿ ಸಂಸಿದ್ಧ್ಯೈ ತವ ಜ್ಞಾನಂ ಭವಿಷ್ಯತಿ ॥14॥

12-14. ದೇವಿಯಿಂತೆಂದಳು : 'ಎಲೈ ರಾಜನೆ, ಕೆಲವೇ ದಿನಗಳಲ್ಲಿ ನೀನು ಶತ್ರುಗಳನ್ನು ಸಂಹರಿಸಿ ರಾಜ್ಯವನ್ನು ಪಡೆದುಕೊಳ್ಳಲಿರುವೆ. ಅದು ನಿನಗೆ ಶಾಶ್ವತವಾಗಿರುವದು. ನೀನು ಈ ಜನ್ಮವನ್ನು ಪೂರೈಸಿದಮೇಲೆ ಮತ್ತೆ ಸೂರ್ಯನಿಂದ ಜನ್ಮವನ್ನು ಹೊಂದಿ ಲೋಕದಲ್ಲಿ 'ಸಾವರ್ಣಿಕಮನು'ವೆಂಬವನಾಗಿ ಹುಟ್ಟುವೆ.' 'ಎಲೈ ವೈಶ್ಯಶ್ರೇಷ್ಠನೆ, ನೀನಾದರೊ, ಯಾವ ವರವನ್ನು ಬಯಸಿರುವೆಯೋ ಅದು ಸಿದ್ಧಿಯಾಗುವುದಕ್ಕಾಗಿ ಇದೊ, ವರವನ್ನು ಕೊಟ್ಟಿರುವೆನು, ನಿನಗೆ ಜ್ಞಾನವಾಗಲಿದೆ.'

ಮಾರ್ಕಂಡೇಯ ಉವಾಚ –

ಇತಿ ದತ್ವಾ ತಯೋರ್ದೇವೀ ಯಥಾಭಿಲಷಿತಂ ವರಮ್ ।
ಬಭೂವಾಂತರ್ಹಿತಾ ಸದ್ಯೋ ಭಕ್ತ್ಯಾ ತಾಭ್ಯಾಮಭಿಷ್ಟುತಾ ॥15॥

ಏವಂ ದೇವ್ಯಾ ವರಂ ಲಬ್ಧ್ವಾ ಸುರಥಃ ಕ್ಷತ್ರಿಯರ್ಷಭಃ ।
ಸೂರ್ಯಾಜ್ಜನ್ಮ ಸಮಾಸಾದ್ಯ ಸಾವರ್ಣಿರ್ಭವಿತಾ ಮನುಃ ॥16॥

15-16. ಮಾರ್ಕಂಡೇಯನಿಂತೆಂದನು : ಈ ರೀತಿಯಾಗಿ ಅವರಿಬ್ಬರಿಗೂ (ಅವರವರ) ಇಷ್ಟದಂತೆ ವರವನ್ನು ನೀಡಿದ ದೇವಿಯು ಭಕ್ತಿಯಿಂದ ಅವರಿಬ್ಬರಿಂದಲೂ ಸ್ತುತಿಸಲ್ಪಟ್ಟವಳಾಗಿ ಕೂಡಲೆ ಅಂತರ್ಧಾನಳಾದಳು. ಹೀಗೆ ದೇವಿಯಿಂದ ಕ್ಷತ್ರಿಯಶ್ರೇಷ್ಠನಾದ ಸುರಥನು ವರವನ್ನು ಪಡೆದುಕೊಂಡು ಸೂರ್ಯನಿಂದ ಜನ್ಮವನ್ನು ಹೊಂದಿ (ಮುಂದೆ) 'ಸಾವರ್ಣಿಮನು'ವಾಗಿ ಹುಟ್ಟಲಿರುವನು.

ಇತಿ ಶ್ರೀ ಮಾರ್ಕಂಡೇಯಪುರಾಣೇ ದೇವೀಮಹಾತ್ಮ್ಯೇ
ತ್ರಯೋದಶೋಽಧ್ಯಾಯಃ

॥ ಓಂ ನಮಶ್ಚಂಡಿಕಾಯೈ ॥

॥ ದೇವೀಮಹಾತ್ಮ್ಯಂ ಸಮಾಪ್ತಮ್ ॥

॥ ಓಂ ತತ್ಸತ್ ॥

-------------

6. **ಭಗವಚ್ಛರಣಸ್ತೋತ್ರ :** ಶ್ರೀ ಬ್ರಹ್ಮಾನಂದಸ್ವಾಮಿಗಳವರ ಕೃತಿ. ಆಧ್ಯಾತ್ಮತತ್ತ್ವವನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳಬೇಕೆನ್ನುವವರು ಯಾವ ಯಾವ ಸಾಧನಗಳನ್ನು ಅಳವಡಿಸಿಕೊಂಡಿರಬೇಕೆಂಬುದನ್ನೂ ಭಗವಂತನಿಗೆ ಶರಣು ಹೋಗುವದು ಬಹು ಮುಖ್ಯವಾದ ಸಾಧನವೆಂಬುದನ್ನೂ ಪ್ರಕಟಿಸುವ ಸಣ್ಣ ಪ್ರಕರಣವಿದು. ಸಾಧಕರಿಗೆ ಅಮೂಲ್ಯವಾದದ್ದು. ಮೂಲಶ್ಲೋಕಗಳು, ಭಾವಾರ್ಥ ವಿವರಣೆ - ಇಷ್ಟೂ ಇವೆ.
**(ನಾಲ್ಕನೆಯ ಮುದ್ರಣ, ಪು. ಕ್ರೌನ್ 4+60)**

7. **ಶಿವನಾಮಾಷ್ಟೋತ್ತರಶತಕ :** ಸ್ಕಾಂದಪುರಾಣದ ಶಾಂಕರಸಂಹಿತೆಯ ಶಿವರಹಸ್ಯದಲ್ಲಿ ಗೌರೀನಾರಾಯಣಸಂವಾದರೂಪವಾಗಿರುವ ಸುಪ್ರಸಿದ್ಧ ಸ್ತೋತ್ರವಿದು. ಮೂಲದ ಶ್ಲೋಕಗಳನ್ನು ಕೊಟ್ಟು ಪ್ರತಿಯೊಂದು ನಾಮದ ಅರ್ಥ ವಿವರಣೆಯನ್ನೂ ಕೊಟ್ಟಿರುತ್ತದೆ. ಪುಸ್ತಕದ ಕೊನೆಯಲ್ಲಿ ಮತ್ತೆ ಪಾಠಕರ ಸೌಕರ್ಯಕ್ಕಾಗಿ ಅಷ್ಟೋತ್ತರ ಸಂಸ್ಕೃತಮೂಲವನ್ನೂ ಪೂಜೆಮಾಡುವವರಿಗೆ ಅನುಕೂಲವಾಗಿರಲೆಂದು ಅಕಾರಾದಿಯ ಅನುಕ್ರಮದಲ್ಲಿ ಕೊಟ್ಟಿರುವ ಒಂದು ಪಟ್ಟಿಯೂ ಇದೆ. **(ಮೂರನೆಯ ಮುದ್ರಣ, ಪುಟ ಕ್ರೌನ್ 4+42)**

8. **ಸ್ತುತಿಪುಷ್ಪಾಂಜಲಿ :** ಸ್ತ್ರೀಯರು, ಬಾಲಕರುಗಳಿಗೆ ಕಂಠಪಾಠಕ್ಕೆ ಯೋಗ್ಯವಾದ ಹಾಗೂ ಹಿಂದೂ ಸಂಸ್ಕೃತಿಯ ವೈಶಿಷ್ಟ್ಯವನ್ನು ತಿಳಿಸುವ ದೇವತಾಸ್ತೋತ್ರಗಳು, ಧಾರ್ಮಿಕ ನೈತಿಕ ಉಪದೇಶಗಳುಳ್ಳ ಪದ್ಯಗಳು - ಸುಮಾರು 88, ಗಾಯತ್ರೀರಾಮಾಯಮ, ವಿದುರನೀತಿ, ಭಗವತ್‌ಸ್ತೋತ್ರಗಳು, ಪ್ರಾರ್ಥನಾಮಂತ್ರಗಳು - ಇವುಗಳನ್ನು ಪ್ರತಿಪದಾರ್ಥ ಸಮೇತ ಕೊಡಲಾಗಿದೆ. ಈ ಗ್ರಂಥವು ಕೈಯಲ್ಲಿದ್ದರೆ ಭಾರತೀಯ ಸಂಸ್ಕೃತಿಯ ಪ್ರಪ್ರಥಮ ಪರಿಚಯವೇ ಕೈಯಲ್ಲಿದ್ದಂತೆ - ಎಂದು ಭಾವಿಸಬಹುದು.
**(ಐದನೆಯ ಮುದ್ರಣ, 1999 - ಪುಟ 4+74)**

9. **ಸ್ತೋತ್ರಮಾಲಾ-1 :** ಇದರಲ್ಲಿ ಅನುಸ್ಮೃತಿ, ಗಜೇಂದ್ರ ಮೋಕ್ಷ, ಭೀಷ್ಮಸ್ತವರಾಜ, ಹರಿಶರಣಾಷ್ಟಕ, ಆದಿತ್ಯಹೃದಯ - ಈ ಐದು ಸ್ತೋತ್ರಗಳನ್ನೂ ಅನುವಾದ ಸಮೇತ ಕೊಡಲಾಗಿದೆ. ಹರಿಶರಣಾಷ್ಟಕ, ಭೀಷ್ಮಸ್ತವರಾಜಗಳಿಗೆ ವಿವರಣೆಯೂ ಇದೆ.
**(ಎರಡನೆಯ ಮುದ್ರಣ, 1998 ಪು. ಡೆಮ್ಮಿ 8+95)**

10. **ಸ್ತೋತ್ರಮಾಲಾ-2 :** ಅಧ್ಯಾತ್ಮ ಮತ್ತು ಭಕ್ತಿ ಪರವಾಗಿರುವ 17 ಸ್ತೋತ್ರಗಳನ್ನು ಅನುವಾದ ಸಮೇತ ಪ್ರಕಟಿಸಲಾಗಿದೆ. ವಿಷ್ಣುಸ್ತೋತ್ರಗಳಲ್ಲಿ ಪ್ರಸಿದ್ಧವಾದ ಪಾಂಡವಗೀತೆಯೂ ಇದೆ. **(ಎರಡನೆಯ ಮುದ್ರಣ, 1999 ಪು. ಡೆಮ್ಮಿ 4+80)**

**ಪುಸ್ತಕಗಳ ಪೂರಾ ಬೆಲೆಪಟ್ಟಿಗೆ ಸಂಪರ್ಕಿಸಿ**

**ಅ.ಪ್ರ.ಕಾರ್ಯಾಲಯ, ಹೊಳೆನರಸೀಪುರ - 573 211. ದೂ. 08175-273820**

# ದಿ. ವೇ|| ಬ್ರ|| ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು
## (1928-2007)

ದಿ|| ಅಧ್ಯಾತ್ಮ ವಿದ್ಯಾಪ್ರವೀಣ ವೇ|| ಬ್ರ|| ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹ ಮೂರ್ತಿಗಳು **ತಾ|| 2-6-1928**ರಂದು ನರಸಿಂಹರಾಜಪುರದಲ್ಲಿ ಜನಿಸಿದರು. ಇವರ ಪೂಜ್ಯ ತಂದೆಯವರು ಶೃಂಗೇರಿಯ ಕೃಷ್ಣಯಜುರ್ವೇದ ಸಲಕ್ಷಣ ಘನಾಂತ ಸ್ಮಾರ್ತ ಪ್ರಯೋಗ ವಿದ್ವಾಂಸರಾಗಿದ್ದ ವೇ|| ಶ್ರೀಕಂಠ ಘನಪಾಠಿಗಳು ಮತ್ತು ತಾಯಿಯವರು ಸೌ|| ಕಮಲಮ್ಮನವರು. ಶ್ರೀ ಮೂರ್ತಿಯವರು ಒಂಬತ್ತನೆಯ ವಯಸ್ಸಿನಲ್ಲಿಯೇ ಬ್ರಹ್ಮ ಚರ್ಯಾಶ್ರಮವನ್ನು ಸ್ವೀಕರಿಸಿ ತಂದೆಯವರಲ್ಲಿಯೇ ಉಪಯುಕ್ತ ವೇದಭಾಗವನ್ನು ಅಭ್ಯಾಸ ಮಾಡಿದರು. ಆದರೆ ತಮ್ಮ 14ನೇ ವಯಸ್ಸಿನಲ್ಲಿ ಪಿತೃವಿಯೋಗವಾದ್ದರಿಂದ ಮುಂದೆ ಬೇಲೂರಿನ ಸಂಸ್ಕೃತ ಪಾಠಶಾಲೆಯಲ್ಲಿ 4 ವರ್ಷ ವ್ಯಾಸಂಗ ಮಾಡಿ, ಚಂಪೂ ನಾಟಕ (ಸಾಹಿತ್ಯ) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ನಂತರ 1947ರಲ್ಲಿ ಹೊಳೆನರಸೀ ಪುರದಲ್ಲಿ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳಿಂದ ಸ್ಥಾಪಿತವಾಗಿದ್ದ "ಅಧ್ಯಾತ್ಮ ವಿದ್ಯಾ ನಿಲಯ"ದಲ್ಲಿ ಶ್ರೀಗಳಿಂದಲೇ 5 ವರ್ಷಕಾಲ ಶಾಂಕರಭಾಷ್ಯ ಪ್ರಸ್ಥಾನಗಳನ್ನು ಅಧ್ಯಯನ ಮಾಡಿ 1952ರಲ್ಲಿ **"ಅಧ್ಯಾತ್ಮವಿದ್ಯಾಪ್ರವೀಣ"** ಎಂಬ ಪ್ರಶಸ್ತಿಯನ್ನು ಪಡೆದರು. ನಂತರ ಕಾರ್ಯಾಲಯದಲ್ಲೇ ಪಂಡಿತರಾಗಿ ನೇಮಕಗೊಂಡು ಪಾಠ, ಪ್ರವಚನ, ವೇದಾಂತ ಪ್ರಚಾರ, ಗ್ರಂಥಪ್ರಕಾಶನ, ಗ್ರಂಥರಚನೆ ಮುಂತಾದ ಹಲವಾರು ಕಾರ್ಯಗಳನ್ನು ನಡೆಸಿ ಕೊಡುತ್ತಾ ಜನಪ್ರಿಯರಾಗಿ ಶ್ರೀಶ್ರೀಗಳವರ ಶಿಷ್ಯರಲ್ಲಿ ಗಣ್ಯರಾಗಿದ್ದು ಕಾರ್ಯಾಲಯದ ಪುರೋಭಿವೃದ್ಧಿಗೆ ಬಹುಮುಖವಾಗಿ ಕಾರಣರಾದರು.

ಶ್ರೀಶ್ರೀಗಳು 1975ರಲ್ಲಿ ಬ್ರಹ್ಮೀಭೂತರಾದ ಮೇಲೆ ಶ್ರೀ ಮೂರ್ತಿಗಳೇ ಮಾಸ ಪತ್ರಿಕೆಯ ಸಂಪಾದಕರಾದರು. 1997-99 ಮತ್ತು 2001-02 ಈ ಅವಧಿಯಲ್ಲಿ ಇವರು ನಡೆಸಿ ಕೊಟ್ಟ ಶಾಂಕರಭಾಷ್ಯಾನುಸಾರ "ಬ್ರಹ್ಮಸೂತ್ರಭಾಷ್ಯ" ಮತ್ತು "ಭಗವದ್ಗೀತಾ ಭಾಷ್ಯ" ಗಳ ವೇದಾಂತ ಶಿಬಿರಗಳು ಚಿರಸ್ಮರಣೀಯವಾಗಿವೆ. ಈ ಶಿಬಿರದ ಪ್ರವಚನಗಳು ಸಿ.ಡಿ. (MP-3) ರೂಪದಲ್ಲಿ ಈಗಲೂ ಕಾರ್ಯಾಲಯದಲ್ಲಿ ಲಭ್ಯವಿದೆ. ಇಷ್ಟಲ್ಲದೆ ಶ್ರೀ ಮೂರ್ತಿ ಗಳು ವೇದ, ವೇದಾಂತ, ಸಂಪ್ರದಾಯ, ಸ್ತೋತ್ರ ಇತ್ಯಾದಿ ವಿಷಯಗಳ ಸುಮಾರು 29 ಗ್ರಂಥಗಳನ್ನೂ ರಚಿಸಿರುತ್ತಾರೆ. ಈ ಗ್ರಂಥಗಳೆಲ್ಲವೂ ಕಾರ್ಯಾಲಯದಲ್ಲಿ ದೊರೆಯುತ್ತವೆ.

ಇಂತಹ ಪುಣ್ಯಜೀವಿಗಳು ತೀವ್ರ ಅನಾರೋಗ್ಯ ನಿಮಿತ್ತ **ತಾ|| 4-2-2007**ರಂದು ತಮ್ಮ 79ನೇ ವಯಸ್ಸಿನಲ್ಲಿ ಹೊಳೆನರಸೀಪುರದಲ್ಲಿ ಕೀರ್ತಿಶೇಷರಾದರು. ಪೂಜ್ಯರ ಸುಮಾರು 55 ವರ್ಷಗಳ ಕಾಲದ ನಿಃಸ್ವಾರ್ಥಸೇವೆಯನ್ನು ಕಾರ್ಯಾಲಯವು ಸದಾ ಕಾಲವೂ ಅತ್ಯಂತ ಭಕ್ತಿಯಿಂದ ಸ್ಮರಿಸುತ್ತದೆ.